ಸೋಮವಾರ, ಜೂನ್ 21, 2021 | ₹ 6.00
www.prajavani.net
/prajavani.net @prajavani /prajavani http://bit.ly/Prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಪೂಜೆ
ಗಂಗಾ ದಸರಾ ಅಂಗವಾಗಿ ಉತ್ತರ ಪ್ರದೇಶದ ಪ್ರಯಾಗ್‌ರಾಜ್‌ನಲ್ಲಿ ಭಾನುವಾರ ಮಹಿಳೆಯರು ಗಂಗಾ ನದಿಗೆ ಪೂಜೆ ಸಲ್ಲಿಸಿದರು



ಅರಣ್ಯ ನಾಶದಿಂದ ಟೊಳ್ಳಾದ ಭೂಮಿ • ಮಳೆ ಹೆಚ್ಚಿದ ವರ್ಷಗಳಲ್ಲಿ ಕಾಯಂ ಕುಸಿತ

ಈ ವರ್ಷವೂ ಭೂಕುಸಿತ ಸಾಧ್ಯತೆ

• ಎಸ್. ರವಿಪ್ರಕಾಶ್

ಬೆಂಗಳೂರು: ಎರಡು ವರ್ಷಗಳಿಂದ ಭೂಕುಸಿತದಿಂದ ತತ್ತರಿಸಿರುವ ಮಲೆನಾಡು ಮತ್ತು ಕರಾವಳಿ ಪ್ರದೇಶದಲ್ಲಿ ಈ ವರ್ಷವೂ ಭೂಕುಸಿತ ಮರುಕಳಿಸುವ ಸಾಧ್ಯತೆ ದಟ್ಟವಾಗಿದೆ.

ಜೂನ್ ಮೊದಲ ವಾರ ಭಾರಿ ಮಳೆ ಆಗಿರುವುದರಿಂದ ರಾಜ್ಯದ ಭೂಕುಸಿತದ ಸಂಭಾವ್ಯ ಪ್ರದೇಶಗಳೆಂದು ಗುರುತಿಸಲಾಗಿರುವ 23 ತಾಲ್ಲೂಕುಗಳಲ್ಲಿ ಅಪಾಯ ಎದುರಾಗಿದೆ. ಇದಕ್ಕೆ ಮುಖ್ಯ ಕಾರಣ ಈ ಪ್ರದೇಶದ ಮೇಲ್ಮಣ್ಣು ನೀರಿನಿಂದ ಸಾಂದ್ರೀಕರಣಗೊಂಡಿದೆ. ಪರಿಣಾಮ ಮುಂಬರುವ ದಿನಗಳಲ್ಲಿ ಸಾಧಾರಣ ಮಳೆ ಆದರೂ ಭೂಕುಸಿತ ಆಗುವ ಸಾಧ್ಯತೆ ದಟ್ಟವಾಗಿದೆ ಎಂದು ವಿಜ್ಞಾನಿಗಳು ಅಭಿಪ್ರಾಯಪಟ್ಟಿದ್ದಾರೆ.

ಈ ಪ್ರದೇಶದಲ್ಲಿ ವಾರ್ಷಿಕ ಸರಾಸರಿ ಮಳೆ ಪ್ರಮಾಣ ಹೆಚ್ಚು ಕಮ್ಮಿ ಒಂದೇ ರೀತಿ ಇದ್ದರೂ, ಹವಾಮಾನ ಬದಲಾವಣೆ ಪರಿಣಾಮ ಕೆಲವು ಸಂದರ್ಭದಲ್ಲಿ ಒಂದೇ ದಿನ ಅತ್ಯಧಿಕ ಮಳೆ ಆಗುವ ವಿದ್ಯಮಾನ ಹೆಚ್ಚಾಗಿದೆ. ಇದು ಕೂಡ ಭೂಕುಸಿತಕ್ಕೆ ಪ್ರಮುಖ ಕಾರಣವಾಗಿದೆ ಎನ್ನುತ್ತಾರೆ ಅವರು.

ಒಂದೇ ದಿನ ಅಥವಾ ಕೆಲವೇ ಗಂಟೆಗಳಲ್ಲಿ ಅತಿಯಾಗಿ ಮಳೆ ಸುರಿಯುವುದರಿಂದ ಕಾಡಿನ ರಕ್ಷಣಾ ಕವಚವೇ ವ್ಯಾಪಕವಾಗಿ ನಾಶವಾಗುತ್ತಿದೆ ಎಂದು ಭೂಕುಸಿತದ ನಿಯಂತ್ರಣಕ್ಕಾಗಿ ಪರಿಹಾರ ಸೂಚಿಸಲು ಸರ್ಕಾರ ರಚಿಸಿದ್ದ ಅಧ್ಯಯನ ಸಮಿತಿ ತನ್ನ ವರದಿಯಲ್ಲಿ ಹೇಳಿದೆ.



ಭೂಕುಸಿತದ ಕುರಿತು ಅಧ್ಯಯನ ನಡೆಸುತ್ತಿರುವ ಸಂರಕ್ಷಣ ಜೀವಶಾಸ್ತ್ರಜ್ಞ ಡಾ. ಕೇಶವ ಎಚ್. ಕೊರ್ಸೆ 'ಪ್ರಜಾವಾಣಿ' ಜತೆ ಮಾತನಾಡಿ, '4 ವರ್ಷಗಳಿಂದ ನಿರಂತರವಾಗಿ ಆಗುತ್ತಿರುವ ಭೂಕುಸಿತದ ಪ್ರದೇಶಗಳಲ್ಲಿ, ಭೂಮಿ ಬಾಯ್ಬಿಟ್ಟಿದ್ದು, ಅದನ್ನು ಮುಚ್ಚುವ ಕಾರ್ಯ ನಡೆದಿಲ್ಲ. ಹೀಗಾಗಿ ಭೂಕುಸಿತದ ಸಾಧ್ಯತೆ ಹೆಚ್ಚಾಗಿದೆ. ಶಿರಸಿ ತಾಲ್ಲೂಕಿನ ಜಾಜಿಗುಡ್ಡೆ ಗ್ರಾಮದಲ್ಲಿ ಕಳೆದ ವರ್ಷ ಭೂಕುಸಿತ ಸಂಭವಿಸಿದ ಸ್ಥಳದಲ್ಲೇ ಇತ್ತೀಚೆಗೆ ಭೂಕುಸಿತ ಆಗಿದೆ' ಎಂದರು.

> **ಹಲವು ಕಡೆಗಳಲ್ಲಿ ಪ್ರಾಣ ರಕ್ಷಣೆಯ ಕಾರಣ ಜನ ವಸತಿ ಕಾಯಂ ಆಗಿ ಸ್ಥಳಾಂತರಿಸಬೇಕಾಗುತ್ತದೆ. ಇದಕ್ಕಾಗಿ ಭೂವಲಯದ ಸಮೀಕ್ಷೆ ನಡೆಸಬೇಕು**
> **ಡಾ.ಜಿ.ಎಸ್.ಶ್ರೀನಿವಾಸ ರೆಡ್ಡಿ,** ನಿವೃತ್ತ ನಿರ್ದೇಶಕ, ಕರ್ನಾಟಕ ನೈಸರ್ಗಿಕ ವಿಕೋಪ ಉಸ್ತುವಾರಿ ಕೇಂದ್ರ

'ಹೆದ್ದಾರಿ ಮತ್ತು ಇತರ ಅಭಿವೃದ್ಧಿ ಕಾಮಗಾರಿಗಳಿಗಾಗಿ ಗುಡ್ಡಗಳನ್ನು ಲಂಬಕೋನದಲ್ಲಿ ಕತ್ತರಿಸಿರುವುದರಿಂದ ಹೆದ್ದಾರಿ ಉದ್ದಕ್ಕೂ ಭೂಕುಸಿತ ಉಂಟಾಗಿದೆ. ಉಡುಪಿ ಜಿಲ್ಲೆ ಬೈಂದೂರು ಬಳಿಯ ಎತ್ತಿನಣೆ ಗುಡ್ಡದಲ್ಲಿ ಹೆದ್ದಾರಿ ಉದ್ದಕ್ಕೂ ಇತ್ತೀಚೆಗೆ ಗುಡ್ಡ ಕುಸಿದಿದೆ ಎಂದು ಅವರು ಹೇಳಿದರು.

'ರಾಜ್ಯದ ಹಲವು ಕಡೆಗಳಲ್ಲಿ ಭೂಕುಸಿತ ಆಗುತ್ತಿದೆ. ಜನ ಎಚ್ಚೆತ್ತುಕೊಂಡಿದ್ದಾರೆ. ಈ ಜಿಲ್ಲೆಗಳ ಜಿಲ್ಲಾಧಿಕಾರಿಗಳ ಜತೆ ಸಭೆ ನಡೆಸಿರುವ ಮುಖ್ಯಮಂತ್ರಿಯವರು ಅಗತ್ಯ ಕ್ರಮಕ್ಕೆ ಸೂಚಿಸಿದ್ದಾರೆ. ತಾತ್ಕಾಲಿಕವಾಗಿ ಭೂಕುಸಿತ ತಡೆಯಲು ಆಗುವುದಿಲ್ಲ. ಅಲ್ಲಿ ವಾಸಿಸುವ ಜನರನ್ನು ಸ್ಥಳಾಂತರಿಸಬೇಕು. ಆದರೆ, ದೀರ್ಘಾವಧಿಯಲ್ಲಿ ಕಾರ್ಯಯೋಜನೆ ರೂಪಿಸುವ ಅಗತ್ಯವಿದೆ' ಎಂದು ಕರ್ನಾಟಕ ನೈಸರ್ಗಿಕ ವಿಕೋಪ ಉಸ್ತುವಾರಿ ಕೇಂದ್ರದ ನಿವೃತ್ತ ನಿರ್ದೇಶಕ ಡಾ.ಜಿ. ಎಸ್.ಶ್ರೀನಿವಾಸ ರೆಡ್ಡಿ ಹೇಳಿದರು.

ಭಾರತೀಯ ಭೂಸರ್ವೇಕ್ಷಣಾ ಇಲಾಖೆಯಿಂದ ಭೂವಲಯೀಕರಣ (ಲ್ಯಾಂಡ್ ಜೋನೇಷನ್) ಸಮೀಕ್ಷೆ ನಡೆಸಬೇಕಾಗಿದೆ. ಇದರ ಮೂಲಕ ಜನ ವಸತಿ ಎಲ್ಲಿರಬೇಕು, ಅರಣ್ಯ ಪ್ರತ್ಯೇಕಿಸುವುದು ಕಡೆಗೆ ಗಮನಹರಿಸಬೇಕಾಗಿದೆ. ಭೂವಲಯೀಕರಣದ ಸಮೀಕ್ಷೆ ನಡೆಸಲು ಕೋರಲಾಗಿದೆ ಎಂದರು.

ಭೂಪ್ರದೇಶ ಟೊಳ್ಳಾಗಲು ಕಾರಣವೇನು?

ಕರಾವಳಿ ಮತ್ತು ಮಲೆನಾಡನ್ನು ಒಳಗೊಂಡ ಪಶ್ಚಿಮಘಟ್ಟದಲ್ಲಿ ನಾಲ್ಕು ದಶಕಗಳಿಂದ ಅವ್ಯಾಹತವಾಗಿ ಅರಣ್ಯ ನಾಶದ ನಡೆದ ಪರಿಣಾಮ ಇಲ್ಲಿನ ಭೂಪ್ರದೇಶ ಟೊಳ್ಳಾಗಿದೆ ಎನ್ನುತ್ತಾರೆ ಸಂರಕ್ಷಣೆ ಜೀವಶಾಸ್ತ್ರಜ್ಞ ಕೇಶವ ಕೊರ್ಸೆ.

ಈ ಪ್ರದೇಶದ ಉಷ್ಣ ವಲಯದ ಕಾಡುಗಳನ್ನು ಕಡಿದಾಗ ಮಣ್ಣಿನಡಿಯೇ ಉಳಿಯುವ ಬೃಹತ್ ಗಾತ್ರದ ಮರಗಳ ಬೇರುಗಳು ಕೊಳೆತು ಮಣ್ಣಾಗಲು ಕನಿಷ್ಠ 25 ರಿಂದ 30 ವರ್ಷಗಳು ಬೇಕಾಗುತ್ತದೆ. ಈಗ ಈ ಪ್ರದೇಶಗಳಲ್ಲೆಲ್ಲ ಮಣ್ಣಿನಡಿ ಬೇರುಗಳು ಕೊಳೆತು ದೊಡ್ಡ-ದೊಡ್ಡ ರಂಧ್ರ ಪ್ರದೇಶಗಳು ನಿರ್ಮಾಣವಾಗುತ್ತಿವೆ. ಇಷ್ಟು ವರ್ಷಗಳಲ್ಲಿ ಮೇಲ್ಮೈನಲ್ಲಿ ಮತ್ತೆ ಸಹಜ ಕಾಡುಗಳನ್ನು ಬೆಳೆಸುವ ಪ್ರಯತ್ನಗಳು ನಡೆದಿಲ್ಲ. ಬಹುಪಾಲು ಪ್ರದೇಶಗಳು ರಸ್ತೆ, ಮನೆ, ಪಟ್ಟಣ, ಕೈಗಾರಿಕೆ ಮತ್ತು ಕೃಷಿ ಪ್ರದೇಶಗಳಾಗಿವೆ.

ದೊಡ್ಡ ರಂಧ್ರಗಳಲ್ಲಿ ಮಳೆ ನೀರು ತುಂಬಿ ಮಣ್ಣು ಬಿರಿಯುವುದು ಕೂಡ ಭೂಕುಸಿತಕ್ಕೆ ಕಾರಣವಾಗಿದೆ. ಹೀಗಾಗಿ ಭೂಕುಸಿತದ ಸಾಧ್ಯತೆಗಳು ಹೆಚ್ಚುತ್ತಲೇ ಇವೆ. ಹಲವು ವರ್ಷಗಳ ಅರಣ್ಯ ನಾಶದ ಒಟ್ಟು ಪರಿಣಾಮವೇ ಇದಾಗಿದೆ ಎನ್ನುತ್ತಾರೆ ಕೇಶವ ಕೊರ್ಸೆ.

'ಶಿರಸಿ, ಯಲ್ಲಾಪುರ, ಸಾಗರ ಹಾಗೂ ಹೊಸನಗರ ತಾಲ್ಲೂಕುಗಳ ಅರಣ್ಯ ಮತ್ತು ಗುಡ್ಡ ಪ್ರದೇಶಗಳಲ್ಲಿ ಆದ ಭೂಕುಸಿತಗಳನ್ನು ಅಭ್ಯಸಿಸಿದಾಗ ಪ್ರಧಾನವಾಗಿ ಈ ಅಂಶ ಕಂಡು ಬಂದಿತು' ಎಂದಿದ್ದಾರೆ.


ಸಂಭಾವ್ಯ ತಾಲ್ಲೂಕುಗಳು

- ಮಡಿಕೇರಿ, ಸೋಮವಾರಪೇಟೆ, ವಿರಾಜಪೇಟೆ (ಕೊಡಗು ಜಿಲ್ಲೆ)
- ಸಕಲೇಶಪುರ (ಹಾಸನ)
- ಕೊಪ್ಪ, ಮೂಡಿಗೆರೆ, ಶೃಂಗೇರಿ, ಚಿಕ್ಕಮಗಳೂರು (ಚಿಕ್ಕಮಗಳೂರು ಜಿಲ್ಲೆ)
- ಕಾರವಾರ, ಅಂಕೋಲ, ಕುಮಟಾ, ಹೊನ್ನಾವರ, ಸಿದ್ಧಾಪುರ, ಶಿರಸಿ, ಯಲ್ಲಾಪುರ, ಜೋಯ್ಡಾ(ಉ.ಕ)
- ಬೆಳ್ತಂಗಡಿ, ಬಂಟ್ವಾಳ, ಪುತ್ತೂರು, ಸುಳ್ಯ, ಮಂಗಳೂರು(ದ.ಕ)
- ಅಲ್ಲದೆ, ಕುಂದಾಪುರ, ತೀರ್ಥಹಳ್ಳಿ, ಹೊಸನಗರ, ಖಾನಾಪುರ ಸೇರಿವೆ

ಸತ್ಯ ಗೊತ್ತಾದ ಬಳಿಕ ತನಿಖೆ ಅಗತ್ಯ ಇಲ್ಲ: ಸಚಿವ ಬೊಮ್ಮಾಯಿ

ಬೆಂಗಳೂರು: 'ಭದ್ರಾ ಮೇಲ್ದಂಡೆ ಯೋಜನೆಯ ಕಾಮಗಾರಿ ಗುತ್ತಿಗೆ ಪ್ರಕ್ರಿಯೆ ಪಾರದರ್ಶಕವಾಗಿ ನಡೆದಿದೆ. ತನಿಖೆಯ ಅಗತ್ಯ ಇಲ್ಲ' ಎಂದು ಗೃಹ ಸಚಿವ ಬಸವರಾಜ ಬೊಮ್ಮಾಯಿ ಸ್ಪಷ್ಟಪಡಿಸಿದರು.

ಭದ್ರಾ ಮೇಲ್ದಂಡೆ ಯೋಜನೆಯಲ್ಲಿ ಟೆಂಡರ್‌ನಲ್ಲಿ ಅಕ್ರಮ ನಡೆದಿದೆ ಎಂಬ ಆರೋಪದ ಬಗ್ಗೆ ತನಿಖೆ ನಡೆಸಬೇಕೆಂಬ ವಿರೋಧ ಪಕ್ಷಗಳ ಆಗ್ರಹವನ್ನು ತಳ್ಳಿಹಾಕಿದ ಅವರು, 'ಜಲಸಂಪನ್ಮೂಲ ಇಲಾಖೆಯ ಕಾರ್ಯದರ್ಶಿ ದಾಖಲೆಗಳ ಸಹಿತ ವಾಸ್ತವ ಅಂಶವನ್ನು ತಿಳಿಸಿದ್ದಾರೆ. ಸತ್ಯ ಗೊತ್ತಾದ ಬಳಿಕ ತನಿಖೆ ಅಗತ್ಯವಿಲ್ಲ' ಎಂದರು.



'ಹಿಂದಿನ ಸರ್ಕಾರಗಳ ಅವಧಿಯಲ್ಲಿ ಟೆಂಡರ್‌ಗೆ ಯಾವ ಪದ್ಧತಿಗಳನ್ನು ಅನುಸರಿಸಲಾಗುತ್ತಿತ್ತೊ ಅದೇ ರೀತಿ ಈಗಲೂ ನಡೆಯುತ್ತಿದೆ. ಕೆಟಿಟಿಪಿ ಕಾಯ್ದೆ ಪ್ರಕಾರವೇ ಟೆಂಡರ್ ಪ್ರಕ್ರಿಯೆ ನಡೆದಿದೆ. ಎಲ್ಲವೂ ಪಾರದರ್ಶಕವಾಗಿದೆ. ವಿರೋಧ ಪಕ್ಷಗಳು ಆರೋಪ ಮಾಡುವುದು ಸಹಜ' ಎಂದು ತಿರುಗೇಟು ನೀಡಿದರು.

ರಾಜೀನಾಮೆಗೆ ಮುಂದಾದ ರಮೇಶ ಜಾರಕಿಹೊಳಿ: ವದಂತಿ

ಬೆಳಗಾವಿ: ಜಿಲ್ಲೆಯ ಗೋಕಾಕ ಮತಕ್ಷೇತ್ರದ ಬಿಜೆಪಿ ಶಾಸಕ ರಮೇಶ ಜಾರಕಿಹೊಳಿ ರಾಜೀನಾಮೆ ನೀಡಲು ಮುಂದಾಗಿದ್ದಾರೆ ಎಂಬ ವದಂತಿ ಭಾನುವಾರ ಹರಡಿದೆ.

'ಸಿ.ಡಿ. ಪ್ರಕರಣದಲ್ಲಿ ತಮ್ಮ ಮೇಲೆ ಆರೋಪ ಬಂದು ಹಲವು ತಿಂಗಳುಗಳೇ ಕಳೆದರೂ ಪಾರು ಮಾಡುವ ನಿಟ್ಟಿನಲ್ಲಿ ಬಿಜೆಪಿ ನಾಯಕರು ಆಸಕ್ತಿ ತೋರಿಸುತ್ತಿಲ್ಲ. ತಮ್ಮೊಂದಿಗೆ ಇದ್ದವರೇ ಷಡ್ಯಂತ್ರ ರೂಪಿಸಿ ಸಂಕಷ್ಟಕ್ಕೆ ಸಿಲುಕಿಸಿದರು ಎಂದು ನೊಂದಿದ್ದಾರೆ' ಎನ್ನಲಾಗಿದೆ.

'ಬಿಜೆಪಿಯನ್ನು ಅಧಿಕಾರಕ್ಕೆ ತರಲು ಶ್ರಮಿಸಿದ ನನ್ನನ್ನು ಕಡೆಗಣಿಸಲಾಗಿದೆ. ಹೀಗಾಗಿ, ಅನಿರೀಕ್ಷಿತ ನಿರ್ಧಾರಕ್ಕೆ ಬರಬೇಕಾಗಿದೆ' ಎಂದು ಆಪ್ತರ ಬಳಿ ಹೇಳಿಕೊಂಡಿದ್ದಾರೆ. ಪಕ್ಷದ ವರಿಷ್ಠರ ವಿರುದ್ಧವೂ ಅಸಮಾಧಾನ ವ್ಯಕ್ತಪಡಿಸಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಆಪ್ತರೊಂದಿಗೆ ಮುಂಬೈಗೆ: ರಮೇಶ ತಮಗೆ ಆಪ್ತರಾದ ಕೆಲವು ಶಾಸಕರೊಂದಿಗೆ ಭಾನುವಾರ ಮುಂಬೈಗೆ ತೆರಳಿರುವುದು ಹಲವು ಚರ್ಚೆಗೆ ಗ್ರಾಸವಾಗಿದೆ.

ಅವರೊಂದಿಗೆ ಸಹೋದರ ಮತ್ತು ಕೆಎಂಎಫ್ ಅಧ್ಯಕ್ಷರೂ ಆಗಿರುವ ಬಾಲಚಂದ್ರ ಜಾರಕಿಹೊಳಿ ಮತ್ತು ಅಥಣಿ ಶಾಸಕ ಮಹೇಶ ಕುಮಠಳ್ಳಿ ಮೊದಲಾದವರು ಮುಂಬೈಗೆ ತೆರಳಿದ್ದಾರೆ. ಅಲ್ಲಿ ಪಕ್ಷದ ಕೆಲವು ಮುಖಂಡರನ್ನು ಭೇಟಿಯಾಗಿ ಮಾತುಕತೆ ನಡೆಸಲಿದ್ದಾರೆ. ಮಾತುಕತೆ ಫಲಪ್ರದವಾಗದಿದ್ದರೆ ನೇರವಾಗಿ ಬೆಂಗಳೂರಿಗೆ ಬಂದು ಶಾಸಕ ಸ್ಥಾನಕ್ಕೆ ರಾಜೀನಾಮೆ ನೀಡಲಿದ್ದಾರೆ ಎನ್ನಲಾಗುತ್ತಿದೆ.

ತಮ್ಮ ಪುತ್ರ, ಕೆಎಂಎಫ್ ನಿರ್ದೇಶಕರಾಗಿರುವ ಅಮರನಾಥ ಜಾರಕಿಹೊಳಿ ಅವರನ್ನು ಗೋಕಾಕದಲ್ಲಿ ಕಣಕ್ಕಿಳಿಸುವ ಯೋಜನೆಯೂ ಅವರದಾಗಿದೆ ಎಂದು ತಿಳಿದುಬಂದಿದೆ. ಪ್ರತಿಕ್ರಿಯೆಗೆ ರಮೇಶ ಲಭ್ಯವಾಗಲಿಲ್ಲ. ಅವರ ಮೊಬೈಲ್ ಫೋನ್ ಸ್ವಿಚ್ಡ್‌ಆಫ್ ಆಗಿದೆ.

ಕೊಚ್ಚಿ ಹೋಗಿದ್ದ ವ್ಯಕ್ತಿಯ ಶವ ಪತ್ತೆ: ಕೃಷ್ಣಾ ಮತ್ತು ಉಪ ನದಿಗಳಿಗೆ ನೀರಿನ ಹರಿವಿನಲ್ಲಿ ಏರಿಕೆ

ಮಳೆ ತಗ್ಗಿದರೂ, ಜಲಾಶಯಗಳ ಒಳಹರಿವು ಹೆಚ್ಚಳ

ಪ್ರಜಾವಾಣಿ ವಾರ್ತೆ

ಬೆಳಗಾವಿ: ನಾಲ್ಕು ದಿನಗಳಿಂದ ಜಿಲ್ಲೆಯ ಬಹುತೇಕ ಕಡೆಗಳಲ್ಲಿ ಅಬ್ಬರಿಸಿದ್ದ ಮಳೆ ಭಾನುವಾರ ವಿರಾಮ ನೀಡಿದೆ. ಆದರೆ, ಜಲಾಶಯಗಳ ಒಳಹರಿವಿನ ಪ್ರಮಾಣ ಹೆಚ್ಚಾಗಿದೆ.

ಬೆಳಗಾವಿ ತಾಲ್ಲೂಕಿನ ಕಾಕತಿ ಸಮೀಪದಲ್ಲಿ ಮಾರ್ಕಂಡೇಯ ನದಿ ಪ್ರವಾಹದಲ್ಲಿ ಶುಕ್ರವಾರ ಸಂಜೆ ಕೊಚ್ಚಿ ಹೋಗಿದ್ದ ವ್ಯಕ್ತಿಯ ಶವ ಭಾನುವಾರ ಪತ್ತೆಯಾಗಿದೆ.

ನೆರೆಯ ಮಹಾರಾಷ್ಟ್ರದ ಘಟ್ಟ ಪ್ರದೇಶದಲ್ಲಿ ಮಳೆ ತಗ್ಗಿದೆಯಾದರೂ ಅಲ್ಲಿಂದ ಕೃಷ್ಣಾ ಮತ್ತು ಉಪ ನದಿಗಳಿಗೆ ಬಂದು ಸೇರುವ ನೀರಿನ ಹರಿವಿನಲ್ಲಿ ಏರಿಕೆ ಕಂಡುಬಂದಿದೆ. ಆ ರಾಜ್ಯದ ರಾಜಾಪುರ ಬ್ಯಾರೇಜ್‌ನಿಂದ 91,125 ಕ್ಯುಸೆಕ್ ಹಾಗೂ ದೂಧ್‌ಗಂಗಾ ನದಿಯಿಂದ 28,593 ಕ್ಯುಸೆಕ್ ಸೇರಿ ಒಟ್ಟು 1,19,718 ಕ್ಯುಸೆಕ್ ನೀರು ಚಿಕ್ಕೋಡಿ ತಾಲ್ಲೂಕಿನ ಕಲ್ಲೋಳ ಬಳಿ ಕೃಷ್ಣಾ ನದಿಗೆ ಸೇರುತ್ತಿದೆ. ಶನಿವಾರಕ್ಕೆ ಹೋಲಿಸಿದರೆ 4 ಸಾವಿರ ಕ್ಯುಸೆಕ್ ಹೆಚ್ಚಾಗಿದೆ.

ಕೃಷ್ಣಾ ನದಿಗೆ ಕಲ್ಲೋಳ ಬಳಿ ನಿರ್ಮಿಸಿರುವ ಕಲ್ಲೋಳ-ಯಡೂರ ಹಾಗೂ ದೂಧ್‌ಗಂಗಾ ನದಿಗೆ ಮಲಿಕವಾಡ ಬಳಿ ಕಟ್ಟಿರುವ ಮಲಿಕವಾಡ-ದತ್ತವಾಡ ಸೇತುವೆಯಲ್ಲಿ ಸಂಚಾರ ಬಂದ್ ಇದೆ. ಸದಲಗಾ-ಬೋರಗಾಂವ, ಯಕ್ಸಂಬಾ-ದಾನವಾಡ ಸೇತುವೆಗಳು ಸಂಚಾರಕ್ಕೆ ಮುಕ್ತವಾಗಿದೆ. ಘಟಪ್ರಭಾ ಜಲಾಶಯಕ್ಕೆ 3,3799 ಕ್ಯುಸೆಕ್ ಹಾಗೂ ಮಲಪ್ರಭಾ ಜಲಾಶಯಕ್ಕೆ 36,073 ಕ್ಯುಸೆಕ್ ಒಳಹರಿವಿತ್ತು.

ಉತ್ತರ ಕನ್ನಡ ಜಿಲ್ಲೆಯಾದ್ಯಂತ ಎರಡು ದಿನಗಳಿಂದ ಅಬ್ಬರಿಸಿದ್ದ ಮೃಗಶಿರಾ ನಕ್ಷತ್ರದ ಮಳೆಯು, ಭಾನುವಾರ ಸ್ವಲ್ಪ ಬಿಡುವು ಪಡೆಯಿತು. ಕುಮಟಾ, ಹೊನ್ನಾವರ ಹಾಗೂ ಭಟ್ಕಳದಲ್ಲಿ ಮಾತ್ರ ಜೋರಾಗಿ ಮಳೆ ಬಂತು. ಕಾರವಾರದಲ್ಲಿ ಶನಿವಾರ ತಡರಾತ್ರಿ ಮತ್ತು ಭಾನುವಾರ ಬೆಳಿಗ್ಗೆ ಕೆಲವು ನಿಮಿಷ ವರ್ಷಧಾರೆಯಾಯಿತು. ಅಂಕೋಲಾದಲ್ಲಿ ಉತ್ತಮ ಮಳೆಯಾಗಿದ್ದು, ಎರಡು ಮನೆಗಳಿಗೆ ಮತ್ತು ಒಂದು ದನದ ಕೊಟ್ಟಿಗೆಗೆ ಭಾಗಶಃ ಹಾನಿಯಾಗಿದೆ. ಉಳಿದಂತೆ, ಶಿರಸಿ, ಯಲ್ಲಾಪುರ, ಸಿದ್ದಾಪುರ ಭಾಗಗಳಲ್ಲಿ ಮಳೆಯ ಪ್ರಮಾಣ ಇಳಿಕೆಯಾಗಿತ್ತು.

ಆಲಮಟ್ಟಿಗೆ 13 ಟಿಎಂಸಿ ಅಡಿ ನೀರು: ಮಹಾರಾಷ್ಟ್ರದ ಕೃಷ್ಣಾ ಕಣಿವೆಯಲ್ಲಿ ಸುರಿಯುತ್ತಿದ್ದ ಮಳೆ ಭಾನುವಾರ ಕಡಿಮೆಯಾಗಿದ್ದು, ನೆರೆಯ ಆತಂಕ ದೂರವಾಗಿದೆ. ಭಾನುವಾರ ಈ ವರ್ಷದ ಗರಿಷ್ಠ 13 ಟಿಎಂಸಿ ಅಡಿ ನೀರು ಆಲಮಟ್ಟಿ ಜಲಾಶಯಕ್ಕೆ ಹರಿದು ಬಂದಿದೆ.



ಕೊಡಗು ಜಿಲ್ಲೆಯಲ್ಲಿ ಉತ್ತಮ ಮಳೆ ಆಗುತ್ತಿರುವುದರಿಂದ ಹಾಸನ ಜಿಲ್ಲೆಯ ಕೊಣನೂರು ಸಮೀಪ ರಾಮನಾಥಪುರದಲ್ಲಿ ಕಾವೇರಿ ನದಿ ನೀರಿನ ಮಟ್ಟ ಹೆಚ್ಚಿರುವುದು

ಕರಾವಳಿ: ಹಲವು ಮನೆಗಳಿಗೆ ಹಾನಿ

ಮಂಗಳೂರು: ಕರಾವಳಿ ಜಿಲ್ಲೆಗಳಲ್ಲಿ ಭಾನುವಾರ ಆಗಾಗ ಬಿಡುವುಕೊಟ್ಟು ಬಿರುಸಿನ ಮಳೆ ಸುರಿಯಿತು. ಮಂಗಳೂರು ನಗರ ಸೇರಿದಂತೆ ದಕ್ಷಿಣ ಕನ್ನಡ ಜಿಲ್ಲೆಯಾದ್ಯಂತ ಮಳೆಯಾಗಿದೆ. ಸುಳ್ಯ, ಪುತ್ತೂರು, ಬಂಟ್ವಾಳ, ಬೆಳ್ತಂಗಡಿ ತಾಲ್ಲೂಕಿನಲ್ಲಿ ಮಳೆಯಾಗಿದೆ.

ಉಡುಪಿ ತಾಲ್ಲೂಕಿನ ಶಿವಳ್ಳಿ, ಕಾಪು ತಾಲ್ಲೂಕಿನ ಪಡು, ಪಲಿಮಾರು, ಕಾರ್ಕಳ ತಾಲ್ಲೂಕಿನ ನಿಟ್ಟೆ, ಹೆಬ್ರಿ ತಾಲ್ಲೂಕಿನಲ್ಲಿ ಹಲವು ಮನೆಗಳಿಗೆ ಹಾನಿಯಾಗಿದೆ. ಕಾಪು ತಾಲ್ಲೂಕಿನಲ್ಲಿ ಸಿಡಿಲು ಬಡಿದು ಹಲವು ಮನೆಗಳಿಗೆ ಹಾನಿಯಾಗಿದೆ. ಕುಂಜೂರು ದುರ್ಗಾ ದೇವಸ್ಥಾನದ ಮುಂಭಾಗ ಜಲಾವೃತಗೊಂಡಿದೆ. ಬೆಳಪು, ಅದಮಾರು, ಎರ್ಮಾಳು, ಮಜೂರು, ಕುತ್ಯಾರು, ಇನ್ನಂಜೆಯಲ್ಲಿ ನೆರೆಭೀತಿ ಸೃಷ್ಟಿಯಾಗಿದೆ. 24 ಗಂಟೆಗಳಲ್ಲಿ 9.1 ಸೆಂ.ಮೀ ಮಳೆಯಾಗಿದೆ. ಚಿಕ್ಕಮಗಳೂರು ಜಿಲ್ಲೆ ಕಳಸ, ಎನ್.ಆರ್.ಪುರದಲ್ಲಿ ಉತ್ತಮ ಮಳೆಯಾಗಿದೆ.

ಗರಿಷ್ಠ ಮಳೆ (ಸೆಂ.ಮೀ.ಗಳಲ್ಲಿ)	
ಬೆಳಗಾವಿ ಜಿಲ್ಲೆ	
ಕಣಕುಂಬಿ	15.02
ಜಾಂಬೋಟಿ	12.86
ಲೋಂಡಾ (ರೈಲು ನಿಲ್ದಾಣ)	10.50
ಲೋಡಾ (ಪಿಡಬ್ಲ್ಯುಡಿ)	8.48
ಗುಂಜಿ	7.84
ಅಸೋಗಾ	7.42
ಉತ್ತರ ಕನ್ನಡ ಜಿಲ್ಲೆ	
ಅಂಕೋಲಾ	11.7
ಕುಮಟಾ	11.3
ಗೇರುಸೊಪ್ಪ	9.8
ಭಟ್ಕಳ	9.1

ಜಲಾಶಯದ ನೀರಿನ ಮಟ್ಟ (ಸಮುದ್ರ ಮಟ್ಟದಿಂದ)

ಜಲಾಶಯ	ಗರಿಷ್ಠ ಮಟ್ಟ (ಅಡಿಗಳಲ್ಲಿ)	ಇಂದಿನ ಮಟ್ಟ	ಒಳಹರಿವು (ಕ್ಯುಸೆಕ್‌ಗಳಲ್ಲಿ)	ಹೊರಹರಿವು (ಕ್ಯುಸೆಕ್‌ಗಳಲ್ಲಿ)
ಕೆ ಆರ್ ಎಸ್*	124.80	92.75	20,705	5,141
ಹಾರಂಗಿ	2,859	2,835.82	1,469	80
ಕಬಿನಿ	2,284	2,275.75	13,000	5,000
ಹೇಮಾವತಿ	2,922	2,891.57	13,471	200
ಲಿಂಗನಮಕ್ಕಿ	1,819	1,784.60	40,059	-
ಸೂಪಾ (ಮೀ)	564	538.60	27,339	4,282
ಮಾಣಿ	594.36	573.62	5,800	-
ತುಂಗಭದ್ರಾ	1,633	1,596.94	42,748	242
ಮಲಪ್ರಭಾ	2079.50	2,057.50	36,073	194
ಘಟಪ್ರಭಾ	2,175	2,118.10	33,799	103
ಭದ್ರಾ	186	150.6	14,543	75
ಆಲಮಟ್ಟಿ (ಮೀ)	519.60	513.36	1,50,750	451
ನಾರಾಯಣಪುರ	492.25 ಮೀ	488.79 ಮೀ	2,876	115

* ನೆಲಮಟ್ಟದಿಂದ

ಉರುಳಿದ ಮರ

ಶಿವಮೊಗ್ಗ: ಜಿಲ್ಲೆಯಲ್ಲಿ ಭಾನುವಾರ ಮಳೆ ಕೊಂಚ ಬಿಡುವು ನೀಡಿದ್ದು, ತೀರ್ಥಹಳ್ಳಿ, ಆನಂದಪುರದಲ್ಲಿ ಆಗಾಗ್ಗೆ ತುಂತುರು ಮಳೆ ಹಾಗೂ ಬಿಸಿಲು ಇತ್ತು. ಶನಿವಾರ ಸುರಿದ ಮಳೆಗೆ ಆನಂದಪುರ- ತೀರ್ಥಹಳ್ಳಿ ರಸ್ತೆಯಲ್ಲಿ ಮರ ರಸ್ತೆಯ ಮೇಲೆ ಉರುಳಿದ್ದು, ಕೆಲವು ಗಂಟೆಗಳ ಕಾಲ ರಸ್ತೆ ಸಂಚಾರ ಸ್ಥಗಿತಗೊಂಡಿತ್ತು. ತೀರ್ಥಹಳ್ಳಿ ತಾಲ್ಲೂಕಿನ ಇಂಗ್ಲಾದಿ ಬಳಿ ರಸ್ತೆ ಕುಸಿದಿದೆ. ಹೆದ್ದಾರಿ ಅಕ್ಕಪಕ್ಕದ ಯಡೇಹಳ್ಳಿ, ಕೊರಲಿಕೊಪ್ಪ, ಅಂದಾಸುರ ಮತ್ತಿತರರ ಕಡೆಗಳಲ್ಲಿ ವಿದ್ಯುತ್ ಸಂಪರ್ಕ ಸ್ಥಗಿತಗೊಂಡಿದೆ.

ಏಳು ಜಿಲ್ಲೆಗಳಲ್ಲಿ ಭಾರಿ ಮಳೆ ಸಾಧ್ಯತೆ

ಬೆಂಗಳೂರು: ರಾಜ್ಯದಲ್ಲಿ ಮುಂಗಾರು ಚುರುಕಾಗಿರುವುದರಿಂದ ಕರಾವಳಿ ಹಾಗೂ ದಕ್ಷಿಣ ಒಳನಾಡಿನ ಕೆಲವು ಜಿಲ್ಲೆಗಳಲ್ಲಿ ಜೂ.21- 22ರಂದು ಧಾರಾಕಾರ ಮಳೆಯಾಗುವ ಮುನ್ಸೂಚನೆ ಇದೆ ಎಂದು ಹವಾಮಾನ ಇಲಾಖೆ ತಿಳಿಸಿದೆ.

ಉತ್ತರ ಕನ್ನಡ, ದಕ್ಷಿಣ ಕನ್ನಡ, ಉಡುಪಿ, ಚಿಕ್ಕಮಗಳೂರು, ಹಾಸನ, ಕೊಡಗು, ಶಿವಮೊಗ್ಗ ಜಿಲ್ಲೆಗಳಲ್ಲಿ ಭಾರಿ ಮಳೆಯಾಗುವ ಮುನ್ಸೂಚನೆ ಇರುವುದರಿಂದ 'ಯೆಲ್ಲೊ ಅಲರ್ಟ್' ಮುಂದುವರಿಸಲಾಗಿದೆ. ಉಳಿದ ಜಿಲ್ಲೆಗಳಲ್ಲಿ ಮಳೆ ತಗ್ಗಿದ್ದು, ಕೆಲವೆಡೆ ಸಾಧಾರಣ ಮಳೆಯಾಗಬಹುದು' ಎಂದು ಮಾಹಿತಿ ನೀಡಿದೆ.

ಕರಾವಳಿಯಲ್ಲಿ ಮೀನುಗಾರರು ಕಡಲಿಗೆ ಇಳಿಯಬಾರದು' ಎಂದು ಇಲಾಖೆ ಎಚ್ಚರಿಸಿದೆ.

ಮಳೆ-ಎಲ್ಲಿ,ಎಷ್ಟು?: ಶಿವಮೊಗ್ಗ ಜಿಲ್ಲೆಯ ಆಗುಂಬೆಯಲ್ಲಿ 15 ಸೆಂ. ಮೀ ಗರಿಷ್ಠ ಮಳೆಯಾಗಿದೆ. ಕಾರ್ಕಳ 12, ಸಿದ್ದಾಪುರ 10, ಭಟ್ಕಳ, ಮೂಡಬಿದರೆ 9, ಕುಂದಾಪುರ 8, ಕಾರವಾರ 7, ಮಂಗಳೂರು 6, ಬೆಳ್ತಂಗಡಿ 5, ಸೊರಬ, ಕೊಪ್ಪ 4, ಪುತ್ತೂರು, ಬೆಳಗಾವಿ 3, ನಿಪ್ಪಾಣಿ, ಅಥಣಿ, ಧಾರವಾಡ 2, ಬೀದರ್, ಗದಗ, ಹಾವೇರಿ, ಹಾಸನ ಹಾಗೂ ಶಿಕಾರಿಪುರದಲ್ಲಿ ತಲಾ 1 ಸೆಂ. ಮೀ ಮಳೆಯಾಗಿದೆ. ರಾಯಚೂರು ಹಾಗೂ ಬೀದರ್‌ನಲ್ಲಿ ತಲಾ 31 ಡಿಗ್ರಿ ಸೆಲ್ಸಿಯಸ್ ಗರಿಷ್ಠ ತಾಪಮಾನ ದಾಖಲಾಗಿದೆ.

ತಮಿಳುನಾಡಿಗೆ ಅದಿರು ಅಕ್ರಮ ಸಾಗಣೆ: 19 ಲಾರಿ ವಶ

ಪ್ರಜಾವಾಣಿ ವಾರ್ತೆ

ಬಳ್ಳಾರಿ: ಜಿಲ್ಲೆಯಿಂದ ತಮಿಳುನಾಡಿಗೆ ಅಕ್ರಮವಾಗಿ ಕಬ್ಬಿಣದ ಅದಿರು ಸಾಗಿಸುತ್ತಿದ್ದ 19 ಲಾರಿಗಳನ್ನು ಇಲ್ಲಿನ ಗ್ರಾಮೀಣ ಠಾಣೆ ಪೊಲೀಸರು ಭಾನುವಾರ ವಶಕ್ಕೆ ಪಡೆದಿದ್ದಾರೆ.

ಜಿಲ್ಲೆಯಿಂದ ಬೇರೆ ರಾಜ್ಯಗಳಿಗೆ ಅದಿರು ಸಾಗಣೆಯನ್ನು 2010ರಲ್ಲೇ ನಿಷೇಧಿಸಲಾಗಿದೆ. ಇದನ್ನು ಉಲ್ಲಂಘಿಸಿ 19 ಲಾರಿಗಳಲ್ಲಿ 'ರಾಕ್ ಡಸ್ಟ್' ಸಾಗಿಸಲಾಗುತ್ತಿತ್ತು.

'ಬಳ್ಳಾರಿ ಇಸ್ಪಾತ್ ಕಂಪನಿ ಹೆಸರಿನಲ್ಲಿ 19 ಲಾರಿಗಳಲ್ಲಿ ಉತ್ಕೃಷ್ಟ ಗುಣಮಟ್ಟದ ಕಬ್ಬಿಣದ ಅದಿರು ತುಂಬಿ ತಮಿಳುನಾಡಿಗೆ ಸಾಗಿಸಲಾಗುತ್ತಿತ್ತು. ಲಾರಿ ಮತ್ತು ಚಾಲಕರನ್ನು ವಶಕ್ಕೆ ಪಡೆಯಲಾಗಿದೆ' ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಸೈದುಲು ಅಡಾವತ್ ತಿಳಿಸಿದ್ದಾರೆ.

ಆರ್ಯವೈಶ್ಯ ಸಮಾಜದ ವಾಸವಿ ಪೀಠ

ಸಚ್ಚಿದಾನಂದ ಸರಸ್ವತಿ ಶ್ರೀ ಪೀಠಾರೋಹಣ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಆರ್ಯವೈಶ್ಯ ಸಮಾಜದ ಆಧ್ಯಾತ್ಮಿಕ ಶಕ್ತಿ ಕೇಂದ್ರವಾದ ವಾಸವಿ ಪೀಠದ ದ್ವಿತೀಯ ಗುರುಗಳಾಗಿ ಸಚ್ಚಿದಾನಂದ ಸರಸ್ವತಿ ಸ್ವಾಮೀಜಿ ಅವರು ಭಾನುವಾರ ಪೀಠಾರೋಹಣ ಮಾಡಿದರು.

ಕೋವಿಡ್ ಕಾರಣ ಕರ್ನಾಟಕ ಆರ್ಯವೈಶ್ಯ ಮಹಾಸಭಾದ ವಾಸವಿ ಪೀಠಾರೋಹಣ ಸಮಿತಿಯು ಮಲ್ಲೇಶ್ವರದ ಕನ್ಯಕಾ ಪರಮೇಶ್ವರಿ ದೇವಾಲಯದಲ್ಲಿ ಸರಳವಾಗಿ ಸಮಾರಂಭವನ್ನು ಆಯೋಜಿಸಿತ್ತು. ನಾಲ್ಕು ಗಂಟೆಗಳಿಗೂ ಅಧಿಕ ಅವಧಿ ವಿವಿಧ ಧಾರ್ಮಿಕ ವಿಧಿ ವಿಧಾನಗಳು ನೆರವೇರಿದವು. ಪೀಠಾರೋಹಣದ ಸಂದರ್ಭದಲ್ಲಿ ರಾಜ್ಯದಾದ್ಯಂತ ವಾಸವಿ ದೇವಾಲಯಗಳಲ್ಲಿ ಪೂಜೆ ನೆರವೇರಿಸಲಾಯಿತು. ಈ ಕ್ಷಣಕ್ಕೆ ವಿವಿಧ ಮಠಗಳ ಪೀಠಾಧಿಪತಿಗಳು ಕೂಡ ಸಾಕ್ಷಿಯಾದರು.

ಕೋವಿಡ್ ಕಾರಣ ಸಮಾರಂಭದಲ್ಲಿ ಭಕ್ತಾಧಿಗಳಿಗೆ ಪಾಲ್ಗೊಳ್ಳಲು ಅವಕಾಶ ಇರಲಿಲ್ಲ. ಬದಲಾಗಿ ಆನ್‌ಲೈನ್ ವೇದಿಕೆಗಳಲ್ಲಿ ನೇರ ಪ್ರಸಾರಕ್ಕೆ ವ್ಯವಸ್ಥೆ ಮಾಡಲಾಗಿತ್ತು. ವೃದ್ಧಾಶ್ರಮ, ಅನಾಥಾಶ್ರಮ, ಆಸ್ಪತ್ರೆಗಳಲ್ಲಿ ಅನ್ನದಾನ ನಡೆಸಲಾಯಿತು.



ವಾಸವಿ ಪೀಠದ ಗುರುಗಳಾಗಿ ಸಚ್ಚಿದಾನಂದ ಸರಸ್ವತಿ ಸ್ವಾಮೀಜಿ ಪೀಠಾರೋಹಣ ಮಾಡಿದರು – ಪ್ರಜಾವಾಣಿ ಚಿತ್ರ

ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ, 'ಶಾಂತಿ ಹಾಗೂ ಸಹಬಾಳ್ವೆಗೆ ಹೆಸರಾದ ಆರ್ಯವೈಶ್ಯ ಸಮಾಜದವರು ಈ ನಾಡಿನ ಆಸ್ತಿಯಾಗಿದ್ದಾರೆ. ವ್ಯಾಪಾರ-ವ್ಯವಹಾರದಲ್ಲಿ ತೊಡಗಿರುವ ಅವರು, ಈ ದೇಶದ ಸಂಸ್ಕೃತಿಯನ್ನು ಎತ್ತಿಹಿಡಿಯುತ್ತಿದ್ದಾರೆ. ಅವರ ಧಾರ್ಮಿಕ ಶಕ್ತಿಯಾದ ವಾಸವಿ ಪೀಠಕ್ಕೆ ದ್ವಿತೀಯ ಗುರುಗಳಾಗಿ ಸಚ್ಚಿದಾನಂದ ಸರಸ್ವತಿ ಸ್ವಾಮೀಜಿ ಅವರು ಪೀಠಾರೋಹಣ ಮಾಡಿರುವುದು ಸಂತೋಷವನ್ನುಂಟುಮಾಡಿದೆ' ಎಂದು ತಿಳಿಸಿದರು.

ಸಚ್ಚಿದಾನಂದ ಸರಸ್ವತಿ ಸ್ವಾಮೀಜಿ, 'ಹಲವು ವರ್ಷಗಳಿಂದ ವಾಸವಿ ಪೀಠ ಖಾಲಿಯಿತ್ತು. ಈ ಪೀಠವು ಪುನರುತ್ಥಾನ ಆಗಬೇಕೆಂಬ ಇಚ್ಛೆಯಿದೆ. ಎಲ್ಲ ಸಂತರ ಆಶೀರ್ವಾದದಿಂದ ಸಮಾಜಕ್ಕೆ ಗೌರವ ತರುವಂತಹ ಭವ್ಯವಾದ ಪೀಠವಾಗಿ ಹೊರಹೊಮ್ಮಬೇಕಿದೆ. ಮುಂದಿನ ದಿನಗಳಲ್ಲಿ ಸೇವೆ, ಆಧ್ಯಾತ್ಮ ಹಾಗೂ ದಾಸೋಹವು ನಡೆಯಲಿದೆ. ಎಲ್ಲರನ್ನೂ ಒಟ್ಟಾಗಿ ಕರೆದೊಯ್ಯಲಾಗುವುದು. ಜೀವನದಲ್ಲಿ ವಿಘ್ನಗಳು ಬರುವುದು ಸಹಜ. ಒಳ್ಳೆಯ ಕಾರ್ಯಕ್ಕೆ ಎಷ್ಟೇ ವಿಘ್ನಗಳು ಬಂದರೂ ಹಿಂದೆ ಸರಿಯಬಾರದು. ವಾಸವಿ ದೇವಸ್ಥಾನಗಳು ಸಂಸ್ಕಾರ ಕೇಂದ್ರಗಳಾಗಬೇಕು. ವಿದ್ಯಾಸಂಸ್ಥೆಗಳು ಮೌಲ್ಯಯುತ ಶಿಕ್ಷಣವನ್ನು ನೀಡಬೇಕು' ಎಂದರು.

'ಸರ್ಕಾರ ನಿಗದಿಪಡಿಸುವ ಶುಲ್ಕಕ್ಕೆ ಬದ್ಧ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಪ್ರಸಕ್ತ ಶೈಕ್ಷಣಿಕ ವರ್ಷದ ಮಟ್ಟಿಗೆ ಶುಲ್ಕ ಹೆಚ್ಚಿಸುವುದಿಲ್ಲ. ಸರ್ಕಾರ ಶುಲ್ಕ ನಿಗದಿಪಡಿಸಿ ಆದೇಶ ಹೊರಡಿಸಿದರೆ ಅದನ್ನು ಪಾಲಿಸುತ್ತೇವೆ' ಎಂದು ಕರ್ನಾಟಕ ಖಾಸಗಿ ಶಾಲಾ–ಕಾಲೇಜುಗಳ ಆಡಳಿತ ಮಂಡಳಿಗಳ ಒಕ್ಕೂಟ ನಿರ್ಧರಿಸಿದೆ. ರುಪ್ಸಾ ಕರ್ನಾಟಕ ಸೇರಿದಂತೆ 12 ಸಂಘಟನೆಗಳು ಭಾನುವಾರ ವರ್ಚುವಲ್‌ನಲ್ಲಿ ನಡೆಸಿದ ಸಮಾಲೋಚನಾ ಸಭೆಯಲ್ಲಿ ಈ ನಿರ್ಣಯ ತೆಗೆದುಕೊಂಡಿವೆ.

ಬಳಿಕ ಮಾತನಾಡಿದ ರುಪ್ಸಾ ಸಂಘಟನೆಯ ಅಧ್ಯಕ್ಷ ಲೋಕೇಶ್ ತಾಳಿಕಟ್ಟೆ, 'ನಮ್ಮ ವ್ಯಾಪ್ತಿಯಲ್ಲಿ 10 ಸಾವಿರ ಶಾಲೆಗಳಿವೆ. ವಿವಿಧ ಸಂಘಟನೆಗಳ ಮುಖಂಡರು ಸಭೆ ಸೇರಿ, ಈ ವರ್ಷದ ಮಟ್ಟಿಗೆ ಶುಲ್ಕ ಹೆಚ್ಚಿಸದೆ, ಎರಡು ವರ್ಷದ ಹಿಂದೆ ಪಡೆಯುತ್ತಿದ್ದ ಶುಲ್ಕವನ್ನೇ ಈ ಬಾರಿಗೂ ನಿಗದಿ ಮಾಡಿದ್ದೇವೆ' ಎಂದರು.

'ಅಲ್ಲದೆ, ಕೋವಿಡ್‌ನಿಂದ ಪೋಷಕರನ್ನು ಕಳೆದುಕೊಂಡ ಮಕ್ಕಳಿಗೆ ಉಚಿತವಾಗಿ ಶಿಕ್ಷಣ ನೀಡಲು ನಿರ್ಧರಿಸಿದ್ದೇವೆ' ಎಂದರು.

'ಬಾಕಿ ಶುಲ್ಕ ಉಳಿಸಿಕೊಂಡಿರುವ ಶುಲ್ಕವನ್ನು ಪೋಷಕರು ಪಾವತಿಸುವಂತೆ ಸರ್ಕಾರ ಕ್ರಮ ವಹಿಸಬೇಕು, ಆರ್‌ಟಿಇ ಶುಲ್ಕ ಮರುಪಾವತಿ ಮಾಡಬೇಕು, ಪ್ರಥಮ ಪಿಯುಸಿ ದಾಖಲಾತಿಗೆ ಅವಕಾಶ ನೀಡಬೇಕು. ಶಾಲೆಗಳು ಪಡೆದಿರುವ ಸಾಲಗಳ ಮೇಲಿನ ಬಡ್ಡಿ ಮನ್ನಾ ಮಾಡಬೇಕು' ಎಂದು ಒಕ್ಕೂಟದ ಬೇಡಿಕೆಗಳನ್ನು ಪುನರುಚ್ಚರಿಸಿದರು.

ಕುಕ್ಕೆ: ಭಕ್ತರ ಪ್ರವೇಶ ನಿಷೇಧ

ಸುಬ್ರಹ್ಮಣ್ಯ: ಕೋವಿಡ್ ನಿಯಂತ್ರಿಸುವ ನಿಟ್ಟಿನಲ್ಲಿ ಜಿಲ್ಲಾಧಿಕಾರಿ ಆದೇಶದಂತೆ ಕುಕ್ಕೆ ಸುಬ್ರಹ್ಮಣ್ಯ ದೇವಸ್ಥಾನಕ್ಕೆ ಭಕ್ತರ ಪ್ರವೇಶ ನಿಷೇಧಿಸಲಾಗಿದೆ.

'ಅರ್ಚಕರು ಮತ್ತು ಅಗತ್ಯ ಸಿಬ್ಬಂದಿ ಮೂಲಕ ದೇವಳದಲ್ಲಿ ದೈನಂದಿನ ಪೂಜಾ ವಿನಿಯೋಗ ನಡೆಸಲಾಗುವುದು. ಮುಂದಿನ ಆದೇಶದ ತನಕ ಭಕ್ತರ ಪ್ರವೇಶ ನಿರ್ಬಂಧಿಸಲಾಗಿದೆ' ಎಂದು ವ್ಯವಸ್ಥಾಪನಾ ಸಮಿತಿ ಅಧ್ಯಕ್ಷ ಮೋಹನರಾಂ ಸುಳ್ಳಿ ಅವರು ಮಾಧ್ಯಮಗಳಿಗೆ ತಿಳಿಸಿದ್ದಾರೆ.

ಮೌಢ್ಯಕ್ಕೂ ಬೇಕು ಲಸಿಕೆ

ಬೆಂಗಳೂರು: 'ಕೋವಿಡ್ ಲಸಿಕೆ:ಏಕೆ ಹಿಂಜರಿಕೆ?' ಶೀರ್ಷಿಕೆಯಡಿ 'ಪ್ರಜಾವಾಣಿ'ಯಲ್ಲಿ ಭಾನುವಾರ (ಜೂ.20) ಪ್ರಕಟವಾದ 'ಒಳನೋಟ' ವರದಿಗೆ ರಾಜ್ಯದಾದ್ಯಂತ ಓದುಗರು ಪ್ರತಿಕ್ರಿಯಿಸಿದ್ದಾರೆ. ಆಯ್ದ ಪ್ರತಿಕ್ರಿಯೆಗಳು ಇಲ್ಲಿವೆ.

'ಶಿಕ್ಷಣ ಪಡೆದರೆ, ಮೌಢ್ಯ ದೂರ'



'ನಮ್ಮನ್ನು ಬಿಟ್ಟರೂ, ಅದನ್ನು ನಾವು ಬಿಡೆವು' ಎನ್ನುವಷ್ಟರ ಮಟ್ಟಿಗೆ ಮೂಢನಂಬಿಕೆಗಳು ಜನರ ಮನಸ್ಸಿನಲ್ಲಿ ಬೇರೂರಿವೆ. ಶಿಕ್ಷಣದ ಅಭಾವದಿಂದ ಅಜ್ಞಾನ, ಅದರಿಂದ ಭಯ ಹಾಗೂ ಮೂಢನಂಬಿಕೆ ಹುಟ್ಟುತ್ತದೆ. ಹಾಗಾಗಿ, ಎಲ್ಲರೂ ಶಿಕ್ಷಣ ಪಡೆಯಬೇಕು. ಇದೇ ಈಗಿನ ಸಂದರ್ಭಕ್ಕೆ ಸರಿಯಾದ ಮಾರ್ಗ. ಶಿಕ್ಷಣ ಎಲ್ಲರ ಸ್ವತ್ತಾಗಬೇಕು, ತಪ್ಪು ಗ್ರಹಿಕೆಗಳು ದೂರ ಸರಿಯಬೇಕು.

ಎನ್.ಆರ್.ಸಿದ್ದರಾಜು, ಬೆಂಗಳೂರು

ಗ್ರಾಮೀಣರಲ್ಲಿ ಅರಿವು ಮೂಡಿಸಿ



ಗ್ರಾಮೀಣ ಭಾಗದಲ್ಲಿ ಜನರಲ್ಲಿ ಲಸಿಕೆ ಕುರಿತಾಗಿ ತಪ್ಪು ಗ್ರಹಿಕೆ ಇದೆ. ಅಲ್ಲಿನ ವಿದ್ಯಾರ್ಥಿಗಳು ಲಸಿಕೆಯ ಅನುಕೂಲಗಳ ಬಗ್ಗೆ ತಮ್ಮ ಮನೆಯವರಿಗೆ ಅರಿವು ಮೂಡಿಸಬೇಕು. ಊರಿನ ಮುಖಂಡರು ಲಸಿಕೆ ಹಾಕಿಸಿಕೊಳ್ಳುವ ಮೂಲಕ ಇತರರಿಗೆ ಮಾದರಿಯಾಗಬೇಕು. ಗ್ರಾಮೀಣ ಭಾಗದ ಜನರಿಗೆ ಲಸಿಕೆ ಹಾಕಿಸುವತ್ತ ಸರ್ಕಾರದ ಚಿತ್ತ ಇರಲಿ.

ಜೆ.ಚಂದ್ರಶೇಖರ, ದಾವಣಗೆರೆ

ಸರಿಯಾದ ಮಾಹಿತಿ ಕೊಡಿ



ಜನರಲ್ಲಿ ಮೌಢ್ಯ ಇದೆ ಎನ್ನುವುದಕ್ಕಿಂತ ಗೊಂದಲ ಇದೆ ಎನ್ನಬಹುದು. ಇದರ ಸೃಷ್ಟಿಕರ್ತರು ರಾಜಕಾರಣಿಗಳು. ವೈರಸ್ ಬಗೆಗೆ ವೈದ್ಯರಲ್ಲೇ ಗೊಂದಲ ಇರುವಾಗ ಸಾಮಾನ್ಯರಿಗೂ ಗೊಂದಲ ತಪ್ಪಿದ್ದಲ್ಲ. ಇದನ್ನು ಪರಿಹರಿಸಬೇಕಾದ ಜವಾಬ್ದಾರಿ ಸರ್ಕಾರದ್ದು. ಆದರೆ, ಆ ಕೆಲಸವನ್ನು ಸರಿಯಾಗಿ ಮಾಡಿಲ್ಲ. ಜನರಿಗೆ ಸರಿಯಾದ ಮಾಹಿತಿ ಸಿಕ್ಕರೆ, ಧೈರ್ಯವಾಗಿ ಲಸಿಕೆ ಪಡೆಯಲಿದ್ದಾರೆ.

ಚಂದನ, ಮೈಸೂರು

ಜಾಗೃತಿ ಮೂಡಿಸಿ



ಇಂದಿನ ಜೀವನಶೈಲಿ ಹಾಗೂ ಆಹಾರ ಪದ್ಧತಿಯಿಂದ ಜನರಲ್ಲಿ ರೋಗ ನಿರೋಧಕ ಶಕ್ತಿ ಕ್ಷೀಣಿಸಿದೆ. ಹಾಗಾಗಿ, ಸೋಂಕು ಯಾರಿಗಾದರೂ ತಗುಲಬಹುದು. ಇದೇ ವೇಳೆ ಜನರು ಲಸಿಕೆ ವಿಚಾರದಲ್ಲಿ ತಪ್ಪು ತಿಳುವಳಿಕೆ ಹೊಂದುತ್ತಿರುವುದು ವಿಪರ್ಯಾಸ. ಇದನ್ನು ತಡೆಗಟ್ಟಲು ಗ್ರಾಮೀಣ ಪ್ರದೇಶಗಳಲ್ಲಿ ಜಾಗೃತಿ ಕಾರ್ಯಕ್ರಮಗಳು ಹೆಚ್ಚಾಗಿ ನಡೆಯಬೇಕು.

ಸಂಗಮೇಶ, ಹಾವೇರಿ

ಮೌಢ್ಯವನ್ನು ದೂರವಿಡಿ



ವೈಜ್ಞಾನಿಕ ಯುಗದಲ್ಲಿ ಮೂಢನಂಬಿಕೆಗೆ ಜಾಗ ಇರಬಾರದು. ಲಸಿಕೆ ವಿಚಾರದಲ್ಲಿ ಮುಖ್ಯವಾಗಿ ಗ್ರಾಮೀಣ ಪ್ರದೇಶಗಳಲ್ಲಿ ತಪ್ಪು ಮಾಹಿತಿಯಿಂದ ಈ ಅವಾಂತರಗಳು ಮುಂದುವರಿದಿವೆ. ಲಸಿಕೆಯ ಮಹತ್ವವನ್ನು ಜನರಿಗೆ ತಿಳಿಸಬೇಕು. ಭಯ, ಗೊಂದಲದಲ್ಲಿರುವ ಅವರಲ್ಲಿ ಧೈರ್ಯ ಮೂಡಿಸಬೇಕು.

ಸಂತೋಷ್, ರಾಜಾಜಿನಗರ, ಬೆಂಗಳೂರು

ಪ್ರಜ್ಞಾವಂತರೂ ಲಸಿಕೆಗೆ ಹಿಂದೇಟು



ನಮ್ಮ ಭಾಗದ ಸೋಲಿಗರು, ಕಾಡು ಕುರುಬರು, ಜೇನು ಕುರುಬರು ಸೇರಿದಂತೆ ಬುಡಕಟ್ಟು ಜನಾಂಗದವರು ಲಸಿಕೆ ವಿಚಾರದಲ್ಲಿ ಜಾಗೃತರಾಗಿದ್ದಾರೆ. ಆದರೆ, ನಗರದಲ್ಲಿರುವ ಕೆಲ ಪ್ರಜ್ಞಾವಂತರು ಪೂರ್ವಾಗ್ರಹ ಪೀಡಿತರಾಗಿ ಲಸಿಕೆ ಹಾಕಿಸಿಕೊಳ್ಳಲು ಹಿಂದೆ ಸರಿಯುತ್ತಿರುವುದು ದುರಂತ. ಲಸಿಕೆ ಹಾಕಿಸಿಕೊಂಡು ಅವಿದ್ಯಾವಂತರಿಗೆ ಮಾದರಿಯಾಗಿ.

ಮಂಜುಳಾ, ರಾಮನಗರ

ಮಾರ್ಗಸೂಚಿಗಿಂತ ಮೌಢ್ಯ ಪ್ರಧಾನ



ಸ್ವಚ್ಛತೆ, ಮಾಸ್ಕ್ ಧರಿಸುವುದು, ಅಂತರ ಕಾಯ್ದುಕೊಳ್ಳುವಿಕೆ ಸೇರಿದಂತೆ ಸರ್ಕಾರದ ಮಾರ್ಗಸೂಚಿಗಳನ್ನು ಪಾಲಿಸದ ಕೆಲವು ಪ್ರದೇಶದ ಜನ, ದೈವಿಕ ಶಕ್ತಿಗಳ ಮೊರೆ ಹೋಗಿದ್ದಾರೆ. ಪ್ರಾಣಿ ಬಲಿ ಕೊಡುವ ಮೂಲಕ ಮೌಢ್ಯ ಆಚರಿಸುತ್ತಿದ್ದಾರೆ. ಇಂತಹ ಪ್ರದೇಶಗಳಲ್ಲಿ ಸರ್ಕಾರ ಲಸಿಕೆ ಬಗ್ಗೆ ಅರಿವು ಮೂಡಿಸಬೇಕು.

ಅಬ್ದುಲ್ ರಝಾಕ್, ಮಂಗಳೂರು

ಲಸಿಕೆಗೆ ಹಿಂಜರಿಕೆ ಬೇಡ



ನಿಮ್ಮ ಆರೋಗ್ಯ ನಿಮ್ಮ ಕೈಯಲ್ಲಿದೆ. ಮೂಢನಂಬಿಕೆಗಳು ಈಗಿನ ಸಂಕಷ್ಟಕ್ಕೆ ಮದ್ದಲ್ಲ. ಇದನ್ನು ಅರಿತುಕೊಂಡು ಎಲ್ಲರೂ ಲಸಿಕೆ ಹಾಕಿಸಿಕೊಳ್ಳಲು ಮುಂದೆ ಬನ್ನಿ. ಸಾವು ನಮ್ಮ ಮಿತಿಯಲ್ಲಿ ಇರುವುದಿಲ್ಲ. ನನಗೆ ಈಗ 77 ವರ್ಷ. ಕೋವಿಡ್ ಎರಡೂ ಲಸಿಕೆ ಹಾಕಿಸಿಕೊಂಡು, ಆರೋಗ್ಯದಿಂದ ಇದ್ದೇನೆ. ಲಸಿಕೆಗೆ ಹಿಂಜರಿಕೆ ಬೇಡ.

ಬಸಪ್ಪ ಸೊ.ಮುಳ್ಳೂರ, ಬೆಳಗಾವಿ

ಸೋಮವಾರ, ಜೂನ್ 21, 2021 | ಬೆಂಗಳೂರು | ₹ 6.00 | ಸಂಪುಟ 74 | ಸಂಚಿಕೆ 172 | ಪುಟ 14
● www.prajavani.net
/prajavani.net @prajavani /prajavani http://bit.ly/Prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಶಿಕ್ಷಣ
ಎಸ್ಸೆಸ್ಸೆಲ್ಸಿ, ಪಿಯುಸಿ ಮುಗಿಸಿದ ವಿದ್ಯಾರ್ಥಿಗಳು ಕಾಲೇಜು ಆಯ್ಕೆಯ ಮುನ್ನ ಯೋಚಿಸಿ ನಿರ್ಧಾರ ತೆಗೆದುಕೊಳ್ಳುವುದು ಉತ್ತಮ



ಒಳ ಪುಟಗಳು



ರಾಜ್ಯ ಕೋವಿಡ್ ಅಂಕಿ–ಅಂಶ

28,06,453 ▲ ಒಟ್ಟು ಸೋಂಕಿತರು
(28,01,936 ನಿನ್ನೆಯ ವಿವರ)

1,26,813 ▼ ಸಕ್ರಿಯ ಪ್ರಕರಣಗಳು

26,45,735 ▲ ಗುಣಮುಖರಾದವರು

33,883 ▲ ಒಟ್ಟು ಸಾವು

ದಿನದ ಏರಿಕೆ

ಹೊಸ ಪ್ರಕರಣ	4,517	▼
ಗುಣಮುಖ	8,456	▼
ಸಾವು	120	▼

ಆಧಾರ: ರಾಜ್ಯ ಆರೋಗ್ಯ ಇಲಾಖೆ
ಪ್ರಜಾವಾಣಿ ಗ್ರಾಫಿಕ್ಸ್

ಇಂದಿನ ಪಾಡ್‌ಕಾಸ್ಟ್ ವಿಶೇಷ
ವಚನವಾಣಿ
ಪ್ರತೀ ದಿನ: ದಿನದ ಸೂಕ್ತಿ, ಸಂಪಾದಕೀಯ, ಪ್ರಚಲಿತ
Prajavani.net/podcast

‘ಸುಪ್ರೀಂ’ಗೆ ಸಲ್ಲಿಸಿದ ಪ್ರಮಾಣಪತ್ರದಲ್ಲಿ ಕೇಂದ್ರ ಸರ್ಕಾರದ ಪ್ರತಿಪಾದನೆ

ಕೋವಿಡ್ ಸಾವಿಗೆ ಪರಿಹಾರವಿಲ್ಲ

ಪ್ರಜಾವಾಣಿ ವಾರ್ತೆ

ನವದೆಹಲಿ: ಕೋವಿಡ್–19ರಿಂದ ಮೃತಪಟ್ಟವರ ಕುಟುಂಬಗಳಿಗೆ ಪರಿಹಾರಧನ ನೀಡುವುದು ಸಾಧ್ಯವಿಲ್ಲ ಎಂದು ಕೇಂದ್ರ ಸರ್ಕಾರವು ಸುಪ್ರೀಂ ಕೋರ್ಟ್‌ಗೆ ತಿಳಿಸಿದೆ. ಹೀಗೆ ಮಾಡಿದರೆ ವಿಪತ್ತು ನಿರ್ವಹಣೆ ನಿಧಿಯು ಮುಗಿದು ಹೋಗುತ್ತದೆ. ಅದಲ್ಲದೆ, ಸಾಂಕ್ರಾಮಿಕದ ಮುಂದಿನ ಅಲೆಗಳನ್ನು ಎದುರಿಸಲು ಕೇಂದ್ರ ಮತ್ತು ರಾಜ್ಯಗಳ ಸಿದ್ಧತೆಯ ಮೇಲೆಯೂ ಇದು ಪರಿಣಾಮ ಬೀರುತ್ತದೆ ಎಂದು ತಿಳಿಸಿದೆ.

ಕೋವಿಡ್–19 ಸಾಂಕ್ರಾಮಿಕವನ್ನು ರಾಷ್ಟ್ರೀಯ ವಿಪತ್ತು ಎಂದು ಕೇಂದ್ರ ಸರ್ಕಾರವು ಘೋಷಿಸಿದೆ. ಹಾಗಾಗಿ, ಕೋವಿಡ್‌ನಿಂದ ಮೃತಪಟ್ಟವರ ಕುಟುಂಬಕ್ಕೆ ತಲಾ ₹4 ಲಕ್ಷ ಪರಿಹಾರ ನೀಡಬೇಕು ಎಂದು ಕೋರಿ ಸಲ್ಲಿಸಲಾದ ಸಾರ್ವಜನಿಕ ಹಿತಾಸಕ್ತಿಯ ಅರ್ಜಿಗೆ (ಪಿಐಎಲ್) ಕೇಂದ್ರವು ಹೀಗೆ ಪ್ರತಿಕ್ರಿಯೆ ಕೊಟ್ಟಿದೆ.

ಸಾಂಕ್ರಾಮಿಕವು ಆರ್ಥಿಕತೆಯ ಮೇಲೆ ದೊಡ್ಡ ಹೊಡೆತ ಕೊಟ್ಟಿದೆ. ತೆರಿಗೆ ವರಮಾನವು ಕಡಿಮೆಯಾಗಿದೆ ಮತ್ತು ಆರೋಗ್ಯ ವೆಚ್ಚವು ಹೆಚ್ಚಳವಾಗಿದೆ. ಹಾಗಾಗಿ, ಕೇಂದ್ರ ಮತ್ತು ರಾಜ್ಯಗಳು ತೀವ್ರ ಆರ್ಥಿಕ ಮುಗ್ಗಟ್ಟಿನಲ್ಲಿವೆ ಎಂದು ಸುಪ್ರೀಂ ಕೋರ್ಟ್‌ಗೆ ಸಲ್ಲಿಸಲಾದ ಪ್ರಮಾಣಪತ್ರದಲ್ಲಿ ಹೇಳಲಾಗಿದೆ.

ವಿಪತ್ತು ನಿರ್ವಹಣಾ ಕಾಯ್ದೆ 2005ರ ಅಡಿಯಲ್ಲಿ ಪರಿಹಾರ ನೀಡುವುದಕ್ಕಾಗಿ 12 ವಿಪತ್ತುಗಳನ್ನು ಗುರುತಿಸಲಾಗಿದೆ. ಈ ವಿಪತ್ತುಗಳಿಗೆ ಪರಿಹಾರಕ್ಕಾಗಿ ರಾಜ್ಯಗಳಿಗೆ ನೀಡಲು 2021–22ನೇ ಸಾಲಿನಲ್ಲಿ ₹22,184 ಕೋಟಿ ಮೀಸಲು ಇರಿಸಲಾಗಿದೆ. ಕೋವಿಡ್‌ನಿಂದ ಮೃತಪಟ್ಟವರ ಕುಟುಂಬಗಳಿಗೆ ಈ ನಿಧಿಯಿಂದ ಪರಿಹಾರ ಕೊಟ್ಟರೆ ಪೂರ್ಣ ಮೊತ್ತವನ್ನು ಅದಕ್ಕೆ ವಿನಿಯೋಗಿಸಬೇಕಾಗುತ್ತದೆ. ಅಷ್ಟೇ ಅಲ್ಲದೆ, ಒಟ್ಟು ವೆಚ್ಚವು ಈ ಮೊತ್ತವನ್ನು ಮೀರುವ ಸಾಧ್ಯತೆಯೂ ಇದೆ ಎಂದು ಪ್ರಮಾಣಪತ್ರದಲ್ಲಿ ಮಾಹಿತಿ ನೀಡಲಾಗಿದೆ.

ಪರಿಹಾರಕ್ಕೆ ಕೋರಿಕೆಯು ನೈಜವಾದ ಬೇಡಿಕೆ. ಹಾಗಾಗಿ, ಈ ವಿಚಾರವು ಪರಿಶೀಲನೆಯಲ್ಲಿ ಇದೆ ಎಂದು ಇದೇ 11ರಂದು ನಡೆದ ವಿಚಾರಣೆ ಸಂದರ್ಭದಲ್ಲಿ ಸರ್ಕಾರವು ಹೇಳಿತ್ತು.

ಹಣದ ರೂಪದ ಪರಿಹಾರದ ಬದಲು ಹೆಚ್ಚು ವ್ಯಾಪಕವಾದ ಧೋರಣೆ ತಳೆಯಲು ನಿರ್ಧರಿಸಲಾಗಿದೆ. ಆರೋಗ್ಯ ರಕ್ಷಣೆ ವ್ಯವಸ್ಥೆ, ಸಾಮಾಜಿಕ ಭದ್ರತೆ, ಆರ್ಥಿಕ ಪುನಶ್ಚೇತನಕ್ಕೆ ನೆರವಿನಂತಹ ಕ್ರಮಗಳು ಹೆಚ್ಚು ಜಾಣ್ಮೆ, ಹೊಣೆಗಾರಿಕೆ ಮತ್ತು ಸುಸ್ಥಿರವಾದ ನಡೆ ಅನಿಸುತ್ತದೆ ಎಂದು ಕೇಂದ್ರವು ಅಭಿಪ್ರಾಯಪಟ್ಟಿದೆ.

ಸಾಂಕ್ರಾಮಿಕದ ಪ್ರಮಾಣ ದೊಡ್ಡದು ಮತ್ತು ಪರಿಣಾಮ ವ್ಯಾಪಕವಾದುದು. ಹಾಗಾಗಿ, ನೈಸರ್ಗಿಕ ವಿಕೋಪಗಳ ಸಂದರ್ಭಗಳಲ್ಲಿ ನೆರವು ನೀಡುವ ಯೋಜನೆಯನ್ನು ಸಾಂಕ್ರಾಮಿಕಕ್ಕೆ ಅನ್ವಯಿಸಲು ಆಗದು ಎಂದು ಕೇಂದ್ರ ಪ್ರತಿಪಾದಿಸಿದೆ.

ಪ್ರಮಾಣೀಕರಣ ಕಡ್ಡಾಯ



ಗಂಭೀರ ಅನಾರೋಗ್ಯ ಇರುವ ವ್ಯಕ್ತಿಗಳು ಕೋವಿಡ್ ದೃಢಪಟ್ಟ ಬಳಿಕ ಮೃತಪಟ್ಟರೆ ಇದನ್ನು ಕೋವಿಡ್‌ನಿಂದ ಆಗಿರುವ ಸಾವು ಎಂದೇ ಪರಿಗಣಿಸಬೇಕಾಗುತ್ತದೆ ಎಂದು ಸುಪ್ರೀಂ ಕೋರ್ಟ್‌ಗೆ ಕೇಂದ್ರವು ಹೇಳಿದೆ.

ಸಾವಿಗೆ ಅತ್ಯಂತ ಸ್ಪಷ್ಟವಾದ ಬೇರೆ ಕಾರಣ ಇದ್ದಾಗ ಮತ್ತು ಸಾವಿನ ಕಾರಣ ಕೋವಿಡ್ ಅಲ್ಲವೇ ಅಲ್ಲ ಎಂಬುದು ದೃಢಪಟ್ಟಾಗ ಮಾತ್ರ ಅಂಥ ಪ್ರಕರಣವನ್ನು ಕೋವಿಡ್‌ನಿಂದಾದ ಸಾವು ಎಂದು ಪರಿಗಣಿಸಬೇಕಿಲ್ಲ. ಉದಾಹರಣೆಗೆ ಅಪಘಾತ, ವಿಷ ಸೇವನೆ, ಹೃದಯಾಘಾತದಿಂದ ಮೃತಪಟ್ಟರೆ ಅದನ್ನು ಕೋವಿಡ್ ಸಾವು ಎಂದು ಪರಿಗಣಿಸಬೇಕಿಲ್ಲ ಎಂದು ತಿಳಿಸಲಾಗಿದೆ.

ಭಾರತೀಯ ವೈದ್ಯಕೀಯ ಸಂಶೋಧನಾ ಪರಿಷತ್ 2020ರ ಮೇ 10ರಂದು ಸಿದ್ಧಪಡಿಸಿದ ಮಾರ್ಗಸೂಚಿಯನ್ನು ಅನುಸರಿಸಬೇಕು. ಅದರ ಉಲ್ಲಂಘನೆಯನ್ನು ಭಾರತೀಯ ದಂಡ ಸಂಹಿತೆ ಸೆಕ್ಷನ್ 188ರ ಅಡಿಯಲ್ಲಿ ಅಪರಾಧ ಕೃತ್ಯ ಎಂದು ಪರಿಗಣಿಸಲಾಗುವುದು.

ಕೋವಿಡ್ ಸಾವಿಗೆ ಸಂಬಂಧಿಸಿ ಈ ಮಾರ್ಗಸೂಚಿ ಸಿದ್ಧಪಡಿಸಲಾಗಿದೆ. ವಿಶ್ವ ಆರೋಗ್ಯ ಸಂಸ್ಥೆಯ ಮರಣ ಸಂಹಿತೆಗೆ ಅನುಗುಣವಾಗಿ ಈ ಮಾರ್ಗಸೂಚಿ ಇದೆ.

ಕೋವಿಡ್‌ನಿಂದಾದ ಮರಣಕ್ಕೆ ಅದೇ ಕಾರಣದ ಪ್ರಮಾಣಪತ್ರ ನೀಡದೇ ಇದ್ದರೆ ಸಂಬಂಧಪಟ್ಟ ವೈದ್ಯರ ವಿರುದ್ಧ ಶಿಸ್ತು ಕ್ರಮ ಕೈಗೊಳ್ಳಲಾಗುವುದು ಎಂದು ಕೇಂದ್ರವು ತಿಳಿಸಿದೆ.



ಬೆಂಗಳೂರಿನ ಬೈಯಪ್ಪನಹಳ್ಳಿ ಮೆಟ್ರೊ ನಿಲ್ದಾಣದಲ್ಲಿ ಸಿಬ್ಬಂದಿಯೊಬ್ಬರು ಭಾನುವಾರ ಮೆಟ್ರೊ ರೈಲಿನ ಬೋಗಿಯೊಂದನ್ನು ಸ್ವಚ್ಛಗೊಳಿಸಿದರು ಪ್ರಜಾವಾಣಿ ಚಿತ್ರ/ ರಂಜು ಪಿ.

ಇಂದಿನಿಂದ ಲಾಕ್‌ಡೌನ್ ಮತ್ತಷ್ಟು ಸಡಿಲಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ (ಬಿಬಿಎಂಪಿ) ವ್ಯಾಪ್ತಿ ಸೇರಿದಂತೆ ರಾಜ್ಯದ 17 ಜಿಲ್ಲೆಗಳಲ್ಲಿ ಸೋಮವಾರದಿಂದ ಹಗಲಿನ ವೇಳೆ ಲಾಕ್‌ಡೌನ್ ಸಂಪೂರ್ಣವಾಗಿ ಸಡಿಲಿಕೆ ಆಗಲಿದೆ. 13 ಜಿಲ್ಲೆಗಳಲ್ಲಿ ಲಾಕ್‌ಡೌನ್ ಭಾಗಶಃ ಸಡಿಲಿಕೆ ಆಗಲಿದ್ದು, ಮೈಸೂರು ಜಿಲ್ಲೆಯಲ್ಲಿ ಮಾತ್ರ ಕಠಿಣ ನಿರ್ಬಂಧಗಳು ಮುಂದುವರಿಯಲಿವೆ.

ಎರಡನೇ ಹಂತದ ಲಾಕ್‌ಡೌನ್ ಸಡಿಲಿಕೆ ಸೋಮವಾರ ಬೆಳಿಗ್ಗೆ 6ರಿಂದಲೇ ಜಾರಿಗೆ ಬರಲಿದೆ. ಕೋವಿಡ್ ದೃಢ ಪ್ರಮಾಣ ಸರಾಸರಿ ದರ ಶೇಕಡ 5ಕ್ಕಿಂತ ಕಡಿಮೆ ಇರುವ ಕಾರಣದಿಂದ ಹಗಲು ಲಾಕ್‌ಡೌನ್‌ನಿಂದ ವಿನಾಯ್ತಿ ಪಡೆದಿರುವ ಜಿಲ್ಲೆಗಳ ಪಟ್ಟಿಗೆ ಧಾರವಾಡವನ್ನೂ ಸೇರಿಸಿ ಕಂದಾಯ ಇಲಾಖೆ ಪ್ರಧಾನ ಕಾರ್ಯದರ್ಶಿ ಎನ್. ಮಂಜುನಾಥ್ ಪ್ರಸಾದ್ ಆದೇಶ ಹೊರಡಿಸಿದ್ದಾರೆ. ಈ ಕಾರಣದಿಂದ 17 ಜಿಲ್ಲೆಗಳಲ್ಲಿ ಹಗಲಿನ ವೇಳೆ ಎಲ್ಲ ಬಗೆಯ ಅಂಗಡಿಗಳ ವಹಿವಾಟು ನಡೆಸಲು ಅವಕಾಶ ದೊರೆಯಲಿದೆ.

ಕೋವಿಡ್ ದೃಢ ಪ್ರಮಾಣ ದರ ಶೇ 10ಕ್ಕಿಂತ ಹೆಚ್ಚಿರುವ ಮೈಸೂರು ಜಿಲ್ಲೆಯಲ್ಲಿ ಬಸ್ ಸಂಚಾರಕ್ಕೆ ಅವಕಾಶ ನೀಡದಿರಲು ರಾಜ್ಯ ಸರ್ಕಾರ ನಿರ್ಧರಿಸಿತ್ತು. ದಕ್ಷಿಣ ಕನ್ನಡ ಜಿಲ್ಲೆಯಲ್ಲೂ ಬಸ್ ಸಂಚಾರ ನಿರ್ಬಂಧಿಸಿ ಆದೇಶ ಹೊರಡಿಸಿದ್ದಾರೆ. ಈ ಎರಡು ಜಿಲ್ಲೆಗಳನ್ನು ಹೊರತುಪಡಿಸಿ ಎಲ್ಲ ಜಿಲ್ಲೆಗಳಲ್ಲೂ ಶೇ 50ರಷ್ಟು ಪ್ರಯಾಣಿಕರ ಮಿತಿಯೊಂದಿಗೆ ಬಸ್ ಸಂಚಾರ ಆರಂಭವಾಗಲಿದೆ. ಕೆಎಸ್‌ಆರ್‌ಟಿಸಿ, ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆ ಸೇರಿದಂತೆ ರಾಜ್ಯ ಸರ್ಕಾರದ ಎಲ್ಲ ಸಾರಿಗೆ ನಿಗಮಗಳು ಬಸ್ ಸಂಚಾರ ಆರಂಭಕ್ಕೆ ಸಿದ್ಧತೆ ಮಾಡಿಕೊಂಡಿವೆ. ಬೆಂಗಳೂರಿನಲ್ಲಿ ಶೇ 50ರಷ್ಟು ಪ್ರಯಾಣಿಕರ ಮಿತಿಯೊಂದಿಗೆ ಮೆಟ್ರೊ ರೈಲು ಸಂಚಾರವೂ ಆರಂಭವಾಗಲಿದೆ.

5ನೇ ಪುಟ ನೋಡಿ

ಹಗಲಿನ ವೇಳೆ ಲಾಕ್‌ಡೌನ್ ಇಲ್ಲದ ಜಿಲ್ಲೆಗಳು

ಬಿಬಿಎಂಪಿ ಸೇರಿದಂತೆ ಬೆಂಗಳೂರು ನಗರ, ಉತ್ತರ ಕನ್ನಡ, ಬೆಳಗಾವಿ, ಮಂಡ್ಯ, ಕೊಪ್ಪಳ, ಚಿಕ್ಕಬಳ್ಳಾಪುರ, ತುಮಕೂರು, ಕೋಲಾರ, ಗದಗ, ರಾಯಚೂರು, ಬಾಗಲಕೋಟೆ, ಕಲಬುರ್ಗಿ, ಹಾವೇರಿ, ರಾಮನಗರ, ಯಾದಗಿರಿ, ಬೀದರ್ ಮತ್ತು ಧಾರವಾಡ.

ಭಾಗಶಃ ಸಡಿಲಿಕೆಯಾಗುವ ಜಿಲ್ಲೆಗಳು

ಹಾಸನ, ಉಡುಪಿ, ದಕ್ಷಿಣ ಕನ್ನಡ, ಶಿವಮೊಗ್ಗ, ಚಾಮರಾಜನಗರ, ಚಿಕ್ಕಮಗಳೂರು, ಬೆಂಗಳೂರು ಗ್ರಾಮಾಂತರ, ದಾವಣಗೆರೆ, ಕೊಡಗು, ಬಳ್ಳಾರಿ, ವಿಜಯನಗರ, ಚಿತ್ರದುರ್ಗ ಮತ್ತು ವಿಜಯಪುರ.

81 ದಿನಗಳ ಬಳಿಕ ಸೋಂಕಿತರ ಸಂಖ್ಯೆ 60 ಸಾವಿರಕ್ಕೂ ಕಡಿಮೆ

ನವದೆಹಲಿ (ಪಿಟಿಐ): ದೇಶದಾದ್ಯಂತ ಕಳೆದ 24 ಗಂಟೆಗಳಲ್ಲಿ 81 ದಿನಗಳಲ್ಲೇ ಕನಿಷ್ಠ 58,419 ಹೊಸ ಕೋವಿಡ್ ಪ್ರಕರಣಗಳು ದೃಢಪಟ್ಟಿದ್ದು, 1,576 ಮಂದಿ ಸೋಂಕಿತರು ಮೃತಪಟ್ಟಿದ್ದಾರೆ ಎಂದು ಕೇಂದ್ರ ಆರೋಗ್ಯ ಸಚಿವಾಲಯ ತಿಳಿಸಿದೆ. 8

ಯಡಿಯೂರಪ್ಪ ನಾಯಕತ್ವಕ್ಕೇ ಬೆಂಬಲ: ಅರುಣ್‌ಸಿಂಗ್ ವರದಿ

● ಸಿದ್ದಯ್ಯ ಹಿರೇಮಠ

ನವದೆಹಲಿ: ‘ಒಬ್ಬ ಸಚಿವ ಹಾಗೂ ಇಬ್ಬರು ಶಾಸಕರು ಮಾತ್ರ ಬಿ.ಎಸ್. ಯಡಿಯೂರಪ್ಪ ಅವರ ನಾಯಕತ್ವವನ್ನು ಬದಲಿಸುವಂತೆ ಆಗ್ರಹಿಸಿದ್ದಾರೆ. ಅವರನ್ನು ಹೊರತುಪಡಿಸಿ ಬೇರೆ ಯಾರೂ ನಾಯಕತ್ವದ ಬಗ್ಗೆ ಕಿಂಚಿತ್ತೂ ಅಸಮಾಧಾನ ವ್ಯಕ್ತಪಡಿಸಿಲ್ಲ’



ಅರುಣ್ ಸಿಂಗ್

– ಇದು, ಬಿಜೆಪಿ ರಾಜ್ಯ ಉಸ್ತುವಾರಿ ಅರುಣ್ ಸಿಂಗ್ ಅವರು ಪಕ್ಷದ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ. ನಡ್ಡಾ ಅವರಿಗೆ ಭಾನುವಾರ ಸಲ್ಲಿಸಿದ 80 ಪುಟಗಳ ವರದಿಯಲ್ಲಿರುವ ಪ್ರಮುಖ ಅಂಶವಾಗಿದೆ. ಬೆಂಗಳೂರಿನಲ್ಲಿ ಜೂನ್ 16ರಿಂದ ಸತತ ಮೂರು ದಿನ ರಾಜ್ಯದ ಬಿಜೆಪಿ ಶಾಸಕರು ಮತ್ತು ಸಚಿವರ ಅಭಿಪ್ರಾಯವನ್ನು ಅರುಣ್ ಸಿಂಗ್ ಸಂಗ್ರಹಿಸಿದ್ದರು.

ಆದರೆ, ಆಡಳಿತದಲ್ಲಿ ಯಡಿಯೂರಪ್ಪ ಅವರ ಪುತ್ರ, ಬಿಜೆಪಿ ರಾಜ್ಯ ಘಟಕದ ಉಪಾಧ್ಯಕ್ಷ ಬಿ.ವೈ. ವಿಜಯೇಂದ್ರ ಅವರ ಹಸ್ತಕ್ಷೇಪ ಇದೆ ಎಂದು ಅನೇಕರು ಆಕ್ಷೇಪ ವ್ಯಕ್ತಪಡಿಸಿದ್ದಾರೆ ಎಂಬ ಅಂಶವೂ ಸಿಂಗ್ ಅವರು ಸಲ್ಲಿಸಿರುವ ವರದಿಯಲ್ಲಿ ಪ್ರಮುಖವಾಗಿದೆ ಎಂದು ಪಕ್ಷದ ಉನ್ನತ ಮೂಲಗಳು ‘ಪ್ರಜಾವಾಣಿ’ಗೆ ಖಚಿತಪಡಿಸಿವೆ.

ಕರ್ನಾಟಕದಲ್ಲಿ ಬಿಜೆಪಿ ಮುಖಂಡರ ನಡುವಿನ ಆಂತರಿಕ ಕಚ್ಚಾಟದಿಂದ ಪಕ್ಷಕ್ಕೆ ಇರುಸುಮುರುಸು ಉಂಟಾಗಿದೆ. ವದಂತಿಗಳನ್ನು ಹರಿಯಬಿಟ್ಟಿದ್ದರಿಂದ ಅನಗತ್ಯ ಗೊಂದಲ ಸೃಷ್ಟಿಯಾಗಿರುವುದೂ ನಿಜ ಎಂಬ ಅಂಶವನ್ನು ವರದಿಯಲ್ಲಿ ಪ್ರಸ್ತಾಪಿಸಲಾಗಿದೆ ಎಂದು ಗೊತ್ತಾಗಿದೆ.

ಪಕ್ಷದ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಸಿ.ಟಿ. ರವಿ ಮತ್ತಿತರರು ಗೂಢಾರ್ಥದ ಅಭಿಪ್ರಾಯ ವ್ಯಕ್ತಪಡಿಸಿ ಅನಗತ್ಯ ಗೊಂದಲ ಉಂಟು ಮಾಡಿದ್ದಾರೆ ಎಂದು ಶಾಸಕರು ದೂರಿದ್ದಾರೆ. ಆಂತರಿಕವಾಗಿ ಪಕ್ಷದ ಚೌಕಟ್ಟಿನೊಳಗೆ ಚರ್ಚಿಸಬಹುದಾದ ವಿಷಯಗಳನ್ನು ಬಹಿರಂಗವಾಗಿ ವ್ಯಕ್ತಪಡಿಸಿರುವ ಕೆಲವು ಮುಖಂಡರ ವಿರುದ್ಧ ಶಿಸ್ತು ಕ್ರಮ ಕೈಗೊಳ್ಳುವ ಅಗತ್ಯವಿರುವುದಾಗಿ ವರದಿಯಲ್ಲಿ ಪ್ರಸ್ತಾಪಿಸಲಾಗಿದೆ ಎಂದೂ ಹೈಕಮಾಂಡ್ ಮೂಲಗಳು ಹೇಳಿವೆ.

5ನೇ ಪುಟ ನೋಡಿ

ಮುಖ್ಯಾಂಶಗಳು

- ಮೂವರ ಹೊರತು ಮಿಕ್ಕವರ ವಿರೋಧವಿಲ್ಲ
- ಅಸಮಾಧಾನ ತಣಿಸುವಂತೆ ಕೆಲವರ ಮನವಿ
- ಆಂತರಿಕ ಕಚ್ಚಾಟದಿಂದ ಪಕ್ಷಕ್ಕೆ ಮುಜುಗರ

ಸಭೆಗೆ ಆಹ್ವಾನ: ಕಾಶ್ಮೀರದ ಪಕ್ಷಗಳಿಂದ ಸಮಾಲೋಚನೆ

ಶ್ರೀನಗರ (ಪಿಟಿಐ): ಜಮ್ಮು ಮತ್ತು ಕಾಶ್ಮೀರದ ಮುಖ್ಯವಾಹಿನಿಯ ರಾಜಕೀಯ ಪಕ್ಷಗಳಿಗೆ ಕೇಂದ್ರದಿಂದ ಮಾತುಕತೆಗೆ ಬಂದಿರುವ ಆಹ್ವಾನಕ್ಕೆ ಸಂಬಂಧಿಸಿದಂತೆ ಸಮಾಲೋಚನೆಗಳು ಆರಂಭವಾಗಿವೆ.

ನ್ಯಾಷನಲ್ ಕಾನ್ಫರೆನ್ಸ್ (ಎನ್‌ಸಿ) ಪಕ್ಷದ ಅಧ್ಯಕ್ಷ ಫಾರೂಕ್ ಅಬ್ದುಲ್ಲಾ ಅವರು ಪಕ್ಷದ ಹಿರಿಯ ಮುಖಂಡರೊಂದಿಗೆ ಸಮಾಲೋಚನೆ ಪ್ರಕ್ರಿಯೆ ಪ್ರಾರಂಭಿಸಿದ್ದಾರೆ.

ಇದೇ 24ರಂದು ಸಭೆಗೆ ಬರುವಂತೆ ಪ್ರಧಾನಿ ನರೇಂದ್ರ ಮೋದಿ ಅವರು ಆಹ್ವಾನ ಕೊಟ್ಟಿದ್ದಾರೆ. ಸಭೆಯಲ್ಲಿ ಭಾಗವಹಿಸಬೇಕೇ, ಬೇಡವೇ ಎಂಬುದನ್ನು ಎನ್‌ಸಿ ಪ್ರಧಾನ ಕಾರ್ಯದರ್ಶಿ ಅಲಿ ಮೊಹಮ್ಮದ್ ಸಾಗರ್ ಮತ್ತು ಕಾಶ್ಮೀರದ ಪ್ರಾಂತೀಯ ಅಧ್ಯಕ್ಷ ನಾಸಿರ್ ಅಸ್ಲಂ ವಾನಿ ಸೇರಿದಂತೆ ಪಕ್ಷದ ಹಿರಿಯ ಮುಖಂಡರ ಜತೆಗೆ ಚರ್ಚೆ ನಡೆಸಿದ್ದಾರೆ.

‘ಈ ಸಭೆಯ ಬಳಿಕ ಪೀಪಲ್ಸ್ ಅಲಯನ್ಸ್ ಫಾರ್ ಗುಪ್ಕರ್ ಘೋಷಣೆಯ (ಪಿಎಜಿಡಿ) ಭಾಗವಾಗಿರುವ ಪಕ್ಷಗಳ ಸಭೆ ನಡೆಯಲಿದ್ದು, ಅಲ್ಲಿ ಈ ವಿಷಯದ ಬಗ್ಗೆ ಚರ್ಚಿಸಿ ಸಾಮೂಹಿಕ ನಿರ್ಧಾರ ತೆಗೆದುಕೊಳ್ಳುತ್ತವೆ’ ಎಂದು ಅಬ್ದುಲ್ಲಾ ಹೇಳಿದ್ದಾರೆ.

ಈ ವಿಷಯದ ಬಗ್ಗೆ ನಿರ್ಧಾರ ತೆಗೆದುಕೊಳ್ಳಲು ಎನ್‌ಸಿ ಇಲ್ಲಿಯವರೆಗೆ ಯಾವುದೇ ರಚನಾತ್ಮಕ ಅಥವಾ ಸಂಘಟಿತ ಸಭೆ ಕರೆದಿಲ್ಲ ಎಂದು ಪಕ್ಷದ ಮುಖಂಡ ವಾನಿ ಹೇಳಿದ್ದಾರೆ.

ಮೆಹಬೂಬಾಗೆ ಅಧಿಕಾರ: ಪಿಡಿಪಿ ಯಾವ ನಿಲುವು ತಳೆಯಬೇಕು ಎಂಬುದನ್ನು ನಿರ್ಧರಿಸಲು ಪಕ್ಷದ ರಾಜಕೀಯ ವ್ಯವಹಾರಗಳ ಸಮಿತಿಯು ಅಧ್ಯಕ್ಷೆ ಮೆಹಬೂಬಾ ಮುಫ್ತಿ ಅವರಿಗೆ ಅಧಿಕಾರ ನೀಡಿದೆ. ಮೆಹಬೂಬಾ ಅವರ ಅಧ್ಯಕ್ಷತೆಯಲ್ಲಿ ಭಾನುವಾರ ನಡೆದ ಸಭೆಯಲ್ಲಿ ಈ ನಿರ್ಧಾರ ತೆಗೆದುಕೊಳ್ಳಲಾಗಿದೆ.

ರಾಜ್ಯದ ಸ್ಥಾನಮಾನ ಮರುಸ್ಥಾಪನೆಗೆ ಒತ್ತಾಯ

ನವದೆಹಲಿ: ಜಮ್ಮು ಮತ್ತು ಕಾಶ್ಮೀರಕ್ಕೆ ರಾಜ್ಯದ ಸ್ಥಾನಮಾನ ಮರಳಿಸಬೇಕು ಎಂಬ ಬೇಡಿಕೆಯನ್ನು ಕೇಂದ್ರ ಸರ್ಕಾರವು ಸಂವಿಧಾನ ಮತ್ತು ಪ್ರಜಾಪ್ರಭುತ್ವದ ಹಿತದೃಷ್ಟಿಯಿಂದ ಒಪ್ಪಿಕೊಳ್ಳಬೇಕು ಎಂದು ಕಾಂಗ್ರೆಸ್ ಭಾನುವಾರ ಹೇಳಿದೆ.

ಪ್ರಧಾನಿ ಅವರು ಜೂನ್ 24ರಂದು ಕರೆದಿರುವ ಸಭೆಯಲ್ಲಿ ಕಾಂಗ್ರೆಸ್ ಭಾಗವಹಿಸಲಿದೆಯೇ ಎಂಬ ಬಗ್ಗೆ ಪಕ್ಷದ ವಕ್ತಾರ ರಣದೀಪ್ ಸುರ್ಜೇವಾಲಾ ಪ್ರತಿಕ್ರಿಯಿಸಿಲ್ಲ. ಜಮ್ಮು ಮತ್ತು ಕಾಶ್ಮೀರಕ್ಕೆ ಪೂರ್ಣ ಪ್ರಮಾಣದಲ್ಲಿ ರಾಜ್ಯದ ಸ್ಥಾನಮಾನ ನೀಡಬೇಕು ಎಂದು ಕಾಂಗ್ರೆಸ್ ಕಾರ್ಯಕಾರಿ ಸಮಿತಿ (ಸಿಡಬ್ಲ್ಯುಸಿ) 2019ರ ಆಗಸ್ಟ್ 6ರಂದು ತೆಗೆದುಕೊಂಡಿದ್ದ ನಿಲುವಿನ ಬಗ್ಗೆ ಅವರು ಗಮನ ಸೆಳೆದರು.

ಚಿನಕುರಳಿ
ಪ್ರಕಾಶ್ ಶೆಟ್ಟಿ



ಮಹಾರಾಷ್ಟ್ರ: ಮೈತ್ರಿಕೂಟದಲ್ಲಿ ಎಲ್ಲವೂ ಸರಿ ಇಲ್ಲ– ರಾಜಕೀಯ ವಲಯದ ವಿಶ್ಲೇಷಣೆ

ಎಂವಿಎ ಮುಖಂಡರ ವಾಕ್ಸಮರ ತಾರಕಕ್ಕೆ

ಪ್ರಜಾವಾಣಿ ವಾರ್ತೆ


ಮುಂಬೈ: ಮುಂಬರುವ ಚುನಾವಣೆಗಳಲ್ಲಿ ಪಕ್ಷವು ಏಕಾಂಗಿಯಾಗಿಯೇ ಸ್ಪರ್ಧಿಸಲಿದೆ ಎಂಬುದಾಗಿ ಕಾಂಗ್ರೆಸ್ ಮುಖಂಡರು ಹೇಳಿದ ನಂತರ ಆಡಳಿತಾರೂಢ ಮೈತ್ರಿಕೂಟ ‘ಮಹಾ ವಿಕಾಸ್ ಆಘಾಡಿ’ಯ (ಎಂವಿಎ) ಅಂಗ ಪಕ್ಷಗಳ ನಡುವೆ ಆರಂಭವಾಗಿರುವ ವಾಕ್ಸಮರ ಈಗ ತಾರಕಕ್ಕೇರಿದೆ.

ಶಿವಸೇನಾ, ಎನ್‌ಸಿಪಿ ಹಾಗೂ ಕಾಂಗ್ರೆಸ್ ಈ ಮೈತ್ರಿಕೂಟದ ಅಂಗಪಕ್ಷಗಳಾಗಿವೆ. ದಿನಗಳು ಉರುಳಿದಂತೆ, ಮೂರೂ ಪಕ್ಷಗಳ ಮುಖಂಡರ ನಡುವಿನ ವಾಕ್ಸಮರ ತಾರಕಕ್ಕೇರಿದ್ದು, ಮೈತ್ರಿಕೂಟದಲ್ಲಿ ಎಲ್ಲವೂ ಸರಿ ಇಲ್ಲ ಎಂಬ ವಿಶ್ಲೇಷಣೆ ಮಾಡಲಾಗುತ್ತಿದೆ.

ಮುಂದಿನ ವರ್ಷ ಬೃಹನ್ ಮುಂಬೈ ಮಹಾನಗರ ಪಾಲಿಕೆ ಸೇರಿದಂತೆ ಬಹುತೇಕ ನಗರ ಸ್ಥಳೀಯ ಸಂಸ್ಥೆಗಳಿಗೆ ಚುನಾವಣೆಗಳು ನಡೆಯಲಿವೆ.



ಉದ್ಧವ್ ಠಾಕ್ರೆ



ಶರದ್ ಪವಾರ್



ನಾನಾ ಪಟೋಲೆ

ಸ್ಥಳೀಯ ಸಂಸ್ಥೆಗಳ ಚುನಾವಣೆ ಸೇರಿದಂತೆ ಮುಂಬರುವ ಚುನಾವಣೆಗಳಲ್ಲಿ ಪಕ್ಷವು ಏಕಾಂಗಿಯಾಗಿಯೇ ಸ್ಪರ್ಧಿಸಲಿದೆ ಎಂದು ಕಾಂಗ್ರೆಸ್‌ನ ಮಹಾರಾಷ್ಟ್ರ ರಾಜ್ಯ ಘಟಕದ ಅಧ್ಯಕ್ಷ ನಾನಾ ಪಟೋಲೆ, ಮುಂಬೈ ಮಹಾನಗರ ಘಟಕದ ಅಧ್ಯಕ್ಷ ಭಾಯ್ ಜಗತಾಪ್ ಅವರು ಇತ್ತೀಚೆಗೆ ಹೇಳಿದ್ದರು.

ಈ ಹೇಳಿಕೆಗೆ ಪ್ರತಿಕ್ರಿಯಿಸಿದ್ದ ಮುಖ್ಯಮಂತ್ರಿ ಉದ್ಧವ್ ಠಾಕ್ರೆ ಹಾಗೂ ಎನ್‌ಸಿಪಿ ಮುಖ್ಯಸ್ಥ ಶರದ್ ಪವಾರ್ ಅವರು, ‘ಏಕಾಂಗಿಯಾಗಿಯೇ ಸ್ಪರ್ಧಿಸಲು ಕಾಂಗ್ರೆಸ್ ಬಯಸಿದರೆ ನಾವೇನೂ ಮಾಡಲು ಆಗದು. ಚುನಾವಣೆಯಲ್ಲಿ ಆ ಪಕ್ಷವನ್ನು ಎದುರಿಸುವುದೊಂದೇ ನಮ್ಮ ಮುಂದಿರುವ ಆಯ್ಕೆ’ ಎಂದು ಹೇಳಿದ್ದರು.

ರಾಹುಲ್ ಗಾಂಧಿಯವರ ಜನ್ಮದಿನದ ನಿಮಿತ್ತ ಕಾಂಗ್ರೆಸ್ ವತಿಯಿಂದ ಶನಿವಾರ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು. ಪಟೋಲೆ, ಜಗತಾಪ್ ಸೇರಿದಂತೆ ಈ ಕಾರ್ಯಕ್ರಮದಲ್ಲಿ ಮಾತನಾಡಿದ ಎಲ್ಲ ಮುಖಂಡರು, ಮುಂದಿನ ಚುನಾವಣೆಗಳಲ್ಲಿ ಪಕ್ಷವು ಏಕಾಂಗಿಯಾಗಿ ಸ್ಪರ್ಧಿಸಬೇಕು ಎಂದು ಪ್ರತಿಪಾದಿಸಿದರು.

ಮಾಜಿ ಮುಖ್ಯಮಂತ್ರಿಗಳಾದ ಸುಶೀಲಕುಮಾರ್ ಶಿಂಧೆ, ಪೃಥ್ವಿರಾಜ್ ಚವ್ಹಾಣ್, ಅಶೋಕ್ ಚವ್ಹಾಣ್ ಅವರೂ ಈ ವೇದಿಕೆಯಲ್ಲಿ ಇದ್ದರು. ಅಶೋಕ್ ಚವ್ಹಾಣ್ ಈಗಿನ ಎಂವಿಎ ಸರ್ಕಾರದಲ್ಲಿ ಸಚಿವರಾಗಿದ್ದಾರೆ.

ಮಹಾರಾಷ್ಟ್ರ ಉಸ್ತುವಾರಿಯಾಗಿರುವ ಎಐಸಿಸಿ ಕಾರ್ಯದರ್ಶಿ ಎಚ್.ಕೆ. ಪಾಟೀಲ ಮಾತನಾಡಿ, ‘ಯಾರೊಂದಿಗೆ ಚುನಾವಣಾ ಮೈತ್ರಿ ಮಾಡಿಕೊಳ್ಳಬೇಕು ಎಂಬ ವಿಚಾರವನ್ನು ಹೈಕಮಾಂಡ್‌ಗೆ ಬಿಡಿ. ಪಕ್ಷವನ್ನು ಬಲಪಡಿಸಲು ಎಲ್ಲರೂ ಶ್ರಮಿಸಿ’ ಎಂದು ಕಿವಿಮಾತು ಹೇಳಿದ್ದರು.

5ನೇ ಪುಟ ನೋಡಿ

ಶೇ 50 ಆಸನ ಸಾಮರ್ಥ್ಯದೊಂದಿಗೆ ಸಂಚಾರ • 13 ತಾಸು ಬಸ್ ಬಿಎಂಟಿಸಿ ಬಸ್ಸುಗಳ ಓಡಾಟ

ಸಾರ್ವಜನಿಕ ಸಾರಿಗೆ ಸೇವೆ ಪುನರಾರಂಭ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಲಾಕ್‌ಡೌನ್ ನಿರ್ಬಂಧ ಸಡಿಲಿಸುತ್ತಿದ್ದಂತೆಯೇ ನಗರದಲ್ಲಿ ಸೋಮವಾರದಿಂದ ಸಾರ್ವಜನಿಕ ಸಾರಿಗೆ ಸೇವೆ ಪುನರಾರಂಭವಾಗಲಿದೆ. ಮೆಟ್ರೊ ರೈಲುಗಳು ದಿನದ 7 ತಾಸು ಸಾರ್ವಜನಿಕ ಸೇವೆಗೆ ಲಭ್ಯವಿದ್ದರೆ, ದಿನದಲ್ಲಿ 13 ತಾಸು ಬಿಎಂಟಿಸಿ ಬಸ್‌ಗಳು ಸಂಚರಿಸಲಿವೆ.

ಮೆಟ್ರೊ ರೈಲುಗಳು ಮತ್ತು ರೈಲು ನಿಲ್ದಾಣಗಳನ್ನು ಬೆಂಗಳೂರು ಮೆಟ್ರೊ ರೈಲು ನಿಗಮವು (ಬಿಎಂಆರ್‌ಸಿಎಲ್) ಸಂಪೂರ್ಣ ಸ್ಯಾನಿಟೈಸ್ ಮಾಡಿದೆ. ನಿಲ್ದಾಣದ ಮುಂದೆ ಸ್ಯಾನಿಟೈಸರ್‌ಗಳ ವ್ಯವಸ್ಥೆ, ದೇಹದ ಉಷ್ಣಾಂಶ ಪರೀಕ್ಷಿಸುವ ಸಾಧನಗಳನ್ನು ಅಳವಡಿಸಲಾಗಿದೆ.

ಸೋಮವಾರದಿಂದ ಶುಕ್ರವಾರದವರೆಗೆ 'ನಮ್ಮ ಮೆಟ್ರೊ'ದ ಹಸಿರು ಮತ್ತು ನೇರಳೆ ಮಾರ್ಗ ಎರಡರಲ್ಲಿಯೂ ಬೆಳಿಗ್ಗೆ 7ರಿಂದ 11ರವರೆಗೆ ಮತ್ತು ಮಧ್ಯಾಹ್ನ 3ರಿಂದ ಸಂಜೆ 6ರವರೆಗೆ ಐದು ನಿಮಿಷಗಳ ಅಂತರದಲ್ಲಿ ಮೆಟ್ರೊ ರೈಲುಗಳು ಸಂಚರಿಸಲಿವೆ. ವಾರಾಂತ್ಯ ಕರ್ಫ್ಯೂ ಜಾರಿಯಲ್ಲಿ ಇರುವುದರಿಂದ ಶನಿವಾರ-ಭಾನುವಾರ ಮೆಟ್ರೊ ರೈಲು ಸೇವೆ ಇರುವುದಿಲ್ಲ.

ಪ್ರಯಾಣಿಕರ ದಟ್ಟಣೆ ಹೆಚ್ಚಿದ್ದರೆ, ರೈಲುಗಳ ನಡುವಣ ಕಾರ್ಯಾಚರಣೆ ಅವಧಿಯ ಅಂತರವನ್ನು ತಗ್ಗಿಸಲಾಗುವುದು ಎಂದು ಬೆಂಗಳೂರು ಮೆಟ್ರೊ ರೈಲು ನಿಗಮ (ಬಿಎಂಆರ್‌ಸಿಎಲ್) ಹೇಳಿದೆ.



ಶಾಂತಿನಗರದ ಬಿಎಂಟಿಸಿ ಡಿಪೋದಲ್ಲಿನ ಬಸ್‌ಗಳನ್ನು ಸಿಬ್ಬಂದಿಯೊಬ್ಬರು ಭಾನುವಾರ ಸ್ವಚ್ಛಗೊಳಿಸಿದರು

ಸಂಜೆ 6 ಗಂಟೆಗೆ ನಾಲ್ಕೂ ಟರ್ಮಿನಲ್‌ಗಳ ಕಡೆಗೆ ಏಕಕಾಲದಲ್ಲಿ ಕೊನೆಯ ಮೆಟ್ರೊ ರೈಲುಗಳು ಹೊರಡಲಿವೆ.

ಟೋಕನ್ ಇಲ್ಲ: ಜನ ಪರಸ್ಪರ ಸಂಪರ್ಕಕ್ಕೆ ಬರುವುದನ್ನು ಆದಷ್ಟು ಕಡಿಮೆ ಮಾಡುವ ಉದ್ದೇಶದಿಂದ ನಿಗಮವು ಟೋಕನ್ ವಿತರಿಸುತ್ತಿಲ್ಲ. ಸ್ಮಾರ್ಟ್ ಕಾರ್ಡ್ ಹೊಂದಿದವರಿಗೆ ಮಾತ್ರ ಪ್ರಯಾಣಕ್ಕೆ ಅವಕಾಶವಿದೆ.

ಮೊಬೈಲ್ ಅಪ್ಲಿಕೇಷನ್ ಹಾಗೂ ಬಿಎಂಆರ್‌ಸಿಎಲ್ ವೆಬ್‌ಸೈಟ್ ಮೂಲಕವೂ ಸ್ಮಾರ್ಟ್ ಕಾರ್ಡ್ ಖರೀದಿ ಮತ್ತು ರಿಚಾರ್ಜ್ ಮಾಡಿಕೊಳ್ಳಬಹುದು ಎಂದೂ ಬಿಎಂಆರ್‌ಸಿಎಲ್ ಹೇಳಿದೆ. ನಿಲ್ದಾಣಗಳ ಕೌಂಟರ್‌ಗಳಲ್ಲಿ ನಗದು ನೀಡಿಯೂ ಹೊಸ ಸ್ಮಾರ್ಟ್ ಕಾರ್ಡ್‌ಗಳನ್ನು ಖರೀದಿಸಬಹುದಾಗಿದೆ.

ಬಸ್‌ಗಳೂ ಸಿದ್ಧ: ಮೆಟ್ರೊ ರೈಲುಗಳು ಮಾತ್ರವಲ್ಲದೆ, ಬಿಎಂಟಿಸಿ ಬಸ್‌ಗಳು ಶೇ 50 ಆಸನ ಸಾಮರ್ಥ್ಯದೊಂದಿಗೆ ಸಂಚಾರ ಆರಂಭಿಸಲಿವೆ.

ಪ್ರಯಾಣಿಕರ ದಟ್ಟಣೆ ಇರುವಂತಹ ಮಾರ್ಗಗಳಲ್ಲಿ 2,000 ಬಸ್ ಸೇವೆಯನ್ನು ಸಂಸ್ಥೆ ಒದಗಿಸಲಿದೆ. ಕೆಂಪೇಗೌಡ ಅಂತರಾಷ್ಟ್ರೀಯ ವಿಮಾನ ನಿಲ್ದಾಣದಿಂದ, ಕೆಂಪೇಗೌಡ ಬಸ್ ನಿಲ್ದಾಣ ಮತ್ತು ಎಲೆಕ್ಟ್ರಾನಿಕ್ ಸಿಟಿಗೆ ಒಟ್ಟು 17 ವಾಯುವಜ್ರ ಬಸ್ಸುಗಳು 117 ಸರದಿಯಲ್ಲಿ ಸಂಚರಿಸಲಿವೆ. ಪ್ರಯಾಣಿಕರ ದಟ್ಟಣೆ ಹೆಚ್ಚಾದರೆ ಬಸ್‌ಗಳ ಸಂಖ್ಯೆಯನ್ನೂ ಹೆಚ್ಚಿಸಲಾಗುವುದು ಎಂದು ಬಿಎಂಟಿಸಿ ಹೇಳಿದೆ.

ಪಾಸ್ ಅವಧಿ ವಿಸ್ತರಣೆ: ಏಪ್ರಿಲ್‌ನ ಸಾಮಾನ್ಯ ಮಾಸಿಕ ಪಾಸುಗಳ ಅವಧಿಯನ್ನು ಜುಲೈ 8ರವರೆಗೆ ವಿಸ್ತರಿಸಲಾಗಿದೆ. ಎಲ್ಲ ಬಸ್‌ಗಳಲ್ಲಿ ಡಿಜಿಟಲ್ ಟಿಕೆಟಿಂಗ್ ವ್ಯವಸ್ಥೆ ಮಾಡಲಾಗಿದೆ. ಬಸ್‌ಗಳು ಬೆಳಿಗ್ಗೆ 6ರಿಂದ ರಾತ್ರಿ 7ರವರೆಗೆ ಸಂಚರಿಸಲಿವೆ.



ನಗರದಲ್ಲಿ ಸೋಮವಾರದಿಂದ ಹೋಟೆಲ್ ಸೇವೆಗೆ ಅವಕಾಶ ನೀಡಿರುವುದರಿಂದ ಕಾರ್ಮಿಕರೊಬ್ಬರು ಹೋಟೆಲ್ ಅನ್ನು ಸ್ಯಾನಿಟೈಸ್ ಮಾಡಿದರು ಪ್ರಜಾವಾಣಿ ಚಿತ್ರ

ಲಸಿಕೆ ಕಡ್ಡಾಯ: ಕರ್ತವ್ಯಕ್ಕೆ ಹಾಜರಾಗುವ ಎಲ್ಲ ಚಾಲಕ-ನಿರ್ವಾಹಕರು ಲಸಿಕೆ ಪಡೆಯುವುದನ್ನು ಕಡ್ಡಾಯಗೊಳಿಸಲಾಗಿದೆ. ಅಲ್ಲದೆ, ಮಾಸ್ಕ್, ಸ್ಯಾನಿಟೈಸರ್ ವಿತರಿಸಲಾಗಿದೆ. ಸಿಬ್ಬಂದಿ ಮತ್ತು ಪ್ರಯಾಣಿಕರು ಮಾಸ್ಕ್ ಧರಿಸುವುದನ್ನು ಕಡ್ಡಾಯ ಮಾಡಲಾಗಿದೆ. ಆಸನಗಳು ಖಾಲಿ ಇದ್ದಾಗ ಮಾತ್ರ ಪ್ರಯಾಣಿಸಲು ಜನರಿಗೆ ಅವಕಾಶ ನೀಡುವಂತೆ ಸಿಬ್ಬಂದಿಗೆ ಸೂಚನೆ ನೀಡಲಾಗಿದೆ.

ದರ್ಶಿನಿಗಳಲ್ಲಿ ಸೇವೆ ಇಂದಿನಿಂದ

ನಗರದಲ್ಲಿನ ಸುಮಾರು 24 ಸಾವಿರ ಹೋಟೆಲ್‌ಗಳ ಪೈಕಿ ಬಹುತೇಕ ಹೋಟೆಲ್‌ಗಳಲ್ಲಿ ಸೋಮವಾರದಿಂದ ಸೇವೆ ಪುನರಾರಂಭವಾಗಲಿದೆ. ಬೆಳಿಗ್ಗೆ 6ರಿಂದ ಸಂಜೆ 5ರವರೆಗೆ ಹೋಟೆಲ್‌ಗಳಲ್ಲಿಯೇ ಆಹಾರ ಸೇವಿಸಲು ಅವಕಾಶವಿದೆ. 5ರ ನಂತರ ಪಾರ್ಸೆಲ್ ತೆಗೆದುಕೊಂಡು ಹೋಗಬಹುದಾಗಿದೆ.

'ನಗರದ ಎಲ್ಲ ದರ್ಶಿನಿಗಳು ಸೋಮವಾರದಿಂದ ಸೇವೆ ನೀಡಲು ಸಜ್ಜಾಗಿವೆ. ಐಷಾರಾಮಿ ರೆಸ್ಟೋರೆಂಟ್‌ಗಳು (ಫೈನ್‌ಡೈಯಿಂಗ್) ಹಂತ-ಹಂತವಾಗಿ ಕಾರ್ಯಾರಂಭ ಮಾಡಲಿವೆ. ಸದ್ಯ ನಗರದಲ್ಲಿರುವ ಎಲ್ಲ ಹೋಟೆಲ್ ಕಾರ್ಮಿಕರಿಗೆ ಲಸಿಕೆ ಹಾಕಿಸಲಾಗಿದೆ. ಹೋಟೆಲ್‌ಗಳನ್ನು ಸಂಪೂರ್ಣ ಸ್ಯಾನಿಟೈಸ್ ಮಾಡಲಾಗಿದೆ' ಎಂದು ಬೃಹತ್ ಬೆಂಗಳೂರು ಹೋಟೆಲ್‌ಗಳ ಸಂಘದ ಅಧ್ಯಕ್ಷ ಪಿ.ಸಿ.ರಾವ್ 'ಪ್ರಜಾವಾಣಿ'ಗೆ ತಿಳಿಸಿದರು.

'ಹೋಟೆಲ್‌ಗಳಲ್ಲಿ ಈಗ ಶೇ 40ರಷ್ಟು ಕಾರ್ಮಿಕರು ಇದ್ದಾರೆ. ಉಳಿದ ಶೇ 60ರಷ್ಟು ಕಾರ್ಮಿಕರು ಮಂಗಳವಾರ-ಬುಧವಾರದ ವೇಳೆಗೆ ಬರಬಹುದು. ಅವರಿಗೂ ಎಫ್‌ಕೆಸಿಸಿಐನಲ್ಲಿ ಲಸಿಕೆ ವಿತರಿಸುವ ಅಭಿಯಾನ ಹಮ್ಮಿಕೊಳ್ಳಲಾಗಿದೆ' ಎಂದು ಹೇಳಿದರು.

'ಕೊಠಡಿ ಇರುವ ಹೋಟೆಲ್‌ಗಳು ಸದ್ಯಕ್ಕೆ ಆರಂಭವಾಗುವುದಿಲ್ಲ. ಉಳಿದಂತೆ ಎಲ್ಲ ಹೋಟೆಲ್‌ಗಳಲ್ಲಿಯೂ ಸೇವೆ ಇರಲಿದೆ. ಹೋಟೆಲ್ ಕಾರ್ಮಿಕರು, ಸಿಬ್ಬಂದಿ ಮತ್ತು ಗ್ರಾಹಕರ ಸುರಕ್ಷತೆಗೆ ಅಗತ್ಯವಿರುವ ಎಲ್ಲ ಕ್ರಮಗಳನ್ನೂ ಕೈಗೊಳ್ಳಲಾಗಿದೆ. ಕೋವಿಡ್ ಮಾರ್ಗಸೂಚಿಯನ್ವಯವೇ ಹೋಟೆಲ್‌ಗಳು ಕಾರ್ಯನಿರ್ವಹಿಸಲಿವೆ' ಎಂದೂ ತಿಳಿಸಿದರು.

ಸುದ್ದಿ 2 ನಿಮಿಷ

ಕೃಷಿ ಬಿಎಸ್ಸಿ: ರೈತ ಮಕ್ಕಳಿಗೆ ಶೇ 50 ಸೀಟು ಮೀಸಲು?

ಬೆಂಗಳೂರು: ಕೃಷಿ ಬಿಎಸ್ಸಿ ಮತ್ತು ತತ್ಸಮಾನ ಪದವಿ ಕೋರ್ಸ್‌ಗಳ ಪ್ರವೇಶಕ್ಕೆ ರೈತರು ಮತ್ತು ಕೃಷಿ ಕಾರ್ಮಿಕರ ಮಕ್ಕಳಿಗೆ ಮೀಸಲಾತಿ ಪ್ರಮಾಣವನ್ನು ಶೇ 40 ರಿಂದ ಶೇ 50 ಕ್ಕೆ ಹೆಚ್ಚಿಸಲು ಸೋಮವಾರ ನಡೆಯುವ ಸಚಿವ ಸಂಪುಟ ಸಭೆಯಲ್ಲಿ ತೀರ್ಮಾನಿಸುವ ಸಾಧ್ಯತೆ ಇದೆ.

ಕೃಷಿಕರ ಮಕ್ಕಳಿಗೆ ಹೆಚ್ಚಿನ ಪ್ರಮಾಣದಲ್ಲಿ ಮೀಸಲಾತಿ ನೀಡಬೇಕು ಎಂಬ ಬೇಡಿಕೆ ಇತ್ತು. ಸಂಪುಟ ಸಭೆಯಲ್ಲಿ ಮೀಸಲಾತಿ ಪ್ರಮಾಣ ಹೆಚ್ಚಿಸುವ ಪ್ರಸ್ತಾವನೆ ಮಂಡನೆಯಾಗಲಿದೆ.

ಅಲ್ಲದೆ, ಹಾಸನದಲ್ಲಿ ₹196 ಕೋಟಿ ವೆಚ್ಚದಲ್ಲಿ ವಿಮಾನ ನಿಲ್ದಾಣ ಸ್ಥಾಪನೆಗೆ ಅನುಮತಿ ನೀಡಬೇಕು ಎಂಬ ಮಾಜಿ ಪ್ರಧಾನಿ ಎಚ್‌.ಡಿ.ದೇವೇಗೌಡ ಮತ್ತು ಶಾಸಕ ಎಚ್‌.ಡಿ.ರೇವಣ್ಣ ಅವರು ಮುಖ್ಯಮಂತ್ರಿ ಯಡಿಯೂರಪ್ಪ ಅವರ ಮೇಲೆ ಒತ್ತಡ ಹೇರಿದ್ದರು. ಈ ವಿಷಯವೂ ಸಂಪುಟ ಸಭೆಗೆ ಬರಲಿದೆ ಎಂದು ಮೂಲಗಳು ತಿಳಿಸಿವೆ.

ಡಯಾಲಿಸಿಸ್ ಕೇಂದ್ರದ ಕಟ್ಟಡ ಕಾಮಗಾರಿಗೆ ಚಾಲನೆ



ಕೆ.ಆರ್.ಪುರ: ಇಲ್ಲಿನ ಸಾರ್ವಜನಿಕ ಸರ್ಕಾರಿ ಆಸ್ಪತ್ರೆ ಆವರಣದಲ್ಲಿ ಅತ್ಯಾಧುನಿಕ ನೂತನ ಶ್ರೀ ವಿಜಯ ಗಣಪತಿ ಡಯಾಲಿಸಿಸ್ ಕೇಂದ್ರದ ಕಟ್ಟಡ ಕಾಮಗಾರಿಗೆ ನಗರಾಭಿವೃದ್ಧಿ ಸಚಿವ ಬೈರತಿ ಬಸವರಾಜ ಭೂಮಿ ಪೂಜೆ ನೆರವೇರಿಸಿದರು.

ದಿವಂಗತ ವಕೀಲ ಹಾಗೂ ಜಮೀನ್ದಾರರಾದ ರಾಮಚಂದ್ರ ಅವರ ನೆನಪಿಗಾಗಿ ಸುಮಾರು ₹1.20 ಕೋಟಿ ವೆಚ್ಚದಲ್ಲಿ ಈ ಕಟ್ಟಡವನ್ನು ಕಟ್ಟಲಾಗುತ್ತಿದೆ.

'ರಾಮಚಂದ್ರ ಅವರ ಪತ್ನಿ ಸುಶೀಲಾ ದೇವಿ ಅವರು ₹1.20 ಕೋಟಿ ವೆಚ್ಚದಲ್ಲಿ ಅತ್ಯಾಧುನಿಕ ಸೌಕರ್ಯಗಳ ಒಳಗೊಂಡ ಡಯಾಲಿಸ್ ಕಟ್ಟಡ ನಿರ್ಮಾಣ ಮಾಡಲು ಮುಂದೆ ಬಂದಿರುವುದು ಶ್ಲಾಘನೀಯ' ಎಂದರು.

'ರಾಮಚಂದ್ರಪ್ಪ ಅವರ ಕುಟುಂಬಕ್ಕೆ ಸರ್ಕಾರದ ಪರವಾಗಿ ಧನ್ಯವಾದ. ಮುಂದಿನ ದಿನಗಳಲ್ಲಿ ಈ ಆಸ್ಪತ್ರೆಯನ್ನು ಸುಮಾರು ₹30 ಕೋಟಿ ವೆಚ್ಚದಲ್ಲಿ ಅಭಿವೃದ್ಧಿಪಡಿಸಲಾಗುವುದು. ಈ ಕುರಿತು ಮುಖ್ಯಮಂತ್ರಿ ಅವರೊಂದಿಗೆ ಚರ್ಚಿಸಲಾಗಿದ್ದು, ಅವರು ಅನುದಾನ ನೀಡುವ ಭರವಸೆ ನೀಡಿದ್ದಾರೆ' ಎಂದರು.

ಸುಶೀಲಾದೇವಿ, ಡಿಎಚ್ ಓ ಶ್ರೀನಿವಾಸ್, ಟಿಎಚ್ ಓ ಚಂದ್ರಶೇಖರ್, ಪಿ.ಜೆ.ಅಂತೋಣಿಸ್ವಾಮಿ, ಮುಖಂಡರಾದ ಮುನೇಗೌಡ, ಶಿವಪ್ರಸಾದ್, ರವಿಕುಮಾರ್ ಇದ್ದರು.

ಖೋಟಾ ನೋಟು; ಮತ್ತೊಬ್ಬನ ಬಂಧನ

ಬೆಂಗಳೂರು: ಬಾಂಗ್ಲಾದೇಶದಿಂದ ಖೋಟಾ ನೋಟುಗಳನ್ನು ರಾಜ್ಯಕ್ಕೆ ತಂದು ಚಲಾವಣೆ ಮಾಡುತ್ತಿದ್ದ ಪ್ರಕರಣದಲ್ಲಿ ಮತ್ತೊಬ್ಬ ಆರೋಪಿಯನ್ನು ರಾಷ್ಟ್ರೀಯ ತನಿಖಾ ದಳದ (ಎನ್‌ಐಎ) ಅಧಿಕಾರಿಗಳು ಬಂಧಿಸಿದ್ದಾರೆ.


'ಪಶ್ಚಿಮ ಬಂಗಾಳದ ಸರೀಫುಲ್ಲಾ ಇಸ್ಲಾಂ ಬಂಧಿತ. 2018ರಲ್ಲಿ ದಾಖಲಾಗಿದ್ದ ಪ್ರಕರಣದ ಆರೋಪಿಯಾಗಿದ್ದ ಈತ ತಲೆಮರೆಸಿಕೊಂಡಿದ್ದ. ಸದ್ಯ ಈತನನ್ನು ಬಂಧಿಸಲಾಗಿದ್ದು, ನ್ಯಾಯಾಲಯಕ್ಕೆ ಹಾಜರುಪಡಿಸಲಾಗುವುದು' ಎಂದು ಎನ್‌ಐಎ ಮೂಲಗಳು ಹೇಳಿವೆ.

'ಬೆಳಗಾವಿ ಜಿಲ್ಲೆಯ ಚಿಕ್ಕೋಡಿಯಲ್ಲಿ ಖೋಟಾ ನೋಟುಗಳು ಪತ್ತೆಯಾಗಿದ್ದವು. ಇಬ್ಬರು ಆರೋಪಿಗಳನ್ನು ಸ್ಥಳೀಯ ಪೊಲೀಸರು ಬಂಧಿಸಿದ್ದರು. ನಂತರ, ಪ್ರಕರಣದ ತನಿಖೆ ಜವಾಬ್ದಾರಿಯನ್ನು ಎನ್‌ಐಎಗೆ ವಹಿಸಲಾಗಿತ್ತು. ಆರು ಮಂದಿಯನ್ನು ಬಂಧಿಸಿದ್ದ ಎನ್‌ಐಎ, ಅವರ ವಿರುದ್ಧ ವಿಶೇಷ ನ್ಯಾಯಾಲಯಕ್ಕೆ ದೋಷಾರೋಪ ಪಟ್ಟಿ ಸಲ್ಲಿಸಿತ್ತು. ಆರೋಪಿಗಳಿಗೆ 6 ವರ್ಷಗಳ ಜೈಲು ಶಿಕ್ಷೆಯಾಗಿತ್ತು' ಎಂದೂ ಮೂಲಗಳು ತಿಳಿಸಿವೆ.

'ಬಂಧಿತರು ಸರೀಫುಲ್ಲಾ ಹೆಸರು ಬಾಯ್ಬಿಟ್ಟಿದ್ದರು. ಇದೀಗ ಆತನನ್ನೂ ಸೆರೆ ಹಿಡಿಯಲಾಗಿದ್ದು, ಕೃತ್ಯದಲ್ಲಿ ಮತ್ತಷ್ಟು ಮಂದಿ ಭಾಗಿಯಾಗಿರುವ ಮಾಹಿತಿ ಇದೆ. ತನಿಖೆ ಮುಂದುವರಿದಿದೆ' ಎಂದೂ ಮೂಲಗಳು ಹೇಳಿವೆ.

ಕನ್ನಡ ಕಡೆಗಣನೆ: ಅಪಚಾರ ಸರಿಪಡಿಸಲು ಒತ್ತಾಯ

ಪ್ರಜಾವಾಣಿ ವಾರ್ತೆ



ಮನು ಬಳಿಗಾರ್

ಬೆಂಗಳೂರು: ಲೋಕಸಭಾ ಸಚಿವಾಲಯವು ಭಾಷಾ ಕಲಿಕೆ ಶಿಬಿರದಲ್ಲಿ ಕನ್ನಡ ಕಡೆಗಣಿಸಿರುವುದನ್ನು ಖಂಡಿಸಿರುವ ಕನ್ನಡ ಸಾಹಿತ್ಯ ಪರಿಷತ್ತು (ಕಸಾಪ), ಈ ಅಪಚಾರವನ್ನು ಸರಿಪಡಿಸುವಂತೆ ಒತ್ತಾಯಿಸಿದೆ.

ಈ ಬಗ್ಗೆ ಪರಿಷತ್ತಿನ ಅಧ್ಯಕ್ಷ ಮನು ಬಳಿಗಾರ್ ಅವರು ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವ ಅರವಿಂದ ಲಿಂಬಾವಳಿ ಅವರಿಗೆ ಪತ್ರ ಬರೆದಿದ್ದಾರೆ.

'ಲೋಕಸಭಾ ಸಚಿವಾಲಯದ ಪಾರ್ಲಿಮೆಂಟರಿ ರಿಸರ್ಚ್ ಆ್ಯಂಡ್ ಟ್ರೈನಿಂಗ್ ಇನ್‌ಸ್ಟಿಟ್ಯೂಟ್ ಫಾರ್ ಡೆಮಾಕ್ರಸಿ (ಪ್ರೈಡ್) ಸಂಸ್ಥೆಯು ಸಂಸದರು, ಶಾಸಕರು ಮತ್ತು ಅಧಿಕಾರಿಗಳಿಗೆ ಇದೇ ತಿಂಗಳು 22 ರಂದು ಹಮ್ಮಿಕೊಂಡಿರುವ ದೇಶೀಯ ಹಾಗೂ ವಿದೇಶಿ ಭಾಷಾ ಕಲಿಕೆ ಶಿಬಿರದಲ್ಲಿ ಕನ್ನಡವನ್ನು ಕಡೆಗಣಿಸಿದೆ. ದಕ್ಷಿಣದ ಭಾಷೆ ಎಂದರೆ ಕೇವಲ ತಮಿಳು ಅಥವಾ ತೆಲುಗು ಎನ್ನುವಂತೆ ಬಿಂಬಿತವಾಗಿರುವುದು ದುರದೃಷ್ಟಕರ. ಇದು ಕನ್ನಡ ಭಾಷೆಗೆ, ಪರಂಪರೆಗೆ ಹಾಗೂ ಕನ್ನಡಿಗರಿಗೆ ಮಾಡಿರುವ ಅಪಮಾನ' ಎಂದು ಬೇಸರ ವ್ಯಕ್ತಪಡಿಸಿದ್ದಾರೆ.

'ಕನ್ನಡವು ಎರಡೂವರೆ ಸಾವಿರ ವರ್ಷ ಇತಿಹಾಸವುಳ್ಳ ಭವ್ಯ ಪರಂಪರೆಯನ್ನು ಹೊಂದಿದೆ. ಈ ಭಾಷೆಯ ಎಂಟು ಸಾಹಿತಿಗಳಿಗೆ ಜ್ಞಾನಪೀಠ ಪ್ರಶಸ್ತಿ ಬಂದಿದೆ. ಇದು ಹಿಂದಿ ಭಾಷೆಗೆ ಸಮಾನ ಎನ್ನುವಂತೆ ಇದೆ. ಆದರೂ ಕನ್ನಡವನ್ನು ಹೀಗೆ ಕಡೆಗಣನೆ ಮಾಡುವುದನ್ನು ಎಂದಿಗೂ ಸಹಿಸಲು ಸಾಧ್ಯವಿಲ್ಲ. ಪ್ರೈಡ್ ಸಂಸ್ಥೆ ಮಾಡಿರುವ ಈ ಅಪಚಾರ ಸರಿಪಡಿಸುವಂತೆ ರಾಜ್ಯ ಸರ್ಕಾರವು ಸಂಬಂಧಪಟ್ಟವರಿಗೆ ಆಗ್ರಹಿಸಬೇಕು' ಎಂದು ಅವರು ತಿಳಿಸಿದ್ದಾರೆ.

'ಪ್ರಾದೇಶಿಕ ಭಾಷೆ ಕಲಿಕೆ ಕಡ್ಡಾಯಗೊಳಿಸಿ'



ಹನುಮಂತಯ್ಯ

'ನೂತನ ಶಿಕ್ಷಣ ನೀತಿಯಲ್ಲಿ ಪ್ರಾದೇಶಿಕ ಭಾಷಾ ಕಲಿಕೆಯನ್ನು ಕಡ್ಡಾಯಗೊಳಿಸಬೇಕು' ಎಂದು ರಾಜ್ಯಸಭಾ ಸದಸ್ಯ ಎಲ್. ಹನುಮಂತಯ್ಯ ಒತ್ತಾಯಿಸಿದ್ದಾರೆ.

ಈ ಸಂಬಂಧ ಅವರು ಕೇಂದ್ರ ಶಿಕ್ಷಣ ಸಚಿವ ರಮೇಶ್ ಪೋಖ್ರಿಯಾಲ್ ಅವರಿಗೆ ಭಾನುವಾರ ಪತ್ರ ಬರೆದಿದ್ದಾರೆ.

'ಹೊಸ ಶಿಕ್ಷಣ ನೀತಿಯ ಅನ್ವಯ ಪದವಿ ವ್ಯಾಸಂಗವನ್ನು ನಾಲ್ಕು ವರ್ಷಗಳಿಗೆ ವಿಸ್ತರಿಸಲಾಗಿದೆ. ಆದರೆ, ಮಾತೃಭಾಷೆ ಕಲಿಕೆಯನ್ನು ಕಡ್ಡಾಯಗೊಳಿಸಿಲ್ಲ. ಈ ಕುರಿತು ನಿರ್ಧಾರ ಕೈಗೊಳ್ಳುವುದನ್ನು ಆಯಾ ರಾಜ್ಯಗಳ ವಿವೇಚನೆಗೆ ಬಿಡಲಾಗಿದೆ. ಆದರೆ, ರಾಜ್ಯಗಳು ಇದನ್ನು ಗಂಭೀರವಾಗಿ ಪರಿಗಣಿಸಿದಂತೆ ಕಾಣುತ್ತಿಲ್ಲ. ಹಲವು ರಾಜ್ಯಗಳಲ್ಲಿ ಮಾತೃಭಾಷೆ ಕಲಿಕೆಯನ್ನು ಒಂದು ವರ್ಷಕ್ಕೆ (ಎರಡು ಸೆಮಿಸ್ಟರ್) ಸೀಮಿತಗೊಳಿಸಲಾಗಿದೆ. ಇನ್ನೂ ಕೆಲ ರಾಜ್ಯಗಳಲ್ಲಿ ಎರಡು ಸೆಮಿಸ್ಟರ್‌ಗಳಿಗೂ ಸೀಮಿತ ಮಾಡಿಲ್ಲ. ಹೀಗಾದರೆ ವಿದ್ಯಾರ್ಥಿಗಳು ಮಾತೃಭಾಷೆ ಕಲಿಕೆಯಿಂದ ವಂಚಿತರಾಗಲಿದ್ದಾರೆ' ಎಂದು ತಿಳಿಸಿದ್ದಾರೆ.

'ಕೆಲ ಪ್ರಾದೇಶಿಕ ಭಾಷೆಗಳಿಗೆ ಸಾವಿರಾರು ವರ್ಷಗಳ ಇತಿಹಾಸವಿದೆ. ಸಾಹಿತ್ಯಿಕವಾಗಿ ಶ್ರೀಮಂತವಾಗಿವೆ. ಅವುಗಳನ್ನು ಜಗತ್ತಿನ ವಿವಿಧ ವಿಶ್ವವಿದ್ಯಾಲಯಗಳಲ್ಲಿ ಬೋಧಿಸಲಾಗುತ್ತಿದೆ. ಹೀಗಾಗಿ ಕನಿಷ್ಠ ಆರು ಸೆಮಿಸ್ಟರ್‌ಗಳಿಗೆ ಮಾತೃಭಾಷೆ ಕಲಿಕೆಗೆ ಅವಕಾಶ ನೀಡಬೇಕು. ನೂತನ ಶಿಕ್ಷಣ ನೀತಿಯ ಬಗ್ಗೆ ಈವರೆಗೂ ಸಂಸತ್ತಿನಲ್ಲಿ ಚರ್ಚೆಯೇ ಆಗಿಲ್ಲ. ಇದರ ಮೇಲಿನ ಚರ್ಚೆಗೆ ಅವಕಾಶ ನೀಡಬೇಕು. ಪ್ರಾದೇಶಿಕ ಭಾಷೆಗಳ ಕಲಿಕೆ ಸಂಬಂಧ ಸೂಕ್ತ ನಿರ್ಧಾರ ಕೈಗೊಳ್ಳಬೇಕು. ಇದನ್ನು ರಾಷ್ಟ್ರೀಯ ಶಿಕ್ಷಣ ನೀತಿಯ ಅಡಿಯಲ್ಲಿ ಸೇರಿಸಬೇಕು. ಆಗ ಪದವಿಯಲ್ಲಿ ಪ್ರಾದೇಶಿಕ ಭಾಷೆ ಕಲಿಕೆ ಕಡ್ಡಾಯಗೊಳಿಸಲು ನೆರವಾಗಲಿದೆ' ಎಂದಿದ್ದಾರೆ.

ಲೋಕಸಭಾ ಸಚಿವಾಲಯದಿಂದ ಕನ್ನಡ ನಿರ್ಲಕ್ಷ್ಯ: ಎಚ್‌ಡಿಕೆ



ಕುಮಾರಸ್ವಾಮಿ

ಲೋಕಸಭಾ ಸಚಿವಾಲಯವು ಭಾಷಾ ಕಲಿಕಾ ತರಬೇತಿ ಕಾರ್ಯಕ್ರಮದಿಂದ ಕನ್ನಡವನ್ನು ಹೊರಗಿಟ್ಟಿದೆ. ಆ ಮೂಲಕ ಕನ್ನಡವನ್ನು ಕಡೆಗಣಿಸುತ್ತಿದೆ ಎಂದು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್‌.ಡಿ. ಕುಮಾರಸ್ವಾಮಿ ಆರೋಪಿಸಿದ್ದಾರೆ.

ಈ ಕುರಿತು ಭಾನುವಾರ ಸರಣಿ ಟ್ವೀಟ್ ಮಾಡಿರುವ ಅವರು, 'ಲೋಕಸಭಾ ಸಚಿವಾಲಯದ 'ಪಾರ್ಲಿಮೆಂಟರಿ ರೀಸರ್ಚ್ ಅಂಡ್ ಟ್ರೈನಿಂಗ್ ಇನ್‌ಸ್ಟಿಟ್ಯೂಟ್ ಫಾರ್ ಡೆಮಾಕ್ರಸಿ' (ಪ್ರೈಡ್) ಸಂಸ್ಥೆಯು ಭಾಷಾ ಕಲಿಕೆ ತರಬೇತಿ ಕಾರ್ಯಕ್ರಮದಲ್ಲಿ ಗುಜರಾತಿ, ಬಂಗಾಳಿ, ಮರಾಠಿ, ಒಡಿಯಾ, ತಮಿಳು, ತೆಲುಗು ಭಾಷೆಗಳಿಗೆ ಆದ್ಯತೆ ನೀಡಿದೆ. ಹಲವು ವಿದೇಶಿ ಭಾಷೆಗಳನ್ನೂ ಕಲಿಸಲು ನಿರ್ಧರಿಸಿದೆ. ಆದರೆ, ಕನ್ನಡಕ್ಕೆ ಅವಕಾಶ ನೀಡಿಲ್ಲ' ಎಂದು ದೂರಿದ್ದಾರೆ.

'ಇದೇ ಮಂಗಳವಾರದಿಂದ ವಿವಿಧ ರಾಜ್ಯಗಳ ಸಂಸದರು, ಶಾಸಕರು ಮತ್ತು ಅಧಿಕಾರಿಗಳಿಗೆ ತರಬೇತಿ ಆರಂಭವಾಗಲಿದೆ. ಆದರೆ, ರಾಜ್ಯದಿಂದ ಆಯ್ಕೆಯಾಗಿರುವ ಬಿಜೆಪಿಯ 25 ಸಂಸದರು ಈವರೆಗೂ ಧ್ವನಿ ಎತ್ತಿಲ್ಲ. ಬಿಜೆಪಿ ಮೂಲಭೂತವಾಗಿ ಕನ್ನಡ ವಿರೋಧಿ ನಿಲುವು ಹೊಂದಿದೆ. ಆ ಪಕ್ಷದ 25 ಸಂಸದರನ್ನು ಆರಿಸಿ, ಕಳುಹಿಸಿದ ಜನರು ಅದರ ಫಲವನ್ನು ಅನುಭವಿಸಬೇಕಾಗಿದೆ. ಕನ್ನಡವನ್ನು ಕಡೆಗಣಿಸುತ್ತಿರುವುದರ ವಿರುದ್ಧ ಎಲ್ಲರೂ ಧ್ವನಿ ಎತ್ತಲೇಬೇಕಿದೆ ಎಂದು ಹೇಳಿದ್ದಾರೆ.

ಅತ್ಯಾಚಾರ ಆರೋಪ

ತಮಿಳುನಾಡು ಮಾಜಿ ಸಚಿವ ಬೆಂಗಳೂರಲ್ಲಿ ಸೆರೆ

ಚೆನ್ನೈ (ಪಿಟಿಐ): ನಟಿಯೊಬ್ಬರ ಮೇಲೆ ಲೈಂಗಿಕ ದೌರ್ಜನ್ಯ ನಡೆಸಿದ ಆರೋಪಕ್ಕಾಗಿ ತಮಿಳುನಾಡಿನ ಮಾಜಿ ಸಚಿವ ಎಂ.ಮಣಿಕಂಠನ್ ಅವರನ್ನು ಭಾನುವಾರ ಚೆನ್ನೈ ಪೊಲೀಸರು ಬೆಂಗಳೂರಿನಲ್ಲಿ ಬಂಧಿಸಿದ್ದಾರೆ.

ಹಿಂದಿನ ಎಐಎಡಿಎಂಕೆ ಸರ್ಕಾರದಲ್ಲಿ ಮಣಿಕಂಠನ್ ಅವರು ಮಾಹಿತಿ ತಂತ್ರಜ್ಞಾನ ಸಚಿವರಾಗಿದ್ದರು. ವಿಚಾರಣೆ ಬಳಿಕ ಚೆನ್ನೈಗೆ ಮಣಿಕಂಠನ್ ಅವರನ್ನು ಕರೆತಂದು ನ್ಯಾಯಾಲಯದಲ್ಲಿ ಹಾಜರುಪಡಿಸಲಾಯಿತು. ನ್ಯಾಯಾಲಯವು ಜುಲೈ 2ರವರೆಗೆ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿತು. ಇಲ್ಲಿನ ಕಾರಾಗೃಹದಲ್ಲಿ ಮಣಿಕಂಠನ್ ಅವರನ್ನು ಇರಿಸಲಾಗಿದೆ.

'ಪತ್ನಿಗೆ ವಿಚ್ಛೇದನ ನೀಡಿದ ಬಳಿಕ ನನ್ನನ್ನು ಮದುವೆಯಾಗುವುದಾಗಿ ಮಣಿಕಂಠನ್ ಭರವಸೆ ನೀಡಿದ್ದರು. ಅವರನ್ನು ನಂಬಿದ್ದೆ. ಹೀಗಾಗಿ, ಐದು ವರ್ಷಗಳ ಕಾಲ ಅವರ ಜತೆ ಸಹ ಜೀವನ ನಡೆಸುತ್ತಿದ್ದೆ. ಮೂರು ಬಾರಿ ಒತ್ತಾಯಪೂರ್ವಕವಾಗಿ ಗರ್ಭಪಾತ ಮಾಡಿಸಿದ್ದರು. ನನ್ನ ಮೇಲೆ ಹಲ್ಲೆ ಮಾಡಿದ್ದರು. ಸಾಮಾಜಿಕ ಮಾಧ್ಯಮಗಳಲ್ಲಿ ನಗ್ನ ಚಿತ್ರಗಳನ್ನು ಹಾಕುವುದಾಗಿ ಬೆದರಿಕೆ ಹಾಕಿದ್ದರು' ಎಂದು ನಟಿ ಪೊಲೀಸರಿಗೆ ಮೇ 28ರಂದು ದೂರು ನೀಡಿದ್ದರು.

ಈ ದೂರಿನ ಆಧಾರದ ಮೇಲೆ ಮಣಿಕಂಠನ್ ಅವರ ವಿರುದ್ಧ ಪೊಲೀಸರು ಪ್ರಕರಣ ದಾಖಲಿಸಿಕೊಂಡಿದ್ದರು.

ಮದ್ರಾಸ್ ಹೈಕೋರ್ಟ್ ಮಣಿಕಂಠನ್ ಅವರಿಗೆ ನಿರೀಕ್ಷಣಾ ಜಾಮೀನು ನೀಡಲು ನಿರಾಕರಿಸಿತ್ತು. 'ತನಿಖೆಯು ಪ್ರಾಥಮಿಕ ಹಂತದಲ್ಲಿದೆ. ಹೀಗಾಗಿ, ನಿರೀಕ್ಷಣಾ ಜಾಮೀನು ಪಡೆದುಕೊಳ್ಳುವುದರಲ್ಲಿ ಅರ್ಥ ಇಲ್ಲ. ಆರೋಪಗಳು (ಸೆಕ್ಷನ್ 376- ಅತ್ಯಾಚಾರ ಮತ್ತು 313 ಗರ್ಭಪಾತ) ಗಂಭೀರ ಸ್ವರೂಪದ್ದಾಗಿವೆ. ಜತೆಗೆ, ಆರೋಪಿಯು ಪ್ರಭಾವಿ ವ್ಯಕ್ತಿಯಾಗಿದ್ದಾರೆ. ಆದ್ದರಿಂದ ಹೆಚ್ಚಿನ ಮಾಹಿತಿಯನ್ನು ಪಡೆಯಲು ಆರೋಪಿಯನ್ನು ವಶಕ್ಕೆ ಪಡೆದರೆ ಅನುಕೂಲವಾಗುತ್ತದೆ' ಎಂದು ನ್ಯಾಯಾಲಯ ಹೇಳಿತ್ತು.

ದೂರು ನೀಡಿದ ಮಹಿಳೆ ಮಲೇಷ್ಯಾದ ಪೌರತ್ವವನ್ನು ಸಹ ಹೊಂದಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ.



ಲಾಕ್‌ಡೌನ್ ಸಡಿಲಿಸಿರುವುದರಿಂದ ವಲಸೆ ಕಾರ್ಮಿಕರು ನಗರಕ್ಕೆ ಮರಳುತ್ತಿರುವ ದೃಶ್ಯ ಬೆಂಗಳೂರು – ಮುಂಬೈ ಹೆದ್ದಾರಿಯಲ್ಲಿ ಭಾನುವಾರ ಕಂಡುಬಂತು ಪ್ರಜಾವಾಣಿ ಚಿತ್ರ/ ಅನೂಪ್ ರಾಘ.ಟಿ.

'ಪತ್ನಿ ಸತ್ತಿದ್ದಕ್ಕೆ ಪತಿಯನ್ನೇ ಮನೆ ಬಿಡಿಸಿ ಕಳವು'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೋವಿಡ್‌ನಿಂದ ಪತ್ನಿ ತೀರಿಕೊಂಡ ಸಮಯ ಸರಿಯಿಲ್ಲವೆಂದು ಪತಿಯನ್ನು ಮನೆ ಖಾಲಿ ಮಾಡಿಸಿದ್ದ ತವರು ಮನೆಯ ಸಂಬಂಧಿಕರು, ಮನೆಯಲ್ಲಿದ್ದ ನಗದು ಹಾಗೂ ಚಿನ್ನಾಭರಣ ಕದ್ದೊಯ್ದಿರುವ ಆರೋಪ ಕೇಳಿಬಂದಿದೆ.

ಈ ಬಗ್ಗೆ ಸಾಫ್ಟ್‌ವೇರ್ ಎಂಜಿನಿಯರ್ ಪ್ರವೀಣ್‌ಕುಮಾರ್ ಎಂಬುವರು ರಾಜರಾಜೇಶ್ವರಿನಗರ ಠಾಣೆಗೆ ದೂರು ನೀಡಿದ್ದಾರೆ. ಪ್ರಕರಣದ ಸಾರಾಂಶ ಗಂಭೀರವಲ್ಲವೆಂದು ಅಭಿಪ್ರಾಯಪಟ್ಟಿರುವ ಪೊಲೀಸರು, ಎನ್‌ಸಿಆರ್ (ಗಂಭೀರವಲ್ಲದ ಪ್ರಕರಣ) ಮಾತ್ರ ದಾಖಲಿಸಿಕೊಂಡಿದ್ದಾರೆ. ನ್ಯಾಯಾಲಯದ ನಿರ್ದೇಶನದಂತೆ ಮುಂದಿನ ಕ್ರಮ ಕೈಗೊಳ್ಳುವುದಾಗಿ ಪೊಲೀಸರು ಹೇಳಿದ್ದಾರೆ.

ಆಗಿದ್ದೇನು: 'ಚನ್ನಸಂದ್ರದ ನಿವಾಸಿ ಪ್ರವೀಣ್ ಕುಮಾರ್, ನಿಮಿತಾ ಎಂಬುವರನ್ನು 2015ರಲ್ಲಿ ಮದುವೆಯಾಗಿದ್ದರು. ಇತ್ತೀಚೆಗಷ್ಟೇ ಕೋವಿಡ್‌ಗೆ ತುತ್ತಾಗಿದ್ದ ನಿಮಿತಾ ಅವರನ್ನು ಆಸ್ಪತ್ರೆಗೆ ದಾಖಲಿಸಲಾಗಿತ್ತು. ಆದರೆ, ಅವರು ಚಿಕಿತ್ಸೆಗೆ ಸ್ಪಂದಿಸದೇ ತೀರಿಕೊಂಡಿದ್ದರು' ಎಂದು ಪೊಲೀಸ್ ಮೂಲಗಳು ಹೇಳಿವೆ.

'ನಿಮಿತಾ ತಿಥಿ ಕಾರ್ಯಕ್ಕೆ ಮನೆಗೆ ಬಂದಿದ್ದ ತವರು ಮನೆಯ ಸಂಬಂಧಿಕರು, 'ಪತ್ನಿ ತೀರಿಕೊಂಡ ಸಮಯ ಸರಿ ಇಲ್ಲ. ನೀವು ಮೂರು ತಿಂಗಳು ಮನೆಯಿಂದ ಹೊರಗಡೆ ಇರಬೇಕು' ಎಂದು ಪ್ರವೀಣ್‌ಕುಮಾರ್‌ಗೆ ಹೇಳಿದ್ದರು. ಅದನ್ನು ನಂಬಿದ್ದ ಪ್ರವೀಣ್, ಪ್ರತ್ಯೇಕ ಮನೆ ಮಾಡಿಕೊಂಡು ವಾಸವಿದ್ದರು. ಇತ್ತೀಚೆಗೆ ಮನೆಗೆ ವಾಪಸು ಬಂದಿದ್ದರು. ಕೊಠಡಿಯಲ್ಲಿ ಪರಿಶೀಲಿಸಿದಾಗ ನಗದು ಹಾಗೂ ಚಿನ್ನಾಭರಣ ಇರಲಿಲ್ಲ. ಸಂಬಂಧಿಕರೇ ಕದ್ದುಕೊಂಡು ಹೋಗಿರುವುದಾಗಿ ಠಾಣೆಗೆ ದೂರು ನೀಡಿದ್ದಾರೆ' ಎಂದೂ ಮೂಲಗಳು ತಿಳಿಸಿವೆ.

ಎಫ್‌ಐಆರ್ ದಾಖಲಿಸಲು ಹಿಂದೇಟು: 'ದೂರಿನಡಿ ಎಫ್‌ಐಆರ್ ದಾಖಲಿಸಬೇಕಾದ ಪೊಲೀಸರು, ಆರೋಪಿಗಳ ಪರ ನಿಂತು ಎನ್‌ಸಿಆರ್ ಮಾತ್ರ ದಾಖಲಿಸಿದ್ದಾರೆ. ಈ ಮೂಲಕ ಕರ್ತವ್ಯಲೋಪ ಎಸಗಿದ್ದಾರೆ' ಎಂದು ದೂರುದಾರ ಆರೋಪಿಸಿದ್ದಾರೆ.

ನಗರದಲ್ಲಿ ಇಂದು

ಕವಿ ಸಿದ್ಧಲಿಂಗಯ್ಯ ಸ್ಮರಣೆ: ನುಡಿನಮನಕ್ಕೆ ಚಾಲನೆ, 'ಬೋಧಿವೃಕ್ಷದ ಕೆಳಗೆ' ಸಮಗ್ರ ಕಾವ್ಯ ಲೋಕಾರ್ಪಣೆ: ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ, ಅತಿಥಿ-ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ, ನುಡಿನಮನದ ಅಧ್ಯಕ್ಷತೆ-ಎಸ್.ಜಾಫೆಟ್, ಪ್ರಾಸ್ತಾವಿಕ ನುಡಿ-ಡಿ.ಶಿವಶಂಕರ್, ಮಾವಳ್ಳಿ ಶಂಕರ್, ಬೈರಮಂಗಲ ರಾಮೇಗೌಡ, ಆಯೋಜನೆ-ಸಿದ್ಧಲಿಂಗಯ್ಯ ಸ್ಮಾರಕ ಪ್ರತಿಷ್ಠಾನ, ಸ್ಥಳ-ಕಲಾಗ್ರಾಮ, ನಾಗರಬಾವಿ, ಜ್ಞಾನಭಾರತಿ ಹತ್ತಿರ, ಬೆಳಿಗ್ಗೆ 10.30

ವಿಶ್ವ ಸಂಗೀತ ದಿನದ ಅಂಗವಾಗಿ ಸಂಗೀತ ವಿಚಾರಗೋಷ್ಠಿ: ಅತಿಥಿ-ಮೈಸೂರಿನ ಗಂಗೂಬಾಯಿ ಹಾನಗಲ್ ಸಂಗೀತ ವಿಶ್ವವಿದ್ಯಾಲಯದ ಕುಲಪತಿ ನಾಗೇಶ್ ವಿ.ಬೆಟ್ಟಕೋಟೆ, ಅಧ್ಯಕ್ಷತೆ-ಬೆಂಗಳೂರು ವಿಶ್ವವಿದ್ಯಾಲಯದ ಕುಲಪತಿ ಕೆ.ಆರ್. ವೇಣುಗೋಪಾಲ್, ಭಾಗವಹಿಸುವವರು-ವಿದ್ವಾನ್ ಟಿ.ಎನ್.ಶೇಷಗೋಪಾಲನ್, ಡಿ. ಬಾಲಕೃಷ್ಣ, ಮೈಸೂರು ಎಂ. ಮಂಜುನಾಥ್, ಎಚ್.ಎನ್.ಸುಧೀಂದ್ರ, ಎ. ಚಂದನ ಕುಮಾರ್, ಪ್ರೊ.ಹಂಸಿನಿ ನಾಗೇಂದ್ರ, ಆಯೋಜನೆ-ಬೆಂಗಳೂರು ವಿಶ್ವವಿದ್ಯಾಲಯದ ಪ್ರದರ್ಶನ ಕಲಾ ವಿಭಾಗ, ಬೆಳಿಗ್ಗೆ 10.30 (ಆನ್‌ಲೈನ್ ಕಾರ್ಯಕ್ರಮ)

'ಲಸಿಕಾ ಮಹಾ ಅಭಿಯಾನ'ಕ್ಕೆ ಚಾಲನೆ: ಬಿ.ಎಸ್.ಯಡಿಯೂರಪ್ಪ, ಸ್ಥಳ-ಅಟಲ್ ಬಿಹಾರಿ ವಾಜಪೇಯಿ ವೈದ್ಯಕೀಯ ಮಹಾವಿದ್ಯಾಲಯ ಹಾಗೂ ಸಂಶೋಧನಾ ಸಂಸ್ಥೆ, ಶಿವಾಜಿನಗರ, ಬೆಳಿಗ್ಗೆ 11


'ರೈತ ಸ್ಪಂದನ' ಕೃಷಿ ಸಾಲ ವಿತರಣಾ ಕಾರ್ಯಕ್ರಮ: ಅತಿಥಿ-ಬಿ.ಎಸ್.ಯಡಿಯೂರಪ್ಪ, ಆಯೋಜನೆ-ಸಹಕಾರ ಇಲಾಖೆ, ಸ್ಥಳ-ಬ್ಯಾಂಕ್ವೆಟ್ ಹಾಲ್, ವಿಧಾನಸೌಧ, ಬೆಳಿಗ್ಗೆ 11.30

'ಕಿರುಸಾಲ ಯೋಜನೆ'ಯ ಉದ್ಘಾಟನೆ: ಉದ್ಘಾಟನೆ- ಸಹಕಾರ ಸಚಿವ ಎಸ್. ಟಿ.ಸೋಮಶೇಖರ್, ಅತಿಥಿಗಳು-ಶಾಸಕ ಎಚ್. ಕೆ.ಪಾಟೀಲ, ಉದಯ್ ಬಿ.ಗರುಡಾಚಾರ್, ಯು.ಬಿ.ವೆಂಕಟೇಶ್, ಐಪಿಎಸ್ ಅಧಿಕಾರಿ ಅಲೋಕ್ ಕುಮಾರ್, ಎಚ್.ಸಿ.ಕೃಷ್ಣ, ಆಯೋಜನೆ-ದಿ ನ್ಯಾಷನಲ್ ಕೋಆಪರೇಟಿವ್ ಬ್ಯಾಂಕ್ ಲಿಮಿಟೆಡ್, ಸ್ಥಳ-ಟಿ.ಆರ್.ಶಾಮಣ್ಣ ಸಭಾಂಗಣ, ಗಾಂಧಿಬಜಾರ್ ಮುಖ್ಯರಸ್ತೆ, ಬಸವನಗುಡಿ, ಮಧ್ಯಾಹ್ನ 12



ಟಿ.ಎಸ್. ನಾಗಾಭರಣ

'ಪದವಿ ತರಗತಿಗಳಲ್ಲಿ ರಂಗ ಶಿಕ್ಷಣದ ಮಹತ್ವ' ನಾಟಕ ಪಠ್ಯ, ಪ್ರದರ್ಶನ, ಬೋಧನಾ ಕಾರ್ಯಕ್ರಮ: ಉದ್ಘಾಟನೆ-ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಟಿ.ಎಸ್.ನಾಗಾಭರಣ, ಅತಿಥಿ-ಜೆ.ಲೋಕೇಶ್, ಹಂಸಿನಿ ನಾಗೇಂದ್ರ, ಎಂ.ಆರ್.ಭವಾನಿ, ಬಿ.ಚಂದ್ರಶೇಖರ, ಆಯೋಜನೆ-ಕಾಲೇಜು ಶಿಕ್ಷಣ ಇಲಾಖೆ, ವಿಜಯನಗರ ಸರ್ಕಾರಿ ಪ್ರಥಮದರ್ಜೆ ಕಾಲೇಜು, ಸುರಾನ ಕಾಲೇಜು, ಮಧ್ಯಾಹ್ನ 2 (ಆನ್‌ಲೈನ್ ಕಾರ್ಯಕ್ರಮ)



ಕರಜಗಿ


ವಿಚಾರ ಕಲರವ-'ಜೀವನೋತ್ಸಾಹ' ಕುರಿತು ಉಪನ್ಯಾಸ: ಶಿಕ್ಷಣ ತಜ್ಞ ಗುರುರಾಜ ಕರಜಗಿ, ಭಾಗವಹಿಸುವವರು-ಕೆ.ಆರ್.ವೇಣುಗೋಪಾಲ್, ಆಯೋಜನೆ-ಬೆಂಗಳೂರು ವಿಶ್ವವಿದ್ಯಾಲಯದ ಎನ್‌ಎಸ್‌ಎಸ್ ಘಟಕ, ಸಂಜೆ 5.30 (ಆನ್‌ಲೈನ್ ಕಾರ್ಯಕ್ರಮ)

ಎಚ್.ಎಸ್.ದೊರೆಸ್ವಾಮಿ, ಸಿದ್ದಲಿಂಗಯ್ಯ, ಜರಗನಹಳ್ಳಿ ಶಿವಶಂಕರ್, ಕೋ.ವೆಂ. ರಾಮಕೃಷ್ಣೇಗೌಡ, ಫಾದರ್ ಐಸಾಕ್ ಅವರಿಗೆ ನುಡಿನಮನ: ಭಾಗವಹಿಸುವವರು-'ಮುಖ್ಯಮಂತ್ರಿ' ಚಂದ್ರು, ರಾ.ನಂ.ಚಂದ್ರಶೇಖರ, ಜಾನ್ ಪೀಟರ್, ಸೈಮನ್ ಬರ್ತಲೋಮಿಯೊ, ಚಂದ್ರಶೇಖರ ಉಷಾಲ, ವ.ಚ.ಚನ್ನೇಗೌಡ, ಆಯೋಜನೆ-ಕರ್ನಾಟಕ ವಿಕಾಸ ರಂಗ, ಅಖಿಲ ಭಾರತ ಕ್ಯಾಥೋಲಿಕ್ ಕ್ರೈಸ್ತರ ಕನ್ನಡ ಸಂಘ, ಸ್ಥಳ-ಹನುಮಾನ್ ಚೇಂಬರ್ಸ್, ಮಸೀದಿ ಮುಂಭಾಗ, ಚಾಮರಾಜಪೇಟೆ, ಮಧ್ಯಾಹ್ನ 2.30

ಯೋಗ ದಿನದ ಕಾರ್ಯಕ್ರಮಗಳು

ಅಂತರರಾಷ್ಟ್ರೀಯ ಯೋಗ ದಿನದ ಅಂಗವಾಗಿ ಆನ್‌ಲೈನ್ ಯೋಗ ತರಬೇತಿ: ಆಯೋಜನೆ-ಪ್ರೀತೀಸ್ ವೆಲ್‌ನೆಸ್ ಯೋಗ, ಬೆಳಿಗ್ಗೆ 6

ಅಂತರರಾಷ್ಟ್ರೀಯ ಯೋಗ ದಿನ: ಉದ್ಘಾಟನೆ-ಬಿ.ಎಸ್.ಯಡಿಯೂರಪ್ಪ, ಆಯೋಜನೆ-ಆಯುಷ್ ಇಲಾಖೆ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಸ್ಥಳ-ಕಾವೇರಿ, ಬೆಳಿಗ್ಗೆ 6.30



ಡಾ.ಗಿರಿಧರ ಕಜೆ

ಯೋಗ ದಿನ: ಅತಿಥಿ-ಪ್ರಶಾಂತಿ ಆಯುರ್ವೇದ ಕೇಂದ್ರದ ಮುಖ್ಯಸ್ಥ ಗಿರಿಧರ ಕಜೆ, ಭಾಗವಹಿಸುವವರು-ರಾಷ್ಟ್ರೋತ್ಥಾನ ಪರಿಷತ್ ಪ್ರಧಾನ ಕಾರ್ಯದರ್ಶಿ ನಾ.ದಿನೇಶ್ ಹೆಗ್ಡೆ, ಆಯೋಜನೆ-ದಿಶಾ ಭಾರತ್, ಯೂತ್ ಫಾರ್ ಸೇವಾ, ರಾಷ್ಟ್ರೋತ್ಥಾನ ಪರಿಷತ್, ಬೆಳಿಗ್ಗೆ 6.30 (ಆನ್‌ಲೈನ್ ಕಾರ್ಯಕ್ರಮ)

ಯೋಗ ದಿನ: ಅತಿಥಿಗಳು-ಕೇಂದ್ರ ಸಚಿವ ಪ್ರಹ್ಲಾದ ಜೋಶಿ, ಬಿಜೆಪಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಸಿ.ಟಿ.ರವಿ, ಆರ್.ಎ.ಸುರೇಶ್ ಕುಮಾರ್, ಮಹೇಶ್, ಅಧ್ಯಕ್ಷತೆ-ಸಿ.ವಿ. ಮಹದೇವಯ್ಯ, ಆಯೋಜನೆ-ಪತಂಜಲಿ ಯೋಗ ಶಿಕ್ಷಣ ಸಮಿತಿ, ಬೆಳಿಗ್ಗೆ 7 (ಆನ್‌ಲೈನ್ ಕಾರ್ಯಕ್ರಮ)

ಅಂತರರಾಷ್ಟ್ರೀಯ ಯೋಗ ದಿನ: ಅತಿಥಿಗಳು-ವಚನಾನಂದ ಸ್ವಾಮೀಜಿ, ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ, ಉಪಮುಖ್ಯಮಂತ್ರಿ ಸಿ.ಎನ್.ಅಶ್ವತ್ಥನಾರಾಯಣ, ಆಯೋಜನೆ-ಯುವಜನ ಸಬಲೀಕರಣ ಹಾಗೂ ಕ್ರೀಡಾ ಇಲಾಖೆ, ಸ್ಥಳ-ಕಂಠೀರವ ಒಳಾಂಗಣ ಕ್ರೀಡಾಂಗಣ, ಬೆಳಿಗ್ಗೆ 7

ಯೋಗ ದಿನ: ಭಾಗವಹಿಸುವವರು-ಯೋಗ ಗುರು ಎಸ್.ಶಂಕರ್, ಟಿ.ವಿ.ಮಾರುತಿ, ಆಯೋಜನೆ-ಎಪಿಎಸ್ ಎಜುಕೇಷನಲ್ ಟ್ರಸ್ಟ್, ಬೆಳಿಗ್ಗೆ 7.30 (ಆನ್‌ಲೈನ್ ಕಾರ್ಯಕ್ರಮ)

ಯೋಗ ದಿನದ ಅಂಗವಾಗಿ ವಿಶೇಷ ಅಂಚೆ ಮೊಹರು ಹೊರತರುವ ಕಾರ್ಯಕ್ರಮ: ಸ್ಥಳ-ಜಯನಗರ ಹಾಗೂ ಬಸವನಗುಡಿ ಪ್ರಧಾನ ಅಂಚೆ ಕಚೇರಿಗಳು, ಬೆಳಿಗ್ಗೆ 10.30

ಯೋಗ ದಿನ: ಅತಿಥಿಗಳು-ಸ್ವಾಮಿ ವಿವೇಕಾನಂದ ಯೋಗ ವಿಶ್ವವಿದ್ಯಾಲಯದ ಎಚ್.ಆರ್.ನಾಗೇಂದ್ರ ಗುರೂಜಿ, ಅಧ್ಯಕ್ಷತೆ-ಎಸ್.ಎಂ.ಜಯಕರ, ಎನ್. ರಾಮಕೃಷ್ಣ ರೆಡ್ಡಿ, ಆಯೋಜನೆ, ಸ್ಥಳ-ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯ, ಧನ್ವಂತರಿ ಸಭಾಂಗಣ, ಜಯನಗರ, ಬೆಳಿಗ್ಗೆ 11 (ಆನ್‌ಲೈನ್ ಕಾರ್ಯಕ್ರಮ)



ವಿದ್ಯುತ್ ದರ ಏರಿಕೆಗೆ ಖಂಡನೆ

ಯಲಹಂಕ: 'ಕೋವಿಡ್ ಸಂಕಷ್ಟದಿಂದ ತತ್ತರಿಸಿರುವ ರಾಜ್ಯದ ಜನತೆಗೆ ವಿದ್ಯುತ್ ಬೆಲೆ ಏರಿಕೆಯ ಬರೆ ಎಳೆದಿರುವ ರಾಜ್ಯ ಸರ್ಕಾರದ ಕ್ರಮ ಖಂಡನೀಯ' ಎಂದು ಜಯ ಜಯ ಕರ್ನಾಟಕ ಜನಪರ ವೇದಿಕೆ ಹೇಳಿದೆ.

ವೇದಿಕೆಯ ಬೆಂಗಳೂರು ಜಿಲ್ಲಾ ಅಧ್ಯಕ್ಷ ಜೆ.ಶ್ರೀನಿವಾಸ, '2020 ರ ನಂತರ ಪ್ರತಿ ಯುನಿಟ್‌ಗೆ 40 ಪೈಸೆಯಷ್ಟು ಏರಿಸಿದ್ದ ವಿದ್ಯುತ್ ದರವನ್ನು ಈಗ ಮತ್ತೆ ಪ್ರತಿ ಯುನಿಟ್‌ಗೆ 30 ಪೈಸೆ ಏರಿಸಲಾಗಿದೆ. ಆ ಮೂಲಕ ಜನರ ಮೇಲೆ ಸರ್ಕಾರ ದೊಡ್ಡ ಹೊರೆ ಹೊರಿಸಿದೆ' ಎಂದರು. 'ವಿದ್ಯುತ್ ಸರಬರಾಜು ಕಂಪನಿಗಳು ನಷ್ಟದಲ್ಲಿವೆ ಎಂದು ಹೇಳುವ ಸರ್ಕಾರ, ಮೊದಲು ದುಬಾರಿ ಬೆಲೆಗೆ ವಿದ್ಯುತ್ ಖರೀದಿಸುವುದನ್ನು ನಿಲ್ಲಿಸಬೇಕು. ವಿದ್ಯುತ್ ಉತ್ಪಾದನೆ ಹೆಚ್ಚಿಸಿ, ಸೋರಿಕೆ ತಡೆಗಟ್ಟಬೇಕು. ದರಏರಿಕೆ ಮಾಡದಂತೆ ಎಲ್ಲ ವಿದ್ಯುತ್ ಸರಬರಾಜು ಕಂಪನಿಗಳಿಗೆ ಮುಖ್ಯಮಂತ್ರಿ ಆದೇಶ ನೀಡಬೇಕು' ಎಂದರು.



ವಿಶ್ವ ಯೋಗದಿನವನ್ನು ಆಚರಿಸಲಾಗುತ್ತಿದೆ!

ಹಿರೇನಾಗವಲ್ಲಿ ಕಲ್ಲುಗಣಿ ಸ್ಫೋಟ ಪ್ರಕರಣ: ಸರ್ಕಾರಕ್ಕೆ ಎನ್‌ಜಿಟಿ ಸೂಚನೆ

'ತಿಂಗಳಲ್ಲಿ ಪರಿಹಾರ ಪಾವತಿಸಿ'

ಪ್ರಜಾವಾಣಿ ವಾರ್ತೆ

ನವದೆಹಲಿ: 'ಚಿಕ್ಕಬಳ್ಳಾಪುರ ಜಿಲ್ಲೆಯ ಹಿರೇನಾಗವಲ್ಲಿಯ ಕಲ್ಲುಗಣಿಯಲ್ಲಿ ಸಂಭವಿಸಿದ್ದ ಸ್ಫೋಟ ಪ್ರಕರಣದಲ್ಲಿ ಮೃತಪಟ್ಟವರ ಕುಟುಂಬಕ್ಕೆ ಮಾಲೀಕರು ಒಂದು ತಿಂಗಳೊಳಗೆ ಪರಿಹಾರ ನೀಡಲು ವಿಫಲರಾದಲ್ಲಿ, ರಾಜ್ಯ ಸರ್ಕಾರವೇ ಅದನ್ನು ಪಾವತಿಸಬೇಕು' ಎಂದು ರಾಷ್ಟ್ರೀಯ ಹಸಿರು ನ್ಯಾಯಮಂಡಳಿ (ಎನ್‌ಜಿಟಿ) ಸೂಚಿಸಿದೆ.

ನ್ಯಾಯಮೂರ್ತಿ ಆದರ್ಶ್ ಕುಮಾರ್ ಗೋಯಲ್ ನೇತೃತ್ವದ ನ್ಯಾಯಮಂಡಳಿಯ ಪ್ರಧಾನ ಪೀಠವು, 'ಜಿಲ್ಲಾ ಮ್ಯಾಜಿಸ್ಟ್ರೇಟ್ ಮೂಲಕ ಪರಿಹಾರವನ್ನು ಪಾವತಿಸಬೇಕು. ತದನಂತರ ಈ ಮೊತ್ತವನ್ನು ಜಿಲ್ಲಾಡಳಿತವು ಕಲ್ಲುಗಣಿಯ ಮಾಲೀಕರಿಂದ ವಸೂಲು ಮಾಡಲು ಕ್ರಮವಹಿಸಬೇಕು' ಎಂದು ಆದೇಶಿಸಿತು.

ಕರ್ನಾಟಕ ಸರ್ಕಾರದ ಮುಖ್ಯ ಕಾರ್ಯದರ್ಶಿ ಅವರು ಈ ಆದೇಶಕ್ಕೆ ಬದ್ಧರಾಗಿ, ತಿಂಗಳೊಳಗೆ ಪರಿಹಾರವನ್ನು ವಿತರಿಸಲು ಕ್ರಮವಹಿಸಬೇಕು. ಮೃತರ ಕುಟುಂಬದ ಅರ್ಹರಿಗೆ ಈ ಪರಿಹಾರ ಮೊತ್ತವು ತಲುಪುವಂತೆ ಕರ್ನಾಟಕ ರಾಜ್ಯ ಕಾನೂನು ಸೇವಾ ಪ್ರಾಧಿಕಾರವು ಅಗತ್ಯ ಕಾನೂನು ನೆರವು ಒದಗಿಸಬೇಕು ಎಂದೂ ತಿಳಿಸಿದೆ.

ಪರಿಹಾರ ಪಾವತಿ ಕುರಿತಂತೆ ವಸ್ತುಸ್ಥಿತಿ ವರದಿಯನ್ನು ಮೂರು ತಿಂಗಳಲ್ಲಿ ಸಲ್ಲಿಸಬೇಕು ಎಂದು ಎನ್‌ಜಿಟಿಯು, ಮುಖ್ಯ ಕಾರ್ಯದರ್ಶಿ ಅವರಿಗೆ ಸೂಚಿಸಿದೆ.

ಇದೇ ವರ್ಷದ ಫೆಬ್ರುವರಿ 22ರಂದು ಸಂಭವಿಸಿದ್ದ ಸ್ಫೋಟ ಪ್ರಕರಣದಲ್ಲಿ 5 ಮಂದಿ ಮೃತಪಟ್ಟಿದ್ದರು. ಸ್ವ-ಪ್ರೇರಿತವಾಗಿ ವಿಚಾರಣೆ ಎತ್ತಿಕೊಂಡಿದ್ದ ನ್ಯಾಯಪೀಠ ವರದಿ ಸಲ್ಲಿಸಲು ಪರಿಣತರ ಸಮಿತಿ ರಚಿಸಿತ್ತು. 'ಅವಘಡಕ್ಕೆ ಕಲ್ಲುಗಣಿ ಮಾಲೀಕರೇ ಹೊಣೆ. ಸ್ಫೋಟಕಗಳನ್ನು ಅವೈಜ್ಞಾನಿಕವಾಗಿ ನಿರ್ವಹಿಸಲಾಗುತ್ತಿತ್ತು' ಎಂದು ವರದಿಯಲ್ಲಿ ತಿಳಿಸಿತ್ತು.

ಮೃತರ ಕುಟುಂಬಕ್ಕೆ ಆರ್ಥಿಕ ಪರಿಹಾರವನ್ನು ಕಲ್ಲುಗಣಿಯ ಮಾಲೀಕರೇ ನೀಡಬೇಕು ಎಂದೂ ಸಮಿತಿ ಪ್ರತಿಪಾದಿಸಿತ್ತು. ವಾಸ್ತವಿಕ ಸ್ಥಿತಿಯನ್ನು ವರದಿ ಆಧರಿಸಿದ್ದು, ಅಂಗೀಕರಿಸಲಾಗಿದೆ ಎಂದು ನ್ಯಾಯಪೀಠವು ತಿಳಿಸಿತ್ತು.

'ಕಾನೂನುಬಾಹಿರವಾಗಿ ಸ್ಫೋಟಕಗಳ ಸಂಗ್ರಹ ಮತ್ತು ಅವೈಜ್ಞಾನಿಕ ನಿರ್ವಹಣೆಯೇ ಅವಘಡಕ್ಕೆ ಕಾರಣ. ಲೋಪಕ್ಕೆ ಶಿರಡಿ ಸಾಯಿ ಅಗ್ರಿಗೇಟ್ಸ್, ಶ್ರೀ ಭ್ರಮರವಾಸಿನಿ ಎಂ. ಸ್ಯಾಂಡರ್ಸ್ ಎಲ್‌ಎಲ್‌ಪಿ ಹೊಣೆ' ಎಂದು ವರದಿಯಲ್ಲಿ ತಿಳಿಸಿತ್ತು.

ಸಿದ್ದರಾಮಯ್ಯ ಮುಂದಿನ ಸಿ.ಎಂ: ಜಮೀರ್ ಜಪ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಜೆಪಿಯಲ್ಲಿ ನಾಯಕತ್ವ ಬದಲಾವಣೆಗೆ ಬಣ ರಾಜಕೀಯ ತಾರಕಕ್ಕೇರಿದ್ದರೆ, ಮತ್ತೊಂದೆಡೆ ಕಾಂಗ್ರೆಸ್‌ನಲ್ಲಿ ಮುಂದಿನ ಮುಖ್ಯಮಂತ್ರಿ ಬಗ್ಗೆ ಬಿರುಸಿನ ಚರ್ಚೆ ಆರಂಭವಾಗಿದೆ.

ವಿಧಾನಸಭೆ ಚುನಾವಣೆಗೆ ಇನ್ನೂ ಎರಡು ವರ್ಷ ಇರುವಾಗಲೇ ಮುಖ್ಯಮಂತ್ರಿ ವಿಚಾರದಲ್ಲಿ ಶಾಸಕ ಜಮೀರ್ ಅಹ್ಮದ್‌ಖಾನ್ ಅವರು ವಿರೋಧಪಕ್ಷದ ನಾಯಕ ಸಿದ್ದರಾಮಯ್ಯ ಪರ ಪದೇ ಪದೇ ನೀಡುತ್ತಿರುವ ಹೇಳಿಕೆ ಚರ್ಚೆಗೆ ಗ್ರಾಸವಾಗಿದೆ. ಜಮೀರ್ ಹೇಳಿಕೆಗೆ ಪಕ್ಷದಲ್ಲಿ ಕೆಲವರು ಆಕ್ಷೇಪ ವ್ಯಕ್ತಪಡಿಸಿದ್ದಾರೆ.

ತಮ್ಮ ಕ್ಷೇತ್ರ ಚಾಮರಾಜಪೇಟೆಯಲ್ಲಿ ನಡೆಯುವ ಪ್ರತಿ ಕಾರ್ಯಕ್ರಮ-ಕ್ಕೂ ಸಿದ್ದರಾಮಯ್ಯ ಅವರನ್ನು ಆಹ್ವಾನಿಸುವ ಜಮೀರ್, ಸಿದ್ದರಾಮಯ್ಯ ಅವರೇ ಮುಂದಿನ ಮುಖ್ಯಮಂತ್ರಿ ಎಂದು ಬಹಿರಂಗವಾಗಿ ಪದೇ ಪದೇ ಘೋಷಿಸುತ್ತಿದ್ದಾರೆ. ಇದೀಗ ಇನ್ನೂ ಒಂದು ಹೆಜ್ಜೆ ಮುಂದಿಟ್ಟಿರುವ ಜಮೀರ್, 'ವೈಯಕ್ತಿಕವಾಗಿ ನಾನು ಏನೇ ಹೇಳಿದರೂ, ಅಂತಿಮವಾಗಿ ಹೈಕಮಾಂಡ್ ತೀರ್ಮಾನಿಸುತ್ತದೆ. ಆದರೆ, ರಾಜ್ಯದ ಜನ ಒಪ್ಪಿಕೊಂಡ ಬಳಿಕ ಹೈಕಮಾಂಡ್ ಕೂಡಾ ಒಪ್ಪಿಕೊಳ್ಳಲೇಬೇಕು' ಎಂದಿದ್ದಾರೆ.

'ಸಿದ್ದರಾಮಯ್ಯ ಅವರನ್ನು ಮಾಜಿ ಎಂದು ಕರೆಯಲು ನನ್ನ ಮನಸ್ಸು ಒಪ್ಪಲ್ಲ. ಮಾಜಿ ಎಂದು ಹೇಳಲು ನಾನು ಸಿದ್ಧ ಇಲ್ಲ. ಅವರು ಭಾವಿ ಮುಖ್ಯಮಂತ್ರಿ ಎಂದೇ ನಾನು ಭಾವಿಸುತ್ತೇನೆ. ಮುಖ್ಯಮಂತ್ರಿಯಾಗಿದ್ದ ಅವಧಿಯಲ್ಲಿ ಸಿದ್ದರಾಮಯ್ಯ ಕೊಟ್ಟ ಕಾರ್ಯಕ್ರಮಗಳನ್ನು ರಾಜ್ಯದಾದ್ಯಂತ ಜನ ನೆನಪಿಸಿಕೊಂಡು ಅವರೇ ಮುಖ್ಯಮಂತ್ರಿ ಆಗಬೇಕು ಎನ್ನುತ್ತಾರೆ' ಎಂದೂ ಹೇಳಿದ್ದಾರೆ.

ಡಿ.ಕೆ. ತಿರುಗೇಟು: ಜಮೀರ್ ಹೇಳಿಕೆಗೆ ಖಾರವಾಗಿ ಪ್ರತಿಕ್ರಿಯಿಸಿರುವ ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್, 'ಮುಖ್ಯಮಂತ್ರಿಯಾಗಲು ನನಗೆ, ಸಿದ್ದರಾಮಯ್ಯ, ಮಲ್ಲಿಕಾರ್ಜುನ ಖರ್ಗೆ, ಪರಮೇಶ್ವರ್ ಇನ್ನೂ ಯಾರ್‍ಯಾರಿಗೋ ಆಸೆ ಇರಬಹುದು. ಆದರೆ, ನಮ್ಮ ಕೆಲಸ ಮುಖ್ಯಮಂತ್ರಿ ಆಗುವುದಲ್ಲ, ಪಕ್ಷವನ್ನು ಅಧಿಕಾರಕ್ಕೆ ತರುವುದು. ಕೆಲವರು ವೈಯಕ್ತಿಕ ಅಭಿಪ್ರಾಯ ಹೇಳಿರಬಹುದು. ಈ ವಿಚಾರವಾಗಿ ಕರೆದು ವಿವರಣೆ ಕೇಳಿದ್ದೇನೆ' ಎಂದು ಸ್ಪಷ್ಟನೆ ನೀಡಿದ್ದಾರೆ.

ಆದರೆ, ಸಿದ್ದರಾಮಯ್ಯ ಪರ ಸಂದರ್ಭ ಸಿಕ್ಕಾಗಲೆಲ್ಲ ಜಮೀರ್ ನೀಡುತ್ತಿರುವ ಹೇಳಿಕೆ ಕಾಂಗ್ರೆಸ್ ನಾಯಕರಲ್ಲಿ ಚರ್ಚೆಗೆ ಕಾರಣವಾಗಿದೆ. ಅಲ್ಲದೆ, 'ಮುಖ್ಯಮಂತ್ರಿರೇಸ್‌ನಲ್ಲಿ ಸಿದ್ದರಾಮಯ್ಯ ಜೊತೆ ನಾನು, ಮಲ್ಲಿಕಾರ್ಜುನ ಖರ್ಗೆ, ಪರಮೇಶ್ವರ ಕೂಡಾ ಇದ್ದಾರೆ' ಎಂದು ಶಿವಕುಮಾರ್ ಹೇಳಿರುವುದು ಪಕ್ಷದೊಳಗಿನ ಭಿನ್ನ ಧ್ವನಿಗೆ ತುಪ್ಪ ಸುರಿದಂತಾಗಿದೆ ಎಂದೇ ಕಾಂಗ್ರೆಸ್ ವಲಯದಲ್ಲಿ ವಿಶ್ಲೇಷಿಸಲಾಗುತ್ತಿದೆ.

'ಬಹಿರಂಗ ಹೇಳಿಕೆ ಮೂಲಕ ಪಕ್ಷವನ್ನು ಮುಜುಗರಕ್ಕೆ ಸಿಲುಕಿಸುತ್ತಿದ್ದರೂ ಜಮೀರ್ ವಿರುದ್ಧ ಕ್ರಮ ತೆಗೆದುಕೊಳ್ಳಲು ಯಾಕೆ ಹಿಂದೇಟು ಎಂಬ ಚರ್ಚೆ ಪಕ್ಷದಲ್ಲಿ ನಡೆಯುತ್ತಿದೆ. ಜಮೀರ್ ಜಾಗದಲ್ಲಿ ಬೇರೆ ಯಾರೇ ಇದ್ದರೂ ತಕ್ಷಣವೇ ಕ್ರಮ ತೆಗೆದುಕೊಳ್ಳುವ ಸಾಧ್ಯತೆ ಇತ್ತು. ಪಕ್ಷದ ಅಧ್ಯಕ್ಷರ ಎಚ್ಚರಿಕೆಯ ಬಳಿಕವೂ ಹೇಳಿಕೆ ನೀಡುವುದನ್ನು ಮುಂದುರಿಸಿರುವ ಜಮೀರ್, ಸಿದ್ದರಾಮಯ್ಯ ಅವರ ಬೆಂಬಲಿಗ ಎನ್ನುವುದಕ್ಕಿಂತಲೂ ಮುಸ್ಲಿಂ ಸಮುದಾಯದ ನಾಯಕನಾಗಿ ಬೆಳೆದಿರುವುದು ಕಾರಣ ಇರಬಹುದು. ಕ್ರಮ ತೆಗೆದುಕೊಂಡರೆ ಪಕ್ಷದ ಓಟ್ ಬ್ಯಾಂಕ್ ಆಗಿರುವ ಮುಸ್ಲಿಂ ಸಮುದಾಯ ಮುನಿಸಿಕೊಳ್ಳಬಹುದೆಂಬ ಆತಂಕವೂ ಇರಬಹುದು' ಎಂದು ಕಾಂಗ್ರೆಸ್‌ನ ಹಿರಿಯ ನಾಯಕರೊಬ್ಬರು ಹೇಳಿದರು.


ಹೇಳಿಕೆ ಸರಿಯಲ್ಲ: ಧ್ರುವನಾರಾಯಣ



ಮೈಸೂರು: 'ಮುಂದಿನ ಮುಖ್ಯಮಂತ್ರಿ ಸಿದ್ದರಾಮಯ್ಯ ಎಂಬುದಾಗಿ ಶಾಸಕ ಜಮೀರ್ ಅಹ್ಮದ್ ಖಾನ್ ಪದೇಪದೇ ಹೇಳುತ್ತಿರುವುದು ಸರಿಯಲ್ಲ' ಎಂದು ಕೆಪಿಸಿಸಿ ಕಾರ್ಯಾಧ್ಯಕ್ಷ ಆರ್.ಧ್ರುವನಾರಾಯಣ ಭಾನುವಾರ ಇಲ್ಲಿ ಅಸಮಾಧಾನ ವ್ಯಕ್ತಪಡಿಸಿದರು. 'ಚುನಾವಣೆಗೆ ಇನ್ನೂ ಸಾಕಷ್ಟು ಸಮಯವಿದೆ. ಈಗಲೇ ಮುಖ್ಯಮಂತ್ರಿ ಆಯ್ಕೆ ಮಾಡುವುದು ಅಪ್ರಸ್ತುತ. ಚುನಾವಣೆಯ ನಂತರ ಶಾಸಕರ ಅಭಿಪ್ರಾಯ ಪಡೆದು ಹೈಕಮಾಂಡ್ ಆಯ್ಕೆ ಮಾಡುತ್ತದೆ' ಎಂದರು. 'ಕಾಂಗ್ರೆಸ್‌ನಲ್ಲಿ ಈಗ ಯಾವುದೇ ಬಣ ಇಲ್ಲ. ಎಲ್ಲರೂ ಒಗ್ಗಟ್ಟಿನಿಂದ ಕೆಲಸ ಮಾಡುತ್ತಿದ್ದಾರೆ. ರಾಜ್ಯದಲ್ಲೂ ಕಾಂಗ್ರೆಸ್ ಪರವಾದ ಅಲೆ ಇದೆ. ಇಂತಹ ಸಂದರ್ಭದಲ್ಲಿ ಜಮೀರ್ ಅವರ ಹೇಳಿಕೆ ಗೊಂದಲಕ್ಕೆ ಕಾರಣವಾಗುತ್ತದೆ' ಎಂದು ನುಡಿದರು.







ಸೂಕ್ತ ಕಾಲೇಜ್ ಆಯ್ಕೆಗೆ ಮುನ್ನ..

ಎಸ್ಸೆಸ್ಸೆಲ್ಸಿ, ಪಿಯುಸಿ ಮುಗಿಸಿದ ವಿದ್ಯಾರ್ಥಿಗಳು ತಮ್ಮ ಮುಂದಿನ ವಿದ್ಯಾಭ್ಯಾಸಕ್ಕಾಗಿ ಕಾಲೇಜ್ ಅನ್ನು ಆಯ್ಕೆ ಮಾಡಿಕೊಳ್ಳುವ ಮುನ್ನ ಕೆಲವೊಂದು ಅಂಶಗಳನ್ನು ಗಮನದಲ್ಲಿರಿಸಿಕೊಳ್ಳಬೇಕು. ಇದು ಅವರ ವೃತ್ತಿ ಹಾಗೂ ಭವಿಷ್ಯದ ದೃಷ್ಟಿಯಿಂದ ಉತ್ತಮ.

ಕೋಕಿಲ ಎಂ. ಎಸ್.

ಶಾಲೆ ಯಾವಾಗ ಪ್ರಾರಂಭವಾಗುತ್ತದೆ ಎನ್ನುವ ಯೋಚನೆಯಲ್ಲೇ ಮುಕ್ಕಾಲು ವರ್ಷ ಕಳೆದರೆ, ಪರೀಕ್ಷೆಯ ಕತೆ ಏನು ಎನ್ನುವ ಆತಂಕದಲ್ಲಿಯೇ ಉಳಿದ ದಿನಗಳನ್ನೂ ಕಳೆದಿದ್ದಾಯಿತು. ಆದರೆ ಈಗ ವಿದ್ಯಾರ್ಥಿಗಳು ಹಾಗೂ ಪೋಷಕರ ಮುಂದಿರುವ ಪ್ರಶ್ನೆ, ಯಾವ ಕಾಲೇಜಿಗೆ ದಾಖಲಾಗಬೇಕು ಅಥವಾ ದಾಖಲಿಸಬೇಕು ಎನ್ನುವುದು. ಸರಿಯಾದ ಕಾಲೇಜಿನ ಆಯ್ಕೆ ಒಂದು ರೀತಿಯಲ್ಲಿ ವಿಜ್ಞಾನವೂ ಹೌದು, ಕಲೆಯೂ ಹೌದು. ಎಸ್ಸೆಸ್ಸೆಲ್ಸಿ ಮುಗಿಸಿದ ವಿದ್ಯಾರ್ಥಿಗಳಿಗೆ ಕಾಲೇಜಿಗೆ ಸೇರುವ ಧಾವಂತ, ಪಿಯುಸಿ ಮುಗಿಸಿದ ಮತ್ತು ಪದವಿ ಮುಗಿಸಿದ ವಿದ್ಯಾರ್ಥಿಗಳಿಗೆ ಮುಂದಿನ ಭವಿಷ್ಯದ ಚಿಂತೆ. ಈ ಹಂತದಲ್ಲಿ ನೀವು ಆಯ್ಕೆ ಮಾಡಿಕೊಳ್ಳುವ ಕಾಲೇಜು ನಿಮ್ಮ ಭವಿಷ್ಯವನ್ನೇ ನಿರ್ಧರಿಸಬಲ್ಲದು. ಈ ನಿಟ್ಟಿನಲ್ಲಿ ಗಮನಿಸಬೇಕಾದ ಒಂದಿಷ್ಟು ಅಂಶಗಳು ಇಲ್ಲಿವೆ.

- ಆಸಕ್ತಿಯ ಕ್ಷೇತ್ರ/ ವಿಷಯ- ಕಾಲೇಜಿನ ಆಯ್ಕೆಗೂ ಮೊದಲು 'ನಾನು ಏನಾಗ ಬಯಸುತ್ತೇನೆ' ಎನ್ನುವ ಸ್ಪಷ್ಟತೆ ಇರಬೇಕು. ಆ ನಂತರ ಅದರ ಆಧಾರದ ಮೇಲೆ ಕಾಲೇಜಿನ ಆಯ್ಕೆ ಮಾಡಿಕೊಳ್ಳಬೇಕು. 'ಮೊದಲು ಕಾಲೇಜಿಗೆ ಸೇರಿಕೊಂಡು ಆಮೇಲೆ ಏನಾಗಬೇಕು ಅನ್ನೋದನ್ನ ನಿರ್ಧಾರ ಮಾಡೋಣ', ಅನ್ನೋದು ಹಲವು ವಿದ್ಯಾರ್ಥಿಗಳ ನಿಲುವು. ಇದು ಸರಿಯಾದ ಚಿಂತನೆಯಲ್ಲ. ಏಕೆಂದರೆ ನೀವು ಓದುವ ಕಾಲೇಜು ಎಲ್ಲ ರೀತಿಯಲ್ಲೂ ನಿಮ್ಮ ಕನಸಿಗೆ ನೀರೆರೆದು ಪೋಷಿಸುವಂತಿರಬೇಕು.
- ಆಸಕ್ತಿಯ ವಿಷಯದ ಆಯ್ಕೆಯ ನಂತರ ಅಗ್ರ ಶ್ರೇಯಾಂಕದಲ್ಲಿರುವ ಕಾಲೇಜುಗಳ ಪಟ್ಟಿ ಮಾಡಿಕೊಳ್ಳುವುದು ಉತ್ತಮ. ಟಾಪ್ ಟ್ವೆಂಟಿ ಅಥವಾ ಟಾಪ್ ಟೆನ್ ಕಾಲೇಜುಗಳ ಪಟ್ಟಿ ಮಾಡಿ ಅವುಗಳ ವೆಬ್‌ಸೈಟ್ ಮುಖಾಂತರ ಅದರ ಸೌಲಭ್ಯಗಳ ಬಗ್ಗೆ ಮಾಹಿತಿಯನ್ನು ತಿಳಿಯಬೇಕು. ಪಠ್ಯದ ಜೊತೆಗೆ ಇತರೆ ಸೌಲಭ್ಯಗಳಾದ ಸಿಇಟಿ ಕೋಚಿಂಗ್, ಸಂವಹನ ಕೌಶಲಗಳ ಕಾರ್ಯಾಗಾರ, ಸ್ಪರ್ಧಾತ್ಮಕ ಪರೀಕ್ಷೆಗಳ ತಯಾರಿ ಮುಂತಾದವುಗಳೂ ಸೇರಿವೆಯೇ ಎಂಬುದನ್ನು ಗಮನಿಸಿ.
- ಕಾಲೇಜಿನ ವೆಬ್‌ಸೈಟ್‌ಗಳಲ್ಲಿ ಬೋಧಕ ಸಿಬ್ಬಂದಿಯ ಬಗ್ಗೆಯೂ ಮಾಹಿತಿ ಇರುತ್ತದೆ. ಅವರ ಬೋಧನಾ ಅನುಭವ ಮತ್ತು ಪ್ರೊಫೈಲ್ ಅನ್ನು ಗಮನಿಸಿ. ಏಕೆಂದರೆ ಹೆಚ್ಚಿನ ಒಡನಾಟ ಇರಬೇಕಿರುವುದೇ ಗುರುಗಳೊಂದಿಗೆ. ನಿಮ್ಮ ಗುರಿ ಸಾಧನೆಗೆ ಒಳ್ಳೆಯ ಗುರುವಿನ ಅವಶ್ಯಕತೆ ಅತಿ ಮುಖ್ಯ.
- ಪದವಿ, ಸ್ನಾತಕೋತ್ತರ ಪದವಿ ಹಾಗೂ ವೃತ್ತಿಪರ ಕೋರ್ಸ್‌ಗಳಿಗಾಗಿ ಸೇರುವ ವಿದ್ಯಾರ್ಥಿಗಳು ಪ್ರಮುಖವಾಗಿ ಗಮನಿಸಬೇಕಾದ ಮತ್ತೊಂದು ಅಂಶ ಕ್ಯಾಂಪಸ್ ಸೆಲೆಕ್ಷನ್. ಕ್ಯಾಂಪಸ್ ಸೆಲೆಕ್ಷನ್‌ಗೆ ಬರುವ ಕಂಪನಿಗಳ ಹೆಸರುಗಳೂ ವೆಬ್‌ಸೈಟ್ ಅಥವಾ ಬ್ರೋಷರ್‌ಗಳಲ್ಲಿ ಲಭ್ಯವಿರುತ್ತದೆ. ಒಂದು ರೀತಿಯಲ್ಲಿ ಓದುವಾಗಲೇ ಕೆಲಸ ಪಡೆಯುವ ಅವಕಾಶ ನಿಮ್ಮದಾಗುತ್ತದೆ.
- ನಮ್ಮಲ್ಲಿ ಒಬ್ಬರು ಆರಿಸಿದ ದಾರಿಯನ್ನೇ ಅನುಸರಿಸುವವರು ಹೆಚ್ಚು ಜನ. ಸ್ನೇಹಿತರು ಸೇರುತ್ತಿದ್ದಾರೆ ಎನ್ನುವ ಕಾರಣಕ್ಕೋ ಅಥವಾ ಹೊರಗಿನವರು ಹೇಳಿದರು ಎನ್ನುವ ಕಾರಣಕ್ಕೋ ಕಾಲೇಜಿಗೆ ಸೇರುವ ಬದಲು, ಆ ಕಾಲೇಜಿನ ಹಳೆಯ ಮತ್ತು ಹಿರಿಯ ವಿದ್ಯಾರ್ಥಿಗಳನ್ನು ಭೇಟಿ ಮಾಡಿ ಅಭಿಪ್ರಾಯ ಸಂಗ್ರಹ ಮಾಡುವುದು ಒಳ್ಳೆಯದು. ಅಲ್ಲಿಯೇ ಓದಿದ/ ಓದುತ್ತಿರುವ ವಿದ್ಯಾರ್ಥಿಗಳಿಗೆ ಅದರ ಆಳ ಮತ್ತು ಅಗಲಗಳು ಚೆನ್ನಾಗಿಯೇ ತಿಳಿದಿರುತ್ತವೆ.
- ಕಲಿಯುವ ವಾತಾವರಣ, ಮೂಲ ಸೌಕರ್ಯ ಮತ್ತು ಗ್ರಂಥಾಲಯವಿರುವ ಕಾಲೇಜ್ ಅನ್ನು ಆಯ್ಕೆ ಮಾಡಿ. ಒಂದು ಒಳ್ಳೆಯ ಗ್ರಂಥಾಲಯ ಕಾಲೇಜಿನ ಹೃದಯವಿದ್ದಂತೆ. ಹಾಗೆಯೇ ಒಳ್ಳೆಯ ವಾತಾವರಣ ನಿಮ್ಮನ್ನು ಉತ್ತಮ ಪ್ರಜೆಯಾಗಿಸುತ್ತದೆ.
- ಮನೆಯಿಂದಲೇ ಓಡಾಡುವ ವಿದ್ಯಾರ್ಥಿಗಳಾದರೆ ಹತ್ತರಿಂದ ಹದಿನೈದು ಕಿಲೋಮೀಟರ್‌ಗಳ ಅಂತರವಿರುವ ಕಾಲೇಜ್ ಅನ್ನು ಆಯ್ಕೆ ಮಾಡಿಕೊಳ್ಳುವುದು ಒಳ್ಳೆಯದು. ಇದರಿಂದ ಅನಾವಶ್ಯಕ ಆಯಾಸ ಮತ್ತು ಸಮಯದ ವ್ಯಯವಾಗುವುದು ತಪ್ಪುತ್ತದೆ. ಹಾಸ್ಟೆಲ್‌ಗಳಲ್ಲಿ ಉಳಿಯುವುದಾದರೆ ದೂರದ ಕಾಲೇಜ್ ಅನ್ನು ಆಯ್ಕೆ ಮಾಡಿಕೊಳ್ಳಬಹುದು. ಹಾಸ್ಟೆಲ್ ಜೀವನವೂ ಬದುಕಿನ ಹೊಸ ಪಾಠಗಳನ್ನು ಕಲಿಸುತ್ತದೆ.
- ಕಾಲೇಜಿನ ಶುಲ್ಕದ ಪರಿಗಣನೆ ಮತ್ತೊಂದು ಪ್ರಮುಖ ಅಂಶ. ಇಷ್ಟವಾಗಿದೆ ಎನ್ನುವ ಕಾರಣಕ್ಕೆ ತಮ್ಮ ಶಕ್ತಿ ಮೀರಿ ಲಕ್ಷಾಂತರ ರೂಪಾಯಿ ಶುಲ್ಕವನ್ನು ಭರಿಸಿ ಸೇರುವ ಅಗತ್ಯವಿಲ್ಲ. ಆರ್ಥಿಕ ಪರಿಸ್ಥಿತಿಯ ಚೌಕಟ್ಟಿನ ಒಳಗೆ ಕಾಲೇಜಿನ ಆಯ್ಕೆ ಮಾಡಿಕೊಳ್ಳುವುದು ಉತ್ತಮ. ಅನಾವಶ್ಯಕವಾಗಿ ಪೋಷಕರ ಮೇಲೆ ಹಣಕಾಸಿನ ಹೊರೆ ಹೊರಿಸುವುದು ಸರಿಯಲ್ಲ.
- ಕಾಲೇಜಿನ ಆಯ್ಕೆ ಪ್ರಕ್ರಿಯೆ ಒಮ್ಮೆಲೆ ಆಗುವಂಥದ್ದಲ್ಲ. ಒಂದು ಬಾರಿ ಕಾಲೇಜಿಗೆ ಭೇಟಿ ಕೊಟ್ಟು ತಕ್ಷಣ ನಿರ್ಧಾರ ಮಾಡುವಂಥದ್ದೂ ಅಲ್ಲ. ಒಂದಿಷ್ಟು ಸಮಯ ತೆಗೆದುಕೊಂಡು, ಹೋಲಿಕೆ ಮಾಡಿ ನಿರ್ಧರಿಸುವುದು ಒಳ್ಳೆಯದು.

ಕಾಲೇಜು ಯಾವುದೇ ಆದರೂ ಅದರಲ್ಲಿ ಅನುಕೂಲ ಮತ್ತು ಅನಾನುಕೂಲತೆಗಳು ಇದ್ದೇ ಇರುತ್ತವೆ. ಸಾಧ್ಯವಾದಷ್ಟು ನ್ಯೂನತೆಗಳು ಕಡಿಮೆ ಇರುವಂತಹ ಕಾಲೇಜ್ ಅನ್ನು ಆಯ್ಕೆ ಮಾಡಿ. ಒಂದೊಳ್ಳೆ ಕಾಲೇಜಿನ ಆಯ್ಕೆ ಮಾಡಿಕೊಂಡರಷ್ಟೆ ಸಾಲದು, ಉನ್ನತ ಮಟ್ಟಕ್ಕೇರಬೇಕಾದರೆ, ಅಂದುಕೊಂಡದ್ದನ್ನು ಸಾಧಿಸಬೇಕಾದರೆ ನಿಮ್ಮ ಪರಿಶ್ರಮ ಬೇಕೇಬೇಕು.

ಕಲಿಕಾ ಪ್ರಾವೀಣ್ಯಕ್ಕೆ ಕೃತಕ ಬುದ್ಧಿಮತ್ತೆ

ಎಸ್.ಜಿ. ಕೃಷ್ಣ



ಕಲಿಕೆಯಲ್ಲಿ ಬಹಳಷ್ಟು ಮಾದರಿಗಳಿವೆ. ಈಗಂತೂ ತಂತ್ರಜ್ಞಾನ ಆಧಾರಿತ ಮಾದರಿಗಳು ಹೆಚ್ಚು ಜನಪ್ರಿಯವಾಗಿದ್ದು, ವಿದ್ಯಾರ್ಥಿಗಳು ಕಲಿಕೆಯಲ್ಲಿ ಮಗ್ನರಾಗುವಂತೆ ಮಾಡಲು ಹಲವಾರು ಮಾದರಿಗಳನ್ನು ಅಭಿವೃದ್ಧಿಪಡಿಸಲಾಗಿದೆ. ಬರವಣಿಗೆಯಲ್ಲದೇ, ದೃಶ್ಯ ಮತ್ತು ಶ್ರಾವ್ಯ ಹಾಗೂ ಆಂಗಿಕ ಭಾಷೆಯ ಮೂಲಕವೂ ವಿದ್ಯಾರ್ಥಿಗಳಿಗೆ ಬೋಧನೆಯನ್ನು ಮಾಡಬೇಕಾಗುತ್ತದೆ. ಇದರ ಜೊತೆಗೆ ವಿದ್ಯಾರ್ಥಿಯು ಕಲಿತಿರುವ ಕೌಶಲಗಳನ್ನು ಸರಿಯಾದ ರೀತಿಯಲ್ಲಿ ಬಳಸಲು ಉತ್ತೇಜನ ನೀಡಬೇಕಾಗುತ್ತದೆ. ಅಂತಹ ವಾತಾವರಣವನ್ನು ನಿರ್ಮಾಣ ಮಾಡಬೇಕಾಗುತ್ತದೆ. ಇದರಿಂದ ಹೆಚ್ಚಿನ ಮಟ್ಟದಲ್ಲಿ ಫಲಿತಾಂಶವನ್ನು ನಿರೀಕ್ಷೆ ಮಾಡಬಹುದು.

ಈ ನಿಟ್ಟಿನಲ್ಲಿ ಕೃತಕ ಬುದ್ಧಿಮತ್ತೆ (ಎಐ), ವರ್ಚುವಲ್ ರಿಯಾಲಿಟಿ (ವಿಆರ್) ಮತ್ತು ಎಆರ್‌ನಂತಹ ತಂತ್ರಜ್ಞಾನಗಳು ಇ- ಕಲಿಕೆಯಲ್ಲಿ ಹೆಚ್ಚಿನ ಮಟ್ಟದ ಬದಲಾವಣೆಯನ್ನು ತಂದಿವೆ. ಇದು ವಿದ್ಯಾರ್ಥಿಯು ಕಲಿಕೆಯಲ್ಲಿ ಹೆಚ್ಚು ತಲ್ಲೀನವಾಗುವಂತೆ ಪ್ರೇರೇಪಿಸುತ್ತದೆ. ಉದಾಹರಣೆಗೆ ವಿದೇಶಿ ಭಾಷೆಯನ್ನು ಒಬ್ಬ ವಿದ್ಯಾರ್ಥಿಗೆ ಕಲಿಸಬೇಕಾದರೆ ಕೋರ್ಸ್‌ನಲ್ಲಿರುವ ವಿಷಯಗಳ ಜೊತೆ ಇವೆಲ್ಲ ತಂತ್ರಜ್ಞಾನಗಳನ್ನು ಬಳಸಿ ಬೋಧನೆ ಮಾಡಬೇಕಾಗುತ್ತದೆ. ಹಾಗೆಯೇ ಕಲಿತಿರುವುದನ್ನು ಬಳಸುವಂತಹ ವಾತಾವರಣ ಕಲ್ಪಿಸಬೇಕಾಗುತ್ತದೆ. ನಂತರ ವಿದ್ಯಾರ್ಥಿಯು ಅದನ್ನು ಈ ಜಗತ್ತಿಗೆ ತೆರೆದುಕೊಂಡು ಕೌಶಲಗಳ ಬಳಕೆ ಮಾಡುತ್ತ ಅದರಲ್ಲಿ ಪಾರಂಗತನಾಗಬೇಕಾಗುತ್ತದೆ. ಈ ನಿಟ್ಟಿನಲ್ಲಿ ಬರವಣಿಗೆ, ದೃಶ್ಯ- ಶ್ರಾವ್ಯ, ಆಂಗಿಕ ಭಾಷೆಯ ಬಳಕೆ ಅತ್ಯಗತ್ಯ.

ಚಟುವಟಿಕೆಯನ್ನು ಹೆಚ್ಚಿಸಬೇಕು: ವಿದ್ಯಾರ್ಥಿಗೆ ಹೊಸ ವಿಷಯವನ್ನು ಕಲಿಸಬೇಕಾದರೆ ನಿರಂತರ ಚಟುವಟಿಕೆಗಳಲ್ಲಿ ಪಾಲ್ಗೊಳ್ಳುವಂತಹ ವಾತಾವರಣ ಸೃಷ್ಟಿಸಬೇಕು. ಅಂದರೆ ಬೇರೆಯವರ ಜೊತೆಗೆ ಹೆಚ್ಚು ಸಂವಾದ ನಡೆಸುವಂತಹ, ಸಮಾಜದಲ್ಲಿ ಏನು ನಡೆಯುತ್ತದೆಯೋ ಅಂತಹ ವಾತಾವರಣ ಇರಬೇಕು. ಉದಾಹರಣೆಗೆ ಕಚೇರಿಯಲ್ಲಿ ಇತರ ಉದ್ಯೋಗಿಗಳ ಜೊತೆ ನೇರಾ ನೇರ ಸಂವಹನ ನಡೆಸುವಂತಹ ವಾತಾವರಣಕ್ಕೆ ಹೊಂದಿಕೊಳ್ಳಬೇಕಾದರೆ ಅಂತಹ ಕೌಶಲವನ್ನು ದೃಶ್ಯ- ಶ್ರಾವ್ಯದ ಮೂಲಕ ಕಲಿಸುವ ಪದ್ಧತಿ ನೆರವಾಗುತ್ತದೆ. ವಿದ್ಯಾರ್ಥಿ ಕಂಪ್ಯೂಟರ್ ಮೂಲಕ ಕಲಿತಿದ್ದನ್ನು ವಾಸ್ತವತೆಗೆ ತೆರೆದುಕೊಂಡು ಅಭ್ಯಾಸ ಮಾಡಿದರೆ ಇಂತಹ ಕೌಶಲ ಸಿದ್ಧಿಸುತ್ತದೆ.

ಮಾಡಿ ತಿಳಿ: ನೋಡಿ ಕಲಿತಿದ್ದನ್ನು ಮಾಡಿ ತಿಳಿಯಬೇಕು. ಏಕಾಗ್ರತೆ ಅಥವಾ ಕಲಿಕಾ ವಿಷಯದಲ್ಲಿ ತಲ್ಲೀನರಾಗಬೇಕಾದರೆ ಅಧ್ಯಯನದಲ್ಲಿ ಕಲಿತ ವಿಷಯವನ್ನು ಅಥವಾ ನೋಡಿ ಕಲಿತಿದ್ದನ್ನು ಅಭ್ಯಾಸ ಮಾಡಿ ಪ್ರಯೋಗಕ್ಕೆ ಇಳಿಸಬೇಕು. ಉದಾಹರಣೆಗೆ ಸಾಫ್ಟ್‌ವೇರ್ ಮೂಲಕ ಸಮಸ್ಯೆ ಬಗೆಹರಿಸುವುದನ್ನು ಕಲಿತಿರಬಹುದು. ಆದರೆ ಅದನ್ನು ನಿಜವಾದ ಕೆಲಸದ ವಾತಾವರಣಕ್ಕೆ ಅನ್ವಯಿಸಬೇಕು. ಪಠ್ಯದಲ್ಲಿ ಅಧ್ಯಯನದ ವಿಷಯದ ಜೊತೆಗೆ ವರ್ಚುವಲ್ ತರಗತಿ ಮಾದರಿಯನ್ನು ಅಳವಡಿಸಿದರೆ ಇಂತಹ ಕೌಶಲವನ್ನು ಕಲಿಯಬಹುದು. ಹಾಗೆಯೇ ಪ್ರಯೋಗಾಲಯದಲ್ಲಿ ಕಲಿತಿದ್ದರ ಜೊತೆಗೆ ಇತರ ಕೌಶಲಗಳನ್ನು ಸೇರಿಸಿದರೆ ಹೊಸ ಅನುಭವ ಪಡೆದು ಭವಿಷ್ಯದ ಸವಾಲುಗಳನ್ನು ಎದುರಿಸಲು ಸನ್ನದ್ಧರಾಗಬಹುದು.

ಆಂತರಿಕ ಚಟುವಟಿಕೆ: ತಾಂತ್ರಿಕ ಕೌಶಲದ ಕುರಿತು ಕಲಿಕಾರ್ಥಿಯು ತಕ್ಷಣದ ಪ್ರತಿಕ್ರಿಯೆ ನೀಡಬೇಕಾದರೆ ಪರಸ್ಪರ ಪೂರಕ ಚಟುವಟಿಕೆಗಳಲ್ಲಿ ನುರಿತಿರಬೇಕು. ಅಂದರೆ ಸಾಮಾಜಿಕ ಜಾಲತಾಣವನ್ನು ನಿರ್ವಹಿಸುವ ಕೌಶಲ ಕಲಿತಿದ್ದರೆ ಮಾತ್ರ ಅದರ ಕುರಿತು, ಅದರಲ್ಲಿ ಅಡಗಿರುವ ಟೂಲ್‌ಗಳ ಬಗ್ಗೆ ಮಾತನಾಡಲು ಸಾಧ್ಯ. ಈ ನಿಟ್ಟಿನಲ್ಲಿ ಕೃತಕ ಬುದ್ಧಿಮತ್ತೆ ವಿದ್ಯಾರ್ಥಿಯ ನೆರವಿಗೆ ಬರುತ್ತದೆ. ನಿಜವಾದ ಕಾರ್ಯಕ್ಷೇತ್ರದಲ್ಲಿ ಯಾವೆಲ್ಲ ಸಮಸ್ಯೆಗಳನ್ನು ಎದುರಿಸಬೇಕು ಎಂಬಂತಹ ವಾತಾವರಣವನ್ನು ಕೃತಕ ಬುದ್ಧಿಮತ್ತೆ ಬಳಸಿ ಸೃಷ್ಟಿಸಬಹುದು. ಆಗ ವಿದ್ಯಾರ್ಥಿಗೆ ಅದರ ಒಳಹೊರಗು ಅರ್ಥವಾಗುತ್ತದೆ.

ವಿದ್ಯಾರ್ಥಿ ತಾನು ಕಲಿತಿರುವುದನ್ನು ಪದೇ ಪದೇ ಪುನರಾವರ್ತಿಸಬೇಕಾಗುತ್ತದೆ. ಇದರಿಂದ ಆ ವಿಷಯದಲ್ಲಿ ಪ್ರಾವೀಣ್ಯತೆ ಸಾಧಿಸಬಹುದು; ಅದನ್ನು ಪರಿಣಾಮಕಾರಿಯಾಗಿ ಬಳಸಬಹುದು. ಇದಕ್ಕಾಗಿ ಅಂದರೆ ಹೆಚ್ಚು ಪರಿಣಾಮಕಾರಿ ಕಲಿಕೆಗೆ ಅಲ್ಪಾವಧಿ ಕೋರ್ಸ್‌ಗಳ ಮೊರೆ ಹೋಗಬಹುದು.

ವಿದ್ಯಾರ್ಥಿ ವೇತನ ಕೈಪಿಡಿ

ಅಬ್ದುಲ್ ಕಲಾಂ ಟೆಕ್ನಾಲಜಿ ಇನೋವೇಷನ್ ನ್ಯಾಷನಲ್ ಫೆಲೋಶಿಪ್ 2021-22

ವಿವರ: ಇಂಡಿಯನ್ ನ್ಯಾಷನಲ್ ಅಕಾಡೆಮಿ ಆಫ್ ಎಂಜಿನಿಯರಿಂಗ್ ಅರ್ಜಿಗಳನ್ನು ಆಹ್ವಾನಿಸಿದೆ.

ಅರ್ಹತೆ: ಸರ್ಕಾರಿ ಸಂಸ್ಥೆಯಲ್ಲಿ ಎಂಜಿನಿಯರಿಂಗ್ ಮುಗಿಸಿರಬೇಕು. ಕನಿಷ್ಠ ಪದವಿ ಮುಗಿಸಿರಬೇಕು. ಕನಿಷ್ಠ 5 ವರ್ಷ ಕೆಲಸದಲ್ಲಿ ಸೇವೆ ಸಲ್ಲಿಸಿರಬೇಕು. ಇದುವರೆಗೆ ಯಾವುದೇ ಫೆಲೋಶಿಪ್ ಅನ್ನು ಪಡೆದಿರಬಾರದು.

ಆರ್ಥಿಕ ಸಹಾಯ: ತಿಂಗಳಿಗೆ ₹ 25 ಸಾವಿರ

ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: 30 ಜೂನ್, 2021

ಅರ್ಜಿ ಸಲ್ಲಿಕೆ ವಿಧಾನ: ಅಂಚೆ ಮೂಲಕ ಮಾತ್ರ

ಹೆಚ್ಚಿನ ಮಾಹಿತಿಗೆ: www.b4s.in/praja/AKT6

ಕೀಪ್ ಇಂಡಿಯಾ ಸ್ಮೈಲಿಂಗ್ ಫೌಂಡೇಷನ್ ಸ್ಕಾಲರ್‌ಶಿಪ್ ಪ್ರೋಗ್ರಾಂ

ವಿವರ: ಕೋಲ್ಗೇಟ್-ಪಾಮೋಲಿವ್ ಸಂಸ್ಥೆಯು ವಿದ್ಯಾರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಿದೆ.

ಅರ್ಹತೆ: 2020ರಲ್ಲಿ 10ನೇ ತರಗತಿಯಲ್ಲಿ ಕನಿಷ್ಠ ಶೇ 75 ಅಂಕಗಳು ಮತ್ತು ಪಿಯುಸಿಯಲ್ಲಿ ಶೇ 60ರಷ್ಟು ಅಂಕಗಳನ್ನು ಪಡೆದವರು ಅರ್ಜಿಗಳನ್ನು ಸಲ್ಲಿಸಬಹುದು. ಕುಟುಂಬದ ವಾರ್ಷಿಕ ಆದಾಯವು ₹ 5 ಲಕ್ಷಕ್ಕಿಂತ ಕಡಿಮೆ ಇರಬೇಕು.

ಆರ್ಥಿಕ ಸಹಾಯ: ಮೂರು ವರ್ಷಗಳವರೆಗೆ ವರ್ಷಕ್ಕೆ ₹ 30 ಸಾವಿರ

ಅರ್ಜಿ ಸಲ್ಲಿಕೆಗೆ ಕೊನೆಯ ದಿನಾಂಕ: 30 ಜೂನ್, 2021

ಅರ್ಜಿ ಸಲ್ಲಿಕೆ ವಿಧಾನ: ಆನ್‌ಲೈನ್ ಮೂಲಕ

ಹೆಚ್ಚಿನ ಮಾಹಿತಿಗೆ: www.b4s.in/praja/KISSP01

ಕೃಪೆ: buddy4study.com

ಭೌತಶಾಸ್ತ್ರ ಎಂಎಸ್‌ಸಿಯಲ್ಲಿ ಹೆಚ್ಚು ಅವಕಾಶಗಳಿವೆಯೇ?

ನಿಮ್ಮ ಪ್ರಶ್ನೆಗೆ ತಜ್ಞರ ಉತ್ತರ



ವಿ. ಪ್ರದೀಪ್‌ಕುಮಾರ್

1. ನಾನು ಎರಡನೇ ವರ್ಷದ ಬಿಎಸ್‌ಸಿಯಲ್ಲಿ ಓದುತ್ತಿದ್ದು ಗಣಿತದಲ್ಲಿ ಎಂಎಸ್‌ಸಿ ಕೋರ್ಸ್ ಅನ್ನು ಮಾಡಲಿಚ್ಛಿಸಿದ್ದೇನೆ. ಆದರೆ, ನನ್ನ ಹಿತೈಷಿಗಳು ಭೌತಶಾಸ್ತ್ರದಲ್ಲಿ ಮಾಡಿದರೆ ಹೆಚ್ಚಿನ ಅವಕಾಶಗಳಿವೆ ಎಂಬ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ಯಾವುದನ್ನು ತೆಗೆದುಕೊಳ್ಳಲಿ?

ಪೂರ್ಣಿಮ ಎನ್. ಮಾಳಿಗೇರ್, ಊರು ತಿಳಿಸಿಲ್ಲ

ಎಂಎಸ್‌ಸಿ ಗಣಿತದಲ್ಲಿಯೂ ಸಾಕಷ್ಟು ಅವಕಾಶಗಳಿವೆ. ಖಾಸಗಿ ಕ್ಷೇತ್ರದ ಐಟಿ, ರಿಸರ್ಚ್ ಕಂಪನಿಗಳಲ್ಲಿ, ಸರ್ಕಾರಿ ವಲಯದಲ್ಲಿ ವೃತ್ತಿಯ ಅವಕಾಶಗಳಿರುತ್ತವೆ. ಇದಲ್ಲದೆ, ಡಾಕ್ಟರೇಟ್ ಮಾಡಿ ಅಥವಾ ಎಂಎಸ್‌ಸಿ ನಂತರವೂ ಶಿಕ್ಷಕ ವೃತ್ತಿಯ ಅವಕಾಶಗಳಿವೆ. ಇದಲ್ಲದೆ, ಐಎಎಸ್ ಕೂಡಾ ಮಾಡಬಹುದು. ಹಾಗಾಗಿ, ನಿಮಗೆ ಒಲವಿರುವ ವಿಷಯವನ್ನು ಆರಿಸುವುದು ಉತ್ತಮ.

2. ದ್ವಿತೀಯ ಪಿ.ಯು.ಸಿ. (ಕಾಮರ್ಸ್) ನಂತರ ಏನು ಮಾಡಬಹುದು?

ಮೊಹಮದ್ ಅಯಾನ್, ಊರಿನ ಹೆಸರು ತಿಳಿಸಿಲ್ಲ.

ದ್ವಿತೀಯ ಪಿಯುಸಿ (ಕಾಮರ್ಸ್) ನಂತರ ಸಿಎ, ಎಸಿಎಸ್, ಐಸಿಡಬ್ಲ್ಯುಎ, ಬಿಕಾಂ ಅಥವಾ ಬಿಸಿಎ ಮೊದಲಾದ ಅವಕಾಶಗಳಿವೆ. ನಿಮಗೆ ಇಷ್ಟವಿರುವ ವೃತ್ತಿಯನ್ನು ಮೊದಲು ನಿರ್ಧರಿಸಿ ಅದರಂತೆ ಕೋರ್ಸ್ ಆಯ್ಕೆ ಉತ್ತಮ.

3. ನಾನು ಮೆಕ್ಯಾನಿಕಲ್ ಎಂಜಿನಿಯರಿಂಗ್ ಮಾಡಿದ್ದೇನೆ. ಸ್ಪರ್ಧಾತ್ಮಕ ಪರೀಕೆಗಳಲ್ಲಿ ಆಸಕ್ತಿ ಇದೆ. ಶಿಕ್ಷಣ ಸಂಬಂಧಿತ ಸಾಲವಿರುವುದರಿಂದ ಮೊದಲು ಕೆಲಸಕ್ಕೆ ಸೇರಿ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ತಯಾರಾಗಲೇ? ಗೊಂದಲವಿದೆ; ಸಹಾಯ ಮಾಡಿ.

ಸಾಹಿತ್ಯ, ಕೊಣ್ಣೂರ್

ನೀವು ಸಾಲ ಪಡೆದಿರುವ ಸಂಸ್ಥೆಯ ಜೊತೆ ಮಾತನಾಡಿ ಸಾಲ ಮರುಪಾವತಿ ಅವಧಿಯನ್ನು ವಿಸ್ತರಿಸಬಹುದು. ಬ್ಯಾಂಕ್‌ಗಳಲ್ಲಿ ಇಂತಹ ವ್ಯವಸ್ಥೆ ಇದೆ. ನಿಮಗೆ ಯಾವ ಸ್ಪರ್ಧಾತ್ಮಕ ಪರೀಕ್ಷೆಯಲ್ಲಿ ಆಸಕ್ತಿ ಇದೆ ಎನ್ನುವ ಮಾಹಿತಿ ಇಲ್ಲ, ಹಾಗಾಗಿ, ಕೆಲಸಕ್ಕೆ ಸೇರಿಯೂ ಕೂಡ ಸಮಯದ ನಿರ್ವಹಣೆಯೊಂದಿಗೆ ಸ್ಪರ್ಧಾತ್ಮಕ ಪರೀಕ್ಷೆಗೆ ತಯಾರಾಗಬಹುದು. ಅಂತಿಮ ನಿರ್ಧಾರ ನಿಮ್ಮ ವೈಯಕ್ತಿಕ ಆದ್ಯತೆಯಂತೆ ಇರಲಿ.

4. ನಾನು 10ನೇ ತರಗತಿಯ ವಿದ್ಯಾರ್ಥಿ ಹಾಗೂ ಐಎಎಸ್ ಮಾಡಲು ಬಯಸಿದ್ದೇನೆ. ನಾನೊಬ್ಬ ಕನ್ನಡ ಮಾಧ್ಯಮ ವಿದ್ಯಾರ್ಥಿ. ಹಾಗಾಗಿ ನನಗೆ ವಿಜ್ಞಾನ ವಿಭಾಗದಲ್ಲಿ ಆಸಕ್ತಿ ಇಲ್ಲ. ನಾನು ಯಾವ ವಿಭಾಗ ಆರಿಸಿಕೊಳ್ಳಬೇಕು ಎಂಬುದನ್ನು ತಿಳಿಸಿ.

ಹೆಸರು, ಊರು ತಿಳಿಸಿಲ್ಲ

ಐಎಎಸ್ ಮಾಡಿದ ಮೇಲೆ ಅಖಿಲ ಭಾರತ ಮಟ್ಟದಲ್ಲಿ ಯಾವ ಸರ್ವೀಸ್ ವಿಭಾಗಕ್ಕೆ ಸೇರಬೇಕು ಎನ್ನುವ ಯೋಜನೆಯಿದ್ದರೆ, ಅದಕ್ಕೆ ಅನುಗುಣವಾಗಿ ಪಿಯುಸಿ ವಿಷಯಗಳ ಆಯ್ಕೆ ಸುಲಭ. ನೀವು ಪಿಯುಸಿಯಲ್ಲಿ ಆರ್ಟ್ಸ್ ಅಥವಾ ಕಾಮರ್ಸ್ ತೆಗೆದುಕೊಳ್ಳಬಹುದು.

5. ನಾನು 10ನೇ ತರಗತಿಯಲ್ಲಿ ಓದುತ್ತಿದ್ದೇನೆ. 10ನೇ ತರಗತಿ ಆದ ಮೇಲೆ ಯಾವ ವಿಭಾಗ ತೆಗೆದುಕೊಳ್ಳಬೇಕು ಎಂಬ ಗೊಂದಲದಲ್ಲಿದ್ದೀನಿ. ನಾನು ಯಾವ ವಿಭಾಗ ತೆಗೆದುಕೊಳ್ಳುವುದು ಸೂಕ್ತ?

ಸುಪ್ರೀತಾ, ಊರಿನ ಹೆಸರಿಲ್ಲ

ಕೋರ್ಸ್ ನಿರ್ಧಾರಕ್ಕೆ ಮುಂಚೆ ನಿಮ್ಮ ವೃತ್ತಿ ಜೀವನದ ಬಗ್ಗೆ ಚಿಂತಿಸಿ. ನಿಮಗೆ ಇಷ್ಟವಿರುವ, ಒಲವಿರುವ, ಸ್ವಾಭಾವಿಕ ಪ್ರತಿಭೆಯಿರುವ ವೃತ್ತಿಯನ್ನು ಆರಿಸುವುದು ಒಳ್ಳೆಯದು. ಅಂದರೆ ಡಾಕ್ಟರ್, ಎಂಜಿನಿಯರ್, ವಕೀಲ, ವಿಜ್ಞಾನಿ, ಶಿಕ್ಷಕ ವೃತ್ತಿ, ಫ್ಯಾಷನ್ ಡಿಸೈನರ್, ಆರ್ಕಿಟೆಕ್ಟ್, ಪತ್ರಕರ್ತ, ಐಎಎಸ್ ಸೇರಿದಂತೆ ನೂರಾರು ವೃತ್ತಿಗಳಿವೆ. ವೃತ್ತಿಯ ಆಯ್ಕೆಯ ನಂತರ ಪಿಯುಸಿ ವಿಭಾಗದ ಆಯ್ಕೆಯಲ್ಲಿ ಗೊಂದಲವಿರುವುದಿಲ್ಲ.

6. ನನಗೆ ಐಎಎಸ್ ಆಗಬೇಕು ಅಂತ ಆಸೆ. 10 ನೇ ತರಗತಿ ನಂತರ ಬಿಎ ಅಥವಾ ಬಿಎಸ್‌ಸಿ ಮಾಡಬೇಕೇ? ಅದನ್ನು ಓದುವುದಕ್ಕೆ ಎಷ್ಟು ಖರ್ಚಾಗುತ್ತದೆ? ಮತ್ತೆ ಕೆಲಸ ಸಿಕ್ಕಿದ ಮೇಲೆ ಕರ್ನಾಟಕದಲ್ಲಿ ಕೆಲಸ ಮಾಡಬೇಕು ಅಂದರೆ ಏನು ಮಾಡಬೇಕು?

ಐಎಎಸ್ ಪರೀಕ್ಷೆಯನ್ನು ಯಾವುದೇ ಪದವಿಯ ನಂತರ ಮಾಡಬಹುದು. ಹಾಗಾಗಿ ಬಿಎ ಅಥವಾ ಬಿಎಸ್‌ಸಿ ಆಯ್ಕೆ ನಿಮ್ಮದು. ಐಎಎಸ್ ಪರೀಕ್ಷೆಯ ತಯಾರಿಗೆ ನೀವು ತರಬೇತಿ ತೆಗೆದುಕೊಳ್ಳಬಹುದು ಅಥವಾ ಅಧ್ಯಯನಕ್ಕೆ ಬೇಕಾದ ಪುಸ್ತಕಗಳನ್ನು ಖರೀದಿಸಿ (ಸುಮಾರು 20 ಸಾವಿರ) ನೀವೇ ತಯಾರಿ ಮಾಡಿಕೊಳ್ಳಬಹುದು. ತರಬೇತಿ ತೆಗೆದುಕೊಂಡರೆ ಸುಮಾರು 1 ರಿಂದ 1.5 ಲಕ್ಷ ರೂಪಾಯಿ ಖರ್ಚಾಗಬಹುದು. ಐಎಎಸ್ ನೇಮಕಾತಿಯ ಉದ್ದೇಶ ಮತ್ತು ನಿಯಮಗಳ ಅನುಸಾರ, ಅಧಿಕಾರಿಗಳು ತಮ್ಮ ರಾಜ್ಯಕ್ಕೆ ಸಾಮಾನ್ಯವಾಗಿ ನೇಮಕವಾಗುವುದಿಲ್ಲ.

7. ನಾನು ಬಿಕಾಂ ಮಾಡಿ ಐಸಿಡಬ್ಲ್ಯುಎ ಕೋರ್ಸ್‌ನ ಇಂಟರ್‌ಮೀಡಿಯೆಟ್ ಒಂದು ಗ್ರೂಪ್ ಮುಗಿಸಿದ್ದೇನೆ ಹಾಗೂ ಚಾರ್ಟರ್ಡ್ ಅಕೌಂಟೆಂಟ್ ಕೆಳಗೆ ಕೆಲಸ ಮಾಡುತ್ತಿದ್ದೆ. ಲಾಕ್‌ಡೌನ್ ಕಾರಣದಿಂದ ಈಗ ಅದೂ ಇಲ್ಲದೆ ಮನೆಯಲ್ಲಿದ್ದೇನೆ. ಉಳಿದಿರುವ ಕೋರ್ಸ್ ಮುಗಿಸಿ ಕೆಲಸಕ್ಕೆ ಸೇರಲು ಇನ್ನೂ ಎರಡು ವರ್ಷಗಳಾಗುತ್ತದೆ. ನಿಮ್ಮ ಸಲಹೆ ಬೇಕು.

ಸಚಿನ್, ಊರಿನ ಹೆಸರು ತಿಳಿಸಿಲ್ಲ

ಸಾಧ್ಯವಾದರೆ, ನಿಮ್ಮ ವೃತ್ತಿ ಸಂಬಂಧಿತ ವ್ಯಕ್ತಿತ್ವ ವಿಕಸನದ ಕೋರ್ಸ್ ಮಾಡಿ. ಆನ್‌ಲೈನ್ ಶುಲ್ಕ ರಹಿತ ಕೋರ್ಸ್‌ಗಳೂ ಇವೆ. ಈ ಕೋರ್ಸ್ ಮತ್ತು ಬಿಕಾಂ ಕೋರ್ಸ್ ಆಧಾರದ ಮೇಲೆ ಕೆಲಸಕ್ಕೆ ಸೇರಿ, ಐಸಿಡಬ್ಲ್ಯುಎ ಮುಂದುವರೆಸಿ. ಈ ಕಾರ್ಯದಲ್ಲಿ ಸಮಯದ ನಿರ್ವಹಣೆ ಅತ್ಯಗತ್ಯ.

8. ಬಿಟೆಕ್ ಕೋರ್ಸ್ ಬಗ್ಗೆ ಮಾಹಿತಿ ನೀಡಿ. ಹಾಗೂ ಡಿ.ಫಾರ್ಮಾ ಕೋರ್ಸ್ ಉಪಯುಕ್ತತೆ ಬಗ್ಗೆ ತಿಳಿಸಿ.

ಗುರುದೇವ್ ಎಂ., ಊರು ತಿಳಿಸಿಲ್ಲ

ಬಿಟೆಕ್ ಕೋರ್ಸ್‌ನಲ್ಲಿ 100ಕ್ಕೂ ಹೆಚ್ಚು ಸ್ಪೆಷಲೈಸೇಶನ್‌ಗಳಿವೆ ಹಾಗೂ ದೇಶದಲ್ಲಿ 3500 ಕ್ಕೂ ಹೆಚ್ಚು ಕಾಲೇಜುಗಳಿವೆ. ಬಿಟೆಕ್ ಪಾಸಾದ ವಿದ್ಯಾರ್ಥಿಗಳಿಗೆ ಸಾಕಷ್ಟು ಬೇಡಿಕೆ ಇದೆ. ಎಂಜಿನಿಯರಿಂಗ್ ವೃತ್ತಿಗೆ ಮುಖ್ಯವಾಗಿ ಸಂವಹನ ಕೌಶಲ, ತಾರ್ಕಿಕ ಪ್ರತಿಪಾದನಾ ಕೌಶಲ ಅಂದರೆ ಸಮಸ್ಯೆಗಳನ್ನು ಅರ್ಥ ಮಾಡಿಕೊಂಡು ಪರಿಹಾರವನ್ನು ಒದಗಿಸೋ ಕೌಶಲ, ವಿಶ್ಲೇಷಣೆ ಮಾಡೋ ಕೌಶಲಗಳು ಬೇಕಾಗುತ್ತವೆ. ವೃತ್ತಿಯ ಯಶಸ್ವಿಗೆ ವಿದ್ಯಾರ್ಥಿಗಳು ಈ ಕೌಶಲಗಳನ್ನೂ ಸಹ ಬೆಳೆಸಿಕೊಳ್ಳಬೇಕು.

ಡಿಫಾರ್ಮಾ ಕೋರ್ಸ್ ನಂತರ ಸರ್ಕಾರಿ ಮತ್ತು ಖಾಸಗಿ ಆಸ್ಪತ್ರೆಗಳಲ್ಲಿ ಫಾರ್ಮಸಿಸ್ಟ್ ಆಗಿ ಕೆಲಸ ಮಾಡಬಹುದು. ನೋಂದಣಿ ನಂತರ, ಔಷಧದ ಅಂಗಡಿ ಇಟ್ಟು ವ್ಯಾಪಾರ ಮಾಡಬಹುದು.

9. ಪಿಯುಸಿ ನಂತರ ನಾನು ಆಯ್ಕೆ ಮಾಡಲು ಇಚ್ಛಿಸುವ ಕೋರ್ಸ್‌ಗೆ ಕಳಿಸಲು ನನ್ನ ತಂದೆಗೆ ಒಪ್ಪಿಗೆ ಇಲ್ಲ. ಅವರನ್ನು ಒಪ್ಪಿಸಲು ಸಾಧ್ಯವಾಗಿಲ್ಲ, ಏನು ಮಾಡಬೇಕು?

ಶಾಲಿನಿ ಎಂ. ಗೌಡ, ಊರು ತಿಳಿಸಿಲ್ಲ

ಎಲ್ಲಾ ಪೋಷಕರು ತಮ್ಮ ಮಕ್ಕಳ ಭವಿಷ್ಯ ಉಜ್ವಲವಾಗಿರಲಿ ಎಂದೇ ಬಯಸುತ್ತಾರೆ. ಬಹುಶಃ ನಿಮ್ಮ ತಂದೆಯವರಿಗೆ, ನೀವು ಇಚ್ಛಿಸುವ ಕೋರ್ಸ್ ಅನ್ನು ಯಶಸ್ವಿಯಾಗಿ ಪೂರೈಸಲು ಬೇಕಾದ ಸಾಮರ್ಥ್ಯಗಳು ನಿಮ್ಮಲ್ಲಿ ಇವೆಯೇ ಎನ್ನುವ ಅಥವಾ ಕೋರ್ಸ್ ಸಂಬಂಧಿತ ವೃತ್ತಿಗಳ ಬಗ್ಗೆ ಇನ್ನಿತರ ಸಂದೇಹಗಳಿರಬಹುದು. ಆದ್ದರಿಂದ, ಅವರ ಸಂದೇಹಗಳ, ಸಮಸ್ಯೆಗಳ ನಿವಾರಣೆಯನ್ನು ನೀವು ಮಾಡಲೇಬೇಕು. ಇದು ಸಾಧ್ಯವಾಗದಿದ್ದರೆ, ಶೈಕ್ಷಣಿಕ ಸಮಾಲೋಚಕರನ್ನು ಸಂಪರ್ಕಿಸಿ.

ನಿಮ್ಮ ಪ್ರಶ್ನೆಗೆ ತಜ್ಞರ ಉತ್ತರ

ವಿದ್ಯಾರ್ಥಿಗಳೇ,
ನಿಮ್ಮ ಮುಂದಿನ ಕೋರ್ಸ್ ಮತ್ತು ಸೂಕ್ತವಾದ ವೃತ್ತಿಯ ಆಯ್ಕೆ ಹಾಗೂ ಭವಿಷ್ಯವನ್ನು ರೂಪಿಸಿಕೊಳ್ಳುವ ಬಗ್ಗೆ ಗೊಂದಲಗಳಿವೆಯೇ? ಹಾಗಿದ್ದರೆ ನಮಗೆ ಬರೆಯಿರಿ. ನಿಮ್ಮ ಪ್ರಶ್ನೆಗಳಿಗೆ ಶಿಕ್ಷಣ ತಜ್ಞ ಮತ್ತು ವೃತ್ತಿ ಸಲಹೆಗಾರ **ವಿ. ಪ್ರದೀಪ್ ಕುಮಾರ್** ಉತ್ತರಿಸಲಿದ್ದಾರೆ. ಪ್ರಶ್ನೆಗಳನ್ನು shikshana@prajavani.co.in ಗೆ ಕಳಿಸಬಹುದು.

ಪೊಲೀಸ್ ಕಾನ್‌ಸ್ಟೇಬಲ್ ನೇಮಕಾತಿ ಪರೀಕ್ಷೆಯ ಮಾದರಿ ಪ್ರಶ್ನೆಗಳು

ಭಾಗ- 9

111. ವಿವಿಧೋದ್ದೇಶ ನದಿ ಕಣಿವೆ ಯೋಜನೆಯ ಉದ್ದೇಶ ಏನಾಗಿರುತ್ತದೆ?
ಎ) ನೀರಾವರಿ ಸೌಲಭ್ಯವನ್ನು ಒದಗಿಸುವುದು
ಬಿ) ಜಲ ವಿದ್ಯುಚ್ಛಕ್ತಿಯನ್ನು ಉತ್ಪಾದಿಸುವುದು
ಸಿ) ನದಿಗಳ ಪ್ರವಾಹವನ್ನು ನಿಯಂತ್ರಿಸುವುದು
ಡಿ) ಮೇಲ್ಕಂಡ ಎಲ್ಲವೂ

112. ಉತ್ಖನನ ಸಂದರ್ಭದಲ್ಲಿ ದೊರೆತ ಪುರಾತತ್ವ ಪಳೆಯುಳಿಕೆಗಳನ್ನು ಯಾವ ವಿಧಾನಗಳಿಂದ ವೈಜ್ಞಾನಿಕ ಪರೀಕ್ಷೆಗೆ ಒಳಪಡಿಸಿ ಅವುಗಳ ಕಾಲ ಮತ್ತು ಪ್ರಾಚೀನತೆಯನ್ನು ನಿರ್ಧರಿಸಲಾಗುತ್ತದೆ?
ಎ) ಕಾರ್ಬನ್ 14 ಮತ್ತು ಪೊಟ್ಯಾಷಿಯಂ
ಬಿ) ಕಾರ್ಬನ್ 25 ಮತ್ತು ಯುರೇನಿಯಂ
ಸಿ) ಸೋಡಿಯಂ ಮತ್ತು ಪೊಟ್ಯಾಷಿಯಂ
ಡಿ) ಲೇಸರ್ ಥೆರಪಿ ಮತ್ತು ಸ್ಕ್ಯಾನಿಂಗ್

113. ಗಾನಯೋಗಿ ಪಂಚಾಕ್ಷರಿ ಗವಾಯಿ ಅವರು ಯಾವ ಸಂಗೀತ ಪರಂಪರೆಗೆ ಸೇರಿದವರು?
ಎ) ಕಿರಾಣೆ ಘರಾಣೆ
ಬಿ) ಕರ್ನಾಟಕ ಸಂಗೀತ
ಸಿ) ಹಿಂದೂಸ್ತಾನಿ ಸಂಗೀತ
ಡಿ) ಕವ್ವಾಲಿ ಮತ್ತು ಗಜಲ್

114. ಕೆಳಗಿನವುಗಳನ್ನು ಹೊಂದಿಸಿ ಬರೆಯಿರಿ:

ಎ) ಚಾಂದ್ ಬರ್ದಾಯಿ	1) ವಿಕ್ರಮಾಂಕದೇವಚರಿತ
ಬಿ) ಬಿಲ್ಹಣ	2) ಅರ್ಥಶಾಸ್ತ್ರ
ಸಿ) ಕಲ್ಹಣ	3) ಪೃಥ್ವೀರಾಜರಾಸೋ
ಡಿ) ಕೌಟಿಲ್ಯ	4) ರಾಜತರಂಗಿಣಿ

ಎ) ಎ-1, ಬಿ-2, ಸಿ-3, ಡಿ-4
ಬಿ) ಎ-2, ಬಿ-4, ಸಿ-1, ಡಿ-3
ಸಿ) ಎ-3, ಬಿ-4, ಸಿ-2, ಡಿ-1
ಡಿ) ಎ-3, ಬಿ-1, ಸಿ-4, ಡಿ-2

115. ಈ ಕೆಳಗಿನ ಯಾವ ಪ್ರದೇಶವು ಕರ್ನಾಟಕದ ನವಶಿಲಾಯುಗ ತಾಣವಲ್ಲ?
ಎ) ಬಾದಾಮಿ ಬಿ) ಮಸ್ಕಿ
ಸಿ) ರಾಯಚೂರು ದೋ-ಆಬ್ ಡಿ) ಬಳ್ಳಾರಿ

116. ಸರಣಿ ಪೂರ್ಣಗೊಳಿಸಿ
0, 7, 26, 63, 124, 215, ...?
ಎ) 246 ಬಿ) 242
ಸಿ) 342 ಡಿ) 346

117. 10 ಜನರು 20 ಮನೆಗಳನ್ನು 30 ದಿನಗಳಲ್ಲಿ ನಿರ್ಮಿಸಿದರೆ, 5 ಜನರು 10 ಮನೆಗಳನ್ನು ನಿರ್ಮಿಸಲು ಎಷ್ಟು ದಿನ ಬೇಕಾಗುವುದು?
ಎ) 15 ದಿನಗಳು
ಬಿ) 10 ದಿನಗಳು
ಸಿ) 20 ದಿನಗಳು
ಡಿ) 30 ದಿನಗಳು

118. 'X' ಎಂಬಾತನು ಗಣಿತದಲ್ಲಿ ಪಡೆದ ಅಂಕಗಳ ಮೂರನೇ ಒಂದು ಭಾಗದಷ್ಟು ಅಂಕಗಳನ್ನು ಹಿಂದಿ ಭಾಷೆಯಲ್ಲಿ ಪಡೆದಿರುತ್ತಾನೆ. ಅವನು ಈ ಎರಡೂ ವಿಷಯಗಳನ್ನು ಸೇರಿಸಿ ಗಳಿಸಿದ ಒಟ್ಟು ಅಂಕಗಳು 120 ಆಗಿದ್ದಲ್ಲಿ, ಆತನು ಹಿಂದಿ ಭಾಷೆಯಲ್ಲಿ ಪಡೆದ ಅಂಕಗಳೆಷ್ಟು?
ಎ) 30 ಬಿ) 50
ಸಿ) 40 ಡಿ) 60

119. ಬಿಟ್ಟ ಸ್ಥಳ ಬರ್ತಿ ಮಾಡಿ. 3X3 = 18, 4X4 = 32, 5X5 = 50 ಆದರೆ, 6X6 = ...?
ಎ) 36 ಬಿ) 72
ಸಿ) 12 ಡಿ) 24

120. ಸಾಂಕೇತಿಕ ಭಾಷೆಯಲ್ಲಿ A ಯು C, C ಯು E ಮತ್ತು D ಯು F ಆದರೆ X ಏನಾಗುತ್ತದೆ?
ಎ) Y ಬಿ) W
ಸಿ) Z ಡಿ) V

121. ಅಮೆರಿಕದ ಖಾಸಗಿ ಬಾಹ್ಯಾಕಾಶ ಸಂಸ್ಥೆ ಯಾವುದು?
ಎ) ಜಾಕ್ಸಾ ಬಿ) ರೂಪೋಸ್ಕೋಸ್
ಸಿ) ನಾಸಾ ಡಿ) ಸ್ಪೇಸ್ ಎಕ್ಸ್

122. UNESCO ವಿಸ್ತೃತ ರೂಪವೇನು?
ಎ) United Nations Educational, Scientific and Cultural Organization
ಬಿ) United Nations Economical, Sericultural and Creative Organization
ಸಿ) United Nations Electronical, Social and Chemical Organization
ಡಿ) United Nations Emotional, Socialogical and Crime Organization

123. ವಿಮಾನಗಳಲ್ಲಿ ಕಂಡುಬರುವ 'Black Box' ನ ನಿಜವಾದ ಬಣ್ಣ ಯಾವುದು?
ಎ) ಬಿಳಿ ಬಿ) ಹಸಿರು
ಸಿ) ಕಿತ್ತಳೆ ಬಣ್ಣ ಡಿ) ಕಪ್ಪು

124. ಚೀನಾ ದೇಶದ ಅಧಿಕೃತ ಭಾಷೆ ಯಾವುದು?
ಎ) ಸ್ಪ್ಯಾನಿಷ್ ಬಿ) ಮ್ಯಾಂಡರಿನ್
ಸಿ) ಇಂಗ್ಲಿಷ್ ಡಿ) ನೇಪಾಳಿ

125. ನೊವಾಕ್ ಜೋಕೋವಿಚ್ ಯಾವ ಕ್ರೀಡೆಗೆ ಸಂಬಂಧಪಟ್ಟಿದ್ದಾರೆ?
ಎ) ಟೆನಿಸ್ ಬಿ) ಕ್ರಿಕೆಟ್
ಸಿ) ಫುಟ್‌ಬಾಲ್ ಡಿ) ಹಾಕಿ

ಭಾಗ- 8ರ ಉತ್ತರ: 96. ಡಿ, 97. ಬಿ, 98. ಎ, 99. ಬಿ, 100. ಡಿ, 101. ಎ, 102. ಬಿ, 103. ಸಿ, 104. ಸಿ, 105. ಡಿ, 106. ಎ, 107. ಬಿ, 108. ಡಿ, 109. ಬಿ, 110. ಡಿ

(ಪ್ರಶ್ನೋತ್ತರ ಸಂಯೋಜನೆ: ಸ್ಲೇಟ್ ಸ್ಪರ್ಧಾತ್ಮಕ ಪರೀಕ್ಷೆಗಳ ತರಬೇತಿ ಕೇಂದ್ರ, ಧಾರವಾಡ)

ಶಾಲಾ– ಕಾಲೇಜುಗಳು ಬಂದ್ ಆಗಿದ್ದರೂ ಕೋವಿಡ್ ಎರಡನೇ ಅಲೆಯಲ್ಲಿ 2 ಲಕ್ಷಕ್ಕೂ ಅಧಿಕ ಮಕ್ಕಳಿಗೆ ಸೋಂಕು

ಪೋಷಕರ ಮನೆ ಆರೈಕೆ: ಮಕ್ಕಳಿಗೆ ಸೋಂಕು

• ವರುಣ ಹೆಗಡೆ

ಬೆಂಗಳೂರು: ಶಾಲಾ– ಕಾಲೇಜುಗಳು ಬಾಗಿಲು ಮುಚ್ಚಿದ್ದರೂ ಕೋವಿಡ್ ಎರಡನೇ ಅಲೆಯಲ್ಲಿ ಈಗಾಗಲೇ 2 ಲಕ್ಷಕ್ಕೂ ಅಧಿಕ ಮಕ್ಕಳು ಕೋವಿಡ್ ಪೀಡಿತರಾಗಿದ್ದಾರೆ. ಮನೆಯ ಮಟ್ಟದಲ್ಲಿ ಕಾಯಿಲೆಯು ವೇಗವಾಗಿ ಹರಡಿರುವುದೇ ಇದಕ್ಕೆ ಪ್ರಮುಖ ಕಾರಣ ಎಂದು ವೈದ್ಯಕೀಯ ತಜ್ಞರು ವಿಶ್ಲೇಷಿಸಿದ್ದಾರೆ.

ಕೋವಿಡ್ ಕಾಯಿಲೆಯು ಎಲ್ಲ ವಯೋಮಾನದವರನ್ನೂ ಕಾಡಿದೆ. ಮೊದಲ ಅಲೆಯಲ್ಲಿ ಹಿರಿಯ ನಾಗರಿಕರು ಹೆಚ್ಚಿನ ಸಂಖ್ಯೆಯಲ್ಲಿ ಅಸ್ವಸ್ಥರಾಗಿದ್ದರು. ಎರಡನೇ ಅಲೆಯಲ್ಲಿ ಮಧ್ಯ ವಯಸ್ಕರು ಅಧಿಕ ಸಂಖ್ಯೆಯಲ್ಲಿ ಇದರ ತೀವ್ರತೆ ಎದುರಿಸಿದ್ದಾರೆ. ನಿರೀಕ್ಷಿತ ಕೋವಿಡ್ ಮೂರನೇ ಅಲೆಯಲ್ಲಿ ವೈರಾಣು ಮಕ್ಕಳಿಗೆ ಹೆಚ್ಚಿನ ಅಪಾಯವನ್ನು ತಂದೊಡ್ಡಲಿದೆ ಎನ್ನಲಾಗಿದೆ. ಇದಕ್ಕೆ ಪೂರಕ ಎಂಬಂತೆ ಡಾ. ದೇವಿಪ್ರಸಾದ್ ಶೆಟ್ಟಿ ನೇತೃತ್ವದ 18 ಮಂದಿ ತಜ್ಞ ವೈದ್ಯರ ಸಮಿತಿಯು ಸರ್ಕಾರಕ್ಕೆ ಸಲ್ಲಿಸಿದ ಪ್ರಾಥಮಿಕ ವರದಿಯಲ್ಲಿ 3.4 ಲಕ್ಷ ಮಕ್ಕಳು ಸೋಂಕಿತರಾಗುವ ಬಗ್ಗೆ ಕಳವಳ ವ್ಯಕ್ತಪಡಿಸಿದೆ.

ಮೊದಲ ಅಲೆಯಲ್ಲಿ 94 ಸಾವಿರ ಮಕ್ಕಳು ಸೋಂಕಿತರಾಗಿದ್ದರು. ಮರಣ ಪ್ರಮಾಣ ದರವು ಶೇ 0.1 ರಷ್ಟಿತ್ತು. ಎರಡನೇ ಅಲೆಯಲ್ಲಿ ಸೋಂಕಿತರಾದ ಶೇ 80ರಷ್ಟು ಮಂದಿಗೆ ಅಷ್ಟಾಗಿ ಲಕ್ಷಣಗಳು ಗೋಚರಿಸಿರಲಿಲ್ಲ. ಶೇ 15ರಷ್ಟು ಮಂದಿಗೆ ಸೌಮ್ಯ ಮತ್ತು ಮಧ್ಯಮ ಸ್ವರೂಪದ ಲಕ್ಷಣಗಳು ಕಾಣಿಸಿಕೊಂಡಿದ್ದವು. ಶೇ 5 ರಷ್ಟು ಮಂದಿಗೆ ತೀವ್ರ ಸ್ವರೂಪದ ಲಕ್ಷಣಗಳಿದ್ದವು. ಹೀಗಾಗಿ, ಸೋಂಕಿತರಲ್ಲಿ ಹೆಚ್ಚಿನವರು ಮನೆ ಆರೈಕೆಗೆ ಒಳಗಾಗಿದ್ದರು. ಇದರಿಂದಾಗಿ ಎರಡನೇ ಅಲೆ ಕಾಣಿಸಿಕೊಂಡ ಮೂರು ತಿಂಗಳೊಳಗೆ (ಮಾ.23 ರಿಂದ ಜೂ.18) 2.03 ಲಕ್ಷ ಮಕ್ಕಳು ಸೋಂಕಿತರಾಗಿದ್ದಾರೆ.

ಬೇಗ ಚೇತರಿಕೆ: ಎರಡನೇ ಅಲೆಯಲ್ಲಿ 10 ವರ್ಷದೊಳಗಿನ 57,392 ಮಕ್ಕಳು ಸೋಂಕಿತರಾಗಿದ್ದಾರೆ. ಅದೇ ರೀತಿ, 10 ರಿಂದ 19ವರ್ಷದ ವಯೋಮಾನದವರಲ್ಲಿ 1.46 ಲಕ್ಷ ಮಂದಿ ಕೋವಿಡ್ ಪೀಡಿತರಾಗಿದ್ದಾರೆ. ಹೆಚ್ಚಿನ ಮಕ್ಕಳು ಲಕ್ಷಣ ರಹಿತರಾಗಿದ್ದು, ಕೆಲವರು ಸೌಮ್ಯ ಮತ್ತು ಮಧ್ಯಮ ಸ್ವರೂಪದ ಲಕ್ಷಣಗಳನ್ನು ಎದುರಿಸಿದ್ದಾರೆ. ಹೀಗಾಗಿ, ಬಹುತೇಕರು ವಿಶೇಷ ಚಿಕಿತ್ಸೆ ಇಲ್ಲದೆಯೇ 10 ದಿನಗಳ ಒಳಗಡೆಯೇ ಚೇತರಿಸಿಕೊಂಡಿದ್ದಾರೆ. ರಾಜ್ಯದ ಒಟ್ಟು ಜನಸಂಖ್ಯೆಯಲ್ಲಿ ಶೇ 34 ರಷ್ಟು ಮಂದಿ 18 ವರ್ಷದೊಳಗಿನವರಾಗಿದ್ದು, ಈವರೆಗೆ ಶೇ 2.2 ಮಕ್ಕಳು ಸೋಂಕಿತರಾಗಿದ್ದಾರೆ.

‘ಕೋವಿಡ್ ಪೀಡಿತರಾದ ಬಹುತೇಕ ಮಕ್ಕಳಿಗೆ ಸೌಮ್ಯ ಮತ್ತು ಮಧ್ಯಮ ಸ್ವರೂಪದ ಲಕ್ಷಣಗಳು ಕಾಣಿಸಿಕೊಂಡಿವೆ. ಅವರು ಬೇಗ ಚೇತರಿಸಿಕೊಳ್ಳುತ್ತಿದ್ದಾರೆ. ಆದರೆ, ಕೋವಿಡ್ ಜಯಿಸಿದ ಕೆಲ ಮಕ್ಕಳಲ್ಲಿ ಬಹು ಅಂಗಾಂಗ ಉರಿಯೂತ ಸಮಸ್ಯೆ (ಮಲ್ಟಿಸಿಸ್ಟಮ್ ಇನ್‌ಫ್ಲಮೇಟರಿ ಸಿಂಡ್ರೋಮ್) ಕಾಣಿಸಿಕೊಳ್ಳುತ್ತಿದೆ. ಕೋವಿಡ್ ಲಕ್ಷಣಗಳು ಕಾಣಿಸಿಕೊಂಡ ಕೂಡಲೇ ಪರೀಕ್ಷೆ ಮಾಡಿಸಿಕೊಂಡು, ಪ್ರತ್ಯೇಕ ಇರಬೇಕು. ಮಕ್ಕಳು ಸಂಪರ್ಕಕ್ಕೆ ಬರದಂತೆ ಎಚ್ಚರವಹಿಸಬೇಕು’ ಎಂದು ಇಂದಿರಾಗಾಂಧಿ ಮಕ್ಕಳ ಆರೋಗ್ಯ ಸಂಸ್ಥೆಯ (ಐಜಿಐಸಿಎಚ್) ನಿರ್ದೇಶಕ ಡಾ. ಸಂಜಯ್ ಕೆ.ಎಸ್. ತಿಳಿಸಿದರು.

ಪ್ರಜಾವಾಣಿ ವಿಶೇಷ

ಸೋಂಕಿನ ತೀವ್ರತೆ ಕಡಿಮೆ

ಕೋವಿಡ್ ಮೊದಲನೇ ಅಲೆಯ ಅವಧಿಯಲ್ಲಿ 60 ರಿಂದ 99 ವರ್ಷದ ವಯೋಮಾನದವರು ಸೋಂಕಿನ ತೀವ್ರತೆಗೆ ಹೆಚ್ಚಿನ ಸಂಖ್ಯೆಯಲ್ಲಿ ಮೃತಪಟ್ಟಿದ್ದರು. 90 ರಿಂದ 99 ವರ್ಷದೊಳಗಿನವರಲ್ಲಿ ಗರಿಷ್ಠ ಮರಣ ಪ್ರಮಾಣ ದರ (ಶೇ 11.1) ವರದಿಯಾಗಿತ್ತು. ಈ ಪ್ರಮಾಣ ಮಕ್ಕಳಲ್ಲಿ ಶೇ 0.01ರಷ್ಟಿತ್ತು. ಅಂದರೇ, 19 ವರ್ಷದೊಳಗಿನ 74 ಮಂದಿ ಸಾವಿಗೀಡಾಗಿದ್ದರು. ಎರಡನೇ ಅಲೆಯಲ್ಲಿ 10 ವರ್ಷದೊಳಗಿನ 33 ಮಕ್ಕಳು ಹಾಗೂ 10ರಿಂದ 20 ವರ್ಷದೊಳಗಿನ 39 ಮಂದಿ ಮೃತಪಟ್ಟಿದ್ದಾರೆ. ರಾಜ್ಯದಲ್ಲಿ ಕೋವಿಡ್ ಕಾಣಿಸಿಕೊಂಡ ಬಳಿಕ ಈವರೆಗೆ 146 ಮಕ್ಕಳು ಮರಣ ಹೊಂದಿದ್ದಾರೆ. ಎರಡನೇ ಅಲೆಯಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಮಕ್ಕಳು ಸೋಂಕಿತರಾಗಿದ್ದರೂ ಮರಣ ಪ್ರಮಾಣ ದರ ಶೇ 0.1ರಷ್ಟಿದೆ.



ಸೋಂಕಿತರ ಸಂಪರ್ಕದಿಂದ ಮನೆಯಲ್ಲಿದ್ದ ಮಕ್ಕಳೂ ಸೋಂಕಿತರಾದರು. ಹೆಚ್ಚಿನವರು ಆಸ್ಪತ್ರೆ ಚಿಕಿತ್ಸೆ ಇಲ್ಲದೆಯೇ ಗುಣಮುಖರಾಗಿದ್ದಾರೆ

ಡಾ. ಸಂಜಯ್ ಕೆ.ಎಸ್
ಐಜಿಐಸಿಎಚ್ ನಿರ್ದೇಶಕ



ಕೆಲವರು ತಡವಾಗಿ ಪರೀಕ್ಷೆ ಮಾಡಿಸಿಕೊಂಡ ಕಾರಣ ಮಕ್ಕಳು ಸೇರಿದಂತೆ ಎಲ್ಲರಿಗೂ ಸೋಂಕು ಹರಡಿದೆ

ಡಾ. ಯೋಗಾನಂದ ರೆಡ್ಡಿ, ಮಕ್ಕಳ ತಜ್ಞ ಹಾಗೂ ಕೋವಿಡ್ ತಜ್ಞರ ಸಮಿತಿ ಸದಸ್ಯ

ವಯೋಮಿತಿ ಅನುಸಾರ ಕೋವಿಡ್ ಪ್ರಕರಣ

ರಾಜ್ಯದಲ್ಲಿ ಕೋವಿಡ್ ಕಾಣಿಸಿಕೊಂಡಾಗಿನಿಂದ ಜೂ.18ರವೆಗೆ

ವರ್ಷ	ಪ್ರಕರಣಗಳು
0-9	85,494
10-19	2,12,767
20-29	5,96,485
30-39	6,44,880
40-49	4,92,454
50-59	3,62,042
60-69	2,52,332
70-79	1,12,894
80-89	32,489
90-99	4,137
100+	147

ಕಾಂಗ್ರೆಸ್ ವಕ್ತಾರ ಸುರ್ಜೆವಾಲಾ ಆರೋಪ

ಭೂಮಿಯನ್ನು ಚದರ ಮೀಟರ್‌ಗೆ ₹ 2,247ರಂತೆ ಖರೀದಿಸಿದ್ದು, ಬಳಿಕ ಟ್ರಸ್ಟ್‌ಗೆ ₹ 28,090ರ ದರದಲ್ಲಿ ಮಾರಾಟ ಮಾಡಲಾಗಿದೆ ಎಂದು ಆರೋಪಿಸಿದರು.

ಬಿಜೆಪಿಯಿಂದ ‘ರಾಮದ್ರೋಹ’ ಕಾಂಗ್ರೆಸ್‌ನಿಂದ ವಾಗ್ದಾಳಿ

ನವದೆಹಲಿ: ‘ಬಿಜೆಪಿಯು ‘ರಾಮದ್ರೋಹ’ ಎಸಗಿದೆ’ ಎಂದು ಕಾಂಗ್ರೆಸ್ ಪಕ್ಷ ಆರೋಪಿಸಿದ್ದು, ಅಯೋಧ್ಯೆಯಲ್ಲಿ ರಾಮ ಮಂದಿರವನ್ನು ನಿರ್ಮಾಣ ಮಾಡಲು ಸಂಗ್ರಹಿಸಿದ್ದ ನಿಧಿಯನ್ನು ಆಡಳಿತ ಪಕ್ಷವು ಲೂಟಿ ಮಾಡುತ್ತಿದೆ ಎಂದು ವಾಗ್ದಾಳಿ ನಡೆಸಿದೆ.



‘ಬಿಜೆಪಿ ನಾಯಕರೊಬ್ಬರು 890 ಚದರ ಮೀಟರ್ ಭೂಮಿಯನ್ನು ಇದೇ ವರ್ಷದ ಫೆಬ್ರುವರಿಯಲ್ಲಿ ₹20 ಲಕ್ಷಕ್ಕೆ ಖರೀದಿಸಿದ್ದರು. ಇದನ್ನೇ ರಾಮಜನ್ಮಭೂಮಿ ಟ್ರಸ್ಟ್‌ಗೆ ₹ 2.5 ಕೋಟಿಗೆ ಕೇವಲ 79 ದಿನಗಳ ನಂತರ ಮಾರಾಟ ಮಾಡಿದ್ದಾರೆ’ ಎಂದು ಕಾಂಗ್ರೆಸ್‌ನ ಮುಖ್ಯ ವಕ್ತಾರ ರಣದೀಪ್ ಸುರ್ಜೆವಾಲಾ ಆಪಾದಿಸಿದರು.

ಅಯೋಧ್ಯೆಯಲ್ಲಿ ರಾಮಮಂದಿರವನ್ನು ಸುಪ್ರೀಂ ಕೋರ್ಟ್ ಆದೇಶದ ಹಿನ್ನೆಲೆಯಲ್ಲಿ ನಿರ್ಮಿಸಲಾಗುತ್ತಿದೆ. ಹೀಗಾಗಿ ವಾಸ್ತವಿಕ ಸ್ಥಿತಿಯನ್ನು ಆಧರಿಸಿ ಈ ಕುರಿತು ತನಿಖೆ ನಡೆಸುವ ನಿಟ್ಟಿನಲ್ಲಿ ಸುಪ್ರೀಂ ಕೋರ್ಟ್ ತನ್ನ ಕರ್ತವ್ಯವನ್ನು ನಿಭಾಯಿಸಬೇಕಾಗಿದೆ ಎಂದು ಪ್ರತಿಪಾದಿಸಿದರು. ಸಮಾಜವಾದಿ ಪಕ್ಷ ಮತ್ತು ಆಮ್ ಆದ್ಮಿ ಪಕ್ಷವು, ವಾರದ ಹಿಂದಷ್ಟೇ ಟ್ರಸ್ಟ್ ವಿರುದ್ಧ ಆರೋಪ ಮಾಡಿದ್ದು, ಭೂಮಿಗೆ ಅತ್ಯಧಿಕ ದರವನ್ನು ನೀಡಲಾಗಿದೆ ಎಂದು ಆರೋಪಿಸಿದ್ದವು. ಅದರ ಹಿಂದೆಯೇ ಕಾಂಗ್ರೆಸ್ ಪಕ್ಷವೂ ಆರೋಪ ಮಾಡಿದೆ.

ಇಂದಿನಿಂದ ಲಾಕ್‌ಡೌನ್ ಮತ್ತಷ್ಟು ಸಡಿಲಿಕೆ

ಒಂದನೇ ಪುಟದಿಂದ...

ಕೋವಿಡ್ ದೃಢ ಪ್ರಮಾಣ ದರ ಶೇ 5ಕ್ಕಿಂತ ಕಡಿಮೆ ಇರುವ 17 ಜಿಲ್ಲೆಗಳಲ್ಲಿ ಹೊರಾಂಗಣ ಚಿತ್ರೀಕರಣ, ಹೊರಾಂಗಣ ಕ್ರೀಡಾ ಚಟುವಟಿಕೆಗಳು, ಲಾಡ್ಜ್ ಮತ್ತು ರೆಸಾರ್ಟ್‌ಗಳ ಬಳಕೆ, ಜಿಮ್‌ಗಳನ್ನು ತೆರೆಯಲು ಅವಕಾಶ ದೊರಕಲಿದೆ.

ಶೇ 50ರಷ್ಟು ಗ್ರಾಹಕರ ಮಿತಿಯೊಂದಿಗೆ ಹೋಟೆಲ್, ಕ್ಲಬ್ ಮತ್ತು ರೆಸ್ಟೋರೆಂಟ್‌ಗಳಲ್ಲಿ ಕುಳಿತು ಆಹಾರ ಸೇವಿಸಲು ಅವಕಾಶ ನೀಡಲಾಗಿದೆ.

ಭಾಗಶಃ ಸಡಿಲಿಕೆ: ಕೋವಿಡ್ ದೃಢ ಪ್ರಮಾಣ ದರ ಶೇ 5 ರಿಂದ 10ರಷ್ಟು ಇರುವ 13 ಜಿಲ್ಲೆಗಳಲ್ಲಿ ಲಾಕ್‌ಡೌನ್ ಭಾಗಶಃ ಸಡಿಲಿಕೆ ಆಗಲಿದೆ. ಈ ಜಿಲ್ಲೆಗಳಲ್ಲಿ ಬೆಳಿಗ್ಗೆ 6ರಿಂದ ಮಧ್ಯಾಹ್ನ 2ರವರೆಗೂ ಅಗತ್ಯ ವಸ್ತುಗಳ ಮಾರಾಟಕ್ಕೆ ಅವಕಾಶ ದೊರಕಲಿದೆ. ಆಟೊ ಮತ್ತು ಟ್ಯಾಕ್ಸಿ ಸೇವೆ ಕೂಡ ಆರಂಭವಾಗಲಿದೆ.

ಎಂವಿಎ ಮುಖಂಡರ ವಾಕ್ಸಮರ ತಾರಕಕ್ಕೆ

ಒಂದನೇ ಪುಟದಿಂದ...

ಅದೇ ದಿನ ಕೆಲವು ಗಂಟೆಗಳ ನಂತರ, ಶಿವಸೇನಾ ಪಕ್ಷದ 55ನೇ ಸಂಸ್ಥಾಪನಾ ದಿನಾಚರಣೆ ಕಾರ್ಯಕ್ರಮ ನಡೆಯಿತು. ಮುಖ್ಯಮಂತ್ರಿ ಠಾಕ್ರೆ ಅವರು, ಪಟೋಲೆ ಹಾಗೂ ಜಗತಾಪ್ ಅವರಿಗೆ ತೀಕ್ಷ್ಣವಾದ ತಿರುಗೇಟು ನೀಡಲು ಈ ವೇದಿಕೆಯನ್ನು ಬಳಸಿಕೊಂಡರು.

‘ಚುನಾವಣೆಯಲ್ಲಿ ಸ್ಪರ್ಧಿಸುವ ಕುರಿತು ಘೋಷಣೆ ಮಾಡುವ ಸಮಯ ಇದಲ್ಲ. ಆದರೆ, ಜನರ ಸಮಸ್ಯೆಗಳನ್ನು ಪರಿಹರಿಸಲು ಗಮನ ನೀಡದೇ ಕೇವಲ ಚುನಾವಣೆಗಳಲ್ಲಿ ಸ್ಪರ್ಧಿಸುವ ಬಗ್ಗೆ ಮಾತನಾಡುವವರಿಗೆ ಜನರು ಚಪ್ಪಲಿಯಿಂದ ಹೊಡೆಯುತ್ತಾರೆ’ ಎಂದು ಚಾಟಿ ಬೀಸಿದ್ದರು.

ಠಾಕ್ರೆ ಹೇಳಿಕೆಗೆ ಭಾನುವಾರ ಪ್ರತಿಕ್ರಿಯಿಸಿದ ಪಟೋಲೆ, ‘ಬಿಜೆಪಿಯನ್ನು ಅಧಿಕಾರದಿಂದ ದೂರ ಇಡಲು ಎಂವಿಎ ರಚಿಸಲಾಗಿದೆ. ಈ ಹೊಂದಾಣಿಕೆ ಶಾಶ್ವತವೇನೂ ಅಲ್ಲ’ ಎಂದರು. ‘ಮುಖ್ಯಮಂತ್ರಿ ಠಾಕ್ರೆ ನೇತೃತ್ವದ ಸರ್ಕಾರ ಐದು ವರ್ಷ ಅವಧಿ ಪೂರ್ಣಗೊಳಿಸುವವರೆಗೆ ಕಾಂಗ್ರೆಸ್ ಬೆಂಬಲ ನೀಡಲಿದೆ’ ಎಂದೂ ಸ್ಪಷ್ಟಪಡಿಸಿದರು.

ಬಿಜೆಪಿ ಜೊತೆ ಹೊಂದಾಣಿಕೆಗೆ ಮುಂದಾಗಿ: ಠಾಕ್ರೆಗೆ ಪತ್ರ

ಸಮಯ ಮೀರುವ ಮೊದಲೇ ಬಿಜೆಪಿ ಜೊತೆ ಹೊಂದಾಣಿಕೆ ಮಾಡಿಕೊಳ್ಳುವಂತೆ ಶಿವಸೇನಾ ಶಾಸಕ ಪ್ರತಾಪ್ ಸರನಾಯಕ್ ಅವರು ಮುಖ್ಯಮಂತ್ರಿ ಉದ್ಧವ್ ಠಾಕ್ರೆ ಅವರಿಗೆ ಮನವಿ ಮಾಡಿದ್ದಾರೆ.

ಈ ಸಂಬಂಧ ಶಾಸಕ ಸರನಾಯಕ್ ಅವರು ಠಾಕ್ರೆ ಅವರಿಗೆ ಪತ್ರ ಬರೆದಿದ್ದಾರೆ. ‘ಬಿಜೆಪಿಯೊಂದಿಗೆ ಮೈತ್ರಿ ಕಡಿದು ಹೋಗಿದ್ದರು ಸಹ, ಎರಡೂ ಪಕ್ಷಗಳ ಮುಖಂಡ ನಡುವೆ ಸೌಹಾರ್ದ ಸಂಬಂಧ ಇದೆ. ಹೀಗಾಗಿ, ಸಮಯ ಕಳೆದು ಹೋಗುವ ಮುನ್ನವೇ ಬಿಜೆಪಿಯೊಂದಿಗೆ ಹೊಂದಾಣಿಕೆಗೆ ಮುಂದಾಗಬೇಕು’ ಎಂದು ಮನವಿ ಮಾಡಿದ್ದಾರೆ.

ವಿಶ್ವ ಯೋಗ ದಿನಕ್ಕೆ ರಾಜ್ಯದಿಂದ ಹಂಪಿ ಆಯ್ಕೆ

ಪ್ರಜಾವಾಣಿ ವಾರ್ತೆ

ಹೊಸಪೇಟೆ (ವಿಜಯನಗರ): ವಿಶ್ವ ಯೋಗ ದಿನಾಚರಣೆ ನಿಮಿತ್ತ ಕೇಂದ್ರ ಸಂಸ್ಕೃತಿ ಸಚಿವಾಲಯವು ದೇಶದ 75 ಪಾರಂಪರಿಕ ಸ್ಥಳಗಳಲ್ಲಿ ಸೋಮವಾರ (ಜೂ.21) ಬೆಳಿಗ್ಗೆ 6ಕ್ಕೆ ಏಕಕಾಲಕ್ಕೆ ಕಾರ್ಯಕ್ರಮ ಆಯೋಜಿಸಿದ್ದು, ರಾಜ್ಯದಿಂದ ಹಂಪಿ ಆಯ್ಕೆಯಾಗಿದೆ.

75 ಸ್ಥಳಗಳ ಪೈಕಿ 35 ಸ್ಥಳಗಳಲ್ಲಿ ನಡೆಯುವ ಕಾರ್ಯಕ್ರಮದ ನೇರಪ್ರಸಾರ ದೂರದರ್ಶನ ವಾಹಿನಿಯಲ್ಲಿ ಆಗಲಿದೆ. ಅದರಲ್ಲಿ ಹಂಪಿ ಕೂಡ ಸೇರಿದೆ. ಈಗಾಗಲೇ ಸಂಸ್ಕೃತಿ ಸಚಿವಾಲಯ ಹಾಗೂ ದೂರದರ್ಶನದ ಸಿಬ್ಬಂದಿ ಹಂಪಿಯಲ್ಲಿ ಬೀಡು ಬಿಟ್ಟಿದ್ದು, ಅಗತ್ಯ ಸಿದ್ಧತೆ ಮಾಡಿಕೊಂಡಿದ್ದಾರೆ.

‘20 ಜನ ಅಂತರ ಕಾಯ್ದುಕೊಂಡು ಯೋಗಾಸನ ಮಾಡುವರು. ಪ್ರಧಾನಿ ನರೇಂದ್ರ ಮೋದಿಯವರು ಕಾರ್ಯಕ್ರಮ ವೀಕ್ಷಿಸುವರು’ ಎಂದು ಭಾರತೀಯ ಪುರಾತತ್ವ ಸರ್ವೇಕ್ಷಣ ಇಲಾಖೆಯ ಡೆಪ್ಯುಟಿ ಸೂಪರಿಂಟೆಂಡೆಂಟ್ ಪಿ. ಕಾಳಿಮುತ್ತು ತಿಳಿಸಿದ್ದಾರೆ.









ಯಡಿಯೂರಪ್ಪ ನಾಯಕತ್ವಕ್ಕೇ ಬೆಂಬಲ: ಅರುಣ್‌ಸಿಂಗ್ ವರದಿ

ಒಂದನೇ ಪುಟದಿಂದ...


ಸಚಿವರೂ ಸೇರಿ ಒಟ್ಟು 55 ಜನ ಶಾಸಕರು ತಮ್ಮನ್ನು ಪ್ರತ್ಯೇಕವಾಗಿ ಭೇಟಿಯಾಗಿ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ಪ್ರವಾಸೋದ್ಯಮ ಸಚಿವ ಸಿ.ಪಿ. ಯೋಗೇಶ್ವರ, ಹುಬ್ಬಳ್ಳಿ-ಧಾರವಾಡ (ಪಶ್ಚಿಮ) ಶಾಸಕ ಅರವಿಂದ ಬೆಲ್ಲದ, ವಿಧಾನ ಪರಿಷತ್ ಸದಸ್ಯ ಎಚ್. ವಿಶ್ವನಾಥ ಮಾತ್ರ ಯಡಿಯೂರಪ್ಪ ಅವರನ್ನು ಬದಲಿಸುವಂತೆ ಕೋರಿದ್ದಾರೆ. ಮಿಕ್ಕವರು, ಆಡಳಿತದಲ್ಲಿ ಯಾವುದೇ ಗೊಂದಲ ಇಲ್ಲ ಎಂದೇ ಹೇಳಿದ್ದಾಗಿ ಅರುಣ್‌ಸಿಂಗ್ ತಮ್ಮ ವರದಿಯಲ್ಲಿ ಉಲ್ಲೇಖಿಸಿದ್ದಾರೆ ಎಂದು ತಿಳಿದುಬಂದಿದೆ.

ರಾಜ್ಯದಲ್ಲಿ ಕೋವಿಡ್-19 ಎರಡನೇ ಅಲೆ ಗಂಭೀರ ಪರಿಣಾಮ ಉಂಟು ಮಾಡಿದ್ದರೂ, ಯಡಿಯೂರಪ್ಪ ನೇತೃತ್ವದ ಸರ್ಕಾರ ಸಮರ್ಪಕವಾಗಿ ಕಾರ್ಯ ನಿರ್ವಹಿಸಿದೆ. ಸೂಕ್ತ ಪರಿಹಾರ ಘೋಷಿಸಲಾಗಿದೆ. ಆದರೆ, ಕೆಲವು ಮುಖಂಡರು ಪಕ್ಷ ವಿರೋಧಿ ಚಟುವಟಿಕೆ ನಡೆಸಿದ್ದರಿಂದಲೇ ಪಕ್ಷವು ಮುಜುಗರಕ್ಕೆ ಒಳಗಾಗಿದೆ ಎಂದು ಉಲ್ಲೇಖಿಸಲಾಗಿದೆ.

ಶಾಸಕಾಂಗ ಪಕ್ಷದ ಸಭೆ ಕರೆಯುವಂತೆ ಕೆಲವು ದಿನಗಳ ಹಿಂದಷ್ಟೇ ಕೋರಿದ್ದ ಕಾರ್ಕಳ ಶಾಸಕ ಸುನೀಲ್‌ಕುಮಾರ್, ಯಡಿಯೂರಪ್ಪ ಅವರ ಆಡಳಿತ ವೈಖರಿಯ ಕುರಿತು ಚಕಾರ ಎತ್ತಿಲ್ಲ. ಆದರೆ, ಯಡಿಯೂರಪ್ಪ ಅವರ ವಿರುದ್ಧ ವ್ಯಕ್ತವಾಗಿರುವ ಅಸಮಾಧಾನವನ್ನು ತಣಿಸುವ ನಿಟ್ಟಿನಲ್ಲಿ ಪಕ್ಷವು ಗಂಭೀರ ಚಿಂತನೆ ನಡೆಸುವಂತೆ ಕೆಲವರು ಮನವಿ ಮಾಡಿದ್ದಾರೆ ಎಂದು ಅರುಣ್ ಸಿಂಗ್ ಪ್ರಸ್ತಾಪಿಸಿದ್ದಾರೆ ಎಂದು ಗೊತ್ತಾಗಿದೆ.

ಆಗಾಗ ಸಾಬೂನಿನಿಂದ ಕೈ ತೊಳೆಯುತ್ತಿರಿ















ಪಿಡಿಪಿ ನಾಯಕ ನಯೀಮ್ ಅಖ್ತರ್ ಬಿಡುಗಡೆ

ಶ್ರೀನಗರ (ಪಿಟಿಐ): ಗೃಹ ಬಂಧನದಲ್ಲಿದ್ದ ಪಿಡಿಪಿ ನಾಯಕ ನಯೀಮ್ ಅಖ್ತರ್ ಅವರನ್ನು ಒಂದು ತಿಂಗಳ ಬಳಿಕ ಭಾನುವಾರ ಬಿಡುಗಡೆ ಮಾಡಲಾಗಿದೆ.

ಮೇ 10ರಂದು ಅಖ್ತರ್ ಅವರನ್ನು ಗೃಹ ಬಂಧನದಲ್ಲಿರಿಸಲಾಗಿತ್ತು. ಜಮ್ಮು ಮತ್ತು ಕಾಶ್ಮೀರದ ಮುಖ್ಯವಾಹಿನಿಯ ರಾಜಕೀಯ ಪಕ್ಷಗಳಿಗೆ ಕೇಂದ್ರ ಮಾತುಕತೆಗೆ ಆಹ್ವಾನಿಸಿದ ಬೆನ್ನಲ್ಲೇ ಅಖ್ತರ್ ಅವರನ್ನು ಬಿಡುಗಡೆಗೊಳಿಸಿರುವುದು ಮಹತ್ವದ ಬೆಳವಣಿಗೆಯಾಗಿದೆ ಎಂದು ವಿಶ್ಲೇಷಿಸಲಾಗಿದೆ.

ಅಖ್ತರ್ ಅವರನ್ನು 2019ರ ಆಗಸ್ಟ್‌ನಲ್ಲಿಯೂ ವಶಕ್ಕೆ ತೆಗೆದುಕೊಂಡು ಸಾರ್ವಜನಿಕ ಸುರಕ್ಷತಾ ಕಾಯ್ದೆ (ಪಿಎಸ್‌ಎ) ಅಡಿಯಲ್ಲಿ ಮೊಕದ್ದಮೆ ದಾಖಲಿಸಲಾಗಿತ್ತು. ಬಳಿಕ, 2020ರ ಜೂನ್‌ನಲ್ಲಿ ಬಿಡುಗಡೆ ಮಾಡಲಾಗಿತ್ತು. ಮತ್ತೆ ಕಳೆದ ವರ್ಷ ಡಿಸೆಂಬರ್‌ನಲ್ಲಿ ಮುಂಜಾಗ್ರತಾ ಕ್ರಮವಾಗಿ ವಶಕ್ಕೆ ತೆಗೆದುಕೊಂಡು ಐದು ತಿಂಗಳ ನಂತರ ಬಿಡುಗಡೆ ಮಾಡಲಾಗಿತ್ತು.

ಶಾಸಕ ಅರವಿಂದ ಬೆಲ್ಲದ ಕರೆ ಕದ್ದಾಲಿಕೆ ಪ್ರಕರಣ • ಕೇಂದ್ರ ಕಾರಾಗೃಹಕ್ಕೆ ಭೇಟಿ ನೀಡಿದ ಎಸಿಪಿ

ಕಸ್ಟಡಿಯಲ್ಲೇ ಯುವರಾಜ್ ಮೊಬೈಲ್ ಬಳಕೆ?

• ಸಂತೋಷ ಜಿಗಳಿಕೊಪ್ಪ

ಬೆಂಗಳೂರು: ಬಿಜೆಪಿ ಶಾಸಕ ಅರವಿಂದ ಬೆಲ್ಲದ ಅವರಿಗೆ ಕರೆ ಮಾಡಿದ್ದ ಎನ್ನಲಾದ ಯುವರಾಜ್ ಅಲಿಯಾಸ್ ಸೇವಾಲಾಲ್ ಸ್ವಾಮೀಜಿ, ಪೊಲೀಸ್ ಕಸ್ಟಡಿಯಲ್ಲಿದ್ದಾಗ ಹೆಚ್ಚು ಬಾರಿ ಮೊಬೈಲ್ ಬಳಸಿ ಹಲವರಿಗೆ ಕರೆ ಮಾಡಿದ್ದ ಸಂಗತಿ ತನಿಖೆಯಿಂದ ಹೊರಬಿದ್ದಿರುವುದಾಗಿ ಗೊತ್ತಾಗಿದೆ. ಈ ಆಯಾಮದಲ್ಲೂ ಎಸಿಪಿ ನೇತೃತ್ವದ ತಂಡ ತನಿಖೆ ಮುಂದುವರಿಸಿದೆ.

'ಯುವರಾಜ್ ಎಂಬಾತನಿಂದ ಜೈಲಿನಿಂದ ಎರಡು– ಮೂರು ಬಾರಿ ಕರೆಗಳು ಬಂದಿದ್ದವು. ಜೊತೆಗೆ, ಅಪರಿಚಿತರು ನನ್ನ ಮೊಬೈಲ್ ಕದ್ದಾಲಿಕೆ ಮಾಡುತ್ತಿದ್ದಾರೆ' ಎಂದು ಆರೋಪಿಸಿ ಅರವಿಂದ ಬೆಲ್ಲದ ಇತ್ತೀಚೆಗಷ್ಟೇ ದೂರು ನೀಡಿದ್ದಾರೆ. ಅದರ ವಿಚಾರಣೆ ಚುರುಕುಗೊಳಿಸಿರುವ ಕಬ್ಬನ್ ಪಾರ್ಕ್ ಉಪವಿಭಾಗ ಎಸಿಪಿ ನೇತೃತ್ವದ ತಂಡ, ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹಕ್ಕೆ ಭಾನುವಾರ ಭೇಟಿ ನೀಡಿತು.

ಬಿಜೆಪಿ ಹಾಗೂ ಆರ್‌ಎಸ್‌ಎಸ್ ಮುಖಂಡರು ಪರಿಚಯಸ್ಥರೆಂದು ಹೇಳಿಕೊಂಡು ಸಾರ್ವಜನಿಕರಿಂದ ಕೋಟ್ಯಂತರ ರೂಪಾಯಿ ಪಡೆದು ವಂಚಿಸಿದ್ದ ಪ್ರಕರಣದಲ್ಲಿ ಯುವರಾಜ್‌ನನ್ನು ಬೆಂಗಳೂರು ಸಿಸಿಬಿ ಪೊಲೀಸರು ಬಂಧಿಸಿದ್ದರು. ಸದ್ಯ ಆತ ನ್ಯಾಯಾಂಗ ಬಂಧನದಲ್ಲಿದ್ದು, ಕೇಂದ್ರ ಕಾರಾಗೃಹದ ವಾಸದಲ್ಲಿದ್ದಾನೆ.

ಅದೇ ಕಾರಣಕ್ಕೆ ಕಾರಾಗೃಹಕ್ಕೆ ತೆರಳಿದ್ದ ತಂಡ, ವಿಶೇಷ ಕೊಠಡಿಯಲ್ಲಿ ಯುವರಾಜ್‌ನನ್ನು ವಿಚಾರಣೆ ನಡೆಸಿತು. ಇದೇ ಸಂದರ್ಭದಲ್ಲಿ ಕಾರಾಗೃಹದ ಅಧಿಕಾರಿಗಳು ಹಾಗೂ ಸಿಬ್ಬಂದಿಯನ್ನು ಕೊಠಡಿಯಿಂದ ಹೊರಗೆ ಕಳುಹಿಸಲಾಗಿತ್ತು.

'ಎಸಿಪಿ ನೇತೃತ್ವದ ತಂಡವು ಯುವರಾಜ್‌ನನ್ನು ಒಂದೂವರೆ ಗಂಟೆಗಳವರೆಗೆ ವಿಚಾರಣೆ ನಡೆಸಿ ಹೇಳಿಕೆ ಪಡೆಯಿತು. ಪ್ರಕರಣಕ್ಕೆ ಸಂಬಂಧಪಟ್ಟ ಮಾಹಿತಿಗಳನ್ನು ಕಲೆ ಹಾಕಿತು' ಎಂದು ಮೂಲಗಳು ಹೇಳಿವೆ.

ಪ್ರಕರಣಕ್ಕೆ ತಿರುವು ಕೊಟ್ಟ ಹೇಳಿಕೆ: ಅರವಿಂದ ಬೆಲ್ಲದ ಅವರಿಗೆ ಕರೆ ಮಾಡಿರುವ ಬಗ್ಗೆ ಯುವರಾಜ್ ನೇರವಾದ ಹೇಳಿಕೆ ನೀಡಿದ್ದು, ಅದು ಪ್ರಕರಣಕ್ಕೆ ಹೊಸ ತಿರುವು ನೀಡಿರುವುದಾಗಿ ಗೊತ್ತಾಗಿದೆ.

'2020ರ ಡಿಸೆಂಬರ್‌ನಲ್ಲಿ ಯುವರಾಜ್‌ನನ್ನು ಬಂಧಿಸಿದ್ದ ಸಿಸಿಬಿ ಪೊಲೀಸರು, ವಿಚಾರಣೆಗಾಗಿ ಹಲವು ಬಾರಿ ಕಸ್ಟಡಿಗೆ ಪಡೆದುಕೊಂಡಿದ್ದರು. ಹೈಗ್ರೌಂಡ್ಸ್ ಠಾಣೆ ಹಾಗೂ ವಿವಿಧ ಠಾಣೆಗಳಲ್ಲೂ ಯುವರಾಜ್ ವಿರುದ್ಧ ಪ್ರಕರಣಗಳು ದಾಖಲಾಗಿದ್ದವು. ಎಲ್ಲ ಪ್ರಕರಣದಲ್ಲೂ ಆತನನ್ನು ಪೊಲೀಸರು ಕಸ್ಟಡಿಗೆ ಪಡೆದಿದ್ದರು. ಅದೇ ಅವಧಿಯಲ್ಲಿ ಆತ ಮೊಬೈಲ್ ಬಳಸಿದ್ದ ಬಗ್ಗೆ ಮಾಹಿತಿ ಲಭ್ಯವಾಗಿದೆ' ಎಂದು ಮೂಲಗಳು ಹೇಳಿವೆ.

'ನನ್ನನ್ನು ಪೊಲೀಸರು ಬಂಧಿಸಿದ್ದಾರೆ. ಕಾಪಾಡಿ' ಎಂದು ಕೋರಿ ಆರೋಪಿ ಯುವರಾಜ್, ಅರವಿಂದ ಬೆಲ್ಲದ ಅವರಿಗೆ ಕರೆ ಮಾಡಿದ್ದನೆಂಬ ಮಾಹಿತಿ ಇದೀಗ ಸಿಕ್ಕಿದೆ. ಬೆಲ್ಲದ ಮಾತ್ರವಲ್ಲದೇ ಹಲವು ಆಪ್ತರು ಹಾಗೂ ರಾಜಕಾರಣಿಗಳಿಗೂ ಯುವರಾಜ್ ಕರೆ ಮಾಡಿದ್ದಾನೆ. ಆ ಬಗ್ಗೆಯೂ ವಿಚಾರಣೆ ನಡೆಸಲಾಗುತ್ತಿದೆ' ಎಂದೂ ಮೂಲಗಳು ತಿಳಿಸಿವೆ.

ಕಾರಾಗೃಹ ಸಿಬ್ಬಂದಿ ಮೇಲೂ ಅನುಮಾನ: 'ಆರೋಪಿಗೆ ಕೇಂದ್ರ ಕಾರಾಗೃಹದ ಸಿಬ್ಬಂದಿಯೂ ಮೊಬೈಲ್ ಕೊಟ್ಟಿರುವ ಅನುಮಾನವಿದೆ. ಆದರೆ, ಈ ಆರೋಪವನ್ನು ಜೈಲಿನ ಅಧಿಕಾರಿಗಳು ತಳ್ಳಿಹಾಕಿದ್ದಾರೆ. ಜೈಲಿನಲ್ಲಿ ಜಾಮರ್ ಅಳವಡಿಸಲಾಗಿದ್ದು, ಪ್ರಿಸನ್ ಕಾಲ್ ಬಿಟ್ಟರೆ ಯಾವುದೇ ಮೊಬೈಲ್ ಬಳಸಲು ಆಗುವುದಿಲ್ಲವೆಂದು ಉತ್ತರಿಸಿದ್ದಾರೆ' ಎಂಬುದಾಗಿಯೂ ಮೂಲಗಳು ಹೇಳಿವೆ.

ವರದಿ ಸಲ್ಲಿಸಲು ಡಿಜಿಪಿ ಸೂಚನೆ

ಕೋಟ್ಯಂತರ ರೂಪಾಯಿ ವಂಚನೆ ಪ್ರಕರಣದ ಆರೋಪಿ ಯುವರಾಜ್ ಮೊಬೈಲ್ ಬಳಸಿದ್ದ ಪ್ರಕರಣವನ್ನು ಗೃಹ ಇಲಾಖೆ ಗಂಭೀರವಾಗಿ ಪರಿಗಣಿಸಿದೆ. ಪೊಲೀಸರಾಗಲಿ ಅಥವಾ ಕಾರಾಗೃಹ ಸಿಬ್ಬಂದಿಯಾಗಲಿ ಯಾರೇ ಮೊಬೈಲ್ ಕೊಟ್ಟರೂ ಅವರ ಬಗ್ಗೆ ವಿಚಾರಣೆ ನಡೆಸಿ ವರದಿ ನೀಡುವಂತೆ ರಾಜ್ಯ ಪೊಲೀಸ್ ಮಹಾನಿರ್ದೇಶಕರಿಗೆ ಸೂಚಿಸಿದೆ. 'ಪೊಲೀಸ್ ಕಸ್ಟಡಿಯಲ್ಲಿ ಹೆಚ್ಚು ಬಾರಿ ಮೊಬೈಲ್ ಬಳಸುತ್ತಿದ್ದ ಯುವರಾಜ್, ಕಾರಾಗೃಹದಲ್ಲೂ ಕೆಲ ಬಾರಿ ಮೊಬೈಲ್ ಬಳಸಿರುವ ಅನುಮಾನವಿದೆ. ಹೀಗಾಗಿ, ಎರಡೂ ಆಯಾಮದಲ್ಲೂ ವಿಚಾರಣೆ ಮುಂದುವರಿದಿದೆ' ಎಂದೂ ಮೂಲಗಳು ಹೇಳಿವೆ.

ಸುತ್ತೂರು ಶ್ರೀ ಭೇಟಿಯಾದ ಬೆಲ್ಲದ

ಮೈಸೂರು: ಬಿಜೆಪಿ ಶಾಸಕ ಅರವಿಂದ ಬೆಲ್ಲದ ಭಾನುವಾರ ಸುತ್ತೂರು ಮಠದ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿಯನ್ನು ಭೇಟಿಯಾದರು.

ಚಾಮುಂಡಿಬೆಟ್ಟದ ತಪ್ಪಲಿನಲ್ಲಿರುವ ಸುತ್ತೂರು ಶಾಖಾ ಮಠಕ್ಕೆ ಭೇಟಿ ನೀಡಿದ ಅವರು ಶ್ರೀಗಳ ಜೊತೆ ಕೆಲಕಾಲ ಮಾತುಕತೆ ನಡೆಸಿದರು.

ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಬೆಲ್ಲದ, 'ಗುರುಗಳ ದರ್ಶನ ಪಡೆಯಲು ಬಂದಿದ್ದೇನೆ. ಹಿಂದೆಯೂ ಹಲವು ಬಾರಿ ಭೇಟಿ ನೀಡಿದ್ದೆ. ಬೇರೆ ಯಾವುದೇ ವಿಚಾರದ ಬಗ್ಗೆ ಚರ್ಚೆ ನಡೆದಿಲ್ಲ. ರಾಜಕೀಯ ವಿಚಾರಗಳ ಬಗ್ಗೆ ಮಾತನಾಡುವುದಿಲ್ಲ' ಎಂದರು.

ಸುದ್ದಿ 2 ನಿಮಿಷ

ಪೊಲೀಸರಿಗೆ ದೂರು ಕೊಟ್ಟ ಕುಲಪತಿ ಡಾ. ಜಯಕರ್ ಶೆಟ್ಟಿ

ಬೆಂಗಳೂರು: 'ನನ್ನ ವಿರುದ್ಧ ಸುಳ್ಳು ಸುದ್ದಿ ಹಬ್ಬಿಸಲಾಗುತ್ತಿದ್ದು, ಈ ಕೃತ್ಯದಲ್ಲಿ ಭಾಗಿಯಾಗಿರುವವರನ್ನು ಪತ್ತೆ ಮಾಡಿ ಕಾನೂನು ಕ್ರಮ ಕೈಗೊಳ್ಳಬೇಕು' ಎಂದು ಒತ್ತಾಯಿಸಿ ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯದ ಪ್ರಭಾರ ಕುಲಪತಿ ಡಾ. ಜಯಕರ್ ಶೆಟ್ಟಿ ಅವರು ಪೊಲೀಸರಿಗೆ ದೂರು ನೀಡಿದ್ದಾರೆ.

ಅಪರಿಚಿತರ ವಿರುದ್ಧ ದಕ್ಷಿಣ ವಿಭಾಗ ಸೈಬರ್ ಕ್ರೈಂ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ.

'ಜಯಕರ್ ಅವರು ಭ್ರಷ್ಟಾಚಾರದಲ್ಲಿ ತೊಡಗಿದ್ದು, ಅವರ ವಿರುದ್ಧ ಸಿಬಿಐ ಕಚೇರಿಯಲ್ಲಿ ದೂರು ದಾಖಲಾಗಿದೆ. ಸರ್ಕಾರವು ನಿಯಮಬಾಹಿರವಾಗಿ ಅವರನ್ನು ಪ್ರಭಾರ ಕುಲಪತಿ ಹುದ್ದೆಗೆ ನೇಮಕ ಮಾಡಿದೆ ಎಂದು ಸುಳ್ಳು ಸುದ್ದಿಗಳನ್ನು ಹಬ್ಬಿಸಲಾಗಿದೆ. ಸಾಮಾಜಿಕ ಜಾಲತಾಣದಲ್ಲೂ ಪೋಸ್ಟ್‌ಗಳನ್ನು ಪ್ರಕಟಿಸಲಾಗಿದೆ. ಈ ಸಂಗತಿ ದೂರಿನಲ್ಲಿದೆ' ಎಂದು ಪೊಲೀಸರು ಹೇಳಿದರು.

ಪತ್ನಿ ಹುಟ್ಟುಹಬ್ಬ: ಮಾರ್ಗಸೂಚಿ ಉಲ್ಲಂಘಿಸಿದ ಯೋಗೇಶ್ವರ್



ಚನ್ನಪಟ್ಟಣ: ಪ್ರವಾಸೋದ್ಯಮ ಸಚಿವ ಸಿ.ಪಿ. ಯೋಗೇಶ್ವರ್ ಭಾನುವಾರ ಪಟ್ಟಣದಲ್ಲಿ ತಮ್ಮ ಪತ್ನಿ ಶೀಲಾ ಯೋಗೇಶ್ವರ್ ಅವರ ಹುಟ್ಟುಹಬ್ಬ ಆಚರಣೆ ವೇಳೆ ಸರ್ಕಾರದ ಕೋವಿಡ್ ಮಾರ್ಗಸೂಚಿ ಉಲ್ಲಂಘನೆ ಮಾಡಿರುವುದು ಟೀಕೆಗೆ ಗುರಿಯಾಗಿದೆ.

ಪಟ್ಟಣದ ಮಹದೇಶ್ವರನಗರದ ಬಳಿಯ ಮಹದೇಶ್ವರ ದೇವಸ್ಥಾನದ ಆವರಣದಲ್ಲಿ ನಡೆದ ಕಾರ್ಯಕ್ರಮದಲ್ಲಿ ಯೋಗೇಶ್ವರ್ ಸ್ವತಃ ಮಾಸ್ಕ್ ಧರಿಸದೆ, ಅಂತರ ಕಾಪಾಡಿಕೊಳ್ಳದೆ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು.

ಕಾರ್ಯಕ್ರಮದಲ್ಲಿ ಯೋಗೇಶ್ವರ್ ಅವರ ಪತ್ನಿ ಶೀಲಾ ಸಹ ಮಾಸ್ಕ್ ಧರಿಸಿಲ್ಲ. ಹಾಗೆಯೇ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದ ಚನ್ನಪಟ್ಟಣ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಮಲವೇಗೌಡ ಸೇರಿದಂತೆ ಯಾವ ಮುಖಂಡರೂ ಮಾಸ್ಕ್ ಧರಿಸಿಲ್ಲ. ಅಂತರ ಕಾಪಾಡಿಕೊಂಡಿಲ್ಲ ಎಂದು ನಾಗರಿಕರು ದೂರಿದ್ದಾರೆ. ಕಾರ್ಯಕ್ರಮದಲ್ಲಿ ಕೊರೊನಾ ನಿಯಮ ಉಲ್ಲಂಘನೆಯಾಗಿದೆ ಎನ್ನುವ ಆರೋಪ ಕೇಳಿ ಬಂದಿದೆ. ಸ್ವತಃ ಸಚಿವರಾಗಿದ್ದುಕೊಂಡು ಕೊರೊನಾ ನಿಯಮ ಉಲ್ಲಂಘನೆ ಮಾಡಿರುವ ಯೋಗೇಶ್ವರ್ ಕ್ರಮ ತಾಲ್ಲೂಕಿನಲ್ಲಿ ಟೀಕೆಗೆ ಗುರಿಯಾಗಿದೆ.

ಮೊದಲ ದಿನ 5,000 ವಿದ್ಯಾರ್ಥಿಗಳು ಭಾಗಿ

ಫೇಸ್‌ಬುಕ್, ಟ್ವಿಟರ್ ಹಾಗೂ ಇನ್ ಸ್ಟಾಗ್ರಾಮ್‌ಗಳ ಮೂಲಕ ನಡೆದ ಲಸಿಕೆ ಬಗ್ಗೆ ಜಾಗೃತಿ ವಿಡಿಯೊ ಸ್ಪರ್ಧೆ

ಕಾಂಗ್ರೆಸ್‌ನ 'ವ್ಯಾಕ್ಸಿನೇಟ್ ಕರ್ನಾಟಕ': ಉಜಿರೆಯ ಆಶ್ಲೇಷ್ ವಿಜೇತ

ಬೆಂಗಳೂರು: ಲಸಿಕೆ ಪಡೆಯುವಂತೆ ಜಾಗೃತಿ ಮೂಡಿಸಲು ಕೆಪಿಸಿಸಿ ವತಿಯಿಂದ ಮಕ್ಕಳ ಮೂಲಕ ಆರಂಭಿಸಲಾಗಿರುವ 'ವ್ಯಾಕ್ಸಿನೇಟ್ ಕರ್ನಾಟಕ' ಅಭಿಯಾನ ಸ್ಪರ್ಧೆಯಲ್ಲಿ ಉದ್ದೇಶಿತ 100 ವಿಜೇತರ ಪೈಕಿ, ಉಜಿರೆಯ ಎಸ್‌ಡಿಎಂ ಆಂಗ್ಲ ಮಾಧ್ಯಮ ಶಾಲೆಯ 5ನೇ ತರಗತಿ ವಿದ್ಯಾರ್ಥಿ ಆಶ್ಲೇಷ್ ಡಿ. ಜೈನ್ ಮೊದಲ ವಿಜೇತನಾಗಿದ್ದಾನೆ.

ಕೆಪಿಸಿಸಿ ಅಧ್ಯಕ್ಷ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಅವರು ಮೊದಲ ವಿಜೇತನನ್ನು ಭಾನುವಾರ ಆಯ್ಕೆ ಮಾಡಿದ್ದಾರೆ. ಅಭಿಯಾನದ ಮೊದಲ ದಿನ ಸುಮಾರು 5,000 ವಿದ್ಯಾರ್ಥಿಗಳು ಲಸಿಕೆ ಜಾಗೃತಿ ಕುರಿತ ವಿಡಿಯೊ ಕಳುಹಿಸಿದ್ದಾರೆ. ವಿದ್ಯಾರ್ಥಿಗಳು ಫೇಸ್‌ಬುಕ್, ಟ್ವಿಟರ್ ಹಾಗೂ ಇನ್ ಸ್ಟಾಗ್ರಾಮ್‌ಗಳ ಮೂಲಕ ಸ್ಪರ್ಧೆಯಲ್ಲಿ ಭಾಗವಹಿಸಿದ್ದಾರೆ.



ಆಶ್ಲೇಷ್

'ನಿತ್ಯ ಬರುವ ವಿಡಿಯೊ ಆಧರಿಸಿ ಉಳಿದ ವಿಜೇತರನ್ನು ಆಯ್ಕೆ ಮಾಡಲಾಗುವುದು. ಜುಲೈ 1ರವರೆಗೂ ಸ್ಪರ್ಧೆ ನಡೆಯಲಿದೆ. ಸ್ಪರ್ಧೆಯಲ್ಲಿ ಭಾಗವಹಿಸಲು ವಿದ್ಯಾರ್ಥಿಗಳು ತಮ್ಮದೇ ಆದ ಸೃಜನಶೀಲತೆ ಮೂಲಕ, ಎಲ್ಲ ವಯಸ್ಕರು ಲಸಿಕೆ ಪಡೆಯಬೇಕು ಎಂದು ಒತ್ತಾಯಿಸಿ ಎರಡು ನಿಮಿಷದ ಒಳಗಿನ ವಿಡಿಯೊ ಮಾಡಿ ಅದನ್ನು #VaccinateKarnataka ಹ್ಯಾಶ್ ಟ್ಯಾಗ್ ಮೂಲಕ www.vaccinatekarnataka.com ಗೆ ಕಳುಹಿಸಿಕೊಡಬೇಕು' ಎಂದು ಕಾಂಗ್ರೆಸ್ ಮೂಲಗಳು ತಿಳಿಸಿವೆ.

ನೈಸ್ ರಸ್ತೆಯ ಅಕ್ಕ–ಪಕ್ಕದ ನಿವಾಸಿಗಳಿಗೆ ದುರ್ವಾಸನೆಯ ಸಂಕಷ್ಟ

ರಸ್ತೆ ಮೇಲೆಯೇ ಹರಿಯುತ್ತಿದೆ ಕೊಳಚೆ ನೀರು!

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಂಗಳೂರು ಉತ್ತರ ತಾಲ್ಲೂಕಿನ ಕೊಡಿಗೆಹಳ್ಳಿ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ನೈಸ್ ರಸ್ತೆಯ ಪಕ್ಕದ ಮಾರ್ಗದ ಕೆಳಸೇತುವೆಯ ಕೆಳಗೆ ಕೊಳಚೆ ನೀರು ಹರಿಯುತ್ತಿದೆ. ಈ ಮಾರ್ಗದಲ್ಲಿ ಓಡಾಡಲೂ ಆಗದಷ್ಟು ನೀರು ನಿಂತಿದ್ದು, ದುರ್ವಾಸನೆ ಹೆಚ್ಚಾಗಿದೆ.

'ಈ ಬಗ್ಗೆ ಈ ಹಿಂದೆ ಪ್ರಜಾವಾಣಿಯಲ್ಲಿ ವರದಿ ಬಂದಾಗ, ಬಿಬಿಎಂಪಿ ಅಧಿಕಾರಿಗಳು, ಪಂಚಾಯಿತಿ ಸಿಬ್ಬಂದಿ ಸರಿ ಮಾಡಿಸಿದ್ದರು. ಮಳೆಗಾಲ ಆರಂಭವಾಗುತ್ತಿದ್ದಂತೆಯೇ ಮತ್ತೆ ಸಮಸ್ಯೆಯಾಗಿದೆ. ಕೊಳಚೆ ನೀರಿನ ವಾಸನೆ ತಡೆಯಲು ಆಗುತ್ತಿಲ್ಲ. ಸೊಳ್ಳೆಗಳ ಕಾಟ ಹೆಚ್ಚಾಗಿದೆ. ಅಕ್ಕ–ಪಕ್ಕದ ನಿವಾಸಿಗಳು ಅನಾರೋಗ್ಯಕ್ಕೆ ತುತ್ತಾಗುತ್ತಿದ್ದಾರೆ' ಎಂದು ಕೆಂಗೇರಿಯಲ್ಲಿ ಕಾಲೇಜೊಂದರ ಪ್ರಾಚಾರ್ಯರಾಗಿರುವ ಸ್ಥಳೀಯ ನಿವಾಸಿ ರಮೇಶ್ ಹೇಳಿದರು.

'ಹಗಲು ಹೊತ್ತು ಕೊಳಚೆ ನೀರಿನ ಸಮಸ್ಯೆಯಾದರೆ, ರಾತ್ರಿ ವೇಳೆ ಈ ಕೆಳಸೇತುವೆ ಮೂಲಕ ಹಾದು ಹೋಗಲು ಭಯವಾಗುತ್ತದೆ. ಕಳ್ಳರ ಕಾಟವೂ ಹೆಚ್ಚಾಗಿದೆ' ಎಂದು ಅವರು ದೂರಿದರು.



ಕೆಳಸೇತುವೆಯ ಕೆಳಗೆ ಕೊಳಚೆ ನೀರು ಹರಿಯುತ್ತಿದ್ದು, ವಾಹನ ಸವಾರರು ದುರ್ವಾಸನೆ ಸಹಿಸಿಕೊಂಡೇ ಸಾಗಬೇಕಾಗಿದೆ

'ಮೊದಲು ಈ ರಸ್ತೆಯುದ್ದಕ್ಕೂ ಕಸದ ರಾಶಿ ಇರುತ್ತಿತ್ತು. ಈಗ ಆ ಸಮಸ್ಯೆಯಿಲ್ಲ. ಆದರೆ, ಕೊಳಚೆ ನೀರು ಹರಿಯುವುದು ಮಾತ್ರ ನಿಂತಿಲ್ಲ. ಈ ಸಮಸ್ಯೆಗೆ ಶಾಶ್ವತವಾದ ಪರಿಹಾರ ಕಂಡುಹಿಡಿಯಬೇಕಾಗಿದೆ' ಎಂದು ಟೊಯೊಟಾ ಕಂಪನಿ ಉದ್ಯೋಗಿ, ವಿಶ್ವೇಶ್ವರಯ್ಯ ಬಡಾವಣೆಯ ನಿವಾಸಿ ಸುಧಾಕರ್ ಹೇಳಿದರು.

'ಕೊಡಿಗೆಹಳ್ಳಿ ಕೆರೆ ತುಂಬಿ ಹರಿದ ನೀರಿನ ಜೊತೆಗೆ, ನೈಸ್ ಕಂಪನಿಯ ಕಟ್ಟಡದ ಕೊಳಚೆ ನೀರು ಸೇರಿ ಈ ರಸ್ತೆಯಲ್ಲಿ ಹರಿಯುತ್ತಿದೆ. ಈ ಬಗ್ಗೆ ಕೊಡಿಗೆಹಳ್ಳಿ ಪಂಚಾಯಿತಿ ಅಧಿಕಾರಿಗಳಿಗೆ, ಬಿಬಿಎಂಪಿಯವರಿಗೆ ಹೇಳಿದರೂ ಪ್ರಯೋಜನವಾಗಿಲ್ಲ' ಎಂದು ನಿವಾಸಿ ವಿಜಯಕುಮಾರ್ ಅಸಮಾಧಾನ ವ್ಯಕ್ತಪಡಿಸಿದರು.

'ಈ ರಸ್ತೆಯಲ್ಲಿ ಓಡಾಡಲಾಗದೆ ಎಷ್ಟೋ ಜನ ಜಾರಿ ಬಿದ್ದಿದ್ದಾರೆ. ಅಗತ್ಯ ಮೂಲಸೌಲಭ್ಯಗಳನ್ನು ಒದಗಿಸಲೂ ಅಧಿಕಾರಿಗಳಿಗೆ ಸಾಧ್ಯವಾಗುವುದಿಲ್ಲ ಎಂದರೆ ಹೇಗೆ' ಎಂದು ಅವರು ಪ್ರಶ್ನಿಸಿದರು.

'ಗೋಡೆ ಒಡೆಯಬೇಕು'

'ಮಂಗನಹಳ್ಳಿ ಮತ್ತು ಕೊಡಿಗೆಹಳ್ಳಿ ಕೆರೆಯಿಂದ ಬರುವ ನೀರು ರಸ್ತೆಯಲ್ಲಿ ಹರಿಯಬಾರದು ಎಂದರೆ, ನೈಸ್ ಕಂಪನಿಯ ಕಟ್ಟಡದ ಎರಡು ಬದಿಯಲ್ಲಿನ ಕಾಂಪೌಂಡ್ ಗೋಡೆ ಒಡೆಯಬೇಕು ಅಥವಾ ಕೊಳಚೆ ನೀರು ಪಕ್ಕದ ರಾಜಕಾಲುವೆ ಸೇರುವಂತೆ ವ್ಯವಸ್ಥೆ ಮಾಡಬೇಕು' ಎಂದು ಕೊಡಿಗೆಹಳ್ಳಿ ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ಭಾಗೀರಥಿ ಹೇಳಿದರು.

'ಈ ಹಿಂದೆಯೇ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಿದ್ದೇನೆ. ಗೋಡೆ ಒಡೆಯುವುದಕ್ಕೆ ಸಂಬಂಧಿಸಿದಂತೆ ಪಂಚಾಯಿತಿ ಅಧ್ಯಕ್ಷರು ಮತ್ತು ಸದಸ್ಯರೊಂದಿಗೆ ಚರ್ಚೆ ನಡೆಸಿ ತೀರ್ಮಾನ ಕೈಗೊಳ್ಳಬೇಕಾಗಿದೆ. ಶೀಘ್ರದಲ್ಲಿಯೇ ಸಮಸ್ಯೆ ಬಗೆಹರಿಸಲು ಕ್ರಮ ಕೈಗೊಳ್ಳಲಾಗುವುದು' ಎಂದರು.

ಈ ಕುರಿತು ಪ್ರತಿಕ್ರಿಯೆಗಾಗಿ ನೈಸ್ ಕಂಪನಿ ಎಂಜಿನಿಯರ್ ಅವರಿಗೆ ಕರೆ ಮಾಡಲಾಯಿತು. ಅವರು ಸಂಪರ್ಕಕ್ಕೆ ಸಿಗಲಿಲ್ಲ.

ತಳಗವಾದಿ: ಪುತ್ರಿ ಆತ್ಮಹತ್ಯೆ, ಹೃದಯಾಘಾತಕ್ಕೆ ತಂದೆ ಸಾವು

ಮಂಡ್ಯ: ಬಾಲಕಿಯೊಬ್ಬಳು ಭಾನುವಾರ ನಸುಕಿನಲ್ಲಿ ನೇಣು ಹಾಕಿ ಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದು, ಆಕೆಯ ಸಾವಿನಿಂದ ನೊಂದ ತಂದೆ ಕೆಲವೇ ಗಂಟೆಗಳಲ್ಲಿ ಹೃದಯಾಘಾತದಿಂದ ಮೃತಪಟ್ಟಿದ್ದಾರೆ.



ಬಾಂಧವ್ಯಾ



ರಾಜು

ಈ ಘಟನೆ ಮಳವಳ್ಳಿ ತಾಲ್ಲೂಕು, ತಳಗವಾದಿ ಗ್ರಾಮದಲ್ಲಿ ನಡೆದಿದೆ. ಟಿ.ಆರ್.ಬಾಂಧವ್ಯಾ (17), ಕೆ.ರಾಜು (65) ಮೃತ ಮಗಳು ಹಾಗೂ ತಂದೆ. ಖಾಸಗಿ ಕಾಲೇಜಿಗೆ ಸೇರಿಸಲಿಲ್ಲ ಎಂಬ ಕಾರಣಕ್ಕೆ ಬಾಲಕಿ ಖಿನ್ನತೆಗೆ ಒಳಗಾಗಿದ್ದರು ಎಂಬುದು ಗೊತ್ತಾಗಿದೆ.

ರೈತರಾಗಿದ್ದ ರಾಜು ಅವರಿಗೆ ಐವರು ಮಕ್ಕಳು, ನಾಲ್ವರು ಪುತ್ರಿಯರು, ಒಬ್ಬ ಪುತ್ರ. ಕಿರಿಯ ಪುತ್ರಿ ಬಾಂಧವ್ಯಾ ತಂದೆಯ ಪ್ರೀತಿಯ ಪುತ್ರಿಯಾಗಿದ್ದರು. ಪ್ರತಿಭಾವಂತೆ ಯಾಗಿದ್ದ ಈಕೆ ಎಸ್ಸೆಸ್ಸೆಲ್ಸಿ ಪರೀಕ್ಷೆಯಲ್ಲಿ ಶೇ 93 ಅಂಕ ಗಳಿಸಿದ್ದರು. ಮೈಸೂರು ಜಿಲ್ಲೆ, ಬನ್ನೂರು ಸರ್ಕಾರಿ ಪದವಿ ಪೂರ್ವ ಕಾಲೇಜಿನಲ್ಲಿ ಪ್ರಥಮ ಪಿಯುಸಿ ಮುಗಿಸಿದ್ದರು, ಈಗ ದ್ವಿತೀಯ ಪಿಯುಸಿಗೆ ದಾಖಲಾಗಬೇಕಿತ್ತು.

ರಾಜು ಎಲ್ಲಾ ಮಕ್ಕಳನ್ನು ಖಾಸಗಿ ಶಾಲೆ, ಕಾಲೇಜುಗಳಲ್ಲೇ ಓದಿಸಿದ್ದರು. ಬಾಂಧವ್ಯಾ, ದ್ವಿತೀಯ ಪಿಯುಸಿಗೆ ಉತ್ತಮ ಖಾಸಗಿ ಕಾಲೇಜಿಗೆ ಸೇರಿಸುವಂತೆ ತಂದೆಯನ್ನು ಕೇಳಿಕೊಂಡಿದ್ದರು. ವೈದ್ಯೆಯಾಗುವ ಕನಸು ಹೊಂದಿದ್ದರು. ಆದರೆ, ಇದೊಂದು ವರ್ಷ ಸರ್ಕಾರಿ ಕಾಲೇಜಿನಲ್ಲೇ ಓದು ಮುಗಿಸುವಂತೆ ತಂದೆ ತಿಳಿಸಿದ್ದರು.

ಮಗಳ ಅಂತ್ಯಕ್ರಿಯೆಗೆ ಸಿದ್ಧತೆ ನಡೆಸುವಾಗ ರಾಜು ಅಸ್ವಸ್ಥರಾದರು. ಆಸ್ಪತ್ರೆಗೆ ಕರೆದೊಯ್ಯುವ ಮಾರ್ಗಮಧ್ಯೆ ಕೊನೆಯುಸಿರೆಳೆದರು. ಈ ಕುರಿತು ಪ್ರಕರಣ ದಾಖಲಾಗಿಲ್ಲ.

₹44.79 ಲಕ್ಷ ಕಿತ್ತ ಇನ್‌ಸ್ಟಾಗ್ರಾಂ ಗೆಳತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಾಮಾಜಿಕ ಜಾಲತಾಣ 'ಇನ್‌ಸ್ಟಾಗ್ರಾಂ' ಆ್ಯಪ್ ಮೂಲಕ ಸ್ನೇಹ ಬೆಳೆಸಿದ್ದ ಮಹಿಳೆಯೊಬ್ಬಳು, ಉಡುಗೊರೆ ಆಮಿಷವೊಡ್ಡಿ ನಗರದ ನಿವೃತ್ತ ಪ್ರಾಧ್ಯಾಪಕಿಯೊಬ್ಬರಿಂದ ₹ 44.79 ಲಕ್ಷ ಪಡೆದು ವಂಚಿಸಿದ್ದಾಳೆ.

ಕಲ್ಯಾಣನಗರ ನಿವಾಸಿಯಾಗಿರುವ 70 ವರ್ಷದ ನಿವೃತ್ತ ಪ್ರಾಧ್ಯಾಪಕಿ ವಂಚನೆ ಬಗ್ಗೆ ದೂರು ನೀಡಿದ್ದಾರೆ. ಪೂರ್ವ ವಿಭಾಗದ ಸೈಬರ್ ಕ್ರೈಂ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ.

'ದೂರುದಾರರು ಇನ್‌ಸ್ಟಾಗ್ರಾಂ ಆ್ಯಪ್‌ನಲ್ಲಿ ಖಾತೆ ಹೊಂದಿದ್ದಾರೆ. ಅವರಿಗೆ ಫ್ರೆಂಡ್ ರಿಕ್ವೆಸ್ಟ್ ಕಳುಹಿಸಿದ್ದ ಮಹಿಳೆ, ವಿದೇಶಿ ಪ್ರಜೆಯೆಂದು ಪರಿಚಯಿಸಿಕೊಂಡಿದ್ದಳು. ಕೆಲ ದಿನ ಚಾಟಿಂಗ್ ಮಾಡಿ ಆತ್ಮೀಯವಾಗಿ ಮಾತನಾಡಿದ್ದಳು' ಎಂದು ಪೊಲೀಸರು ಹೇಳಿದರು.

'ನಿಮ್ಮ ಸ್ನೇಹ ಇಷ್ಟವಾಗಿದೆ. ನಿಮಗೆ ಉಡುಗೊರೆ ಕಳುಹಿಸುತ್ತೇನೆ' ಎಂದು ಮಹಿಳೆ ಹೇಳಿದ್ದರು. ಕೆಲ ದಿನ ಬಿಟ್ಟು ಕಸ್ಟಮ್ಸ್ ಅಧಿಕಾರಿಗಳ ಸೋಗಿನಲ್ಲಿ ದೂರುದಾರರಿಗೆ ಕರೆ ಮಾಡಿದ್ದ ವಂಚಕರು, 'ನಿಮ್ಮ ಹೆಸರಿಗೆ ಉಡುಗೊರೆ ಬಂದಿದೆ. ಬೆಲೆಬಾಳುವ ಚಿನ್ನಾಭರಣ ಹಾಗೂ ಕರೆನ್ಸಿ ಇದೆ. ಅದನ್ನು ನಿಮ್ಮ ವಿಳಾಸಕ್ಕೆ ಕಳುಹಿಸಲು ಶುಲ್ಕ ಹಾಗೂ ಜಿಎಸ್‌ಟಿ ಪಾವತಿಸಬೇಕು' ಎಂದಿದ್ದರು. ಅದನ್ನು ನಂಬಿದ್ದ ದೂರುದಾರರು, ಆರೋಪಿ ಹೇಳಿದ್ದ ಬ್ಯಾಂಕ್ ಖಾತೆಗಳಿಗೆ ಹಂತ ಹಂತವಾಗಿ ₹ 44.79 ಲಕ್ಷ ನೀಡಿದ್ದರು.'

'ಹಣ ಪಡೆದ ನಂತರ ವಂಚಕರು, ಮೊಬೈಲ್ ಸ್ವಿಚ್ ಆಫ್ ಮಾಡಿದ್ದಾರೆ. ಸೈಬರ್ ವಂಚಕರೇ ಮಹಿಳೆ ಹೆಸರಿನಲ್ಲಿ ಖಾತೆ ತೆರೆದು ವಂಚಿಸಿರುವ ಸಾಧ್ಯತೆ ಇದೆ' ಎಂದೂ ತಿಳಿಸಿದರು.

ಷೇರು ಮಾರುಕಟ್ಟೆ ಹೆಸರಿನಲ್ಲಿ ವಂಚನೆ

ಬೆಂಗಳೂರು: ಷೇರು ಮಾರುಕಟ್ಟೆಯಲ್ಲಿ ಹೂಡಿಕೆ ಮಾಡಿದರೆ ಹಣ ದ್ವಿಗುಣಗೊಳಿಸುವ ಆಮಿಷವೊಡ್ಡಿ ನಗರದ ನಿವೃತ್ತ ನೌಕರರೊಬ್ಬರಿಂದ ₹ 33.79 ಲಕ್ಷ ಪಡೆದು ವಂಚಿಸಲಾಗಿದೆ.

ದೇವನಹಳ್ಳಿ ಬಳಿಯ ಸಾದಹಳ್ಳಿ ನಿವಾಸಿಯಾಗಿರುವ 72 ವರ್ಷದ ನಿವೃತ್ತ ನೌಕರರೊಬ್ಬರು ವಂಚನೆ ಬಗ್ಗೆ ದೂರು ನೀಡಿದ್ದಾರೆ. ಅಪರಿಚಿತರ ವಿರುದ್ಧ ಈಶಾನ್ಯ ವಿಭಾಗದ ಸೈಬರ್ ಕ್ರೈಂ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ.

'ದೂರುದಾರರಿಗೆ ಕರೆ ಮಾಡಿದ್ದ ಆರೋಪಿಗಳು, 'ನಾವು ಷೇರು ಮಾರುಕಟ್ಟೆ ವ್ಯವಹಾರ ಮಾಡುತ್ತೇವೆ. ನೀವು ಷೇರು ಮಾರುಕಟ್ಟೆಯಲ್ಲಿ ಹಣ ಹೂಡಿಕೆ ಮಾಡಿದರೆ ಕಡಿಮೆ ಅವಧಿಯಲ್ಲೇ ದ್ವಿಗುಣ ಮಾಡಿಕೊಡುತ್ತೇವೆ' ಎಂದಿದ್ದರು. ಅವರ ಮಾತು ನಂಬಿದ್ದ ದೂರುದಾರ, ಆರೋಪಿಗಳ ಖಾತೆಗಳಿಗೆ ಹಂತ ಹಂತವಾಗಿ ₹ 33.79 ಲಕ್ಷ ಜಮೆ ಮಾಡಿದ್ದರು. ಈ ಸಂಗತಿ ದೂರಿನಲ್ಲಿದೆ' ಎಂದು ಪೊಲೀಸರು ಹೇಳಿದರು.

'ಹಣ ಪಡೆದ ನಂತರ ಆರೋಪಿಗಳು ಮೊಬೈಲ್ ಸ್ವಿಚ್ ಆಫ್ ಮಾಡಿಕೊಂಡು ನಾಪತ್ತೆಯಾಗಿದ್ದಾರೆ' ಎಂದೂ ತಿಳಿಸಿದರು.

ಅಪರಾಧ ಸುದ್ದಿ

ರೈಲಿನಲ್ಲಿ ತಂದಿದ್ದ ₹ 30 ಲಕ್ಷ ಮೌಲ್ಯದ ಡ್ರಗ್ಸ್ ಜಪ್ತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪಶ್ಚಿಮ ಬಂಗಾಳದಿಂದ ರೈಲಿನ ಮೂಲಕ ಡ್ರಗ್ಸ್ ತಂದು ನಗರದಲ್ಲಿ ಮಾರಾಟ ಮಾಡುತ್ತಿದ್ದ ಇಬ್ಬರು ಆರೋಪಿಗಳನ್ನು ಕಾಡುಗೋಡಿ ಪೊಲೀಸರು ಬಂಧಿಸಿದ್ದಾರೆ.

'ಮಿನರಲ್ ಶೇಖ್ (37) ಹಾಗೂ ಶೇಖ್ ಶಹಾಜುದ್ದೀನ್ (42) ಬಂಧಿತರು. ಅವರಿಂದ ₹ 30 ಲಕ್ಷ ಮೌಲ್ಯದ ಗಾಂಜಾ ಹಾಗೂ ಮಾರ್ಫಿನ್ (ಹೆರಾಯಿನ್ ರೂಪ) ಜಪ್ತಿ ಮಾಡಲಾಗಿದೆ' ಎಂದು ಪೊಲೀಸರು ಹೇಳಿದರು.

'ಪಶ್ಚಿಮ ಬಂಗಾಳದ ಆರೋಪಿಗಳು, ಕೆಲಸ ಹುಡುಕಿಕೊಂಡು ಎರಡು ವರ್ಷಗಳ ಹಿಂದೆ ನಗರಕ್ಕೆ ಬಂದಿದ್ದರು. ಕುಂದಲಹಳ್ಳಿ ಬಳಿ ಶೆಡ್‌ನಲ್ಲಿ ವಾಸವಿದ್ದರು. ನಿರ್ಮಾಣ ಹಂತದ ಕಟ್ಟಡಗಳಲ್ಲಿ ಕೂಲಿ ಕೆಲಸ ಮಾಡುತ್ತಿದ್ದರು. ಕಳೆದ ವರ್ಷ ಲಾಕ್‌ಡೌನ್‌ನಿಂದಾಗಿ ಕೆಲಸ ಹೋಗಿತ್ತು. ಹೀಗಾಗಿ, ತಮ್ಮೂರಿಗೆ ಹೋಗಿದ್ದರು.'

'ತಮ್ಮೂರಿನಿಂದ ರೈಲಿನಲ್ಲಿ ನಗರಕ್ಕೆ ಇತ್ತೀಚೆಗೆ ಬಂದಿದ್ದ ಆರೋಪಿಗಳು, ಡ್ರಗ್ಸ್ ಸಹ ತಂದಿದ್ದರು. ಕಾಡುಗೋಡಿ ರೈಲು ನಿಲ್ದಾಣ ಸಮೀಪದಲ್ಲಿ ಡ್ರಗ್ಸ್ ಮಾರಾಟ ಮಾಡಲು ಯತ್ನಿಸುತ್ತಿದ್ದರು. ಈ ಬಗ್ಗೆ ಮಾಹಿತಿ ಬರುತ್ತಿದ್ದಂತೆ ದಾಳಿ ಮಾಡಿ ಆರೋಪಿಗಳನ್ನು ಬಂಧಿಸಲಾಯಿತು' ಎಂದೂ ಪೊಲೀಸರು ತಿಳಿಸಿದರು.

'ಹೆರಾಯಿನ್ ಬಳಸಿ ಉತ್ಪಾದಿಸುವ ಮಾರ್ಫಿನ್ ಡ್ರಗ್ಸ್‌ಗೆ ಬೇಡಿಕೆ ಇದೆ. ಪ್ರತಿ ಗ್ರಾಂಗೆ ಸಾವಿರಾರು ರೂಪಾಯಿ ಪಡೆದು ಆರೋಪಿಗಳು ಮಾರ್ಫಿನ್ ಮಾರುತ್ತಿದ್ದರು. ಕೃತ್ಯದಲ್ಲಿ ಮತ್ತಷ್ಟು ಮಂದಿ ಭಾಗಿಯಾಗಿರುವ ಮಾಹಿತಿ ಇದೆ' ಎಂದೂ ಅವರು ಹೇಳಿದರು.

ಆನ್‌ಲೈನ್‌ನಲ್ಲಿ ಮದ್ಯ ಖರೀದಿ: ವಂಚನೆ

ಬೆಂಗಳೂರು: ಆನ್‌ಲೈನ್‌ನಲ್ಲಿ ಮದ್ಯ ಖರೀದಿಸಿದ್ದ ನಗರದ ಯುವಕರೊಬ್ಬರು, ಅದರ ಬಿಲ್ ಪಾವತಿಸಲು ಹೋಗಿ ₹ 1.48 ಲಕ್ಷ ಕಳೆದುಕೊಂಡಿದ್ದಾರೆ.

ಹೊಸೂರು ರಸ್ತೆಯ ಲವಕುಶ ನಗರದ 25 ವರ್ಷದ ಯುವಕ ವಂಚನೆ ಬಗ್ಗೆ ದೂರು ನೀಡಿದ್ದಾರೆ. ಅಪರಿಚಿತನ ವಿರುದ್ಧ ದಕ್ಷಿಣ ವಿಭಾಗ ಸೈಬರ್ ಕ್ರೈಂ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

'ದೂರುದಾರರು ಮೇ 24ರಂದು ಜಾಲತಾಣವೊಂದರಲ್ಲಿ ಆನ್‌ಲೈನ್ ಮೂಲಕ ಮದ್ಯ ಖರೀದಿಸಿದ್ದರು. ಬಿಲ್ ಪಾವತಿ ಮಾಡುವಂತೆ ಜಾಲತಾಣದ ಪ್ರತಿನಿಧಿ, ಕ್ಯೂಆರ್ ಕೋಡ್ ಕಳುಹಿಸಿದ್ದರು. ಅದನ್ನು ಸ್ಕ್ಯಾನ್ ಮಾಡುತ್ತಿದ್ದಂತೆ ದೂರುದಾರರ ಬ್ಯಾಂಕ್ ಖಾತೆಯಿಂದ ₹ 1.48 ಲಕ್ಷ ಕಡಿತವಾಗಿದೆ' ಎಂದು ಪೊಲೀಸರು ಹೇಳಿದರು.

ಕಬಿನಿ ಹಿನ್ನೀರಿನಲ್ಲಿ ಕಸದ ರಾಶಿ, ಸ್ವಚ್ಛತೆಗೆ ಮುಂದಾದ ಅರಣ್ಯ ಇಲಾಖೆ

ಕೇರಳ ತ್ಯಾಜ್ಯ; ವನ್ಯಜೀವಿಗಳಿಗೆ ಕುತ್ತು

• ಸತೀಶ್ ಬಿ.ಆರಾಧ್ಯ

ಎಚ್.ಡಿ.ಕೋಟೆ (ಮೈಸೂರು): ಕೇರಳದ ಕೆಲ ಗ್ರಾಮಗಳ ತ್ಯಾಜ್ಯ ಕಬಿನಿ ನದಿ ಮೂಲಕ ಹರಿದು ಬರುತ್ತಿದ್ದು, ರಾಜ್ಯದ ನಾಗರಹೊಳೆ ಹಾಗೂ ಬಂಡೀಪುರ ಅಭಯಾರಣ್ಯದ ಜೀವಿಗಳಿಗೆ ಮಾರಕವಾಗುತ್ತಿದೆ.

ಈ ತ್ಯಾಜ್ಯವು ಕಬಿನಿ ಜಲಾಶಯದ ಹಿನ್ನೀರು ಸೇರುತ್ತಿದ್ದು, ಸುತ್ತಮುತ್ತ ದೊಡ್ಡ ಪ್ರಮಾಣದಲ್ಲಿ ಸಂಗ್ರಹವಾಗಿದೆ. ಅದರಲ್ಲಿ ಪ್ಲಾಸ್ಟಿಕ್ ತ್ಯಾಜ್ಯವೇ ಅಧಿಕ ಪ್ರಮಾಣದಲ್ಲಿದೆ. ವೈದ್ಯಕೀಯ ತ್ಯಾಜ್ಯ, ಮದ್ಯದ ಬಾಟಲಿ, ಥರ್ಮೋಕೋಲ್ ಕೂಡ ಬಂದು ಸೇರುತ್ತಿವೆ.

'ಕೇರಳ ವಯನಾಡು ಜಿಲ್ಲೆಯಲ್ಲಿ ಕಬಿನಿ ನದಿ ಹುಟ್ಟುತ್ತದೆ. ಅಲ್ಲಿನ ಗ್ರಾಮದ ಜನರು ತ್ಯಾಜ್ಯವನ್ನು ನದಿಗೆ ಎಸೆಯುತ್ತಾರೆ. ಎಚ್.ಡಿ.ಕೋಟೆ ತಾಲ್ಲೂಕಿನ ಡಿ.ಬಿ.ಕುಪ್ಪೆ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲೂ ತ್ಯಾಜ್ಯವು ನದಿಗೆ ಸೇರುತ್ತಿದೆ. ಮುಂಗಾರು ಪ್ರಾರಂಭವಾದ ಕೂಡಲೇ ಕಬಿನಿ ನದಿಯಲ್ಲಿ ಹರಿದು ಬರುವ ಈ ತ್ಯಾಜ್ಯ ಜಲಾಶಯದ ಹಿನ್ನೀರನ್ನು ಸೇರುತ್ತದೆ. ಇದರಿಂದ ಕಾಡು ಪ್ರಾಣಿಗಳಿಗೆ ಮತ್ತು ಜಲಚರಗಳಿಗೆ ಸಮಸ್ಯೆಯಾಗುತ್ತಿದೆ' ಎಂದು ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ (ಎಸಿಎಫ್) ಮಹಾದೇವಯ್ಯ ತಿಳಿಸಿದರು.

ನಾಗರಹೊಳೆ ರಾಷ್ಟ್ರೀಯ ಉದ್ಯಾನ ವ್ಯಾಪ್ತಿಯ ಡಿ.ಬಿ.ಕುಪ್ಪೆ ವನ್ಯಜೀವಿ ವಲಯದ ಕಬಿನಿ ಜಲಾಶಯದ ಹಿನ್ನೀರಿನಲ್ಲಿ ಪ್ಲಾಸ್ಟಿಕ್ ತ್ಯಾಜ್ಯ ಸಂಗ್ರಹಿಸಿ ಹೊರ ಹಾಕುವ ಕಾರ್ಯವನ್ನು ಅರಣ್ಯ ಇಲಾಖೆ ಆರಂಭಿಸಿದೆ.

ಅರಣ್ಯ ಇಲಾಖೆಯ ಅಂತರಸಂತೆ ಮತ್ತು ಮೇಟಿಕುಪ್ಪೆ ವನ್ಯಜೀವಿ ವಲಯದ ಅಧಿಕಾರಿಗಳು, ಸಿಬ್ಬಂದಿ ಕಬಿನಿ ಹಿನ್ನೀರಿನ ಬಳಿ ಇರುವ ಜಂಗಲ್ ಲಾಡ್ಜಸ್ ಅಂಡ್ ರೆಸಾರ್ಟ್ಸ್, ವಾಟರ್ ವುಡ್, ಸೆರಾಯ್, ಕಾವಾ ರೆಸಾರ್ಟ್ ಸಿಬ್ಬಂದಿ ಹಾಗೂ ಸ್ವಯಂಸೇವಕರು ತ್ಯಾಜ್ಯ ಸಂಗ್ರಹ ಕಾರ್ಯದಲ್ಲಿ ನಿರತರಾಗಿದ್ದಾರೆ.

ಅರಣ್ಯ ಇಲಾಖೆಯ ಎರಡು ಬೋಟ್, ಜಂಗಲ್ ಲಾಡ್ಜಸ್‌ನ ಎರಡು ವಾಹನ ಹಾಗೂ ಒಂದು ಬೋಟ್‌ಅನ್ನು ಈ ಕಾರ್ಯಕ್ಕೆ ಬಳಕೆ ಮಾಡಲಾಗುತ್ತಿದೆ. ಸುಮಾರು 200 ಚೀಲಗಳಲ್ಲಿ ಪ್ಲಾಸ್ಟಿಕ್ ಬಾಟಲಿಗಳು, ಮದ್ಯದ ಬಾಟಲಿಗಳು, ಚಪ್ಪಲಿಗಳು, ಷೂಗಳು ಸೇರಿದಂತೆ ವಿವಿಧ ಬಗೆಯ ತ್ಯಾಜ್ಯವನ್ನು ಹಿನ್ನೀರಿನಿಂದ ಹೊರ ತರಲಾಗುತ್ತಿದೆ.

ಮುಖ್ಯಾಂಶಗಳು

- ಮುಂಗಾರು ಆರಂಭದಲ್ಲಿ ನದಿ ನೀರಿನಲ್ಲಿ ಹರಿದು ಬರುವ ತ್ಯಾಜ್ಯ
- ತ್ಯಾಜ್ಯದಲ್ಲಿ ಮದ್ಯದ ಬಾಟಲಿಗಳೇ ಹೆಚ್ಚು

ಕೇರಳದಿಂದ ಕಬಿನಿ ನದಿ ಮೂಲಕ ಹರಿದು ಬಂದು, ಕಬಿನಿ ಹಿನ್ನೀರಿನಲ್ಲಿ ತ್ಯಾಜ್ಯ ಸಂಗ್ರಹವಾಗುತ್ತಿರುವ ಕುರಿತು ಯಾವುದೇ ದೂರ ಬಂದಿಲ್ಲ

ಗೀತಾ, ಪರಿಸರ ಅಧಿಕಾರಿ (ಮೈಸೂರು ಗ್ರಾಮಾಂತರ)



ಎಚ್.ಡಿ.ಕೋಟೆ ತಾಲ್ಲೂಕಿನ ಕಬಿನಿ ಹಿನ್ನೀರಿನಲ್ಲಿ ತ್ಯಾಜ್ಯ ಸಂಗ್ರಹಿಸುತ್ತಿರುವ ವನ್ಯಜೀವಿ ಪ್ರೇಮಿಗಳು

ಕ್ರಮಕೈಗೊಳ್ಳಲು ಗ್ರಾ.ಪಂ.ಗೆ ಪತ್ರ

'ಉಭಯ ರಾಜ್ಯಗಳ ನದಿಯಂಚಿನ ಕೆಲ ಗ್ರಾಮಗಳಲ್ಲಿ ತ್ಯಾಜ್ಯವನ್ನು ನದಿಗೆ ಎಸೆಯುತ್ತಿರುವುದು ಗೊತ್ತಾಗಿದೆ. ಎಲ್ಲೆಲ್ಲಿ ತ್ಯಾಜ್ಯ ಹಾಕುತ್ತಿದ್ದಾರೆ ಎಂಬುದನ್ನು ಪತ್ತೆ ಹಚ್ಚಿ, ಕ್ರಮ ವಹಿಸಲು ಸಂಬಂಧಪಟ್ಟ ಗ್ರಾಮ ಪಂಚಾಯಿತಿಗಳಿಗೆ ಪತ್ರ ಬರೆಯಲಿದ್ದೇವೆ' ಎಂದು ನಾಗರಹೊಳೆ ಹುಲಿ ಯೋಜನೆ ನಿರ್ದೇಶಕ ಡಿ.ಮಹೇಶ್ ಕುಮಾರ್ ತಿಳಿಸಿದರು.

'ವೈದ್ಯಕೀಯ ತ್ಯಾಜ್ಯ, ಬಾಟಲಿಯಂತಹ ಭಾರವಿರುವ ವಸ್ತುಗಳು ನೀರಿನೊಳಗೆ ಸೇರಿಕೊಳ್ಳುತ್ತಿವೆ. ಇದರಿಂದ ಜಲಚರಗಳಿಗೆ ತೊಂದರೆಯಾಗುತ್ತಿದೆ' ಎಂದರು.

ಚಿತ್ರಾವಳಿ



ಸಿ.ವಿ.ರಾಮನ್‌ನಗರ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಬರುವ ಸುದ್ದಗುಂಟೆಪಾಳ್ಯದಲ್ಲಿ ನಡೆದ ಕಾರ್ಯಕ್ರಮದಲ್ಲಿ ಶಾಸಕ ಎಸ್.ರಘು, ಪಕ್ಷದ ಮುಖಂಡ ರಾಮ್‌ಕುಮಾರ್ ಬಡವರಿಗೆ ಉಚಿತವಾಗಿ ದಿನಸಿ ಕಿಟ್‌ಗಳನ್ನು ವಿತರಿಸಿದರು. ಪಕ್ಷದ ಮುಖಂಡ ನಾಗರಾಜಪ್ಪ ಇದ್ದರು.



ಪದ್ಮನಾಭನಗರ ಕ್ಷೇತ್ರದ ಭುವನೇಶ್ವರಿ ಉದ್ಯಾನದಲ್ಲಿ ಆಟೊ, ಕ್ಯಾಬ್ ಚಾಲಕರು, ಕೂಲಿ ಕಾರ್ಮಿಕರು ಹಾಗೂ ಬೀದಿ ಬದಿ ವ್ಯಾಪಾರಿಗಳಿಗೆ ಕೋವಿಡ್ ಲಸಿಕೆಯನ್ನು ಉಚಿತವಾಗಿ ನೀಡುವ ಕಾರ್ಯಕ್ರಮಕ್ಕೆ ಕಂದಾಯ ಸಚಿವ ಆರ್.ಅಶೋಕ ಚಾಲನೆ ನೀಡಿದರು. ರಾಜ್ಯ ಬಿಜೆಪಿ ಯುವ ಮೋರ್ಚಾ ಅಧ್ಯಕ್ಷ ಡಾ.ಸಂದೀಪ್ ಇದ್ದರು.



ಗಾಂಧಿ ಸೇವಾ ಟ್ರಸ್ಟ್ ಹಾಗೂ ರಕ್ಷಾ ಫೌಂಡೇಷನ್ ವತಿಯಿಂದ ಜಯನಗರದಲ್ಲಿ ಭಾನುವಾರ ನಡೆದ ಕಾರ್ಯಕ್ರಮದಲ್ಲಿ ಗಾಂಧಿ ಸೇವಾ ಟ್ರಸ್ಟ್ ಅಧ್ಯಕ್ಷ ವಿನಯ್ ಗುರೂಜಿ ಬಡವರಿಗೆ ದಿನಸಿ ಕಿಟ್‌ಗಳನ್ನು ವಿತರಿಸಿದರು. ರಕ್ಷಾ ಫೌಂಡೇಷನ್ ಅಧ್ಯಕ್ಷ ಸಿ.ಕೆ.ರಾಮಮೂರ್ತಿ, ಮುಖಂಡರಾದ ನಾಗರತ್ನ, ತಿಪ್ಪೇಸ್ವಾಮಿ, ರಾಜು ಹಾಗೂ ಇತರರು ಇದ್ದರು.



ಯಶವಂತಪುರದ ದಾರಿ ಆಂಜನೇಯಸ್ವಾಮಿ ದೇವಸ್ಥಾನದ ಟ್ರಸ್ಟಿ ಅಂಬರೀಷ್ ಅವರ ನೇತೃತ್ವದಲ್ಲಿ ಬಡವರಿಗೆ ದಿನಸಿ ಕಿಟ್‌ಗಳನ್ನು ಉಪಮುಖ್ಯಮಂತ್ರಿ ಸಿ.ಎನ್. ಅಶ್ವತ್ಥನಾರಾಯಣ ವಿತರಿಸಿದರು. ಜಯಪಾಲ್ ಹಾಗೂ ಇತರರು ಇದ್ದರು.

ಹಸಿ ಗಾಯದ ಮೇಲೆ ಬರೆ ಎಳೆದಂತೆ ಬಂದೆರಗಿದ ಎರಡನೇ ಲಾಕ್‌ಡೌನ್

ಸಣ್ಣ ಕೈಗಾರಿಕೆಗಳ ಮುಂದಿದೆ ದೊಡ್ಡ ಸವಾಲುಗಳ ಸರಮಾಲೆ

• ವಿಜಯಕುಮಾರ್ ಎಸ್.ಕೆ.

ಬೆಂಗಳೂರು: ಬೆಂಗಳೂರು ಸಣ್ಣ ಕೈಗಾರಿಕೆಗಳ ತವರು. ಕೊರೊನಾ ಸೋಂಕು ನಿಯಂತ್ರಣಕ್ಕಾಗಿ ಲಾಕ್‌ಡೌನ್ ಮೇಲೆ ಲಾಕ್‌ಡೌನ್ ಹೇರಿಕೆಯಾಗುತ್ತಿರುವುದು ಸಣ್ಣ ಕೈಗಾರಿಕೆಗಳಿಗೆ ಹಸಿ ಗಾಯಗಳ ಮೇಲೆ ಬರೆ ಎಳೆದಂತೆ ಆಗುತ್ತಿದೆ. ನಿರ್ಬಂಧಗಳು ಸಡಿಲವಾದರೂ ಕೈಗಾರಿಕೋದ್ಯಮಿಗಳು ಸವಾಲುಗಳ ಸರಮಾಲೆಯನ್ನೇ ಎದುರಿಸಬೇಕಾಗಿದೆ.

ದಕ್ಷಿಣ ಏಷ್ಯಾದಲ್ಲಿನ ಅತಿ ದೊಡ್ಡ ಕೈಗಾರಿಕಾ ಪ್ರದೇಶಗಳಲ್ಲಿ ಪೀಣ್ಯ ಕೈಗಾರಿಕಾ ಪ್ರದೇಶವೂ ಒಂದು. ಇದನ್ನೂ ಒಳಗೊಂಡಂತೆ ಬೆಂಗಳೂರು ಸಣ್ಣ ಮತ್ತು ಅತೀ ಸಣ್ಣ ಕೈಗಾರಿಕೆಗಳ ಹಬ್ ಎಂದೇ ಕರೆಸಿಕೊಳ್ಳುತ್ತದೆ. ಆಟೊಮೊಬೈಲ್ ಬಿಡಿಭಾಗ, ಪೌಡರ್ ಕೋಟಿಂಗ್, ಫ್ಯಾಬ್ರಿಕೇಷನ್, ಪ್ಯಾಕೇಜಿಂಗ್ ಇಂಡಸ್ಟ್ರಿ, ಎಲೆಕ್ಟ್ರೊ ಪ್ಲೇಟಿಂಗ್, ಮೆಷಿನ್ ಟೂಲ್ ಕಾಂಪೊನೆಂಟ್ಸ್ ತಯಾರಿಕೆಯಲ್ಲಿ ಸಣ್ಣ ಸಣ್ಣ ಕೈಗಾರಿಕೆಗಳು ದೊಡ್ಡ ಮಟ್ಟದ ಕೊಡುಗೆ ನೀಡುತ್ತಿವೆ.

ಎಲ್ಲವೂ ಸರಾಗವಾಗಿ ನಡೆಯುತ್ತಿದೆ ಎನ್ನುವಷ್ಟರಲ್ಲಿ 2019ರಲ್ಲಿ ಆರ್ಥಿಕ ಹಿಂಜರಿತದಿಂದ ಕೈಗಾರಿಕೆಗಳಿಗೆ ಕೆಲಸ ಇಲ್ಲದಂತಾಗಿತ್ತು. ಇನ್ನೇನು ಚೇತರಿಕೆ ಹಾದಿಯಲ್ಲಿದ್ದಾಗ ಕೋವಿಡ್ ಮೊದಲನೇ ಅಲೆಯ ಲಾಕ್‌ಡೌನ್ ಎದುರಾಯಿತು. ಅದರಿಂದಲೂ ಸುಧಾರಿಸಿಕೊಳ್ಳುವ ತವಕದಲ್ಲಿದ್ದಾಗ ಎರಡನೇ ಅಲೆಯ ನಿಯಂತ್ರಣಕ್ಕೆ ಲಾಕ್‌ಡೌನ್ ಹೇರಲಾಯಿತು. ಇದರಿಂದ ಚೇತರಿಸಿಕೊಳ್ಳುವುದು ಹೇಗೆ ಎಂಬ ಆತಂಕ ಉದ್ಯಮಿಗಳನ್ನು ಕಾಡುತ್ತಿದೆ.

ಕಚ್ಚಾ ವಸ್ತುಗಳ ದರ ಏರಿಕೆ, ಕಾರ್ಮಿಕರ ಕೊರತೆ, ಬ್ಯಾಂಕ್ ಸಾಲದ ಕಂತಿನ ಬಾಕಿ, ವಿದ್ಯುತ್ ದರ ಏರಿಕೆಗಳಿಂದ ಸಣ್ಣ ಕೈಗಾರಿಕೋದ್ಯಮಿಗಳು ಕಂಗಾಲಾಗಿದ್ದಾರೆ. ಅದರಲ್ಲೂ ಕಚ್ಚಾ ವಸ್ತುಗಳ ಬೆಲೆ ಏರಿಕೆಯಾಗಿರುವುದು ಪೆಟ್ಟಿನ ಮೇಲೆ ಪೆಟ್ಟು ತಿಂದು ತೆವಳುತ್ತಿದ್ದ ಹೆಳವ ಎದ್ದು ನಿಲ್ಲಲು ಪ್ರಯತ್ನದಲ್ಲಿದ್ದಾಗ ಆತನ ಕಾಲು ಮುರಿದಂತಾಗಿದೆ.

ಲಾಕ್‌ಡೌನ್ ಅವಧಿಯಲ್ಲಿ ವಿದ್ಯುತ್ ನಿಗದಿತ ಶುಲ್ಕ ಪಾವತಿಗೆ ವಿನಾಯಿತಿ ನೀಡಲಾಗಿದೆ. ಅದೊಂದು ಉಪಕಾರ ಬಿಟ್ಟರೆ, ಸರ್ಕಾರದಿಂದ ಈ ಕ್ಷೇತ್ರದ ಬೇರೆ ಬೇಡಿಕೆಗಳಿಗೆ ಮನ್ನಣೆ ದೊರೆತಿಲ್ಲ. ಕಳೆದ ವರ್ಷ ಲಾಕ್‌ಡೌನ್ ಅವಧಿಯಲ್ಲಿ ಬ್ಯಾಂಕ್ ಸಾಲದ ಕಂತು ಪಾವತಿಗೆ ವಿನಾಯಿತಿ ದೊರೆತಿತ್ತು. ಈ ಬಾರಿ ಅದನ್ನೂ ಸರ್ಕಾರ ಮಾಡಿಲ್ಲ. ಲಾಕ್‌ಡೌನ್ ಕಾರಣವನ್ನು ಪರಿಗಣನೆಗೇ ಪಡೆಯದೆ ಕಂತು ಪಾವತಿಸಲೇಬೇಕು ಎಂದು ಬ್ಯಾಂಕ್‌ಗಳು ಪಟ್ಟು ಹಿಡಿದಿವೆ.

‘ದುಡಿಯುವ ಛಲದೊಂದಿಗೆ ಬ್ಯಾಂಕ್‌ಗಳಲ್ಲಿ ಸಾಲ ಪಡೆದು ಯಂತ್ರ ಖರೀದಿಸಿ ಕೈಗಾರಿಕೆ ಆರಂಭಿಸಿದ್ದೇವೆ. ಯಂತ್ರಗಳ ಚಲನೆಯನ್ನೇ ನಿಲ್ಲಿಸಿದರೆ ದುಡಿಯುವುದು ಹೇಗೆ, ಯಾವ ಹಣದಲ್ಲಿ ಸಾಲದ ಕಂತು ಪಾವತಿಸಬೇಕೋ ತಿಳಿಯದು. ಕಂತು ಪಾವತಿ ಮೂರು ತಿಂಗಳು ನಿಂತರೆ ವಸೂಲಾಗದ ಸಾಲ(ಎನ್‌ಪಿಎ) ಎಂದು ಪರಿಗಣಿಸಿ ಆಸ್ತಿ ಮುಟ್ಟುಗೋಲು ಹಾಕಿಕೊಳ್ಳಲು ಅಧಿಕಾರಿಗಳು ಮುಂದಾಗುತ್ತಾರೆ’ ಎಂದು ಉದ್ಯಮಿಗಳು ಅಳಲು ತೋಡಿಕೊಳ್ಳುತ್ತಾರೆ.

ಲಾಕ್‌ಡೌನ್ ಅವಧಿಯ ಬ್ಯಾಂಕ್ ಸಾಲದ ಕಂತು ಪಾವತಿಯನ್ನು ಮುಂದೂಡಬೇಕು ಎಂಬ ಮನವಿಯನ್ನು ಪೀಣ್ಯ ಕೈಗಾರಿಕಾ ಸಂಘ, ಕರ್ನಾಟಕ ಸಣ್ಣ ಕೈಗಾರಿಕೆಗಳ ಸಂಘ(ಕಾಸಿಯಾ) ಸರ್ಕಾರಕ್ಕೆ ಸಲ್ಲಿಸಿವೆ. ಆದರೂ, ಸರ್ಕಾರ ಅವುಗಳನ್ನು ಪರಿಗಣಿಸಿಲ್ಲ ಎಂಬುದು ಉದ್ಯಮಿಗಳು ಬೇಸರ ವ್ಯಕ್ತಪಡಿಸುತ್ತಾರೆ.


ಕೈಗಾರಿಕೆಗಳ ಉಸಿರಾಟಕ್ಕೂ ಬೇಕಿದೆ ಆಮ್ಲಜನಕ

ಕೋವಿಡ್ ಎರಡನೇ ಅಲೆಯ ರಭಸ ಉತ್ತುಂಗದಲ್ಲಿದ್ದಾಗ ಆಸ್ಪತ್ರೆಗಳಲ್ಲಿ ಆಮ್ಲಜನಕದ ತೀವ್ರ ಕೊರತೆ ಎದುರಾಗಿದ್ದರಿಂದ ಕೈಗಾರಿಕೆಗಳಿಗೆ ಆಮ್ಲಜನಕ ಪೂರೈಕೆಯನ್ನು ಸರ್ಕಾರ ನಿಷೇಧಿಸಿತ್ತು. ಈಗಲೂ ಆಮ್ಲಜನಕ ಪಡೆಯಲು ಅವಕಾಶ ಕಲ್ಪಿಸಿಲ್ಲ.

ಆಮ್ಲಜನಕ ಲಭ್ಯ ಇಲ್ಲದ ಕಾರಣ ಪೀಣ್ಯ ಕೈಗಾರಿಕಾ ಪ್ರದೇಶವೊಂದರಲ್ಲೇ ಸುಮಾರು 2 ಸಾವಿರದಷ್ಟು ಕೈಗಾರಿಕೆಗಳು ಕೆಲಸ ಆರಂಭಿಸಲು ಆಗಿಲ್ಲ. ಕಟ್ಟಿಂಗ್ ಮಷಿನ್‌ಗಳು ಆಮ್ಲಜನಕ ಇಲ್ಲದೆ ಕಾರ್ಯ ಆರಂಭಿಸಲು ಸಾಧ್ಯವೇ ಇಲ್ಲ. ಹೀಗಾಗಿ, ತುರ್ತಾಗಿ ಆಮ್ಲಜನಕ ಪೂರೈಕೆಗೆ ಸರ್ಕಾರ ಮುಂದಾಗಬೇಕು ಎಂದು ಪೀಣ್ಯ ಕೈಗಾರಿಕಾ ಸಂಘದ ಅಧ್ಯಕ್ಷ ಸಿ. ಪ್ರಕಾಶ್ ಒತ್ತಾಯಿಸಿದರು.

‘ಕೋವಿಡ್ ಪ್ರಕರಣಗಳು ಜಾಸ್ತಿ ಆಗಿದ್ದ ಸಂದರ್ಭದಲ್ಲಿ ಜೀವ ಉಳಿಯುವುದು ಮುಖ್ಯ ಎಂಬ ಕಾರಣಕ್ಕೆ ಆಸ್ಪತ್ರೆಗಳಿಗೆ ಆಮ್ಲಜನಕ ಪೂರೈಸಲು ನಾವು ಸಹಕಾರ ನೀಡಿದ್ದೇವೆ. ಈಗ ಪರಿಸ್ಥಿತಿ ಸುಧಾರಿಸಿದೆ. ಸರ್ಕಾರ ಕೂಡಲೇ ನಿಷೇಧ ಹಿಂಪಡೆಯಬೇಕು’ ಎಂದು ಮನವಿ ಮಾಡಿದರು.

‘ಕಾರ್ಮಿಕರ ಕೊರತೆ ಉದ್ಯಮವನ್ನು ಬಹುವಾಗಿ ಕಾಡುತ್ತಿದೆ. ಲಾಕ್‌ಡೌನ್ ವೇಳೆ ಊರಿನ ಹಾದಿ ಹಿಡಿದ ಕಾರ್ಮಿಕರು ವಾಪಸ್ ಬಂದಿಲ್ಲ. ಸಮರ್ಪಕ ಸಾರಿಗೆ ವ್ಯವಸ್ಥೆ ಇಲ್ಲದ ಕಾರಣ ಅವರು ವಾಪಸ್ ಬರುವುದಕ್ಕೆ ಮನಸ್ಸೂ ಮಾಡುತ್ತಿಲ್ಲ. ಸರ್ಕಾರ ಸಾರಿಗೆ ವ್ಯವಸ್ಥೆ ಕಲ್ಪಿಸಬೇಕು’ ಎಂದು ಒತ್ತಾಯಿಸಿದರು.



ಕಾರ್ಖಾನೆಯಲ್ಲಿ ಕೆಲಸ ಮಾಡುತ್ತಿರುವ ಕಾರ್ಮಿಕರು

ವಿಡಿಯೊ ನೋಡಲು ಕೋಡ್ ಸ್ಕ್ಯಾನ್ ಮಾಡಿ
ಪ್ರಜಾವಾಣಿ ನೋಡಿಯೊ

ಸವಾಲುಗಳೇನು?

- ಕಾರ್ಮಿಕರ ಕೊರತೆ
- ಕಚ್ಚಾ ವಸ್ತುಗಳ ಬೆಲೆ ಏರಿಕೆ
- ಆಮ್ಲಜನಕದ ಕೊರತೆ
- ಬ್ಯಾಂಕ್ ಸಾಲದ ಬಾಕಿ
- ವಿದ್ಯುತ್ ದರ ಏರಿಕೆ

ಬೇಡಿಕೆಗಳೇನು?

- ವಿಶೇಷ ಪ್ಯಾಕೇಜ್ ಘೋಷಣೆ
- ಆಮ್ಲಜನಕ ನಿಷೇಧ ಹಿಂತೆಗೆತ
- ಸಾಲದ ಕಂತು ಪಾವತಿಗೆ ಕಾಲಾವಕಾಶ
- ಪರವಾನಗಿ ನವೀಕರಣ ಮುಂದೂಡಿಕೆ
- ಕಬ್ಬಿಣ ರಫ್ತಿಗೆ ಕಡಿವಾಣ
- ಸಾರ್ವಜನಿಕ ಸಾರಿಗೆ ವ್ಯವಸ್ಥೆ

ಕೆಲಸ ಕೈತಪ್ಪುವ ಆತಂಕ

ಬೃಹತ್ ಕೈಗಾರಿಕೆಗಳು ತಮಗೆ ಬೇಕಿರುವ ಬಿಡಿಭಾಗ ತಯಾರಿಸಿಕೊಡುವ ಕೆಲಸವನ್ನು ಸಣ್ಣ ಕೈಗಾರಿಕೆಗಳಿಗೆ ನೀಡುತ್ತವೆ. ಲಾಕ್‌ಡೌನ್ ಕಾರಣದಿಂದ ಈ ಕೆಲಸವೂ ಕೈತಪ್ಪುವ ಆತಂಕ ಎದುರಾಗಿದೆ ಎಂದು ರಾಜ್ಯ ಸಣ್ಣ ಕೈಗಾರಿಕೆಗಳ ಸಂಘದ (ಕಾಸಿಯಾ) ಅಧ್ಯಕ್ಷ ಕೆ.ಬಿ.ಅರಸಪ್ಪ ಹೇಳಿದರು.

‘ಕೋವಿಡ್ ಎರಡನೇ ಅಲೆಯ ಲಾಕ್‌ಡೌನ್‌ನಲ್ಲಿ ಬೃಹತ್ ಕೈಗಾರಿಕೆಗಳ ಕಾರ್ಯನಿರ್ವಹಣೆಗೆ ಅವಕಾಶ ನೀಡಿ ಸಣ್ಣ ಕೈಗಾರಿಕೆಗಳನ್ನು ಸರ್ಕಾರ ಮುಚ್ಚಿಸಿತ್ತು. ಆ ಸಂದರ್ಭದಲ್ಲಿ ತುರ್ತಾಗಿ ಬೇಕಿದ್ದ ಬಿಡಿಭಾಗಗಳನ್ನು ತಯಾರಿಸಿಕೊಡಲು ನೆರೆ ರಾಜ್ಯದಲ್ಲಿ ತೆರೆದುಕೊಂಡಿದ್ದ ಸಣ್ಣ ಕೈಗಾರಿಕೆಗಳಿಗೆ ಕೆಲಸ ಕೊಟ್ಟಿವೆ. ನಮ್ಮ ರಾಜ್ಯದ ದೊಡ್ಡ ಕೈಗಾರಿಕೆಗಳು ಒಮ್ಮೆ ನೆರೆ ರಾಜ್ಯದ ಸಣ್ಣ ಕೈಗಾರಿಕೆಗಳನ್ನು ಅವಲಂಬಿಸಿದರೆ, ಅವುಗಳನ್ನು ಮರಳಿ ನಮ್ಮತ್ತ ಸೆಳೆಯುವುದು ಕಷ್ಟ’ ಎಂದು ಆತಂಕ ವ್ಯಕ್ತಪಡಿಸಿದರು.

‘ಸಣ್ಣ ಕೈಗಾರಿಕೆಗಳ ಎಲ್ಲಾ ಸಮಸ್ಯೆಗಳ ಪಟ್ಟಿಯನ್ನು ಸರ್ಕಾರಕ್ಕೆ ಸಲ್ಲಿಸಿದ್ದೇವೆ. ಲಕ್ಷಾಂತರ ಜನರಿಗೆ ಉದ್ಯೋಗ ನೀಡಿರುವ ಈ ಉದ್ಯಮವನ್ನು ಉಳಿಸಿಕೊಳ್ಳಲು ಸರ್ಕಾರ ನೆರವಿಗೆ ಬರಬೇಕು’ ಎಂದು ಅವರು ಮನವಿ ಮಾಡಿದರು.

ಬೇಕಿದೆ ವಿಶೇಷ ಪ್ಯಾಕೇಜ್

ಲಾಕ್‌ಡೌನ್ ಸಂದರ್ಭದಲ್ಲಿ ಎಲ್ಲಾ ವಲಯಗಳಿಗೂ ಪ್ಯಾಕೇಜ್ ಘೋಷಣೆ ಮಾಡಿದ ಸರ್ಕಾರ, ಸಣ್ಣ ಕೈಗಾರಿಕೆಗಳನ್ನು ಮರೆತಿದೆ. ನೌಕರರಿಗೆ ಸಂಬಳ ಕೊಡಲಾಗದ ಸ್ಥಿತಿಯಲ್ಲಿ ಉದ್ಯಮ ಇದೆ ಎಂದು ಸಿ. ಪ್ರಕಾಶ್ ಹೇಳಿದರು.

ಈ ಉದ್ಯಮ ನಡೆಸಲು ಬರುವುದೇ ಕಷ್ಟ ಎಂಬ ಸ್ಥಿತಿ ಇದೆ. ಈ ಸಂದರ್ಭದಲ್ಲಿ ಉದ್ಯಮಿಗಳಿಗೆ ನೆರವು ಸಿಗದಿದ್ದರೆ ಈ ಕ್ಷೇತ್ರದಿಂದಲೇ ಹೊರ ಹೋಗುವ ಅತಂಕ ಇದೆ. ಹೀಗಾಗಿ, ಸರ್ಕಾರ ಪ್ಯಾಕೇಜ್ ಘೋಷಣೆ ಮಾಡಬೇಕು. ಕಾರ್ಮಿಕರಿಗೂ ನೆರವು ಸಿಗಬೇಕು ಎಂದು ಆಗ್ರಹಿಸಿದರು.

ಬೇರೆಯವರಂತೆ ಮನೆಯಿಂದಲೇ ಕೆಲಸ ಮಾಡಲು ಇಲ್ಲಿ ಸಾಧ್ಯವಿಲ್ಲ. ಹೀಗಾಗಿ ಕಾರ್ಮಿಕರನ್ನು ಕೋವಿಡ್ ಮುಂಚೂಣಿ ಯೋಧರು ಎಂದು ಪರಿಗಣಿಸಬೇಕು. ಆದ್ಯತೆ ಮೇರೆಗೆ ಲಸಿಕೆ ನೀಡಬೇಕು. ಕಾರ್ಖಾನೆ ಪರವಾನಗಿ ನವೀಕರಣ, ಕಾರ್ಮಿಕ ಇಲಾಖೆಯಿಂದ ಅನುಮತಿ ಪಡೆಯುವುದನ್ನಾದರೂ ಸರ್ಕಾರ ಮುಂದೂಡಬೇಕು ಎಂದು ಮನವಿ ಮಾಡಿದರು. ಈ ಸಂಬಂಧ ಮುಖ್ಯಮಂತ್ರಿ ಮತ್ತು ಮುಖ್ಯ ಕಾರ್ಯದರ್ಶಿ ಅವರನ್ನು ಭೇಟಿ ಮಾಡಿ ಮನವಿ ಸಲ್ಲಿಸಿದ್ದೇವೆ. ಆದರೂ ಪ್ರಯೋಜನ ಆಗಿಲ್ಲ ಎಂದು ಬೇಸರ ವ್ಯಕ್ತಪಡಿಸಿದರು.

ಕಚ್ಚಾ ವಸ್ತು: ಕಬ್ಬಿಣದ ಕಡಲೆ

ಕೈಗಾರಿಕೆಗಳಿಗೆ ದುಬಾರಿಯಾಗಿರುವ ಕಚ್ಚಾ ವಸ್ತುಗಳಲ್ಲಿ ಕಬ್ಬಿಣದ ಬೆಲೆಯಂತೂ ಕೈಗೆ ಎಟುಕದೇ ಅಕ್ಷರಶಃ ‘ಕಬ್ಬಿಣದ ಕಡಲೆ’ಯೇ ಆಗಿದೆ.


ಕಚ್ಚಾ ಕಬ್ಬಿಣವನ್ನು ವಿದೇಶಗಳಿಗೆ ರಫ್ತು ಮಾಡಲು ಅವಕಾಶ ನೀಡಲಾಗಿದೆ. ಡಾಲರ್ ರೂಪದಲ್ಲಿ ಹಣ ದೊರೆಯುತ್ತಿರುವ ಕಾರಣ ಸ್ಟೀಲ್ ಕಂಪನಿಗಳು ಹೆಚ್ಚಾಗಿ ರಫ್ತು ಮಾಡುತ್ತಿವೆ. ಪರಿಣಾಮವಾಗಿ ದೇಸಿ ಕೈಗಾರಿಕೆಗಳಿಗೆ ಕಬ್ಬಿಣ ಸಿಗದಂತಾಗಿದ್ದು, ಬೆಲೆ ದುಪ್ಪಟ್ಟಾಗಿದೆ.

‘ಒಂದು ವರ್ಷಕ್ಕೆ ಬೇಕಾಗುವಷ್ಟು ಬಿಡಿಭಾಗಗಳನ್ನು ತಯಾರಿಸಿಕೊಡುವ ಒಪ್ಪಂದವನ್ನು ಸಣ್ಣ ಕೈಗಾರಿಕೆಗಳು ಮಾಡಿಕೊಂಡಿರುತ್ತವೆ. ಕಚ್ಚಾ ವಸ್ತು ಬೆಲೆ ಏರಿಕೆಯಾಗಿದೆ ಎಂಬ ಕಾರಣಕ್ಕೆ ಒಪ್ಪಂದ ಮೀರಲು ಆಗುವುದಿಲ್ಲ. ಅದೇ ಬೆಲೆಯಲ್ಲಿ ಬಿಡಿಭಾಗ ತಯಾರಿಸಿಕೊಡಲು ಸಾಧ್ಯವಾಗದೆ ಸಂಕಷ್ಟಕ್ಕೆ ಸಿಲುಕುತ್ತಿವೆ’ ಎನ್ನುತ್ತಾರೆ ಪೀಣ್ಯ ಕೈಗಾರಿಕಾ ಸಂಘದ ಮಾಜಿ ಅಧ್ಯಕ್ಷ ಡಿ.ಟಿ. ವೆಂಕಟೇಶ್.

‘ರಫ್ತು ಹೆಚ್ಚಳದಿಂದ ಜಿಎಸ್‌ಟಿ ಸಂಗ್ರಹ ಹೆಚ್ಚಳ ಆಗಲಿದೆ ಎಂಬ ಕಾರಣಕ್ಕೆ ಸರ್ಕಾರವೂ ಅವಕಾಶ ನೀಡಿದೆ. ಜಿಎಸ್‌ಟಿ ಒಂದರ ಮೇಲೆ ಸರ್ಕಾರ ಕಣ್ಣಿಟ್ಟರೆ ಅದರ ಪರಿಣಾಮವು ದೇಶದ ಒಟ್ಟು ಆಂತರಿಕ ಉತ್ಪಾದನೆ (ಜಿಡಿಪಿ) ಮೇಲೆ ಬೀರಲಿದೆ. ಅದನ್ನೂ ಸರ್ಕಾರ ಗಮನಿಸಬೇಕಾಗುತ್ತದೆ’ ಎಂದು ಅವರು ವಿವರಿಸಿದರು.



ಸಾಲ ಮಾಡಿ ಮೂರು ತಿಂಗಳ ಹಿಂದೆ ಉದ್ಯಮ ಆರಂಭಿಸಿದ್ದೇನೆ. ಊರಿಗೆ ಹೋದ ಕಾರ್ಮಿಕರು ವಾಪಸ್ ಬಂದಿಲ್ಲ. ಕಾರ್ಖಾನೆ ಮುನ್ನಡೆಸುವುದು ಹೇಗೆ ಎಂದೇ ಗೊತ್ತಾಗುತ್ತಿಲ್ಲ
ಯೋಗೇಶ್, ನವ ಉದ್ಯಮಿ



ಆರ್ಥಿಕ ಹಿಂಜರಿತ ಶುರುವಾದ ಬಳಿಕ ಒಂದರ ಮೇಲೊಂದು ಪೆಟ್ಟುಗಳನ್ನು ಸಣ್ಣ ಕೈಗಾರಿಕೆಗಳು ಅನುಭವಿಸುತ್ತಿವೆ. ಅದರ ಮೇಲೆ ವಿದ್ಯುತ್ ದರ ಹೆಚ್ಚಳದ ಬರೆಯನ್ನೂ ಸರ್ಕಾರ ಎಳೆದಿದೆ
ಮಲ್ಲರಾವ್ ಕುಲಕರ್ಣಿ, ಉದ್ಯಮಿ



ಉದ್ಯಮಿ ಆಗಬೇಕೆಂಬ ಆಸೆಯಿಂದ ಕೈಗಾರಿಕೆ ಆರಂಭಿಸಿದ ಒಂದೇ ತಿಂಗಳಲ್ಲಿ ಲಾಕ್‌ಡೌನ್ ಎದುರಾಯಿತು. ಈಗ ಮೂರು ತಿಂಗಳ ಬ್ಯಾಂಕ್ ಸಾಲದ ಕಂತು ಬಾಕಿ ಇದೆ. ನನ್ನ ಕನಸೇ ಛಿದ್ರವಾಗುವ ಆತಂಕ ಎದುರಾಗಿದೆ
ಎನ್. ಸತೀಶ್, ನವ ಉದ್ಯಮಿ

ಬಿಬಿಎಂಪಿ: ದಿನವೊಂದರಲ್ಲಿ 65 ಸಾವಿರ ಮಂದಿಗೆ ಲಸಿಕೆ ನೀಡುವ ಗುರಿ

ಲಸಿಕೆ– ವಿಶೇಷ ಅಭಿಯಾನ ಇಂದಿನಿಂದ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದಲ್ಲಿ ಅರ್ಹರಿಗೆ ಕೋವಿಡ್ ಲಸಿಕೆ ನೀಡಲು ಬಿಬಿಎಂಪಿ ವಿಶೇಷ ಅಭಿಯಾನ ಹಮ್ಮಿಕೊಂಡಿದೆ. ದಿನವೊಂದರಲ್ಲಿ ಸರಾಸರಿ 65 ಸಾವಿರ ಮಂದಿಗೆ ಲಸಿಕೆ ನೀಡುವ ಗುರಿ ನಿಗದಿಪಡಿಸಿರುವ ಬಿಬಿಎಂಪಿ, ಈ ಸಲುವಾಗಿ 360 ಸೆಷನ್‌ಗಳನ್ನು ಏರ್ಪಡಿಸಲು ಸಿದ್ಧತೆ ನಡೆಸಿದೆ. ಲಸಿಕೆ ನೀಡುವುದಕ್ಕಾಗಿ 433 ಲಸಿಕಾ ಸಿಬ್ಬಂದಿಯನ್ನು ನೇಮಿಸಿದೆ.

ಲಸಿಕಾ ಅಭಿಯಾನದ ಸಿದ್ಧತೆಗಳನ್ನು ಪರಿಶೀಲಿಸಲು ಬಿಬಿಎಂಪಿ ಮುಖ್ಯ ಆಯುಕ್ತ ಗೌರವ್ ಗುಪ್ತ ಅವರು ಅಧಿಕಾರಿಗಳ ಸಭೆಯನ್ನು ವರ್ಚ್ಯುವಲ್ ರೂಪದಲ್ಲಿ ಭಾನುವಾರ ನಡೆಸಿದರು.

‘ಪ್ರತಿ ವಲಯಗಳಲ್ಲೂ ತಳಹಂತದಲ್ಲಿ ಯೋಜನೆ ರೂಪಿಸಿಕೊಂಡು ಅರ್ಹ ಫಲಾನುಭವಿಗಳಿಗೆ ಲಸಿಕೆ ಸಿಗುವಂತೆ ನೋಡಿಕೊಳ್ಳಬೇಕು. ಲಸಿಕಾ ಶಿಬಿರಗಳನ್ನು ಆದಷ್ಟು ಹೆಚ್ಚಿನ ಸಂಖ್ಯೆಯಲ್ಲಿ ಏರ್ಪಡಿಸಬೇಕು. ಅಗತ್ಯ ಸಿಬ್ಬಂದಿಯ ತಂಡಗಳನ್ನು ನಿಯೋಜನೆ ಮಾಡಿಕೊಂಡು ಆದಷ್ಟು ಹೆಚ್ಚು ಮಂದಿ ಶೀಘ್ರವೇ ಲಸಿಕೆ ಪಡೆಯುವಂತೆ ನೋಡಿಕೊಳ್ಳಬೇಕು’ ಎಂದು ಸೂಚನೆ ನೀಡಿದರು.

‘ಲಸಿಕೆ ನೀಡಲು ಗೊತ್ತುಪಡಿಸಲಾದ ಸ್ಥಳಗಳ ಕುರಿತು ಸ್ಥಳೀಯರಿಗೆ ಸಮರ್ಪಕ ಮಾಹಿತಿ ನೀಡಬೇಕು. ಲಸಿಕಾ ಶಿಬಿರಗಳಲ್ಲಿ ಕೋವಿಡ್ ಹರಡುವಿಕೆ ತಡೆಯಲು, ಪ್ರತಿಯೊಬ್ಬರೂ ಮಾಸ್ಕ್ ಧರಿಸಿರುವುದು, ಪರಸ್ಪರ ಅಂತರ ಕಾಯ್ದುಕೊಳ್ಳುವುದು ಮುಂತಾದ ಮುನ್ನೆಚ್ಚರಿಕಾ ಕ್ರಮಗಳನ್ನು ಪಾಲಿಸಬೇಕು. ಈ ಬಗ್ಗೆ ನಿಗಾ ಇಡಲು ಮಾರ್ಷಲ್‌ಗಳನ್ನು ನಿಯೋಜಿಸಲಾಗುತ್ತದೆ’ ಎಂದರು.

ಲಸಿಕಾ ಶಿಬಿರಗಳಿಗೆ ದಿಢೀರ್ ಭೇಟಿ ನೀಡಿ ಮಾಹಿತಿ ಪಡೆಯುವಂತೆ ಹಿರಿಯ ಅಧಿಕಾರಿಗಳಿಗೆ ಸೂಚಿಸಿದರು.

ಬೀದಿ ಬದಿ ವ್ಯಾಪಾರಿಗಳು, ಗಾರ್ಮೆಂಟ್ಸ್ ಕಾರ್ಖಾನೆಗಳ ಕಾರ್ಮಿಕರು, ಕ್ಯಾಬ್ ಮತ್ತು ಆಟೊರಿಕ್ಷಾ ಚಾಲಕರು, ಎಪಿಎಂಸಿ ಮಾರುಕಟ್ಟೆಯ ವರ್ತಕರು, ಬ್ಯಾಂಕ್ ಸಿಬ್ಬಂದಿ, ಹೋಟೆಲ್ ಸಿಬ್ಬಂದಿ, ಕಟ್ಟಡ ಕಾರ್ಮಿಕರು ಹೆಚ್ಚಿನ ಸಂಖ್ಯೆಯಲ್ಲಿ ಇರುವ ಕಡೆಗಳಲ್ಲೆಲ್ಲ ಲಸಿಕಾ ಶಿಬಿರಗಳನ್ನು ಹಮ್ಮಿಕೊಳ್ಳಬೇಕು ಎಂದು ಸಲಹೆ ನೀಡಿದರು.

ಕೇಂದ್ರ ಸರ್ಕಾರದ ನಿರ್ದೇಶನದಂತೆ, ಸೋಮವಾರದಿಂದ ಲಸಿಕಾ ಅಭಿಯಾನವನ್ನು ಹಮ್ಮಿಕೊಳ್ಳಲಾಗಿದೆ. 45 ವರ್ಷ ಮೇಲ್ಪಟ್ಟವರಿಗೆ ಆದ್ಯತೆ ಮೇರೆಗೆ ಲಸಿಕೆ ನೀಡಲಾಗುತ್ತಿದೆ. 2ನೇ ಡೋಸ್ ಪಡೆಯಲು ಬಾಕಿ ಇರುವವರು, ಆರೋಗ್ಯ ಕಾರ್ಯಕರ್ತರು ಮತ್ತು ಮುಂಚೂಣಿ ಕಾರ್ಯಕರ್ತರು, 18 ರಿಂದ 44 ವರ್ಷದೊಳಗಿನವರಲ್ಲಿ ಸರ್ಕಾರ ಗೊತ್ತುಪಡಿಸಿರುವ ಅರ್ಹ ಫಲಾನುಭವಿಗಳು ಮತ್ತು ಆರೋಗ್ಯ ಕ್ಷೇತ್ರದಲ್ಲಿ ಕರ್ತವ್ಯ ಸಲ್ಲಿಸಿರುವ ಮುಂಚೂಣಿ ಕಾರ್ಯಕರ್ತರಿಗೆ ಲಸಿಕೆ ನೀಡಲು ನೀಡಲು ಸರ್ಕಾರ ನಿರ್ದೇಶಿಸಿದೆ.

ಸಭೆಯಲ್ಲಿ ಬಿಬಿಎಂಪಿ ವಿಶೇಷ ಆಯುಕ್ತರಾದ ಡಿ.ರಂದೀಪ್, ತುಳಸಿ ಮದ್ದಿನೇನಿ, ಡಾ.ಹರೀಶ್ ಕುಮಾರ್, ರೆಡ್ಡಿ ಶಂಕರಬಾಬು, ರವೀಂದ್ರ, ಮುಖ್ಯ ಆರೋಗ್ಯಾಧಿಕಾರಿ ಡಾ. ಬಿ.ಕೆ.ವಿಜಯೇಂದ್ರ ಹಾಗೂ ವಿವಿಧ ವಲಯಗಳ ಜಂಟಿ ಆಯುಕ್ತರು, ಆರೋಗ್ಯಾಧಿಕಾರಿಗಳು, ಆರೋಗ್ಯ ವೈದ್ಯಾಧಿಕಾರಿಗಳು ಭಾಗವಹಿಸಿದರು.



ಕೊವ್ಯಾಕ್ಸಿನ್ ಲಭ್ಯ

ಕೊವ್ಯಾಕ್ಸಿನ್ ಲಸಿಕೆಯೂ ಸಾಕಷ್ಟು ಪ್ರಮಾಣದಲ್ಲಿ ಲಭ್ಯವಿದೆ. 45 ವರ್ಷ ಮೇಲ್ಪಟ್ಟವರೂ ಈ ಲಸಿಕೆಯ ಮೊದಲ ಡೋಸ್ ಪಡೆಯುವುದಕ್ಕೂ ಅವಕಾಶ ಕಲ್ಪಿಸಲಾಗಿದೆ ಎಂದು ಬಿಬಿಎಂಪಿ ತಿಳಿಸಿದೆ.

ಕೋವಿಡ್–ಲಸಿಕಾ ಅಭಿಯಾನ: ವಲಯವಾರು ಗುರಿ

ವಲಯ	ಸೆಷನ್‌ಗಳು	ಫಲಾನುಭವಿಗಳು	ನೇಮಿಸಲಾದ ಸಿಬ್ಬಂದಿ
ಬೊಮ್ಮನಹಳ್ಳಿ	30	6,200	41
ದಾಸರಹಳ್ಳಿ	13	5,100	34
ಮಹದೇವಪುರ	12	4,500	30
ಪೂರ್ವ	65	12,450	83
ಆರ್.ಆರ್.ನಗರ	62	9,300	62
ದಕ್ಷಿಣ	86	11,100	74
ಪಶ್ಚಿಮ	49	7,500	50
ಯಲಹಂಕ	44	8,850	59

ವಿದೇಶಕ್ಕೆ ಪ್ರಯಾಣ: ನಾಳೆಯಿಂದ ಲಸಿಕೆ

ಬೆಂಗಳೂರು: ‘ಉದ್ಯೋಗ ಅಥವಾ ವ್ಯಾಸಂಗ ಉದ್ದೇಶದಿಂದ ವಿದೇಶಕ್ಕೆ ತೆರಳುವವರಿಗೆ ಬೆಂಗಳೂರು ನಗರ ವಿಶ್ವವಿದ್ಯಾಲಯದ ಸೆಂಟ್ರಲ್ ಕಾಲೇಜು ಆವರಣದಲ್ಲಿ ಮಂಗಳವಾರದಿಂದ (ಜೂನ್ 22) ಕೋವಿಡ್ ಲಸಿಕೆ ಹಾಕಲಾಗುವುದು’ ಎಂದು ರಾಜ್ಯ ಕೋವಿಡ್ ಕಾರ್ಯಪಡೆ ಅಧ್ಯಕ್ಷರೂ ಆಗಿರುವ ಉಪ ಮುಖ್ಯಮಂತ್ರಿ ಡಾ.ಸಿ.ಎನ್. ಅಶ್ವತ್ಥನಾರಾಯಣ ತಿಳಿಸಿದರು.

ಟೋಕಿಯೊದಲ್ಲಿ ನಡೆಯುವ ಒಲಿಂಪಿಕ್ ಕ್ರೀಡಾಕೂಟಕ್ಕೆ ತೆರಳುವ ಕ್ರೀಡಾಪಟುಗಳೂ ಇಲ್ಲಿ ಲಸಿಕೆ ಪಡೆಯಬಹುದು. ಬೆಳಿಗ್ಗೆ 10.30 ಗಂಟೆಯಿಂದ ಲಸಿಕೆ ನೀಡಲಾಗುವುದು. ಕೇಂದ್ರ ಸರ್ಕಾರದ ಮಾರ್ಗಸೂಚಿಯಂತೆ 28 ದಿನಗಳಲ್ಲೇ ಈ ವರ್ಗದವರಿಗೆ ಎರಡನೇ ಡೋಸ್ ನೀಡಲಾಗುವುದು’ ಎಂದರು.

ಪಾಲಿಕೆಯ ಎಂಟು ವಲಯಗಳ ಆಯುಕ್ತರು, ಬಿಬಿಎಂಪಿ ವ್ಯಾಪ್ತಿಯಲ್ಲಿ ಪೂರ್ವ ವಲಯದ ಆರೋಗ್ಯಾಧಿಕಾರಿಗೆ ಜವಾಬ್ದಾರಿ ನೀಡಲಾಗಿದೆ. ಲಸಿಕೆ ಕೇಂದ್ರಕ್ಕೆ ಬರುವ ಅರ್ಹ ಲಸಿಕಾಂಕ್ಷಿಗಳ ಸ್ವಯಂ ಘೋಷಣಾ ಪತ್ರ ಸೇರಿ ಇತರೆ ದಾಖಲೆಗಳನ್ನು ಪರಿಶೀಲಿಸಬೇಕು. ಲಸಿಕೆ ಪಡೆದ ದೃಢೀಕರಣ ಪತ್ರವನ್ನು ತಕ್ಷಣ ಆನ್‌ಲೈನ್‌ನಲ್ಲಿ ಅಪ್‌ಲೋಡ್ ಮಾಡಿಸಬೇಕು. ಈಗಾಗಲೇ ಮೊದಲ ಡೋಸ್ ಪಡೆದಿರುವವರು ತಮ್ಮ ಪಾಸ್‌ಪೋರ್ಟ್ ಸಂಖ್ಯೆಯನ್ನು ದಾಖಲು ಮಾಡಿರದಿದ್ದರೆ ಎರಡನೇ ಡೋಸ್ ಪಡೆಯಲು ಬರುವಾಗ ಕಡ್ಡಾಯವಾಗಿ ದಾಖಲಿಸಿಕೊಳ್ಳಬೇಕು’ ಎಂದೂ ಹೇಳಿದರು.

ನಗರದ ಕೋವಿಡ್ ಅಂಕಿ–ಅಂಶ

- 12,05,259 ▲ ಒಟ್ಟು ಪ್ರಕರಣಗಳು
- 71,282 ▼ ಸಕ್ರಿಯ ಪ್ರಕರಣಗಳು
- 11,18,531 ▲ ಗುಣಮುಖರಾದವರು
- 15,445 ▲ ಒಟ್ಟು ಸಾವು

ದಿನದ ಏರಿಕೆ

- ಹೊಸ ಪ್ರಕರಣ 933 ▼
- ಗುಣಮುಖ 1,902 ▼
- ಸಾವು 12 ▼

ಆಧಾರ: ರಾಜ್ಯ ಆರೋಗ್ಯ ಇಲಾಖೆ
ಪ್ರಜಾವಾಣಿ ಗ್ರಾಫಿಕ್ಸ್

3ನೇ ಅಲೆ ಎದುರಿಸಲು ಸಜ್ಜಾಗಿ: ವಿನಯ್ ಗುರೂಜಿ ಸಲಹೆ

ಬೆಂಗಳೂರು: ಕೋವಿಡ್ ಮೂರನೇ ಅಲೆ ಎದುರಿಸಲು ಸಜ್ಜಾಗುವಂತೆ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರಿಗೆ ಚಿಕ್ಕಮಗಳೂರು ಸಮೀಪದ ಗೌರಿಗದ್ದೆಯ ವಿನಯ್ ಗುರೂಜಿ ಸಲಹೆ ನೀಡಿದ್ದಾರೆ.

ಮುಖ್ಯಮಂತ್ರಿಯ ನಿವಾಸ ‘ಕಾವೇರಿ’ಗೆ ಭಾನುವಾರ ಬೆಳಿಗ್ಗೆ ಬಂದ ವಿನಯ್ ಗುರೂಜಿ, ‘ತಜ್ಞರು ಸಲಹೆ ಕೊಟ್ಟಂತೆ ಮೂರನೇ ಅಲೆ ಕೂಡ ಬರುತ್ತಿದೆ. ಅದರ ಬಗ್ಗೆ ನಿರ್ಲಕ್ಷ್ಯ ಬೇಡ. ಈಗಿನಿಂದಲೇ ಎಲ್ಲ ಮುನ್ನೆಚ್ಚರಿಕೆ ಕ್ರಮಗಳನ್ನು ತೆಗೆದುಕೊಳ್ಳಿ’ ಎಂದರು.

‘ಆಸ್ಪತ್ರೆಗಳಲ್ಲಿ ವಿಶೇಷ ವ್ಯವಸ್ಥೆಗಳನ್ನು ಮಾಡಬೇಕು. ಕೊಪ್ಪ, ಬಾಳೆಹೊನ್ನೂರು ಆಸ್ಪತ್ರೆಗಳನ್ನು ಮೇಲ್ದರ್ಜೆಗೆ ಏರಿಸಬೇಕು. ಪ್ರತಿ ತಾಲ್ಲೂಕು ಕೇಂದ್ರಗಳಲ್ಲಿ ವಿಶೇಷ ಆಸ್ಪತ್ರೆಗಳಿದ್ದರೆ ಅನುಕೂಲ’ ಎಂದರು.

ಅಂತರ್ಜಲ ಮಟ್ಟ ಹೆಚ್ಚಿಸಬೇಕು: ಅಂತರ್ಜಲ ಮಟ್ಟ ಹೆಚ್ಚಿಸುವ ಬಗ್ಗೆಯೂ ಮುಖ್ಯಮಂತ್ರಿ ಜೊತೆ ಚರ್ಚಿಸಿದ ಗುರೂಜಿ, ‘ಮಲೆನಾಡು ಸೇರಿದಂತೆ ಎಲ್ಲೆಡೆ ಅಂತರ್ಜಲಮಟ್ಟ ಕುಸಿಯುತ್ತಿದೆ. ಹೀಗಾಗಿ ನೀಲಗಿರಿ, ಅಕೇಶಿಯಾ ಗಿಡಗಳನ್ನು ತೆರವುಗೊಳಿಸಿ, ಹಣ್ಣಿನ ಗಿಡ ಬೆಳೆಸಬೇಕು. ಇದರಿಂದ ಪಶುಪಕ್ಷಿಗಳಿಗೆ ಹಣ್ಣು ಸಿಗಲಿದೆ. ಅಂತರ್ಜಲ ಮಟ್ಟ ಕೂಡ ಹೆಚ್ಚಲಿದೆ ಎಂದರು.

ಕೋವಿಡ್ ಅಂಕಿ–ಅಂಶ
ಆಧಾರ: ಕೋವಿಡ್19 ಇಂಡಿಯಾ, ಒಆರ್‌ಜಿ

	ವಿಶ್ವ	ಭಾರತ
ಒಟ್ಟು ಪ್ರಕರಣ	17.91 ಕೋಟಿ ▼	2.99 ಕೋಟಿ ▲
ಸಕ್ರಿಯ ಪ್ರಕರಣ	1.15 ಕೋಟಿ	6.99 ಲಕ್ಷ ▼
ಗುಣಮುಖ	16.36 ಕೋಟಿ ▲	2.88 ಕೋಟಿ ▲
ಸಾವು	38.79 ಲಕ್ಷ ▲	3.88 ಲಕ್ಷ ▲
ದಿನದ ಮಾಹಿತಿ: ಹೊಸ ಪ್ರಕರಣ	3.59 ಲಕ್ಷ ▼	52,092 ▲
ದಿನದ ಮಾಹಿತಿ: ಗುಣಮುಖ	3.65 ಲಕ್ಷ ▼	75,962 ▲
ದಿನದ ಮಾಹಿತಿ: ಸಾವು	8,178 ▼	1,395 ▲

ಎಲ್ಲಿ ಹೆಚ್ಚು ಪ್ರಕರಣ (ಹಿಂದಿನ 24 ಗಂಟೆಗಳಲ್ಲಿ)

- 81,574 ▼ ಬ್ರೆಜಿಲ್
- 28,734 ▲ ಕೊಲಂಬಿಯಾ
- 17,906 ▼ ರಷ್ಯಾ

ಎಲ್ಲಿ ಹೆಚ್ಚು ಸಕ್ರಿಯ ಪ್ರಕರಣಗಳು (ಲಕ್ಷಗಳಲ್ಲಿ)

- 50.89 ▼ ಅಮೆರಿಕ
- 11.19 ▲ ಬ್ರೆಜಿಲ್
- 3.01 ▼ ಅರ್ಜೆಂಟಿನಾ

(*ರಾತ್ರಿ 12.00 ಗಂಟೆವರೆಗಿನ ಮಾಹಿತಿ)

ಎಲ್ಲಿ ಹೆಚ್ಚು ಸಾವು

- 1.17 ಲಕ್ಷ ಮಹಾರಾಷ್ಟ್ರ ▲
- 31,197 ತಮಿಳುನಾಡು ▲
- 24,914 ದೆಹಲಿ ▲

ಎಲ್ಲಿ ಹೆಚ್ಚು ಪ್ರಕರಣ (ಲಕ್ಷಗಳಲ್ಲಿ)

- 59.72 ಮಹಾರಾಷ್ಟ್ರ ▲
- 28.09 ಕೇರಳ ▲
- 24.22 ತಮಿಳುನಾಡು ▲

ಪ್ರಜಾವಾಣಿ ಗ್ರಾಫಿಕ್ಸ್

ಹೊರಗೆ ಹೋಗುವಾಗ ಮುಖಗವಸು ಧರಿಸಿ

ಬಿಜೆಪಿ ಮುಖ್ಯಮಂತ್ರಿಗಳ ಜೊತೆ ಜೆ.ಪಿ. ನಡ್ಡಾ ವಿಡಿಯೊ ಸಂವಾದ

ಲಸಿಕೆ ಮೇಳ, ಪಕ್ಷ ಸಂಘಟನೆ ಚರ್ಚೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಅಂತರರಾಷ್ಟ್ರೀಯ ಯೋಗ ದಿನಾಚರಣೆ ಪ್ರಯುಕ್ತ ಸೋಮವಾರ (ಜೂನ್ 21) ಹಮ್ಮಿಕೊಂಡಿರುವ ಮಹಾ ಲಸಿಕೆ ಅಭಿಯಾನವನ್ನು ಯಶಸ್ವಿಗೊಳಿಸಬೇಕು. ಸಮರ್ಪಕವಾಗಿ ಕೋವಿಡ್‌ನ್ನು ನಿಭಾಯಿಸುವ ಜೊತೆಗೆ ಕೇಂದ್ರ– ರಾಜ್ಯ ಸರ್ಕಾರದ ಯೋಜನೆಗಳನ್ನು ಜನರಿಗೆ ತಲುಪಿಸಬೇಕು’ ಎಂದು ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ. ನಡ್ಡಾ ಸಲಹೆ ನೀಡಿದ್ದಾರೆ.

ಬಿಜೆಪಿ ಅಧಿಕಾರದಲ್ಲಿರುವ ರಾಜ್ಯಗಳ ಮುಖ್ಯಮಂತ್ರಿಗಳ ಜೊತೆ ಅವರು ಭಾನುವಾರ ನಡೆಸಿದ ವಿಡಿಯೊ ಸಂವಾದದಲ್ಲಿ ತಮ್ಮ ನಿವಾಸ ‘ಕಾವೇರಿ’ಯಿಂದ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಭಾಗವಹಿಸಿದರು. ಸುಮಾರು ಒಂದು ಗಂಟೆ ಸಂವಾದ ನಡೆಯಿತು.

ಪಕ್ಷ ಸಂಘಟನೆಗೂ ಒತ್ತು: ‘ಕೋವಿಡ್ ಸಂಕಷ್ಟ ಸಮಯದಲ್ಲಿ ಕಾರ್ಯಕರ್ತರು ಜನರ ಜತೆ ಇರಬೇಕು. ಬೂತ್ ಮಟ್ಟಕ್ಕೆ ಕಾರ್ಯಕ್ರಮಗಳು ತಲುಪಬೇಕು. ಲಸಿಕೆ ಎಲ್ಲರಿಗೂ ಸಿಗುವಂತೆ ಮಾಡಬೇಕು. ಪಕ್ಷ ಸಂಘಟನೆ ಚಟುವಟಿಕೆಗೂ ಆದ್ಯತೆ ನೀಡಬೇಕು’ ಎಂದೂ ನಡ್ಡಾ ಸಲಹೆ ನೀಡಿದ್ದಾರೆ.

‘ಮುಂದಿನ ಚುನಾವಣೆಗಳಲ್ಲಿ ಕೋವಿಡ್ ಪ್ರಮುಖ ವಿಷಯ ಆಗಲಿದೆ. ಅದನ್ನು ನಿಭಾಯಿಸುವಲ್ಲಿ ಯಶಸ್ವಿಯಾದರೆ ಪಕ್ಷಕ್ಕೆ ಲಾಭ, ಸಂಘಟನೆಗೂ ಲಾಭ. ವಿಫಲವಾದರೆ ಪಕ್ಷದ ವಿರುದ್ಧ ವಿರೋಧ ಪಕ್ಷಗಳಿಗೆ ಅಸ್ತ್ರ ಸಿಕ್ಕಂತಾಗಲಿದೆ’ ಎಂದು ಕಿವಿಮಾತು ಹೇಳಿದ್ದಾರೆ.

‘ಕೋವಿಡ್ ನಿಯಮಗಳನ್ನು ಪಾಲಿಸಿ ಪ್ರತಿ ತಾಲ್ಲೂಕಿನಲ್ಲೂ ಯೋಗ ದಿನ ಆಚರಿಸಬೇಕು. ಕಲಾವಿದರು, ಪ್ರಮುಖ ವ್ಯಕ್ತಿಗಳು, ಕ್ರೀಡಾಪಟುಗಳು, ಸಾರ್ವಜನಿಕರು ಭಾಗವಹಿಸಲು ಆಹ್ವಾನ ನೀಡಬೇಕು. ಇದೇ 25ರಂದು ತುರ್ತುಪರಿಸ್ಥಿತಿಯ ನೆನಪಿಗಾಗಿ ಎಲ್ಲ ತಾಲ್ಲೂಕುಗಳಲ್ಲಿ ಕರಾಳ ದಿನಾಚರಣೆಗೆ ಪಕ್ಷ ನಿರ್ಧರಿಸಿದೆ. ಅಂದು ವಿಡಿಯೊ ಸಂವಾದ ಮೂಲಕ ತುರ್ತು ಪರಿಸ್ಥಿತಿ ವೇಳೆ ಜೈಲಿನಲ್ಲಿದ್ದವರನ್ನು ಗುರುತಿಸುವ ಕೆಲಸ ಮಾಡಬೇಕು’ ಎಂದೂ ಸಲಹೆ ನೀಡಿದರು.

‘ಇದೇ 23ರಂದು ಡಾ. ಶ್ಯಾಮ್ ಪ್ರಸಾದ್ ಮುಖರ್ಜಿ ಅವರ ಪುಣ್ಯತಿಥಿ ಮತ್ತು ಜುಲೈ 6ರಂದು ಅವರ ಜನ್ಮದಿನ ಇದೆ. ಈ ಅವಧಿಯಲ್ಲಿ ಬೂತ್ ಮಟ್ಟದಲ್ಲಿ ಕಾರ್ಯಕ್ರಮಗಳನ್ನು ಆಯೋಜಿಸಲಾಗುವುದು. ಶ್ಯಾಮ್ ಪ್ರಸಾದ್ ಮುಖರ್ಜಿ ಅವರ ಚಿಂತನೆಗಳು, ಜೀವನ ಸ್ಫೂರ್ತಿ ಬಗ್ಗೆ ವಿಡಿಯೊ ಸಂವಾದ ಮೂಲಕ ವಿಚಾರ ಸಂಕಿರಣಗಳನ್ನು ಹಮ್ಮಿಕೊಳ್ಳಬೇಕು’ ಎಂದೂ ನಡ್ಡಾ ಸಲಹೆ ನೀಡಿದ್ದಾರೆ.

11 ಲಕ್ಷ ಡೋಸ್ ವಿತರಣೆ ಗುರಿ

ಕೇಂದ್ರ ಸರ್ಕಾರದ ನಿರ್ದೇಶನದಂತೆ ಆರೋಗ್ಯ ಇಲಾಖೆಯು ರಾಜ್ಯದಾದ್ಯಂತ ಸೋಮವಾರ (ಜೂ.21) ಲಸಿಕಾ ಮೇಳವನ್ನು ಹಮ್ಮಿಕೊಂಡಿದ್ದು, ಒಂದೇ ದಿನ 11 ಲಕ್ಷ ಡೋಸ್ ಲಸಿಕೆ ವಿತರಿಸುವ ಗುರಿಯನ್ನು ಹಮ್ಮಿಕೊಂಡಿದೆ.

ಈ ಬಗ್ಗೆ ಕ್ರಮ ಕೈಗೊಳ್ಳುವಂತೆ ರಾಷ್ಟ್ರೀಯ ಆರೋಗ್ಯ ಅಭಿಯಾನದ ನಿರ್ದೇಶಕಿ ಅರುಂಧತಿ ಚಂದ್ರಶೇಖರ್ ಅವರು ಬಿಬಿಎಂಪಿ ಮುಖ್ಯ ಆಯುಕ್ತರು ಹಾಗೂ ಜಿಲ್ಲಾಧಿಕಾರಿಗಳಿಗೆ ಸೂಚಿಸಿದ್ದಾರೆ.

‘ಲಸಿಕಾ ಮೇಳದಲ್ಲಿ 45 ವರ್ಷ ಮೇಲ್ಪಟ್ಟ ಫಲಾನುಭವಿಗಳಿಗೆ ಮೊದಲ ಆದ್ಯತೆ ನೀಡಬೇಕು. ಅದೇ ರೀತಿ, ಎರಡನೇ ಡೋಸ್ ಪಡೆಯುವವರು, ಆರೋಗ್ಯ ಕಾರ್ಯಕರ್ತರು ಮತ್ತು ಮುಂಚೂಣಿ ಯೋಧರಿಗೆ ಲಸಿಕೆ ಒದಗಿಸಬೇಕು. ಗುರುತಿಸಲಾದ 18 ರಿಂದ 44 ವರ್ಷದವರೆಗಿನ ದುರ್ಬಲ ಗುಂಪಿನ ಫಲಾನುಭವಿಗಳು ಹಾಗೂ ಮುಂಚೂಣಿ ಕಾರ್ಯಕರ್ತರಿಗೆ ಲಸಿಕೆ ನೀಡಬೇಕು. ಈ ಮೇಳವನ್ನು ಯಶಸ್ವಿಯಾಗಿಸಲು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಸಿಬ್ಬಂದಿಯನ್ನು ಬಳಸಿಕೊಳ್ಳಬೇಕು’ ಎಂದು ತಿಳಿಸಿದ್ದಾರೆ.

ವೈದ್ಯಕೀಯ ಶಿಕ್ಷಣ ಸಂಸ್ಥೆಗಳು, ಜಿಲ್ಲಾ ಮತ್ತು ತಾಲ್ಲೂಕು ಆಸ್ಪತ್ರೆಗಳು, ಪ್ರಾಥಮಿಕ ಆರೋಗ್ಯ ಕೇಂದ್ರಗಳು ಸೇರಿದಂತೆ ರಾಜ್ಯದಾದ್ಯಂತ 5 ಸಾವಿರಕ್ಕೂ ಹೆಚ್ಚು ಲಸಿಕಾ ಕೇಂದ್ರಗಳಲ್ಲಿ ಮೇಳ ನಡೆಯಲಿದೆ.



ಲಸಿಕೆ ವಿತರಣಾ ಅಭಿಯಾನದಲ್ಲಿ ಜನರು ಲಸಿಕೆ ಪಡೆದುಕೊಂಡರು


5 ಸಾವಿರ ಮಂದಿಗೆ ಲಸಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರೈನ್ ಬೋ ಮಕ್ಕಳ ಆಸ್ಪತ್ರೆಯು ನಗರದಲ್ಲಿ ಭಾನುವಾರ ಆಯೋಜಿಸಿದ ಲಸಿಕೆ ವಿತರಣಾ ಅಭಿಯಾನದಲ್ಲಿ 5 ಸಾವಿರಕ್ಕೂ ಅಧಿಕ ಮಂದಿ ಲಸಿಕೆ ಪಡೆದುಕೊಂಡರು.

ಈ ಅಭಿಯಾನದಲ್ಲಿ ‘ಕೋವಿಶೀಲ್ಡ್’ ಮತ್ತು ‘ಕೋವ್ಯಾಕ್ಸಿನ್’ ಎರಡೂ ಲಸಿಕೆಯನ್ನು ನೀಡಲಾಯಿತು. 30 ಕೌಂಟರ್‌ಗಳಲ್ಲಿ 50ಕ್ಕೂ ಅಧಿಕ ಸಿಬ್ಬಂದಿಯನ್ನು ನಿಯೋಜಿಸಲಾಗಿತ್ತು. ಹಾಗೆಯೇ, 10 ಕೇಂದ್ರಗಳನ್ನು ಲಸಿಕೆ ನೀಡಲು ಸಿದ್ಧಪಡಿಸಲಾಗಿತ್ತು.

ಈ ಬಗ್ಗೆ ಮಾತನಾಡಿದ ಆಸ್ಪತ್ರೆಯ ಮುಖ್ಯಸ್ಥ ನಿತ್ಯಾನಂದ, ‘ಕೋವಿಡ್‌ನಿಂದ ರಕ್ಷಣೆ ಪಡೆಯಲು ಲಸಿಕೆ ಸಹಕಾರಿ. ಜನತೆ ಲಸಿಕೆ ಪಡೆಯಲು ಕಾತರರಾಗಿದ್ದಾರೆ. ಆದರೆ, ಎಲ್ಲೆಡೆ ಲಸಿಕೆ ದೊರೆಯುತ್ತಿಲ್ಲ. ಹೀಗಾಗಿ, ಹತ್ತು ದಿನಗಳಿಂದ ಲಸಿಕೆ ಅಭಿಯಾನ ನಡೆಸುತ್ತಿದ್ದೇವೆ’ ಎಂದು ತಿಳಿಸಿದರು.



ಸುಭಾಷಿತ

ನನ್ನನ್ನು ನಾನು ಇನ್ನೊಬ್ಬರೊಂದಿಗೆ ಹೋಲಿಸಿಕೊಳ್ಳುತ್ತೇನೆ ಎಂದರೆ, ನನ್ನನ್ನು ನಾನೇ ನಾಶಪಡಿಸಿಕೊಳ್ಳುತ್ತಿದ್ದೇನೆ ಎಂದರ್ಥ.

–ಜಿಡ್ಡು ಕೃಷ್ಣಮೂರ್ತಿ

ಲಸಿಕೆ: ಲಿಂಗ ಅಸಮಾನತೆ ನಿವಾರಣೆಗೆ ಬೇಕಿದೆ ಅಭಿಯಾನ

ಕೋವಿಡ್ ಲಸಿಕೆ ಪಡೆಯುವ ವಿಚಾರದಲ್ಲಿ ಲಿಂಗ ಅಸಮಾನತೆ ಉಂಟಾಗಿದೆ. ಲಸಿಕೆ ಪಡೆಯುವಲ್ಲಿ ಭಾರತದಲ್ಲಿ ಮಹಿಳೆಯರು ಪುರುಷರಿಗಿಂತ ಹಿಂದೆ ಉಳಿದಿದ್ದಾರೆ. ಕನಿಷ್ಠ ಒಂದು ಡೋಸ್ ಲಸಿಕೆ ಪಡೆದ ಪುರುಷರು ಹಾಗೂ ಮಹಿಳೆಯರ ಸಂಖ್ಯೆಯನ್ನು ಹೋಲಿಸಿದರೆ ಈಗ ಶೇಕಡ 15ರಷ್ಟು ವ್ಯತ್ಯಾಸ ಇದೆ. ಕಳವಳವನ್ನು ಇನ್ನಷ್ಟು ಹೆಚ್ಚಿಸುವ ಸಂಗತಿಯೆಂದರೆ, ಈ ವ್ಯತ್ಯಾಸವು ಈಚಿನ ತಿಂಗಳುಗಳಲ್ಲಿ ಜಾಸ್ತಿ ಆಗಿದೆ. ಏಪ್ರಿಲ್ 10ರ ಅಂಕಿ–ಅಂಶದ ಪ್ರಕಾರ, ಲಸಿಕೆ ಪಡೆದ ಮಹಿಳೆಯರು ಹಾಗೂ ಪುರುಷರ ನಡುವಿನ ವ್ಯತ್ಯಾಸ ಶೇ 2ರಷ್ಟು ಮಾತ್ರ ಆಗಿತ್ತು. ಇದು ಏಪ್ರಿಲ್ 24ರ ವೇಳೆಗೆ ಶೇ 12ರಷ್ಟಕ್ಕೆ ತಲುಪಿತು. ಮೇ 6ರ ವೇಳೆಗೆ ಇದು ಶೇ 24ಕ್ಕೆ ಏರಿಕೆ ಕಂಡಿತು. ಆ ಬಳಿಕ ವ್ಯತ್ಯಾಸದಲ್ಲಿ ತುಸು ಇಳಿಕೆ ಉಂಟಾಗಿದೆ. ಲಸಿಕೆ ನೀಡಿಕೆಯಲ್ಲಿ ಲಿಂಗ ಅಸಮಾನತೆಯು ಜಮ್ಮು ಮತ್ತು ಕಾಶ್ಮೀರದಲ್ಲಿ ಅತಿಹೆಚ್ಚು. ಇದಾದ ನಂತರದ ಸ್ಥಾನಗಳಲ್ಲಿ ದೆಹಲಿ ಮತ್ತು ಉತ್ತರಪ್ರದೇಶ ಇವೆ. ಅಸಮಾನತೆ ಇಲ್ಲದಂತೆ ನೋಡಿಕೊಳ್ಳುವಲ್ಲಿ ಕೇರಳ ಹಾಗೂ ಛತ್ತೀಸಗಡ ಪ್ರಶಂಸೆಗೆ ಅರ್ಹವಾದ ಕೆಲಸ ಮಾಡಿವೆ. ಈ ಎರಡು ರಾಜ್ಯಗಳಲ್ಲಿ ಮಹಿಳೆಯರು ಪುರುಷರಿಗಿಂತ ಹೆಚ್ಚಿನ ಸಂಖ್ಯೆಯಲ್ಲಿ ಲಸಿಕೆ ಪಡೆದಿದ್ದಾರೆ. ಇಲ್ಲಿ ಕರ್ನಾಟಕದ ಸಾಧನೆಯು ಕಡಿಮೆಯೇನೂ ಅಲ್ಲ. ದೇಶದಲ್ಲಿ ಲಸಿಕೆ ನೀಡುವಲ್ಲಿ ಐದನೆಯ ಅತ್ಯಂತ ಕನಿಷ್ಠ ಅಸಮಾನತೆ ಇರುವುದು ಕರ್ನಾಟಕದಲ್ಲಿ. ಪರಿಸ್ಥಿತಿಯನ್ನು ಇನ್ನಷ್ಟು ಉತ್ತಮ ಪಡಿಸುವ ಅವಕಾಶ ಖಂಡಿತ ಇದೆ. ದೇಶದಲ್ಲಿ ಲಸಿಕೆ ಪಡೆದವರಲ್ಲಿ ಮಹಿಳೆಯರಿಗಿಂತ ಪುರುಷರೇ ಜಾಸ್ತಿ ಇರುವುದಕ್ಕೆ ದೇಶದಲ್ಲಿನ ಲಿಂಗ ಅನುಪಾತದಲ್ಲಿನ ವ್ಯತ್ಯಾಸವೇ ಕಾರಣ ಎನ್ನಲು ಆಗದು. ಭಾರತದ ಜನಸಂಖ್ಯೆಯಲ್ಲಿ ಪುರುಷರ ಸಂಖ್ಯೆಯು ಮಹಿಳೆಯರ ಸಂಖ್ಯೆಗಿಂತ ಶೇ 5.7ರಷ್ಟು ಜಾಸ್ತಿ ಇದೆ. ಲಸಿಕೆ ಪಡೆದವರ ಪ್ರಮಾಣದಲ್ಲಿ ಪುರುಷರು ಹಾಗೂ ಮಹಿಳೆಯರ ನಡುವಿನ ವ್ಯತ್ಯಾಸವು ಶೇ 6ರ ಆಸುಪಾಸಿನಲ್ಲಿ ಇದ್ದಿದ್ದರೆ, ಅದಕ್ಕೆ ಲಿಂಗ ಅನುಪಾತದಲ್ಲಿನ ಅಸಮಾನತೆ ಕಾರಣ ಎಂದು ಹೇಳಬಹುದಿತ್ತು. ಆದರೆ, ಲಸಿಕೆ ಪಡೆದಿರುವುದರಲ್ಲಿನ ವ್ಯತ್ಯಾಸವು ಶೇ 6ಕ್ಕಿಂತ ಬಹಳ ಹೆಚ್ಚಾಗಿರುವುದು ಕಳವಳಕ್ಕೆ ಕಾರಣ.



ಲಸಿಕೆ ಪಡೆಯುವಲ್ಲಿ ಇರುವ ತಪ್ಪು ಗ್ರಹಿಕೆಗಳು ಹಾಗೂ ಸುಳ್ಳು ಸುದ್ದಿಗಳು ದೂರವಾಗಿ, ಜನ ಸ್ವಯಂಪ್ರೇರಿತರಾಗಿ ಲಸಿಕೆ ಪಡೆಯುವಂತೆ ಆಗಬೇಕು

ಆರೋಗ್ಯ ಸೇವೆಗಳನ್ನು ಒದಗಿಸುವ ವಿಚಾರದಲ್ಲಿ ಸಮಾಜದಲ್ಲಿ ಇರುವ ರಾಚನಿಕ ಸಮಸ್ಯೆಗಳು ಈ ಅಸಮಾನತೆಗೆ ಒಂದು ಕಾರಣ. ಸಾಮಾಜಿಕ ವ್ಯವಸ್ಥೆಯು ಮಹಿಳೆಯರ ಪರವಾಗಿ ಇಲ್ಲ. ಕುಟುಂಬಗಳು ಕೂಡ ಮಹಿಳೆಯರ ಆರೋಗ್ಯವು ಇತರೆಲ್ಲವುಗಳಿಗಿಂತ ಹೆಚ್ಚು ಪ್ರಮುಖ ಎಂದು ಪರಿಗಣಿಸುವ ಸಾಧ್ಯತೆ ಕಡಿಮೆ ಇದೆ. ಡಿಜಿಟಲ್ ಸಾಧನಗಳ ಬಳಕೆಯಲ್ಲಿ ಕೂಡ ಲಿಂಗ ಅಸಮಾನತೆ ಇದೆ. ಸ್ಮಾರ್ಟ್‌ಫೋನ್ ಹೊಂದಿರುವ ಮಹಿಳೆಯರ ಪ್ರಮಾಣ ಕಡಿಮೆ ಇದೆ ಹಾಗೂ ಅವರು ಕೋವಿನ್ ಆ್ಯಪ್ ಬಳಸಿ ಲಸಿಕೆ ಪಡೆಯಲು ಹೆಸರು ನೋಂದಾಯಿಸುವುದನ್ನು ತಿಳಿದುಕೊಂಡಿರುವ ಸಾಧ್ಯತೆಗಳು ಕಡಿಮೆ. ಪುರುಷರು ದುಡಿಯಲು ಮನೆಯಿಂದ ಹೊರಗಡೆ ಹೋಗುವ ಕಾರಣ, ಅವರ ಆರೋಗ್ಯವನ್ನು ರಕ್ಷಿಸಬೇಕು, ಅವರ ಆರೋಗ್ಯ ಕಾಪಾಡುವುದಕ್ಕೆ ಹೆಚ್ಚಿನ ಆದ್ಯತೆ ನೀಡಬೇಕು ಎಂಬ ಗ್ರಹಿಕೆ ಕೂಡ ಸಮಾಜದ ಕೆಲವು ವರ್ಗಗಳಲ್ಲಿ ಇದೆ. ಕೆಲಸ ಅರಸಿ ದೂರದ ಊರುಗಳಿಗೆ ಹೋಗದ ಗ್ರಾಮೀಣ ಪ್ರದೇಶಗಳ ಮಹಿಳೆಯರಿಗೆ ಕೋವಿಡ್ ಲಸಿಕೆಯ ಅಗತ್ಯ ಇಲ್ಲ ಎಂಬ ಭಾವನೆಯೂ ಕೆಲವರಲ್ಲಿ ಇದೆ. ಲಸಿಕೆಗಳು ಮಹಿಳೆಯರು ಸಮಯಕ್ಕೆ ಸರಿಯಾಗಿ ಋತುಮತಿ ಆಗದಂತೆ ಮಾಡುತ್ತವೆ, ಅವರ ಗರ್ಭಧಾರಣೆ ಸಾಮರ್ಥ್ಯವನ್ನು ಕುಗ್ಗಿಸುತ್ತವೆ ಎಂಬ ಸುಳ್ಳುಸುದ್ದಿಗಳು ಹರಡಿವೆ. ಇಂತಹ ತಪ್ಪು ಗ್ರಹಿಕೆಗಳು, ಸುಳ್ಳು ಸುದ್ದಿಗಳು ಲಸಿಕೆ ಪಡೆಯುವುದಕ್ಕೆ ಹಲವರು ಹಿಂದೇಟು ಹಾಕುವಂತೆ ಮಾಡಿವೆ, ಮಹಿಳೆಯರು ಲಸಿಕೆ ಪಡೆಯದಂತೆ ಮಾಡಿವೆ.

ಲಸಿಕೆ ಕೊಡುವ ವ್ಯವಸ್ಥೆಯಲ್ಲಿ ಇದ್ದ ಡಿಜಿಟಲ್ ಕಂದಕವನ್ನು ತಡವಾಗಿಯಾದರೂ ಒಪ್ಪಿಕೊಂಡ ಸರ್ಕಾರವು, ನೋಂದಣಿ ಇಲ್ಲದೆಯೂ ಲಸಿಕಾ ಕೇಂದ್ರಕ್ಕೆ ಬಂದು ಲಸಿಕೆ ಹಾಕಿಸಿಕೊಳ್ಳುವ ವ್ಯವಸ್ಥೆ ಕಲ್ಪಿಸಿದೆ. ಈಗ ಮಹಿಳೆಯರು ಲಸಿಕೆ ಪಡೆಯಲು ಸ್ಮಾರ್ಟ್‌ಫೋನ್ ಹೊಂದಿರಬೇಕಾದ ಅಗತ್ಯ ಇಲ್ಲ, ಕೋವಿನ್ ಪೋರ್ಟಲ್ ಮೂಲಕ ಹೆಸರು ನೋಂದಾಯಿಸಿಕೊಳ್ಳಬೇಕಾದ ಅಗತ್ಯವೂ ಇಲ್ಲ. ಇದು ಲಸಿಕೆ ಪಡೆಯುವಲ್ಲಿ ಇರುವ ದೊಡ್ಡ ಅಡ್ಡಿಯೊಂದನ್ನು ನಿವಾರಿಸಬಹುದು. ಮನೆಮನೆಗೆ ತೆರಳಿ ಲಸಿಕೆ ನೀಡಬೇಕು ಎಂದು ಕೆಲವು ತಜ್ಞರು ಸಲಹೆ ಮಾಡಿದ್ದಾರೆ. ಆದರೆ, ಲಸಿಕೆಯು ಅದನ್ನು ಪಡೆದವರ ಮೇಲೆ ಅಡ್ಡಪರಿಣಾಮಗಳನ್ನು ಉಂಟುಮಾಡುತ್ತದೆಯೇ ಎಂಬುದನ್ನು ಕೆಲವು ಹೊತ್ತಿನವರೆಗೆ ಗಮನಿಸಬೇಕಿರುವ ಕಾರಣ, ಮನೆಮನೆಗೆ ತೆರಳಿ ಲಸಿಕೆ ನೀಡುವುದು ಸಾಧ್ಯವಾಗಲಿಕ್ಕಿಲ್ಲ. ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಲಸಿಕೆ ಬಗ್ಗೆ ಇರುವ ಸುಳ್ಳುಸುದ್ದಿಗಳನ್ನು ಹೋಗಲಾಡಿಸಲು ಅಭಿಯಾನ ಶುರು ಮಾಡಬೇಕು. ಜನ ಸ್ವಯಂಪ್ರೇರಿತರಾಗಿ ಲಸಿಕೆ ಪಡೆಯುವಂತೆ ಆಗಬೇಕು. ಮಹಿಳೆಯರು ತಾವಾಗಿಯೇ ಬಂದು ಲಸಿಕೆ ಪಡೆಯುವಂತೆ ಮಾಡಲು ಆಶಾ ಕಾರ್ಯಕರ್ತೆಯರನ್ನು ಬಳಸಿಕೊಳ್ಳಬಹುದು. ಕೋವಿಡ್ ಎರಡನೆಯ ಅಲೆಯ ತೀವ್ರತೆ ಈಗ ಕಡಿಮೆ ಆಗಿರಬಹುದು. ಆದರೆ, ಇದು ತೀವ್ರವಾಗಿದ್ದ ಸಂದರ್ಭದಲ್ಲಿ ಒಂದೇ ಮನೆಯಲ್ಲಿ ಹಲವರಿಗೆ ಕೋವಿಡ್ ತಗುಲಿದ್ದು ವರದಿಯಾಗಿದೆ. ಕುಟುಂಬದಲ್ಲಿ ಒಬ್ಬರಿಗೆ ಕೋವಿಡ್ ಬಂದರೆ, ಅದು ಅವರಿಗೆ ಮಾತ್ರ ಸೀಮಿತ ಆಗಿರುವುದಿಲ್ಲ ಎಂಬುದನ್ನು ಇದು ಹೇಳುತ್ತದೆ. ಹಾಗಾಗಿ, ಮನೆಯಲ್ಲೇ ಇರುವವರಾದರೂ, ಹೊರಗಡೆ ಹೋಗಿ ಬರುವವರಾದರೂ ಮಹಿಳೆಯರು ಕೂಡ ತಾವಾಗಿಯೇ ಮುಂದಾಗಿ ಕೋವಿಡ್ ಲಸಿಕೆ ಹಾಕಿಸಿಕೊಳ್ಳಬೇಕಿರುವುದು ಇಡೀ ಕುಟುಂಬದ ಆರೋಗ್ಯ ದೃಷ್ಟಿಯಿಂದಲೂ ಮುಖ್ಯವಾದುದು. ಇದರಲ್ಲಿ ನಿರ್ಲಕ್ಷ್ಯ ಬೇಡ.

ದಿನದ ಟ್ವೀಟ್

ಎಲ್ಲರ ಮೇಲೂ ಪರಿಣಾಮ



ಮೊದಲ ಬಾರಿ 100 ರೂಪಾಯಿ ಕೊಟ್ಟು ಲೀಟರ್ ಪೆಟ್ರೋಲ್ ಹಾಕಿಸಿಕೊಂಡೆ. ಸರ್ಕಾರದವರು ಈ ಹಗಲು ದರೋಡೆ ನಿಲ್ಲಿಸಲೇಬೇಕು. ಈ ಹಗಲು ದರೋಡೆಯ ಪರಿಣಾಮ ದೇಶದ ಎಲ್ಲಾ ವರ್ಗದ ಜನರಿಗೂ ತಟ್ಟುತ್ತದೆ. ದಯವಿಟ್ಟು ನಿಲ್ಲಿಸಿ plzzzzzz.

ಸಂತೋಷ ಕುಮಾರ ಜಿ.ಕೆ., ನಾಗರಿಕ



ತಪ್ಪದೇ ಅನುಸರಿಸಿ

ಕೋವಿಡ್ -19 ಮಾರ್ಗಸೂಚಿಗಳನ್ನು ಸಂಪೂರ್ಣವಾಗಿ ಅನುಸರಿಸಿ:
ಜೀವಗಳನ್ನು ಉಳಿಸುವ ಸಲುವಾಗಿ.
ಲಾಕ್‌ಡೌನ್ ತಪ್ಪಿಸಲು.
ಆರೋಗ್ಯ ರಕ್ಷಣೆ ಮತ್ತು ಆರ್ಥಿಕತೆಗೆ ನೆರವಾಗಲು.

ಅಧಿಕಾರ್ ಶ್ರೀವಾಸ್ತವ, ಎಂಜಿನಿಯರ್

50 ವರ್ಷಗಳ ಹಿಂದೆ

ಸೋಮವಾರ, 21-6-1971

• ಬಾಂಗ್ಲಾ ದೇಶ: ಕಗ್ಗೊಲೆ ನಿಲ್ಲದೆ ಭಾರತ-ಪಾಕ್ ಶೃಂಗಸಭೆ ಅಸಾಧ್ಯ

ಶ್ರೀನಗರ, ಜೂನ್ 20–ಬಾಂಗ್ಲಾ ದೇಶದ ಬಗ್ಗೆ ಯಾವುದೇ ಶೃಂಗ ಸಮ್ಮೇಳನವನ್ನು ಕರೆಯುವ ಮುನ್ನ ‘ಅಲ್ಲಿ ನಡೆಯುತ್ತಿರುವ ಕಗ್ಗೊಲೆ ತತ್‌ಕ್ಷಣವೇ ನಿಲ್ಲಬೇಕಾಗಿದೆ’ ಎಂದು ಪ್ರಧಾನಿ ಶ್ರೀಮತಿ ಇಂದಿರಾ ಗಾಂಧಿ ಅವರು ಇಂದು ಇಲ್ಲಿ ಹೇಳಿದರು.

ಮತ್ತೊಂದು ದೇಶ ಕರೆಯುವ ಇಂತಹ ಶೃಂಗಸಭೆಗೆ ಭಾರತ ಹಾಜರಾಗಬೇಕಾದರೆ ಇದೇ ಪ್ರಥಮ ಪೂರ್ವ ಅಗತ್ಯ ಎಂದು ಕಾಶ್ಮೀರ ಕಣಿವೆಗೆ ನೀಡಿದ್ದ ತಮ್ಮ ಎರಡು ದಿನಗಳ ಭೇಟಿಯ ನಂತರ ನವದೆಹಲಿಗೆ ತೆರಳಲು ವಿಮಾನ ಏರುವ ಮುನ್ನ ನಡೆಸಿದ 30 ನಿಮಿಷಗಳ ವಾರ್ತಾಗೋಷ್ಠಿಯಲ್ಲಿ ಶ್ರೀಮತಿ ಇಂದಿರಾ ಗಾಂಧಿ ಅವರು ತಿಳಿಸಿದರು.

• ಎಸ್ಸೆಸ್ಪಿ– ಪಿಎಸ್‌ಪಿ ವಿಲೀನ ಒಪ್ಪಂದಕ್ಕೆ ಸಹಿ; ಹೊಸ ಪಕ್ಷದ ಉದಯ

ನವದೆಹಲಿ, ಜೂನ್ 20– ಸಂಯುಕ್ತ ಸಮಾಜವಾದಿ ಪಕ್ಷ ಮತ್ತು ಪ್ರಜಾ ಸಮಾಜವಾದಿ ಪಕ್ಷ ವಿಲೀನದ ಒಪ್ಪಂದವೊಂದಕ್ಕೆ ಸಹಿ ಮಾಡಿದುದರಿಂದ ಇಂದು ‘ಭಾರತದ ಸಮಾಜವಾದಿ ಪಕ್ಷ’ ಅಸ್ತಿತ್ವಕ್ಕೆ ಬಂದಿತು.

ಅಕ್ಕಪಕ್ಕದಲ್ಲಿ ತಮ್ಮ ತಮ್ಮ ಪಕ್ಷಗಳ ಪ್ರಧಾನ ಕಾರ್ಯದರ್ಶಿಗಳೊಡನೆ ಇದ್ದ ಸಂಯುಕ್ತ ಸಮಾಜವಾದಿ ಪಕ್ಷದ ಅಧ್ಯಕ್ಷ ಶ್ರೀ ಕರ್ಪೂರಿ ಠಾಕೂರ್ ಮತ್ತು ಪ್ರಜಾ ಸಮಾಜವಾದಿ ಪಕ್ಷದ ಅಧ್ಯಕ್ಷ ಶ್ರೀ ಎನ್.ಜಿ. ಗೋರೆ ಅವರು ಇಂದು ಬೆಳಿಗ್ಗೆ ಒಪ್ಪಂದಕ್ಕೆ ಸಹಿ ಹಾಕಿದರು.

• ಕೊಳಲಿಗೆ ಕರೆ

ನವದೆಹಲಿ, ಜೂನ್ 20– ಸಿತಾರ್ ನಂತೆಯೇ ಭಾರತೀಯ ಕೊಳಲು ಸಹ ಪಾಶ್ಚಿಮಾತ್ಯ ದೇಶಗಳಲ್ಲಿ ತುಂಬಾ ಜನಪ್ರಿಯವಾಗುತ್ತಿದೆ.

ಈಗಾಗಲೇ ಸುಮಾರು 90 ಸಾವಿರ ಕೊಳಲುಗಳನ್ನು ರಫ್ತು ಮಾಡಿರುವ ಕೈಗಾರಿಕಾ ಸಹಕಾರ ಸಂಘಗಳ ರಾಷ್ಟ್ರೀಯ ಫೆಡರೇಷನ್ ಇನ್ನೂ 40 ಸಾವಿರ ಕೊಳಲುಗಳಿಗಾಗಿ ಇರುವ ವಿದೇಶಿ ಬೇಡಿಕೆಗಳನ್ನು ಪೂರೈಸಬೇಕಾಗಿದೆ.

ಲಂಡನ್ನಿನ ಆಕ್ಸ್‌ಫಾಮ್ ಆ್ಯಕ್ಟಿವಿಟೀಸ್ ಸಂಸ್ಥೆಯವರೇ ಭಾರತೀಯ ಕೊಳಲುಗಳ ಮುಖ್ಯ ಆಮದುಗಾರರು.

ವನ್ಯಜೀವಿ ಅಧ್ಯಯನ ಮತ್ತು ಸಂರಕ್ಷಣೆಯ ಕ್ರಮಗಳು ಅವುಗಳಿಗೆ ಉರುಳಾಗಬಾರದು

ವನ್ಯಜೀವಿ ಛಾಯಾಗ್ರಹಣದ ನೈತಿಕ ಪ್ರಶ್ನೆ!



ವಿಶ್ಲೇಷಣೆ

ಅಖಿಲೇಶ್ ಚಿಪ್ಪಳಿ

ವನ್ಯಜೀವಿ ಅಧ್ಯಯನ ಮತ್ತು ಸಂರಕ್ಷಣೆ, ಅವುಗಳ ಜೀವನಕ್ರಮ ಅಭ್ಯಾಸದ ಜೊತೆಗೆ ಸುಂದರ ಪ್ರಾಣಿ-ಪಕ್ಷಿ-ಕೀಟಗಳ ಛಾಯಾಚಿತ್ರಗಳನ್ನು ತೆಗೆಯುವ ಹಲವು ಕ್ರಮಗಳು ಕಾಲಕಾಲಕ್ಕೆ ಟೀಕೆಗೆ ಒಳಗಾಗುತ್ತಿವೆ. ಹಾಗಂತ ಎಲ್ಲ ರೀತಿಯ ಕ್ರಮಗಳೂ ಪ್ರಶ್ನಾರ್ಹವಾಗಿವೆ ಎಂದು ಹೇಳಲು ಬರುವುದಿಲ್ಲ.

ಸೂರಕ್ಕಿಯು (ಸನ್ ಬರ್ಡ್) ತನ್ನ ಮರಿಗಳಿಗೆ ಆಹಾರ ತಿನ್ನಿಸುತ್ತಿರುವ ದೃಶ್ಯವೊಂದನ್ನು ಪರಿಚಯದ ವನ್ಯಜೀವಿ ಛಾಯಾಚಿತ್ರಕಾರರೊಬ್ಬರು ಫೇಸ್‌ಬುಕ್ಕಿನಲ್ಲಿ ಹಂಚಿಕೊಂಡಿದ್ದರು. ಅವರಿಗೆ ಫೋನ್ ಮಾಡಿ ‘ಈ ತರಹದ ಫೋಟೊ ತೆಗೆಯುವುದು ಹಕ್ಕಿಗಳ ಹಿತದೃಷ್ಟಿಯಿಂದ ಒಳ್ಳೆಯದಲ್ಲ ಮತ್ತು ವನ್ಯಜೀವಿ ಛಾಯಾಚಿತ್ರಕಾರರ ನೈತಿಕತನವೂ ಅಲ್ಲ’ ಎಂಬ ಸಲಹೆ ನೀಡಿದೆ. ಹೊಸದಾಗಿ ವನ್ಯಜೀವಿ ಚಿತ್ರ ತೆಗೆಯುವ ಹವ್ಯಾಸ ಬೆಳೆಸಿಕೊಂಡಿದ್ದ ಅವರಿಗೆ ಈ ಸೂಕ್ಷ್ಮ ತಿಳಿದಿರಲಿಲ್ಲ. ಆಮೇಲೆ ತಿದ್ದಿಕೊಂಡರೆನ್ನಿ.

ಪ್ರಪಂಚದಲ್ಲಿ ಡ್ರೋನ್ ಯುಗ ಆರಂಭವಾದಂದಿನಿಂದ, ಅವುಗಳನ್ನು ಬಳಸಿ ವಿಡಿಯೊ ಚಿತ್ರೀಕರಣ ಮಾಡುವ ಗೀಳು ಎಲ್ಲೆಡೆ ಪ್ರಾರಂಭವಾಗಿದೆ. ಡ್ರೋನ್ ತಂತ್ರಜ್ಞಾನವನ್ನು ಬಳಸಿಕೊಂಡು ಅದ್ಭುತ ವನ್ಯಜೀವಿ ಸಾಕ್ಷ್ಯಚಿತ್ರಗಳನ್ನು ತೆಗೆದಿರುವುದನ್ನು ಅಲ್ಲಗಳೆಯಲಾಗದು. ಉದಾಹರಣೆಗೆ, ಕರ್ನಾಟಕ ರಾಜ್ಯ ಅರಣ್ಯ ಇಲಾಖೆಯು ಚಿತ್ರಿಸಿದ ‘ವೈಲ್ಡ್ ಕರ್ನಾಟಕ’ ಎಂಬ ಸಾಕ್ಷ್ಯಚಿತ್ರ ಅದ್ಭುತವಾಗಿ ಮೂಡಿಬಂದಿದೆ. ಈ ಚಿತ್ರೀಕರಣದ ಸಂದರ್ಭದಲ್ಲಿ ಡ್ರೋನ್‌ನಲ್ಲಿ ಉಂಟಾದ ತಾಂತ್ರಿಕ ದೋಷದಿಂದ ಅದು ವಿದೇಶಿ ಕೊಕ್ಕರೆಯ ಮೇಲೆ ಬಿದ್ದು ಆ ಪಕ್ಷಿ ಸತ್ತುಹೋಯಿತು ಹಾಗೂ ಇದು ಎಲ್ಲೂ ದಾಖಲಾಗಲಿಲ್ಲ ಎಂಬುದನ್ನು ಇಲ್ಲಿ ಚರ್ಚೆಗೆ ತರುವುದು ಬೇಡ.

ರಷ್ಯಾದ ಓಕೋಟ್ಸ್ ಸಮುದ್ರದ ಪಕ್ಕದಲ್ಲಿರುವ ಹಿಮಾಚ್ಛಾದಿತ ಗುಡ್ಡವನ್ನು ಗಾಬರಿಯಿಂದ ಹತ್ತುತ್ತಿರುವ ತಾಯಿ ಕರಡಿ ಮತ್ತದರ ಮರಿಯ ವಿಡಿಯೊ ಜಾಲತಾಣದಲ್ಲಿ ಬಹಳ ಜನಪ್ರಿಯವಾಗಿತ್ತು. ವಿಪರೀತ ಜಾರಿಕೆಯಿಂದ ಕೂಡಿದ, ಕಡಿದಾದ, ದುರ್ಗಮವಾದ ಹಿಮಗುಡ್ಡವನ್ನು ತಾಯಿಯೇನೋ ಏರಿಬಿಟ್ಟಿತು. ಅದರ ಪುಟ್ಟಮರಿ ಮಾತ್ರ ಹಲವು ಪ್ರಯತ್ನಗಳ ನಂತರದಲ್ಲಿ ಹಿಮವನ್ನೇರಿ ತಾಯಿಯನ್ನು ಸೇರಿಕೊಂಡಿತು. ಸುಮಾರು ಮೂರು ನಿಮಿಷಗಳ ವಿಡಿಯೊ ನೋಡಿದಾಗ ಮೈ ಜುಮ್ಮೆನ್ನುತ್ತದೆ. ಹವ್ಯಾಸಿ ಛಾಯಾಗ್ರಾಹಕನೊಬ್ಬ ಡ್ರೋನ್ ಮೂಲಕ ಅತ್ಯುತ್ತಮ ವಿಡಿಯೊವನ್ನು ತೆಗೆಯುವ ಪ್ರಯತ್ನದಲ್ಲಿ ಸಂಭವಿಸಿದ ಘಟನೆಯಿದು. ಮೇಲ್ನೋಟಕ್ಕೆ ಇದೊಂದು ಸಾಟಿಯಿಲ್ಲದ ಅದ್ಭುತವಾದ ವಿಡಿಯೊ ಎಂದು ನೋಡುಗರಿಗೆ ತೋರುತ್ತದೆಯಾದರೂ, ಛಾಯಾಗ್ರಾಹಕನ ಶ್ರೇಷ್ಠತೆಯ ವ್ಯಸನಕ್ಕೆ ಕಾರಣವಾದ ಘಟನೆಯೆಂದೇ ವನ್ಯಜೀವಿ ತಜ್ಞರು ವಿಶ್ಲೇಷಿಸಿದ್ದಾರೆ.

ಹಿಮಾಚ್ಛಾದಿತ ಬೆಟ್ಟದಲ್ಲಿ ಕಲ್ಲುಬಂಡೆಗಳೂ ಇದ್ದವು. ತಾಯಿ ಕರಡಿಯು ಮರಿಯೊಂದಿಗೆ ಕಲ್ಲುಗಳನ್ನೇ ಬಳಸಿ ಬೆಟ್ಟವೇರುತ್ತಿತ್ತು. ಆ ಹೊತ್ತಿಗೆ ಡ್ರೋನ್ ಪ್ರವೇಶ ಕರಡಿಯ ಕುಟುಂಬವನ್ನು ಧೃತಿಗೆಡಿಸಿತು. ದಿಕ್ಕುತಪ್ಪಿದ ಕರಡಿ ಡ್ರೋನ್‌ನಿಂದ ತಪ್ಪಿಸಿಕೊಳ್ಳಲು ಅನಿವಾರ್ಯವಾಗಿ ಹಿಮಮುಚ್ಚಿದ ದಾರಿಯನ್ನು ಬಳಸಿತು. ದೃಢದೇಹ ಮತ್ತು ಅನುಭವದ ಕಾರಣಕ್ಕೆ ತಾಯಿ ಕರಡಿ ಕಷ್ಟದಿಂದಲೇ ಬೆಟ್ಟವೇರಿತು. ಅನುಭವವೂ ಇಲ್ಲದ, ಕಡಿಮೆ ಶಕ್ತಿ ಹೊಂದಿದ ಮರಿ ಕಷ್ಟಕ್ಕೆ ಸಿಲುಕಿತು. ಇನ್ನೇನು ಗುರಿ ಮುಟ್ಟಿತು ಎನ್ನುವ ಹೊತ್ತಿನಲ್ಲೇ ಡ್ರೋನ್ ಚಾಲಕ ಮರಿಯ ಹತ್ತಿರವೇ ಯಂತ್ರವನ್ನು ತಿರುಗಿಸುತ್ತಾನೆ. ತೀರಾ ಹತ್ತಿರಕ್ಕೆ ಬಂದ ಡ್ರೋನ್ ತನ್ನ ಮರಿಗೆ ಅಪಾಯ ಉಂಟು ಮಾಡಬಹುದು ಎನ್ನುವ ಭಯದಿಂದ, ತಾಯಿ ಕರಡಿ ಮುಂಗೈ ಬೀಸುತ್ತದೆ. ಮರಿಯು ಹಿಮವನ್ನು ಗಟ್ಟಿಯಾಗಿ ಹಿಡಿದುಕೊಳ್ಳುವ ಪ್ರಯತ್ನದಲ್ಲೇ ಪುನಃ ಪಾತಾಳಕ್ಕೆ ಜಾರುತ್ತದೆ. ಡ್ರೋನ್ ಶಬ್ದದ ಭಯದಿಂದಲೇ ಮತ್ತೆ ಚುರುಕಾಗಿ ಏರುವ ಪ್ರಯತ್ನ ಮಾಡಿ ತಾಯಿಯನ್ನು ಸೇರುವಲ್ಲಿ ಯಶಸ್ವಿಯಾಗುತ್ತದೆ. ಡ್ರೋನ್ ಚಾಲಕನ ಹುಚ್ಚಾಟದಿಂದ ಮರಿ ಹಿಮದಿಂದ ಜಾರಿಬಿದ್ದು ಸಾಯುವ ಎಲ್ಲ ಅಪಾಯವೂ ಇತ್ತು ಎಂದು ವನ್ಯಜೀವಿ ತಜ್ಞರು ವಿಶ್ಲೇಷಿಸಿದ್ದಾರೆ.

ದಕ್ಷಿಣದ ಚಿರಾಪುಂಜಿ ಎಂಬ ಖ್ಯಾತಿಯ ಆಗುಂಬೆ ದಟ್ಟ ಮಳೆಕಾಡುಗಳ ತವರು. ಈ ಗಿರಿಶಿಖರಗಳ ದಟ್ಟ ಕಾನನದಲ್ಲಿ ಪ್ರಪಂಚದಲ್ಲೇ ಅತ್ಯಪರೂಪವಾದ, ವಿಶಿಷ್ಟವಾದ ಮರಜೀವಿಯೊಂದು ವಾಸಿಸುತ್ತದೆ. ಅದೇ ಸಿಂಗಳೀಕ. ಪಶ್ಚಿಮಘಟ್ಟದ ಕೆಲವು ತಪ್ಪಲುಗಳಲ್ಲಿ ಮಾತ್ರ ಇವುಗಳ ಸಂತತಿ ಇದೆ. ಇಡೀ ಪ್ರಪಂಚದಲ್ಲಿ ಇವುಗಳ ಸಂಖ್ಯೆ ಬರೀ 3,000. ಇಂತಹ ದಟ್ಟ ಗುಡ್ಡಗಳ ನಡುವೆ ರಾಷ್ಟ್ರೀಯ ಹೆದ್ದಾರಿ 169ಎ ಹಾದು ಹೋಗುತ್ತದೆ. ಆಗುಂಬೆಯಿಂದ ಸೋಮೇಶ್ವರದವರೆಗಿನ ಹತ್ತು ಕಿಲೊ ಮೀಟರ್ ವ್ಯಾಪ್ತಿ ಬಹಳ ಅಪಾಯಕಾರಿಯಾದ ತಿರುವುಗಳುಳ್ಳ ಘಾಟಿ.

ಕಳೆದ ಐದು ವರ್ಷಗಳಿಂದ ಈ ಭಾಗದಲ್ಲಿ ಮಾನವ ಲೋಭದ ವಿದ್ಯಮಾನವೊಂದು ಪ್ರಾರಂಭವಾಯಿತು. ಕೆಲವು ವನ್ಯಜೀವಿ ಛಾಯಾಗ್ರಾಹಕರು ಮರದ ನೆತ್ತಿಯ ಮೇಲಿರುವ ಸಿಂಗಳೀಕಗಳ ಫೋಟೊಗಳಿಗೆ ಮುಗಿ ಬೀಳತೊಡಗಿದರು. ಬಹಳ ನಾಚಿಕೆ ಸ್ವಭಾವದ ಸಿಂಗಳೀಕಗಳು ಸುಲಭಕ್ಕೆ ಇವರ ಕ್ಯಾಮೆರಾ ಕಣ್ಣಿಗೆ ಲಭ್ಯವಾಗುತ್ತಿರಲಿಲ್ಲ. ಹೇಗಾದರೂ ಮಾಡಿ ಅವುಗಳನ್ನು ಮರದ ನೆತ್ತಿಯಿಂದ ಕೆಳಗೆ ಬರುವ ಹಾಗೆ ಮಾಡಿದರೆ, ಅವುಗಳ ಫೋಟೊ ತೆಗೆಯುವುದು ಸುಲಭ ಎಂಬ ದುಷ್ಟ ಯೋಚನೆಯೊಂದು ಬಂದಿದ್ದೇ ತಡ, ಕಾರ್ಯಗತವಾಗಲು ಹೆಚ್ಚು ಸಮಯ ಬೇಕಾಗಲಿಲ್ಲ.



ಪೇಟೆಯ ರಾಸಾಯನಿಕಯುಕ್ತ ಹಣ್ಣು ಹಂಪಲು, ತರಕಾರಿಗಳು ಘಾಟಿಯ ತಿರುವುಗಳ ಬಳಿಗೆ ಬಂದು ಸಿಂಗಳೀಕಗಳಿಗೆ ಕಾದು ಕುಳಿತವು. ಮೊದ ಮೊದಲು ಮನುಷ್ಯರ ಪ್ರಯತ್ನ ಫಲಿಸಲಿಲ್ಲ. ಆನೆಯನ್ನೇ ಖೆಡ್ಡಾಕ್ಕೆ ಕೆಡವಿ ಬುದ್ಧಿ ಕಲಿಸಿದ, ಸಿಂಹದ ಬಾಯಿಯಲ್ಲಿ ತಲೆಯಿಟ್ಟು ತೋರಿಸಿ ಹಣ ಮಾಡುವ, ಹುಲಿಯನ್ನು ಬೆಕ್ಕಿನ ಮಟ್ಟಕ್ಕೆ ತಂದು ನಿಲ್ಲಿಸಿದ ನರನಿಗೆ, ಈ ವಾನರನನ್ನು ಕೆಳಗಿಳಿಸುವುದು ದೊಡ್ಡ ಮಾತೇ ಅಲ್ಲ ಬಿಡಿ.

ಸಿಂಗಳೀಕಗಳು ಮನುಷ್ಯರು ಇಟ್ಟ, ಸುಲಭದಲ್ಲಿ ಲಭ್ಯವಾಗುವ ಆಮಿಷದ ವಸ್ತುಗಳಿಗೆ ಮನಸೋತವು. ವನ್ಯಜೀವಿ ಛಾಯಾಗ್ರಾಹಕರಿಗೆ ಇದೊಂದು ಸುಸಂದರ್ಭ ವಾಯಿತು. ಮಾರುದ್ದದ ಕ್ಯಾಮೆರಾಗಳು ಲಕ್ಷಾಂತರ ಚಿತ್ರಗಳನ್ನು ತೆಗೆದವು. ಜಾಲತಾಣದಲ್ಲಿ ವಿಜೃಂಭಿಸಿದ ಸಿಂಗಳೀಕಗಳ ಛಾಯಾಚಿತ್ರಗಳು ಇನ್ನಷ್ಟು ಪ್ರವಾಸಿಗರನ್ನು ಆಕರ್ಷಿಸಿದವು. ಹಣ್ಣು-ತರಕಾರಿ ಮಾರುವವರಿಗೆ ಶುಕ್ರದೆಸೆ. ಶನಿವಾರ ಮತ್ತು ಭಾನುವಾರ ಬರುವ ವೀಕೆಂಡ್ ಪ್ರವಾಸಿಗರಿಗೂ ಎಲ್ಲೂ ಕಾಣದ ಈ ಸಿಂಗಳೀಕಗಳು ಅಚ್ಚರಿ ಹುಟ್ಟಿಸಿದವು. ಪೇಟೆಯ ಹಣ್ಣು ತಿನ್ನುವ ಸಿಂಗಳೀಕಗಳು ಕುರುಕುರೆ ತಿನ್ನಲಾರವೇ? ಹೀಗೆ ಅವುಗಳ ಆರೋಗ್ಯ ಮತ್ತು ಪಚನಶಕ್ತಿಗೆ ಸವಾಲಾಗುವ ಮಾನವ ಅಂಗಡಿಯ ಎಲ್ಲಾ ವಸ್ತುಗಳಿಗೂ ದಾಸರಾದವು.

ನಾವೊಂದಿಷ್ಟು ಜನ ಈ ಕುರಿತು ಅರಣ್ಯ ಇಲಾಖೆಗೆ ತಕರಾರು ಸಲ್ಲಿಸಿದೆವು. ಅತ್ಯಪರೂಪದ ಸಿಂಗಳೀಕಗಳು ರಸ್ತೆಗೆ ಇಳಿದು ಭಿಕ್ಷೆ ಬೇಡುವ ಸ್ಥಿತಿಗೆ ಬಂದಿದ್ದು ಇಲಾಖೆಯವರನ್ನೂ ಆತಂಕಿತರನ್ನಾಗಿ ಮಾಡಿತ್ತು. ಫಲಿತಾಂಶವಾಗಿ ಒಂದಿಷ್ಟು ಜನ ಫಾರೆಸ್ಟರ್ ಮತ್ತು ಗಾರ್ಡ್‌ಗಳನ್ನು ನಿಯಮಿಸಿದ ಅವರು, ಸಿಂಗಳೀಕಗಳು ರಸ್ತೆಗೆ ಬಾರದಂತೆ ತಡೆಯುವುದು ಮತ್ತು ಮನುಷ್ಯರು ಅವುಗಳಿಗೆ ತಿಂಡಿ ನೀಡದಂತೆ ನೋಡಿಕೊಳ್ಳುವುದಕ್ಕೆ ಮುಂದಾದರು. ವನ್ಯಜೀವಿಗಳಿಗೆ, ಸಿಂಗಳೀಕಗಳಿಗೆ ಯಾರೂ ಆಹಾರ ನೀಡಬಾರದು ಎಂಬ ದೊಡ್ಡ ದೊಡ್ಡ ಫಲಕಗಳನ್ನು ಪ್ರತೀ ತಿರುವಿನಲ್ಲೂ ಅಳವಡಿಸಲಾಯಿತು. ತಿಂಡಿ ನೀಡುತ್ತಿದ್ದವರಿಗೆ ದಂಡ ಹಾಕಲಾಯಿತು. ಸುಲಭದ ತುತ್ತಿಗೆ ತುತ್ತಾದ ಸಿಂಗಳೀಕಗಳು ತಮ್ಮ ವ್ಯಾಪ್ತಿ ವಿಸ್ತರಿಸಿಕೊಂಡು, ರಸ್ತೆಯಗುಂಟ ಸಾಗಲು ಪ್ರಾರಂಭಿಸಿದವು. ಸಿಬ್ಬಂದಿಯ ಗಸ್ತು ಆ ಕಡೆ ತಿರುಗಿದಾಗ, ಇವು ಮತ್ತೆ ರಸ್ತೆಗೆ ಇಳಿಯುವುದು, ಪ್ರವಾಸಿಗರು ಎಲ್ಲ ಎಚ್ಚರಿಕೆಗಳನ್ನೂ ಧಿಕ್ಕರಿಸಿ ತಿಂಡಿ ನೀಡುವುದು ಮುಂದುವರಿದಿತ್ತು. ಇದಕ್ಕೊಂದು ತಾರ್ಕಿಕ ಅಂತ್ಯ ಕಾಣಿಸದಿದ್ದರೆ, ಅಪರೂಪದ ಈ ಸಂತತಿ ಸ್ಥಾನಿಕವಾಗಿ ಅಳಿದುಹೋಗುವುದರಲ್ಲಿ ಸಂಶಯ ಇರಲಿಲ್ಲ.

ಇಲಾಖೆ ಮತ್ತೆ ಸಭೆ ಕರೆಯಿತು. ಗಸ್ತು ತಿರುಗುತ್ತಾ ಪ್ರವಾಸಿಗರನ್ನು ಕಾಯುವುದಕ್ಕಿಂತ, ಸಿಂಗಳೀಕಗಳ ಗುಂಪನ್ನೇ ಕಾಯುವುದು ಮತ್ತು ಅವು ನೆಲಕ್ಕೆ ಇಳಿಯದಂತೆ ನೋಡಿಕೊಳ್ಳುವುದು ಎಂಬ ಸಲಹೆಯನ್ನು ಶಿವಮೊಗ್ಗದ ವನ್ಯಜೀವಿ ತಜ್ಞ ವಿನಾಯಕ ಸಭೆಯಲ್ಲಿ ನೀಡಿದರು. ವಾಸ್ತವಕ್ಕೆ ಹತ್ತಿರವಾದ ಈ ಸಲಹೆ ಎಲ್ಲರಿಗೂ ಒಪ್ಪಿತವಾಯಿತು. ಸತತ ಒಂದು ತಿಂಗಳು ಇಲಾಖೆಯ ಸಿಬ್ಬಂದಿಯ ಅವಿರತ ಶ್ರಮದಿಂದ ಸಿಂಗಳೀಕಗಳು ಮತ್ತೆ ಕಾಡಿಗೆ ವಾಪಸ್ ಹೋಗಿ ತಮ್ಮ ಮೂಲ ನೆಲೆಯನ್ನು ಸೇರಿಕೊಂಡವು.

ಕಡೆಯದಾಗಿ, ಕೊರೊನಾ ಎಂಬ ಶಬ್ದ ಬಳಕೆಯಾದ ಪ್ರಮಾಣದ ಶೇ 1ರಷ್ಟಾದರೂ ಜೀವಿವೈವಿಧ್ಯ ಎಂಬ ಶಬ್ದ ಎಲ್ಲರ ಬಾಯಿಯಲ್ಲಿ ನಲಿದಿದ್ದರೆ, ಇವತ್ತು ಕೊರೊನಾ ತಂದೊಡ್ಡಿರುವ ಈ ಪರಿಸ್ಥಿತಿ ಇರುತ್ತಿರಲಿಲ್ಲ.

ಚುರುಮುರಿ



ಮಾರ್ಜಾಲ ಯೋಗಾಸನ

• ಸುಮಂಗಲಾ

ಬೆಕ್ಕಣ್ಣ ನಸುಕಿನ ನಾಲ್ಕು ಗಂಟೆಗೇ ಎದ್ದು ದೊಡ್ಡಪುಸ್ತಕ ತೆರೆದು ಭಾರೀ ಅಧ್ಯಯನದಲ್ಲಿ ತೊಡಗಿತ್ತು. ನಡುನಡುವೆ ಎದ್ದು ಅದೇನೋ ವಿಚಿತ್ರ ಆಸನಗಳನ್ನು ಪ್ರಯತ್ನಿಸುತ್ತಿತ್ತು. ಮತ್ತೆ ಕೂತು ಏನೋ ಟಿಪ್ಪಣಿ ಮಾಡುತ್ತಿತ್ತು. ನನಗೆ ವಿಪರೀತ ಸೋಜಿಗವಾಯಿತು.

‘ನೆನಪೈತಿಲ್ಲೋ... ಇವತ್ತು ಜೂನ್ 21, ವಿಶ್ವ ಯೋಗ ದಿನಾಚರಣೆ. ರಾಜಭವನದಾಗೆ ಕಾರ್ಯಕ್ರಮ ಮಾಡ್ತಾರ. ನಾ ಒಂದಿಷ್ಟು ಹೊಸ ಆಸನ ಕಂಡುಹಿಡಿದೀನಿ, ಅಲ್ಲಿ ಡೆಮಾನ್‌ಸ್ಟ್ರೇಶನ್ ಮಾಡಾಕ್ಕೆ ಹೊಂಟೀನಿ’ ಎಂದು ವಿವರಿಸಿತು.

‘ನಮ್ಮ ಯೋಗ ಸಾವಿರಾರು ವರ್ಷಗಳಿಂದ ಐತಿ, ಅಷ್ಟಕೊಂದು ಆಸನಗಳದಾವು. ನೀ ಕಂಡುಹಿಡಿಯೋದೇನು ಉಳಿದೈತಿ’ ಎಂದೆ.

‘ಈಗಿನ ಕಾಲಕ್ಕೆ ಯಾರಿಗೇನು ಅಗತ್ಯ ಐತಿ ಹಂಗ ಕಸ್ಟಮೈಸ್ ಮಾಡಿರೋ ಆಸನಗಳನ್ನು ಕಂಡುಹಿಡಿದೀನಿ. ಯೋಗಗುರು ಆದ್ರ ರಗಡ್ ರೊಕ್ಕನೂ ಸಿಗತೈತಿ’ ಎಂದು ಆಸನಗಳನ್ನು ವಿವರಿಸತೊಡಗಿತು.

‘ಕುರ್ಚಿ ಭದ್ರಾಸನ- ಇದು ನಮ್ಮ ಯೆಡ್ಯೂರಜ್ಜಾರಿಗೆ ಅಂತ ವಿಶೇಷವಾಗಿ ರೂಪಿಸೀನಿ. ಇದ್ರಾಗೆ ಭಿನ್ನಮತ ಶಮನಾಸನ, ಶಾಸಕ ಸಾಂತ್ವಾಸನ, ಮಠಮಂಡಿಯೂರಾಸನ ಇತ್ಯಾದಿ ಸೇರಿ, ಇದೊಂಥರಾ ಸಂಕೀರ್ಣಾಸನ.

ಕೇಂದ್ರ ನಮಸ್ಕಾರಾಸನ- ಸೂರ್ಯ ನಮಸ್ಕಾರಕ್ಕಿಂತ ಬ್ಯಾರೆ ಥರದ ನಮಸ್ಕಾರಗಳು ಇದ್ರಾಗೈತಿ. ಅಧಿಕಾರದಾಗೆ ಇರೋರು, ಅಧಿಕಾರಾಕಾಂಕ್ಷಿಗಳು, ವಿವಿಧ ಪ್ರಶಸ್ತಿ ಆಕಾಂಕ್ಷಿ ಸಾಹಿತಿಗಳು ಇವರಿಗೆ ಅಂತ ರೂಪಿಸೀನಿ.

ಬಗ್ಗುಬಡಿಯಾಸನ- ಇದ್ರಾಗೆ ಬಾಯಿ ಮುಚ್ಚಾಸನ, ಮಿದುಳು ನಿಷ್ಕ್ರಿಯಾಸನ, ಬಡಾಯಿ ಆಸನ ಇತ್ಯಾದಿನೂ ಸೇರೈತಿ. ಇದು ನಮ್ಮ ಮೋದಿಮಾಮ, ಶಾಣೆ ಅಂಕಲ್ಲಿಗಷ್ಟೇ ಹೇಳಿಕೊಡತೀನಿ. ಅವ್ರು ಇದನ್ನು ಮಾಡ್ತದರ ಖರೇ, ಆದರ ನಾ ಹೇಳಿಕೊಡೂ ಈ ಸಂಕೀರ್ಣ ಆಸನಾದಾಗೆ ಎದುರಿನವರ ಬಾಯಿ ತಂತಾನೆ ಮುಚ್ಚಿ, ತಂತಾನೆ ಮಿದುಳು ನಿಷ್ಕ್ರಿಯವಾಗೂ ಹಂಗ ಮಾಡಾಕೆ ವಿಶಿಷ್ಟ ವಶೀಕರಣನೂ ಸೇರಿಸೀನಿ’ ಬೆಕ್ಕಣ್ಣನ ಪಟ್ಟಿ ಇನ್ನೂ ಉದ್ದವಿತ್ತು.

‘ಮತ್ತ ನಮಗ... ಶ್ರೀಸಾಮಾನ್ಯರಿಗೆ ಏನು ಆಸನ?’ ನನಗೆ ಹೊಸ ಆಸನ ಕಲಿಯುವ ಆಸೆ.

‘ಶ್ರೀಸಾಮಾನ್ಯರಿಗೆ ಶವಾಸನವೇ ಸಾಕು, ಇನ್ನೂ ಬೇಕಾದ್ರ ಸೋಶಿಯಲ್ ಮೀಡಿಯಾದಾಗೆ ಲಬೋಲಬಾಸನ ಮಾಡ್ರಿ’ ಎಂದು ಖೊಳ್ಳನೆ ನಕ್ಕಿತು!

ಸಂಗತ

ಶಿಕ್ಷಣ ಯಜ್ಞದಲ್ಲೊಂದು ಸಂಗೀತ ಲೋಕ

ಮಕ್ಕಳಲ್ಲಿ ಸಂಗೀತ ಸಾಕ್ಷರತೆ ಅಂಕುರಿಸುವುದು ಮೆದುಳಿನ ಬೆಳವಣಿಗೆಗೆ ಪೂರಕ

• ಯೋಗಾನಂದ

ಮಗು ಶಾಲೆಯಿಂದ ಮನೆಗೆ ಮರಳುವಾಗ ಪೋಷಕರು ನಿರೀಕ್ಷಿಸುವುದು ಅದರ ಮುಖದಲ್ಲಿನ ಮಂದಹಾಸವನ್ನು, ಇಂದೇನೊ ಹೊಸದು ಕಲಿತೆ ಎನ್ನುವ ಸಂತೃಪ್ತ ಭಾವವನ್ನು. ಆದರೆ ಆ ಹಿಗ್ಗು ಎಷ್ಟರಮಟ್ಟಿಗೆ ಮೂಡಿರುತ್ತದೆ? ಇವೊತ್ತು ಇಷ್ಟು ಅರಿತೆ, ಕಲಿತೆ ಎನ್ನುವುದು ಗೌಣವಾಗಿರುತ್ತದೆ. ಮಗು ಮರುದಿನ ಪೂರೈಸಿಕೊಂಡು ಹೋಗಬೇಕಾದ ಲೆಕ್ಕಗಳ ಯಾದಿಯನ್ನೋ ಕಂಠಪಾಠ ಮಾಡಬೇಕಾದ ಪದ್ಯವನ್ನೋ ಇಲ್ಲವೆ ಸಿದ್ಧಪಡಿಸಬೇಕಾದ ಮಾಡೆಲ್ಲಿನ ವಿವರವನ್ನೋ ಪೋಷಕರಿಗೆ ಒಡ್ಡಿರುತ್ತದೆ.

ಶಿಕ್ಷಣದ ಉದ್ದೇಶ ಮಾಹಿತಿಯ ಪರಿಚಾರಿಕೆ ಅಲ್ಲ. ಅದು ಮಕ್ಕಳ ಒಳನೋಟಗಳ ಸಮೃದ್ಧಿಯನ್ನು ಲಕ್ಷ್ಯದಲ್ಲಿ ಇರಿಸಿಕೊಳ್ಳುವುದು ಮುಖ್ಯವಾಗುತ್ತದೆ. ಜಗತ್ತಿನ ಪ್ರತೀ ಶಾಲೆಯ, ಪ್ರತೀ ತರಗತಿಯ ಪ್ರತೀ ವಿದ್ಯಾರ್ಥಿಗೂ ಪ್ರಿಯವಾಗುವ ಪಾಠವೊಂದಿದ್ದರೆ ಅದುವೆ ಸಂಗೀತ.

ಅರವತ್ತು- ಎಪ್ಪತ್ತರ ದಶಕಗಳ ಮಾತು. ಯಾರಾದರೂ ಬೋಧಕರು ರಜೆಯಲ್ಲಿದ್ದರೆ ಅವರ ತರಗತಿಗಳನ್ನು ಬಿಡುವಿರುವ ಬೋಧಕರು ತೆಗೆದುಕೊಳ್ಳುತ್ತಿದ್ದರು. ಮಕ್ಕಳಿಗೆ ನೀತಿ ಕಥೆ, ಉಪಯುಕ್ತ ಮಾಹಿತಿ ಅವರಿಂದ ಸಲ್ಲುತ್ತಿತ್ತು. ಮಾತ್ರವಲ್ಲ, ಮಕ್ಕಳಿಂದಲೂ ಹಾಡು, ಪಾಡು ಹೇಳಿಸಲಾಗುತ್ತಿತ್ತು. ಇದರಿಂದಾಗಿ ಅವರಲ್ಲಿ ಸಂಗೀತ ಸಾಕ್ಷರತೆ ಅಂಕುರಿಸುತ್ತಿತ್ತು. ಶಿಕ್ಷಣವೆಂದರೆ ಪರೀಕ್ಷೆ, ಪರೀಕ್ಷೆಯೆಂದರೆ ಅಂಕಗಳು ತುಂಬಿತುಳುಕುವ ಪಟ್ಟಿ ಎಂಬ ಅಂಬೋಣವೆ ಪಠ್ಯೇತರ ಚಟುವಟಿಕೆಗಳ ನಿರ್ಲಕ್ಷ್ಯಕ್ಕೆ ಮೂಲ.

ನಮ್ಮ ಶಾಲೆಗಳಲ್ಲಿ ಶಾಸ್ತ್ರೀಯ ಸಂಗೀತ ಕಡ್ಡಾಯಗೊಳಿಸಬೇಕಿಲ್ಲ. ಅದನ್ನು ಕ್ರೀಡೆಯಂತೆ ಪಠ್ಯೇತರ ಚಟುವಟಿಕೆಯಾಗಿಸಿದರೆ ಸಾಕು, ಮಕ್ಕಳಿಗೆ ಸಲ್ಲುವ ಉಪಯೋಗಗಳು ಒಂದೆರಡಲ್ಲ. ಮೊದಲಿಗೆ ಶಾಲೆಯಲ್ಲಿರುವುದೇ ಅವರಿಗೆ ಖುಷಿಯೆನ್ನಿಸುತ್ತದೆ. ಸ್ವರ ಸಂಯೋಜನೆ ಪಾಠಗಳ ಆಕರ್ಷಣೆ ಹೆಚ್ಚಿಸಬಲ್ಲದು. ಕಬ್ಬಿಣದ ಕಡಲೆ ಎನ್ನಿಸಬಹುದಾದ ಗಣಿತ ಕೂಡ ಅವರಿಗೆ ಸರಾಗವೆನ್ನಿಸುವುದು. ‘ಒಂದು ಎರಡು ಬಾಳೆಲೆ ಹರಡು, ಮೂರು ನಾಲ್ಕು ಅನ್ನ ಹಾಕು...’ ಎಳೆಯರನ್ನು ಗಣಿತಕ್ಕೆ ಪರಿಚಯಿಸುವ ಪರಿ ಮನೆಮಾತು.

ಮೆದುಳಿನ ಬೆಳವಣಿಗೆಗೆ ಪೂರಕವಾದ ಭಾವನೆಗಳ ಭಾಷೆ ಸಂಗೀತ- ಯಾವುದೇ ಪದ್ಧತಿಯದ್ದಿರಲಿ, ಆ ವಿಶೇಷವನ್ನು ಕಟ್ಟಿಕೊಡುತ್ತದೆ. ಸಂಗೀತಾಭ್ಯಾಸದಿಂದ ಪದಸಂಪತ್ತು ಹಾಗೂ ಸ್ಮರಣಶಕ್ತಿ ವೃದ್ಧಿ, ಸಾವಧಾನ ಭಾವ. ಉಚ್ಚಾರಣೆಯೂ ಸ್ಪಷ್ಟವಾಗಿರುತ್ತದೆ. ಸಂಗೀತವು ಮಕ್ಕಳಲ್ಲಿ ಸ್ವಯಂ ಶಿಸ್ತು ಮತ್ತು ನಿರ್ವಹಣಾ ಕೌಶಲ ಕಲಿಸುತ್ತದೆ. ಬಹುಭಾಷಿಕತೆಗೆ ಕೈಮರವಾಗುತ್ತದೆ. ಆಲಿಸುವ ಕೌಶಲ ರೂಪುಗೊಂಡು ಮಕ್ಕಳು ಭವಿಷ್ಯದಲ್ಲಿ ಆತ್ಮವಿಶ್ವಾಸಿಗಳಾದಾರು.

ವಿಶ್ವವಿಖ್ಯಾತ ವಿಜ್ಞಾನಿ ಐನ್‌ಸ್ಟೀನ್ ಬಾಲ್ಯದಲ್ಲೇ ಪಿಟೀಲು, ಪಿಯಾನೊ ಕಲಿತರು. ತಮ್ಮ ಕೊನೆಯ ದಿನಗಳಲ್ಲೂ ಅವರು ಅವನ್ನು ಬಿಡಲಿಲ್ಲ. ಅವರ ಉಲ್ಲಾಸದ ರಹಸ್ಯ ಸಂಗೀತವಾಗಿತ್ತು. ಪ್ರತಿವರ್ಷ ಜೂನ್ 21 ‘ವಿಶ್ವ ಸಂಗೀತ ದಿನ’. ನಾದದ ಮೂಲಕ ಜಗತ್ತೆಲ್ಲ ಒಂದು, ಅಭಿನ್ನ ಎಂದು ಜಾಗತಿಕ ಸೌಹಾರ್ದ ಎತ್ತಿಹಿಡಿಯುವ ಸಂದರ್ಭ.

ವಿಶ್ವದ ಹವ್ಯಾಸಿ ಹಾಗೂ ವೃತ್ತಿಪರ ಸಂಗೀತಗಾರರನ್ನೆಲ್ಲ ಗೌರವಿಸುವ ಈ ಅರ್ಥವತ್ತಾದ ಅಭಿಯಾನದ ರೂವಾರಿ ಫ್ರಾನ್ಸಿನ ರೇಡಿಯೊ ಕೇಂದ್ರಕ್ಕೆ ಕಾರ್ಯ ನಿರ್ವಹಿಸುತ್ತಿದ್ದ ಅಮೆರಿಕದ ಜೋಲ್ ಕೊಹನ್. ಅವರು 1970ರ ಜೂನ್‌ನಲ್ಲಿ ಬೇಸಿಗೆಯ ಮೊದಲ ದಿನವನ್ನು ಸ್ವಾಗತಿಸುವ ಸಲುವಾಗಿ ಹೊಸ ಹಾಡುಗಳನ್ನು ರಚಿಸಿ ಪ್ರಸಾರ ಮಾಡಿದ್ದೆ ಬಂತು. 1982ರಲ್ಲಿ ಫ್ರಾನ್ಸಿನ ಸರ್ಕಾರ ಅವರ ಉತ್ಸಾಹಕ್ಕೆ ಅಧಿಕೃತ ಮನ್ನಣೆ ನೀಡಿತು.

ಮಕ್ಕಳು ವಿದ್ಯಾರ್ಜನೆಗೆ ಬೆನ್ನು ತೋರಿಸುತ್ತಾರೆ, ಪಾಠ ಪ್ರವಚನಗಳು ಅವರಿಗೆ ಅಪಥ್ಯ ಮುಂತಾಗಿ ನಮ್ಮ ದೂರುಗಳ ಸರಮಾಲೆ. ಶೈಕ್ಷಣಿಕ ವಿಷಯಗಳು ಅವರಿಗೆ ಏಕೆ ಹಿಡಿಸವು, ಪರಿಹಾರವೇನು ಎಂಬ ಬಗ್ಗೆ ಅಷ್ಟಾಗಿ ಅವಲೋಕನ ನಡೆದಿಲ್ಲ. ಹಾಗಾಗಿ ಮಕ್ಕಳ ಮನಸ್ಸನ್ನು ಚೇತೋಹಾರಿಯಾಗಿಸುವ ಒಂದು ಘಟಕವನ್ನು ಶಾಲೆಯಲ್ಲೇ ಸ್ಥಾಪಿಸಬೇಕು. ಅದುವೇ ಸಂಗೀತ.



ಇಲ್ಲೊಂದು ಸೂಕ್ಷ್ಮವೂ ನಿಷ್ಠುರವೂ ಆದ ಕಿವಿಮಾತಿದೆ. ಪೋಷಕರೇ, ನೀವು ನಿಮ್ಮ ಮಕ್ಕಳನ್ನು ಕಳಿಸುವ ಶಾಲೆಯಲ್ಲಿ ಸಂಗೀತ ಪಾಠದ ವ್ಯವಸ್ಥೆಯಿಲ್ಲವಾದರೆ, ಖಾಸಗಿಯಾಗಿಯಾದರೂ ಸಂಗೀತ ಹೇಳಿಸುವ ಮನಸ್ಸು ಮಾಡಿ. ಮೈ, ಮನಸ್ಸನ್ನು ಒಂದುಗೂಡಿಸುವ ಶಕ್ತಿ ಸಂಗೀತಕ್ಕಿದೆ. ಸಮೂಹಪ್ರಜ್ಞೆ ಮತ್ತು ಸೃಜನಶೀಲತೆಯನ್ನು ಅದು ಉದ್ದೀಪನಗೊಳಿಸುತ್ತದೆ. ವಿಪರ್ಯಾಸವೆಂದರೆ ಆಧುನಿಕ ತಂತ್ರಜ್ಞಾನವು ಸಂಯೋಜಕರ ಪಾತ್ರ ಕುಗ್ಗಿಸಿ ಹಾಡುಗಾರರ ಪಾತ್ರ ಹಿಗ್ಗಿಸಿದೆ! ಸಂಯೋಜಕರು ಮತ್ತು ಹಾಡುಗಾರರ ನಡುವೆ ಪರಿಚಯವಿಲ್ಲದಿದ್ದರೂ ಹಾಡು ಹೊಮ್ಮುವುದೂ ಉಂಟೆನ್ನಿ! ಇದರಿಂದಾಗಿ ಸಂಗೀತ ಸಾಕ್ಷರತೆ ಕ್ರಮೇಣ ಕಡಿಮೆಯಾಗುತ್ತಿದೆ.

ಕ್ರಿ.ಪೂ. 350ರ ಸುಮಾರಿನಲ್ಲೇ ಅರಿಸ್ಟಾಟಲ್ ‘ಚಾರಿತ್ರ್ಯ ನಿರ್ಮಿಸುವ ಶಕ್ತಿಯಿರುವ ಕಾರಣ ಯುವಕರ ಶಿಕ್ಷಣ ಪ್ರಕ್ರಿಯೆಯಲ್ಲಿ ಸಂಗೀತಕ್ಕೆ ಅಗ್ರ ಮಾನ್ಯತೆ ಇರಬೇಕು’ ಎಂದಿದ್ದ. ಕನ್‌ಫ್ಯೂಷಿಯಸ್ ಹೇಳುವಂತೆ, ಸಂಗೀತ ಮನುಷ್ಯನ ಸ್ವಭಾವಕ್ಕೆ ಅತೀತವಾದ ಆನಂದ ಒದಗಿಸುತ್ತದೆ.

ಸಂಗೀತ ಸರ್ವರಿಗೂ ಒಲಿಯುವ ಸ್ವತ್ತು. ಒಟ್ಟಿಗೆ ಹಾಡುವುದರಿಂದ ಅಥವಾ ವಾದ್ಯ ನುಡಿಸುವುದರಿಂದ ಮಕ್ಕಳಲ್ಲಿ ಪರಸ್ಪರ ಸ್ನೇಹಪರತೆ, ಸಹಕಾರ ತತ್ವ ಮೈದಳೆಯುತ್ತದೆ. ಮೂಲತಃ ತರಗತಿಯಲ್ಲಿ ಬೋಧಕರ ಪಾಠ ಇಂಪು ಧ್ವನಿಯಲ್ಲಿದ್ದರೆ ಮಕ್ಕಳ ಮನಸೆಳೆಯುತ್ತದೆ. ಶಾಲೆಯು ಮನೆಯ ವಿಸ್ತರಣೆಯೆನ್ನಿಸಿ ಸುರಕ್ಷಿತ ತಾಣವಾದೀತು. ಒತ್ತಡ, ಜಂಜಡವೇ ಮೇಲಾಗುತ್ತಿರುವ ಈ ದಿನಮಾನಗಳಲ್ಲಿ ದೂರದರ್ಶಿತ್ವದ ಶಿಕ್ಷಣಯಜ್ಞವು ಸಂಗೀತವನ್ನು ಒಳಗೊಳ್ಳುವ ಜರೂರಿದೆ.

ವಾಚಕರ ವಾಣಿ

ವಿದ್ಯಾರ್ಥಿಗಳ ಆತ್ಮಾವಲೋಕನ ಅಗತ್ಯ

ದ್ವಿತೀಯ ಪಿಯು ಪರೀಕ್ಷೆ ರದ್ದಾಗಿರುವುದರಿಂದ ಖುಷಿಯಾದ ವಿದ್ಯಾರ್ಥಿಯೊಬ್ಬ ತನ್ನ ಗುರುಗಳನ್ನು ಅಣಕಿಸುತ್ತ ಕುಣಿದಾಡಿದ ವಿಡಿಯೊವೊಂದು ಇತ್ತೀಚೆಗೆ ವಾಟ್ಸ್‌ಆ್ಯಪ್‌ನಲ್ಲಿ ಶೇರ್ ಆಗಿತ್ತು. ‘ನೀನೆಂದೂ ಪಿಯುಸಿ ತೇರ್ಗಡೆಯಾಗುವುದಿಲ್ಲ ಎಂದು ಗುರುಗಳು ಹೇಳಿದ್ದರು, ಆದರೆ ಇದೀಗ ಸರ್ಕಾರದ ನಿರ್ಧಾರದಿಂದ ಈ ವಿದ್ಯಾರ್ಥಿ ತೇರ್ಗಡೆಯಾಗಿದ್ದಾನೆ. ಹಾಗಾಗಿ, ಗುರುಗಳ ಮುಂದೆ ಕುಣಿದಾಡುತ್ತಿದ್ದಾನೆ’ ಎಂಬ ಒಕ್ಕಣೆ ಆ ವಿಡಿಯೊ ಜೊತೆಗಿತ್ತು. ವಿಡಿಯೊದ ಸತ್ಯಾಸತ್ಯತೆ ಏನೇ ಇರಲಿ, ವಿವಿಧ ಪರೀಕ್ಷೆಗಳು ರದ್ದಾಗಿರುವುದರಿಂದ ಹಲವು ವಿದ್ಯಾರ್ಥಿಗಳಿಗೆ ಸಂತಸವಾಗಿರುವುದಂತೂ ಗೊತ್ತಾಗುತ್ತಿದೆ.

ವಾಸ್ತವವಾಗಿ, ಈ ರೀತಿ ಪರೀಕ್ಷೆಗಳು ರದ್ದಾಗಿರುವುದಕ್ಕೆ ವಿದ್ಯಾರ್ಥಿ ಸಮೂಹ ಬೇಸರಪಡಬೇಕು. ಪರೀಕ್ಷೆ ಬೇಕೆ-ಬೇಡವೆ, ಪರೀಕ್ಷೆಯ ಸ್ವರೂಪ ಹೇಗಿರಬೇಕು ಎಂಬ ಚರ್ಚೆಯನ್ನು ಪಕ್ಕಕ್ಕಿಟ್ಟು ನೋಡಿದರೆ, ವಿದ್ಯಾರ್ಥಿಗಳು ಸ್ವತಃ ಇಡೀ ವರ್ಷ ಸಂಪಾದಿಸಿದ ಜ್ಞಾನವನ್ನು ಒರೆಗೆ ಹಚ್ಚಿ, ಗಳಿಸಿದ ವಿದ್ಯೆ, ಸಾಮಾನ್ಯ ಜ್ಞಾನ, ಕೌಶಲದ ಮೌಲ್ಯಮಾಪನ ಮಾಡಬೇಕಾಗಿದೆ. ಹೀಗಾದಾಗ ಮಾತ್ರ ವಿದ್ಯಾರ್ಥಿಗಳು ಪಡೆದುಕೊಂಡ ಪದವಿಗೂ ಅರ್ಥ ಬಂದಂತಾಗುತ್ತದೆ, ಗುರುಗಳು ಕಲಿಸಿದ್ದೂ ಸಾರ್ಥಕವಾಗುತ್ತದೆ.

ಸುಘೋಷ ಸ. ನಿಗಳೆ, ಬೆಂಗಳೂರು

ನಾಲಿಗೆಯ ಮೇಲೆ ಹಿಡಿತ ಇರಲಿ

ವಿಧಾನ ಪರಿಷತ್ ಸದಸ್ಯ ಎಚ್.ವಿಶ್ವನಾಥ್ ಅವರನ್ನು ಅರೆಹುಚ್ಚ, ಅವರಿಗೆ ಪೂರ್ಣ ಹುಚ್ಚು ಹಿಡಿದಿದೆ ಎಂದೆಲ್ಲ ಶಾಸಕ ಎಸ್.ಆರ್.ವಿಶ್ವನಾಥ್ ಟೀಕಿಸಿದ್ದಾರೆ. ಮನೆಯಲ್ಲಿ ಕೂತು ಟಿ.ವಿ ನೋಡುವ ಮಕ್ಕಳು ಇಂತಹ ಮಾತುಗಳನ್ನು ಕೇಳಿ, ತಾವೂ ಇದೇ ಧಾಟಿಯಲ್ಲಿ ಮಾತನಾಡುವ ಸಾಧ್ಯತೆ ಹೆಚ್ಚಾಗಿರುತ್ತದೆ. ಎಂಥಾ ರಾಜಕೀಯ ದ್ವೇಷವೇ ಇರಲಿ ಜನಪ್ರತಿನಿಧಿಗಳಿಗೆ ತಮ್ಮ ಮಾತಿನ ಮೇಲೆ ಹಿಡಿತ ಇರಬೇಕು. ಅದೂ ಅಲ್ಲದೆ ಟಿ.ವಿ ವಾಹಿನಿಗಳಲ್ಲಿ ಹೇಳಿದ್ದನ್ನೇ ಮತ್ತೆ ಮತ್ತೆ ಕೇಳಿಸುವುದರಿಂದ ಅದು ಮಕ್ಕಳ ಮನಸ್ಸಿಗೆ ಬೇಗ ನಾಟುತ್ತದೆ. ಜನಪ್ರತಿನಿಧಿಗಳು ಪರಸ್ಪರ ಟೀಕಿಸುವಾಗ ಸಮಾಜದ ಹಿತದೃಷ್ಟಿಯಿಂದ ಇಂಥದ್ದನ್ನೆಲ್ಲ ಗಮನದಲ್ಲಿ ಇಡುವುದು ಒಳಿತು.

ಧನ್ವಂತರಿ, ಮಾನ್ವಿ

ಹೊಟ್ಟೆಗಿಲ್ಲದ ಜುಟ್ಟಿಗೆ ಯೋಗದ ಗರಿ!

ಕೊರೊನಾ ತಂದೊಡ್ಡಿರುವ ಈಗಿನ ಸಂಕಷ್ಟದ ಸ್ಥಿತಿಯಲ್ಲಿ ಕೇಂದ್ರ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವಾಲಯವು ಯೋಗ ದಿನಾಚರಣೆ (ಜೂನ್ 21) ಸಲುವಾಗಿ, ‘ಎಲ್ಲಾ ಅಂಗನವಾಡಿಗಳಲ್ಲಿ ಮಕ್ಕಳಿಗೆ, ಕಿಶೋರಿಯರಿಗೆ, ಗರ್ಭಿಣಿ ಮತ್ತು ಬಾಣಂತಿಯರಿಗೆ ವಿಶ್ವ ಯೋಗ ದಿನದಂದು ಸೂಚಿಸಲಾದ ಯೋಗದ ವಿಡಿಯೊ ತೋರಿಸಿ, ಅವರಿಂದ ಯೋಗ ಮಾಡಿಸಿ ವಿಡಿಯೊ, ಫೋಟೊಗಳನ್ನು ‘ಪೋಷಣ್ ಟ್ರಾಕರ್’ನಲ್ಲಿ ದಾಖಲಿಸಬೇಕು. ಅವನ್ನು ಸಾಮಾಜಿಕ ಜಾಲತಾಣಗಳಿಗೆ ಅಪ್‌ಲೋಡ್ ಮಾಡಬೇಕು’ ಎಂದು ತಿಳಿಸಿದೆ. ಇದೊಂದು ರೀತಿ ಹೊಟ್ಟೆಗಿಲ್ಲದ ಜುಟ್ಟಿಗೆ ಯೋಗದ ಗರಿಯ ವಿಡಂಬನೆ!

ಕೋವಿಡ್ ನೆಪದಲ್ಲಿ ಶಾಲೆ, ಅಂಗನವಾಡಿಗಳೆಲ್ಲ ಬಂದ್ ಆಗಿದ್ದು, ಪೌಷ್ಟಿಕ ಆಹಾರದ ಚೀಲಗಳು ಸಮರ್ಪಕವಾಗಿ ಮನೆಗೆ ಪೂರೈಕೆಯಾಗುತ್ತಿಲ್ಲ. ಭಾರತದಲ್ಲಿ ಆರು ವರ್ಷದೊಳಗಿನ ಲಕ್ಷಾಂತರ ಮಕ್ಕಳು ತೀವ್ರ ಅಪೌಷ್ಟಿಕತೆಯಿಂದ ಬಳಲುತ್ತಿದ್ದಾರೆ ಮತ್ತು ನಮ್ಮ ರಾಜ್ಯದಲ್ಲಿ ಆರು ವರ್ಷದೊಳಗಿನ 4.43 ಲಕ್ಷ ಅಪೌಷ್ಟಿಕ ಮಕ್ಕಳಿದ್ದಾರೆ. ಹೊಟ್ಟೆ ತುಂಬಿದವರು ದೇಹದ ಸೌಖ್ಯಕ್ಕೆ ಇಷ್ಟಪಟ್ಟು ಯೋಗ ಮಾಡುವುದಾದರೆ ಮಾಡಲಿ. ಆದರೆ ಹೊಟ್ಟೆಗಿಲ್ಲದವರ ಮೇಲೂ, ಕೇವಲ ಅಪೌಷ್ಟಿಕತೆ ನಿವಾರಣೆಗಾಗಿ ಉತ್ತಮ ಆಹಾರ ಕೊಡುವ ಕಾರಣಕ್ಕೆ ನೋಂದಾಯಿಸಿಕೊಂಡ ದುರ್ಬಲರಿಗೆಲ್ಲಾ ಹೀಗೆ ಬಲವಂತವಾಗಿ ಯೋಗವನ್ನು ಹೇರುವುದು ಎಷ್ಟು ಸರಿ? ಅಪೌಷ್ಟಿಕ ಮಕ್ಕಳು ಕೋವಿಡ್ ಮೂರನೆಯ ಅಲೆಯಲ್ಲಿ ಹೆಚ್ಚು ತೊಂದರೆಗೀಡಾಗಲಿದ್ದಾರೆ ಎಂದು ತಜ್ಞರು ಎಚ್ಚರಿಸುತ್ತಲೇ ಇರುವಾಗ, ಹೆಚ್ಚು ಪೌಷ್ಟಿಕವಾದ ಆಹಾರ ಪದಾರ್ಥಗಳು ನಿಯಮಿತವಾಗಿ ಅಂಗನವಾಡಿಗಳನ್ನು ತಲುಪುವಂತೆ ನೋಡಿಕೊಳ್ಳುವುದು ಸರ್ಕಾರದ ಆದ್ಯತೆಯಾಗಬೇಕಾಗಿದೆ.

ಶಾರದಾ ಗೋಪಾಲ, ಧಾರವಾಡ

ಪ್ರಾಣಿಗಳೇ ಮೇಲು!

ಹಳ್ಳಿಹಕ್ಕಿ, ಹೊನ್ನಾಳಿ ಗೂಳಿ
ರಾಜಾಹುಲಿ, ಟಗರು...
ನಮ್ಮದು ಪ್ರಜಾಪ್ರಭುತ್ವವೋ?
ಇಲ್ಲ, ಪ್ರಾಣಿಪ್ರಭುತ್ವವೋ?
ಭ್ರಷ್ಟಾಚಾರ, ಅವ್ಯವಹಾರ,
ಭೂ ಕಬಳಿಕೆ, ಕ್ಷುಲ್ಲಕ ರಾಜಕೀಯ...
ಒಂದೂ ಗೊತ್ತಿಲ್ಲದ ಮೂಕ ಪ್ರಾಣಿಗಳು!
ಪಾಪ! ಅವುಗಳಿಗೇಕೆ ಬೇಕು
ದುಷ್ಟ ಮಾನವನೊಂದಿಗೆ
ಹೋಲಿಸಿಕೊಳ್ಳುವ ಕರ್ಮ?
ಪ್ರಾಣಿಗಳು ಪ್ರಾಣಿಗಳಾಗಿಯೇ ಇರಲಿ
ನಾವು ಮೊದಲು ಮಾನವರಾಗೋಣ!

ಸೋಮಲಿಂಗಪ್ಪ ಬೆಣ್ಣಿಗುಳದಳ್ಳಿ, ಕೊಪ್ಪಳ

ಭರವಸೆಯಲ್ಲಿ ಜೀವಂತಿಕೆ ಇದೆಯೇ?

ಯಡಿಯೂರಪ್ಪ ಅವರ ಪರವಾಗಿ ವೀರಶೈವ ಮಠಾಧೀಶರ ಧರ್ಮ ಪರಿಷತ್‌ನ ಸ್ವಾಮೀಜಿಗಳು ನಡೆಸಿದ ಪತ್ರಿಕಾಗೋಷ್ಠಿ ಸಂದರ್ಭದಲ್ಲಿ, ಪರಿಷತ್‌ನ ಅಧ್ಯಕ್ಷರು, ‘ರಾಜಕಾರಣಿಗಳು ದಾರಿ ತಪ್ಪಿದಾಗ ಸನ್ಮಾರ್ಗದಲ್ಲಿ ನಡೆಯಿರಿ ಎಂದು ಸಂದೇಶ ನೀಡುವುದು ಸ್ವಾಮೀಜಿಗಳ ಜವಾಬ್ದಾರಿ’ ಎಂದಿರುವುದು ಗಮನಾರ್ಹ. ರಾಜಕಾರಣಿಗಳು ದಾರಿ ತಪ್ಪಿದಾಗೆಲ್ಲಾ ಸನ್ಮಾರ್ಗದಲ್ಲಿ ನಡೆಯುವಂತೆ ಮಠಾಧೀಶರು ಈ ಮೊದಲು ಎಂದಾದರೂ ಸಂದೇಶ ನೀಡಿದ ಉದಾಹರಣೆಗಳು ಇವೆಯೇ ಎಂಬ ಪ್ರಶ್ನೆ ಮೂಡುತ್ತದೆ. ಎಷ್ಟೋ ರಾಜಕಾರಣಿಗಳು ಭ್ರಷ್ಟಾಚಾರದಲ್ಲಿ ತೊಡಗಿ ಜೈಲು ಪಾಲಾದಾಗ, ಸಾರ್ವಜನಿಕರಿಗೆ ಅನ್ಯಾಯ ಮಾಡಿದಾಗ, ಗೋಮಾಳ, ರಾಜಕಾಲುವೆಗಳನ್ನು ಒತ್ತುವರಿ ಮಾಡಿದಾಗ, ಒಂದು ಸಮಾಜವನ್ನು ಇನ್ನೊಂದು ಸಮಾಜದ ವಿರುದ್ಧ ಎತ್ತಿಕಟ್ಟಿದಾಗಲೆಲ್ಲ ಅವರು ಎಂದೂ ಇಂತಹ ಸಂದೇಶ ನೀಡಿದ್ದನ್ನು ರಾಜ್ಯದ ಜನ ಕಂಡಿಲ್ಲ. ಯಡಿಯೂರಪ್ಪ ಅವರಿಗೆ ರಾಜಕೀಯ ಸಂದಿಗ್ಧತೆ ಉದ್ಭವವಾದ ಕೂಡಲೇ ಮಠಾಧೀಶರು ಜಾಗೃತರಾಗಿ ಈ ರೀತಿ ಸಂದೇಶ ನೀಡುವುದು ಸಾಮಾನ್ಯ ಪರಿಪಾಟವಾಗಿದೆ. ಧರ್ಮ ಪರಿಷತ್‌ನ ಅಧ್ಯಕ್ಷರು ಹೇಳಿರುವಂತೆ, ಇನ್ನು ಮುಂದೆ ದಾರಿ ತಪ್ಪುವ ನೇತಾರರಿಗೆ ದಾರಿ ತೋರಿಸುತ್ತಾರೆಂಬ ಭರವಸೆಯಲ್ಲಿ ಜೀವಂತಿಕೆಯಿದೆ ಎಂದು ತಿಳಿಯಲು ಮುಜುಗರವಾಗುತ್ತದೆ.

ಸಿ.ಎಚ್.ಹನುಮಂತರಾಯ, ಡೆರಿಕ್ ಅನಿಲ್, ಸೂರ್ಯ ಮುಕುಂದರಾಜ್, ಬೆಂಗಳೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete. To know more about The Printers (Mysore) Private Ltd, visit www.printersmysore.com.

ವೈದ್ಯಕೀಯ ವಿದ್ಯಾರ್ಥಿಗಳಿಗೆ ಯೋಗವಿಜ್ಞಾನವನ್ನೂ ಕಲಿಸಬೇಕಿದೆ. ಇದಕ್ಕಾಗಿ ವೈದ್ಯಕೀಯ ಕಾಲೇಜುಗಳ ಪಠ್ಯಕ್ರಮದಲ್ಲೇ ಯೋಗ ಅಧ್ಯಾಯ ಸೇರಿಸುವ ಬಗ್ಗೆ ಚರ್ಚೆ ನಡೆಸಲಾಗಿದೆ. ವೈದ್ಯಕೀಯ ವಿದ್ಯಾರ್ಥಿಗಳು ಕೂಡ ಮಾನಸಿಕ ಒತ್ತಡಕ್ಕೊಳಗಾಗಿ ಆತ್ಮಹತ್ಯೆ ಮಾಡಿಕೊಂಡಿರುವ ದುರಂತ ನಿದರ್ಶನಗಳಿವೆ. ಹೀಗಾಗಿ ವಿದ್ಯಾರ್ಥಿಗಳಿಗೆ ಒತ್ತಡ ನಿರ್ವಹಣೆಗೆ ಕಾಲೇಜು ಹಂತದಲ್ಲೇ ಯೋಗ ಕಲಿಕೆ ಅಗತ್ಯ

ದೇಹ–ಮನಸ್ಸು ಸಂಯೋಗಕ್ಕೆ ಯೋಗ

‘ವಿಶ್ವ ಯೋಗ ದಿನ’

• ಡಾ.ಕೆ. ಸುಧಾಕರ್



ಗಾಳಿ, ನೀರು, ಆಹಾರ ಎಲ್ಲವೂ ಕಲುಷಿತವಾಗಿರುವ ಆಧುನಿಕ ಕಾಲದಲ್ಲಿ ಆರೋಗ್ಯವನ್ನು ಉತ್ತಮವಾಗಿರಿಸಿಕೊಳ್ಳುವುದೇ ದೊಡ್ಡ ಸವಾಲು. ಇದಕ್ಕಾಗಿ ನಮ್ಮ ದೇಶದ ಜನರು ಮಾತ್ರವಲ್ಲ, ವಿದೇಶಗಳ ಜನರು ಕೂಡ ಯೋಗದ ಮೊರೆ ಹೋಗಿದ್ದಾರೆ. ಯೋಗ ಎಂದಾಕ್ಷಣ ದೇಹಕ್ಕೆ ನೀಡುವ ಕಸರತ್ತು ಎಂದು ಭಾವಿಸುವುದೇ ಹೆಚ್ಚು. ಆದರೆ ಇದು ದೇಹ ಮತ್ತು ಮನಸ್ಸನ್ನು ಸಂಯೋಗಗೊಳಿಸಿ ಒಂದೆಡೆ ಹಿಡಿದಿಡುವ ಪ್ರಕ್ರಿಯೆ.

ಭಗವದ್ಗೀತೆಯಲ್ಲಿ ಶ್ರೀ ಕೃಷ್ಣ ದೇಹವನ್ನು ‘ರಥಂ ವಿದ್ಧಿ’ ಎಂದು ಕರೆಯುತ್ತಾನೆ. ಈ ರಥದ ಸಾರಥಿಯೇ ಬುದ್ಧಿ ಅಥವಾ ನಮ್ಮ ಮಿದುಳು. ರಥದ ಕುದುರೆಗಳಿಗೆ ಹಾಕಿರುವ ಲಗಾಮು ನಮ್ಮ ಮನಸ್ಸು. ಓಡುತ್ತಿರುವ ಕುದುರೆಗಳೇ ಇಂದ್ರಿಯಗಳು ಮತ್ತು ರಥದಲ್ಲಿ ಕುಳಿತ ಸಾರಥಿಯೇ ನಾವು ಅಥವಾ ನಮ್ಮ ಆತ್ಮ. ಲಗಾಮು ಸಾರಥಿಯ ಹಿಡಿತದಲ್ಲಿ ಇದ್ದರೆ, ಕುದುರೆಗಳು ಸರಿಯಾದ ದಾರಿಯಲ್ಲಿ ಓಡುತ್ತವೆ. ಮನಸ್ಸನ್ನು ಗಟ್ಟಿಯಾಗಿ ಹಿಡಿದಿಟ್ಟುಕೊಂಡು ನಿರ್ದಿಷ್ಟ ಗುರಿಯತ್ತ ಸಾಗಿದರೆ ಮಾತ್ರ ವ್ಯಕ್ತಿ ಸಾಧನೆ ಮಾಡಬಲ್ಲ. ಇದಕ್ಕಾಗಿ ಇರುವ ಸೂಕ್ತ ಮಾರ್ಗವೇ ಯೋಗಾಭ್ಯಾಸ. ಪತಂಜಲಿ ಮುನಿಗಳಿಂದ ಭಾರತದ ಮಣ್ಣಿನಲ್ಲೇ ಜನಿಸಿ ಬೆಳೆದ ಈ ಅಮೂಲ್ಯ ಜ್ಞಾನವನ್ನು ಇಂದು ಜಗತ್ತಿನ ಎಲ್ಲ ಜನರು ಅನುಸರಿಸುತ್ತಿದ್ದಾರೆ ಎನ್ನುವುದೇ ಅತಿದೊಡ್ಡ ಹೆಮ್ಮೆ.

ಪ್ರಧಾನಿ ನರೇಂದ್ರ ಮೋದಿ ಅವರು ವಿಶ್ವಸಂಸ್ಥೆಗೆ ಜೂನ್ 21 ರಂದು ಯೋಗ ದಿನ ಆಚರಿಸುವಂತೆ ಸಲಹೆ ನೀಡಿದ್ದು, ಅದರಂತೆ 2015 ರಿಂದ ಪ್ರತಿ ವರ್ಷ ಯೋಗ ದಿನ ಆಚರಿಸಲಾಗುತ್ತಿದೆ. ಜೂನ್ 21 ಉತ್ತರ ಗೋಳಾರ್ಧದ ವರ್ಷದ ಅತಿ ದೀರ್ಘ ದಿನವಾಗಿದ್ದು, ಇದೇ ದಿನ ಯೋಗಕ್ಕೆ ಗೌರವ ಸಲ್ಲಿಸುವುದು ಪ್ರಕೃತಿಮಾತೆಗೆ ಗೌರವ ಸಲ್ಲಿಸುವ ಸಂಕೇತ.

ವೈದ್ಯಕೀಯ ವಿದ್ಯಾರ್ಥಿಗಳಿಗೆ ಯೋಗವಿಜ್ಞಾನವನ್ನೂ ಕಲಿಸಬೇಕಿದೆ. ಇದಕ್ಕಾಗಿ ವೈದ್ಯಕೀಯ ಕಾಲೇಜುಗಳ ಪಠ್ಯಕ್ರಮದಲ್ಲೇ ಯೋಗ ಅಧ್ಯಾಯ ಸೇರಿಸುವ ಬಗ್ಗೆ ಚರ್ಚೆ ನಡೆಸಲಾಗಿದೆ. ವೈದ್ಯಕೀಯ ವಿದ್ಯಾರ್ಥಿಗಳು ಕೂಡ ಮಾನಸಿಕ ಒತ್ತಡಕ್ಕೊಳಗಾಗಿ ಆತ್ಮಹತ್ಯೆ ಮಾಡಿಕೊಂಡಿರುವ ದುರಂತ ನಿದರ್ಶನಗಳಿವೆ. ಹೀಗಾಗಿ ವಿದ್ಯಾರ್ಥಿಗಳಿಗೆ ಒತ್ತಡ ನಿರ್ವಹಣೆಗೆ ಕಾಲೇಜು ಹಂತದಲ್ಲೇ ಯೋಗ ಕಲಿಕೆ ಅಗತ್ಯ.

ಯೋಗವು ಕೇವಲ ಕಲಿಕೆಯಾಗಿ ಉಳಿಯದೆ, ವೃತ್ತಿಪರತೆಯ ಸ್ಥಾನ ಪಡೆಯುತ್ತಿದೆ. ಇದನ್ನು ಗಮನದಲ್ಲಿರಿಸಿ, ವೈದ್ಯಕೀಯ ಕಾಲೇಜುಗಳಲ್ಲಿ ಯೋಗವಿಜ್ಞಾನ ಪದವಿ ಪರಿಚಯಿಸಿ, ವೈದ್ಯರಂತೆ, ಯೋಗವಿಜ್ಞಾನ ವೈದ್ಯರನ್ನು ಸಮಾಜಕ್ಕೆ ನೀಡುವ ಚಿಂತನೆಯೂ ನಮ್ಮ ಮುಂದಿದೆ. ಕೇಂದ್ರ ಸರ್ಕಾರ ಯೋಗಕ್ಕೆ ಸ್ಪರ್ಧಾತ್ಮಕ ಕ್ರೀಡೆಯ ಮಾನ್ಯತೆ ಕಲ್ಪಿಸಿರುವುದರಿಂದ ಈ ಕ್ಷೇತ್ರವನ್ನು ಯುವಜನರು ವೃತ್ತಿಯಾಗಿ ಸ್ವೀಕರಿಸುವಂತೆ ಪ್ರೋತ್ಸಾಹಿಸಬೇಕಿದೆ.

ಕೇಂದ್ರ ಸರ್ಕಾರಿ ಸ್ವಾಮ್ಯದ ಅಖಿಲ ಭಾರತ ಆಯುರ್ವೇದ ಸಂಸ್ಥೆಯು (ಎಐಐಎ) ಅಲೋಪಥಿ ಹಾಗೂ ಆಯುರ್ವೇದ ವೈದ್ಯ ಪದ್ಧತಿ ಬಳಸಿ 600 ಕೋವಿಡ್ ರೋಗಿಗಳಿಗೆ ಚಿಕಿತ್ಸೆ ನೀಡಿದೆ. ಇದೇ ಮಾದರಿಯಲ್ಲಿ ಅಲೋಪಥಿ ಹಾಗೂ ಭಾರತೀಯ ವೈದ್ಯ ಪದ್ಧತಿ, ಯೋಗ ಪದ್ಧತಿಯನ್ನೊಳಗೊಂಡ ಸಮಗ್ರ ವೈದ್ಯ ಪದ್ಧತಿ ಜಾರಿಗೆ ತರುವ ಪ್ರಯತ್ನ ನಡೆಯುತ್ತಿದೆ. ವೈದ್ಯ ಪದ್ಧತಿಗಳ ನಡುವಿನ ವಿವಾದಕ್ಕಿಂತ ಎರಡೂ ಪದ್ಧತಿಗಳ ಲಾಭ ಪಡೆಯುವ ಸಂಯೋಜಿತ ಚಿಕಿತ್ಸೆ ಈಗಿನ ಕಾಲಕ್ಕೆ ಉತ್ತಮ.

ಕೋವಿಡ್ ನಂತರದ ಕಾಲ: ಕೋವಿಡ್ ಸಾಂಕ್ರಾಮಿಕ ನಮ್ಮನ್ನು ಆವರಿಸಿಕೊಂಡು ಮಾನಸಿಕ, ದೈಹಿಕ ಆರೋಗ್ಯಕ್ಕೆ ಮಾಡಿರುವ ಹಾನಿ ಅಪಾರ. ಆರ್ಥಿಕ ನಷ್ಟ, ಉದ್ಯೋಗ ನಷ್ಟದಿಂದಾದ ಬದಲಾವಣೆಗಳಿಂದ ಇಡೀ ಮಾನವ ಜನಾಂಗ ನೊಂದಿದೆ. ಅನೇಕರು ತಮ್ಮ ಪ್ರೀತಿಪಾತ್ರರನ್ನು ಕಳೆದುಕೊಂಡು ನೋವುಂಡಿದ್ದಾರೆ. ಇಂತಹ ಸಂದರ್ಭದಲ್ಲಿ ಯೋಗ ನೀಡುವ ಮಾನಸಿಕ ಸಮಾಧಾನ, ದೈಹಿಕ ಆರೋಗ್ಯ ಮಹತ್ವ ಪಡೆದುಕೊಂಡಿದೆ. ಇದಕ್ಕಾಗಿಯೇ ಆಯುಷ್ ಇಲಾಖೆಯಿಂದ ಯೋಗಾಭ್ಯಾಸ ಕುರಿತು ಹೆಚ್ಚು ಅರಿವು ಮೂಡಿಸಲಾಗಿದೆ. ವಿಶೇಷವಾಗಿ, ಮನೆ ಆರೈಕೆಯಲ್ಲಿರುವ ಕೋವಿಡ್ ರೋಗಿಗಳು, ಗುಣಮುಖರಾದ ರೋಗಿಗಳು ಯೋಗ ಹಾಗೂ ಪ್ರಾಣಾಯಾಮ ಮಾಡುವುದು ಸೂಕ್ತ ಎಂದು ಜಾಗೃತಿ ಮೂಡಿಸಲಾಗುತ್ತಿದೆ.

ಯೋಗದ ಭಾಗವಾದ ಪ್ರಾಣಾಯಾಮ ಉಸಿರಾಟದ ಪ್ರಕ್ರಿಯೆಯನ್ನು ಹೆಚ್ಚು ಸದೃಢವಾಗಿರಿಸುತ್ತದೆ. ಕೋವಿಡ್ ಎರಡನೇ ಅಲೆಯಲ್ಲಿ ಕೋವಿಡ್ ರೋಗಿಗಳು ವೈದ್ಯಕೀಯ ಆಮ್ಲಜನಕದ ಮೇಲೆ ಹೆಚ್ಚು ಅವಲಂಬಿತರಾಗಿದ್ದಾರೆ. ಈ ನಿಟ್ಟಿನಲ್ಲಿ ಪ್ರಾಣಾಯಾಮದಂತಹ ಅಭ್ಯಾಸ ಅಗತ್ಯವಿದೆ. ಶಾಲಾ, ಕಾಲೇಜುಗಳ ಪಠ್ಯಕ್ರಮಗಳಲ್ಲೇ ಇದನ್ನು ಅಳವಡಿಸುವ ಅಗತ್ಯವೂ ಇದೆ.

ಆಧುನಿಕ ಜೀವನ ಶೈಲಿಯಿಂದಾಗಿ ಸಾಂಕ್ರಾಮಿಕವಲ್ಲದ ರೋಗಗಳಾದ ಮಧುಮೇಹ, ರಕ್ತದೊತ್ತಡ, ಖಿನ್ನತೆ, ಮೂತ್ರಪಿಂಡದ ಸಮಸ್ಯೆ, ಗರ್ಭಧಾರಣೆಯಲ್ಲಿನ ತೊಂದರೆ ಮೊದಲಾದ ಸಮಸ್ಯೆಗಳು ತೀವ್ರವಾಗಿ ಜನರನ್ನು ಕಾಡುತ್ತಿದೆ. ಇತ್ತೀಚಿಗೆ ಹೆಚ್ಚಾಗಿ ಕಾಣಿಸಿಕೊಂಡಿರುವ ಕಪ್ಪು ಶಿಲೀಂಧ್ರ ರೋಗ ಮಧುಮೇಹಿಗಳು ಹಾಗೂ ರೋಗ ನಿರೋಧಕ ಶಕ್ತಿ ಕಡಿಮೆ ಇರುವವರನ್ನು ಹೆಚ್ಚಾಗಿ ಕಾಡುತ್ತಿದೆ. ಕೋವಿಡ್ ಸಾಂಕ್ರಾಮಿಕ ಕೂಡ ರೋಗ ನಿರೋಧಕ ಶಕ್ತಿ ಕಡಿಮೆ ಇರುವವರಿಗೆ ಬೇಗನೆ ತಗುಲುತ್ತಿದೆ. ಜೀವನಶೈಲಿಯನ್ನು ಶಿಸ್ತಾಗಿ ಮಾರ್ಪಡಿಸುವ ಯೋಗಾಭ್ಯಾಸವೇ ಇವುಗಳಿಗೆ ಸೂಕ್ತ ಪರಿಹಾರ.

ಭಾರತದ ಯೋಗಗುರುಗಳಾದ ಬಿ.ಕೆ.ಎಸ್.ಅಯ್ಯಂಗಾರ್, ತಿರುಮಲೈ ಕೃಷ್ಣಮಾಚಾರ್ಯ, ಕೆ.ಪಟ್ಟಾಭಿ ಜೋಯಿಸ್, ಸ್ವಾಮಿ ಶಿವಾನಂದ ಸರಸ್ವತಿ ಯೋಗವನ್ನು ಜೀವನದ ಭಾಗವಾಗಿಸಿ ಅಭ್ಯಾಸ ಮಾಡಿದವರು. ಯೋಗವು ಜಗದಗಲ ವ್ಯಾಪಿಸಲು ಕಾರಣರಾದ ಈ ಮಹನೀಯರು ತಮ್ಮದೇ ಆದ ಯೋಗಶೈಲಿ ಪರಿಚಯಿಸಿದ್ದರು. ಇದೇ ರೀತಿ ಇಂದಿನ ಜೀವನಶೈಲಿಗೆ ಅಗತ್ಯವಾದ ಯೋಗಾಭ್ಯಾಸದ ವಿಧಾನವನ್ನು ಜನರಿಗೆ ನೀಡಿ, ರೋಗಗಳಿಂದ ಸಾಧ್ಯವಾದಷ್ಟು ದೂರವಿರುವಂತೆ ಮಾಡುವ ತುರ್ತು ಅಗತ್ಯವಿದೆ.

‘ವಜ್ರದ ಗಟ್ಟಿತನವು ಅದರ ಪ್ರಯೋಜನದ ಭಾಗ. ಆದರೆ ಅದರಿಂದ ಹೊರಹೊಮ್ಮಿ ಹೊಳೆಯುವ ಬೆಳಕಿನಲ್ಲಿ ಅದರ ನೈಜ ಮೌಲ್ಯವಿದೆ’ ಎಂದು ಯೋಗವನ್ನು ವಿಶ್ವಾದ್ಯಂತ ಹರಡಿದ ಕೋಲಾರದ ಯೋಗಗುರು ಬಿ.ಕೆ.ಎಸ್.ಅಯ್ಯಂಗಾರ್ ಹೇಳಿದ್ದರು. ಜಗತ್ತಿನಲ್ಲೇ ಅತಿಹೆಚ್ಚು ಯುವಜನರನ್ನು ಹೊಂದಲಿರುವ ಭಾರತದಲ್ಲಿ, ಪ್ರತಿ ವ್ಯಕ್ತಿಯ ಒಳಗಿನ ನಿಜವಾದ ಶಕ್ತಿ ಹೊರಬಂದು ಪ್ರಕಾಶಿಸಲು ಯೋಗಾಭ್ಯಾಸವೇ ಉತ್ತಮ ಹಾದಿ. ಈ ಯೋಗದ ಬೆಳಕಿನಲ್ಲಿ ಎಲ್ಲರೂ ನಡೆದರೆ ಭಾರತ ಪ್ರಕಾಶಿಸಲಿದೆ.

ಲೇಖಕ: ರಾಜ್ಯದ ಆರೋಗ್ಯ ಮತ್ತು ವೈದ್ಯಕೀಯ ಶಿಕ್ಷಣ ಸಚಿವ

ಯೋಗ: ಜೀವನದ ಕುಶಲತೆ

• ಎಸ್. ಸೂರ್ಯಪ್ರಕಾಶ ಪಂಡಿತ್



ಯೋಗ ಇಂದು ವಿಶ್ವಮಾನ್ಯತೆಯನ್ನು ಪಡೆದಿದೆ. ಯೋಗದ ತವರುಮನೆಯವರಾದ ಭಾರತೀಯರಿಗೆ ಇದು ಸಂತೋಷದಾಯಕವೇ ಹೌದು. ನಮ್ಮ ದೇಶದಲ್ಲಿ ಸಾವಿರಾರು ವರ್ಷಗಳಿಂದಲೇ ಇದು ನಮ್ಮ ಆಧ್ಯಾತ್ಮಿಕ–ಧಾರ್ಮಿಕ ಸಾಧನೆಯ ಭಾಗವಾಗಿದ್ದಿತು; ವೇದ–ಉಪನಿಷತ್ತುಗಳಲ್ಲಿಯೇ ಯೋಗವನ್ನು ಕುರಿತು ಸೊಲ್ಲುಗಳಿರುವುದು ಸುಳ್ಳಲ್ಲ. ಹೀಗಿದ್ದರೂ ಇದಕ್ಕೆ ಸ್ವತಂತ್ರವಾದ ದರ್ಶನದ ಭಿತ್ತಿ ಒದಗಿದ್ದು ಪತಂಜಲಿಮುನಿಗಳ ‘ಯೋಗದರ್ಶನ’ವಾಗಿಯೇ.

ಇಂದು ಯೋಗ ಎಂದರೆ ಯೋಗಾಸನಗಳು ಮಾತ್ರವೇ ಎಂಬ ವ್ಯಾಖ್ಯಾನ ಹೊರಟಂತಿದೆ; ದಿಟ, ಇದರ ಜೊತೆಗೆ ಸ್ವಲ್ಪಮಟ್ಟಿಗೆ ಪ್ರಾಣಾಯಾಮವನ್ನೂ ಕೆಲವರು ಸೇರಿಸುತ್ತಾರೆ; ಆದರೆ ಇದಷ್ಟೇ ಯೋಗದರ್ಶನವಲ್ಲ. ಯೋಗಕ್ಕೆ ಎಂಟು ಅಂಗಗಳು ಉಂಟು; ಅವುಗಳಲ್ಲಿ ಆಸನ ಮತ್ತು ಪ್ರಾಣಾಯಾಮಗಳೂ ಸೇರಿಕೊಂಡಿವೆ. ಯಮ, ನಿಯಮ, ಪ್ರತ್ಯಾಹಾರ, ಧಾರಣ, ಧ್ಯಾನ, ಸಮಾಧಿ – ಇವು ಉಳಿದ ಅಂಗಗಳು. ಯೋಗ ಎಂಬ ಶಬ್ದದ ವ್ಯುತ್ಪತ್ತಿಯನ್ನು ಎರಡು ರೀತಿಯಲ್ಲಿ ಕಾಣಿಸಲಾಗಿದೆ; ಒಂದು: ‘ಯುಜ್ ಸಮಾಧೌ’ ಎಂದು ಧಾತುವಿನಿಂದ ಸಿದ್ಧವಾಗುತ್ತದೆ; ನಿಶ್ಚಲತೆ, ಶಾಶ್ವತತೆಯನ್ನು ಇದು ಸೂಚಿಸುತ್ತದೆ. ಇನ್ನೊಂದು: ‘ಯುಜಿರ್ ಯೋಗೇ’ ಎಂಬುದರಿಂದ ಸಿದ್ಧವಾಗುತ್ತದೆ; ಸೇರುವುದು, ಹೊಂದಿಕೊಳ್ಳುವುದು ಎಂಬ ಅರ್ಥವನ್ನು ಇದು ಎತ್ತಿಹಿಡಿಯುತ್ತದೆ. ಈ ಹಿನ್ನೆಲೆಯಿಂದ ವಿಚಾರ ಮಾಡಿದಾಗ ಯೋಗದರ್ಶನದ ವೈಶಾಲ್ಯ ವಿಶದವಾಗುತ್ತದೆ. ಶಾಶ್ವತವೂ ಸುಖಕರವೂ ಆದ ನೆಮ್ಮದಿಯ ಸ್ಥಿತಿಯನ್ನು ಹೊಂದುವುದು ಯೋಗದ ಗುರಿ; ಅದಕ್ಕೆ ಬೇಕಾದ ದೇಹ–ಮನಸ್ಸುಗಳನ್ನು ಹೊಂದಿಸಲು, ಸಿದ್ಧಿಗೊಳಿಸಲು ಒದಗುವ ದೈಹಿಕ–ಮಾನಸಿಕ ಉಪಾಯಗಳೆಲ್ಲವೂ ಯೋಗವೇ.

ಪರಂಪರೆಯಲ್ಲಿ ಯೋಗಸೂತ್ರಗಳನ್ನು ಬರೆದ ಪತಂಜಲಿ ಮತ್ತು ವ್ಯಾಕರಣ ಮಹಾಭಾಷ್ಯವನ್ನು ಬರೆದ ಪತಂಜಲಿ – ಇಬ್ಬರೂ ಒಂದೇ ಎಂಬ ಎಣಿಕೆಯುಂಟು. ಇದು ಐತಿಹಾಸಿಕವಾಗಿ ಹೌದೋ ಅಲ್ಲವೋ, ಹೇಳುವುದು ಕಷ್ಟ; ಆದರೆ ಈ ನಂಬಿಕೆಯಲ್ಲಿ ಒಂದು ಸ್ವಾರಸ್ಯವುಂಟು. ಪತಂಜಲಿ ಮಹರ್ಷಿಯು ನಮ್ಮ ಚಿತ್ತದಲ್ಲಿರುವ ಮಲಗಳನ್ನು ಯೋಗದ ಮೂಲಕವಾಗಿಯೂ, ಮಾತಿನಲ್ಲಿರುವ ಮಲಗಳನ್ನೂ ವ್ಯಾಕರಣದ ಮೂಲಕವಾಗಿಯೂ ಸ್ವಚ್ಛಗೊಳಿಸುವ ಉಪಾಯಗಳನ್ನು ತಿಳಿಸಿಕೊಟ್ಟ ಎಂಬುದು ಇಲ್ಲಿರುವ ಧ್ವನಿ. ನಮ್ಮ ನಡೆ–ನುಡಿಗಳ ಶುದ್ಧಿಯಲ್ಲಿಯೇ ನಮ್ಮ ಉನ್ನತಿಯೂ ನೆಮ್ಮದಿಯೂ ಅಡಗಿದೆ ಎಂಬುದು ಇಲ್ಲಿರುವ ನಿಲುವು. ಹೀಗಾಗಿಯೇ ನಮ್ಮ ದೇಶದ ಬಹುಪಾಲು ದಾರ್ಶನಿಕರು ಯೋಗವನ್ನು ಸಾಧನೆಯ ಭಾಗವಾಗಿ ಸ್ವೀಕರಿಸಿದ್ದಾರೆ ಎಂಬುದು ಗಮನಾರ್ಹ. ಉದಾಹರಣೆಗೆ, ಬುದ್ಧ ಭಗವಂತನು ಆರ್ಯಸತ್ಯಗಳ ಭಾಗವಾಗಿಯೇ ಎಂಟು ಯೋಗಗಳನ್ನೂ ಉಪದೇಶಿಸಿದ; ಸಮ್ಯಕ್ ದೃಷ್ಟಿ, ಸಮ್ಯಕ್ ಸಂಕಲ್ಪ, ಸಮ್ಯಕ್ ವಾಕ್, ಸಮ್ಯಕ್ ಕರ್ಮ, ಸಮ್ಯಕ್ ಆಜೀವ, ಸಮ್ಯಕ್ ವ್ಯಾಯಾಮ, ಸಮ್ಯಕ್ ಸ್ಮೃತಿ ಮತ್ತು ಸಮ್ಯಕ್ ಸಮಾಧಿ – ಇವೇ ಆ ಅಂಗಗಳು. ನಮ್ಮ ಅಂತರಂಗ–ಬಹಿರಂಗದ ಶುದ್ಧಿಗಾಗಿ ಬೇಕಾದ ಸಾಧನೆಗಳೆಲ್ಲವೂ ಇದರಲ್ಲಿ ಸೇರಿದೆ ಎಂಬುದು ಸ್ಪಷ್ಟ. ಪತಂಜಲಿಯು ‘ಯೋಗಃ ಚಿತ್ತವೃತ್ತಿನಿರೋಧಃ’ ಎಂದೇ ಯೋಗದ ಲಕ್ಷಣವನ್ನು ಹೇಳಿರುವುದನ್ನು ಮರೆಯುವಂತಿಲ್ಲ. ಚಿತ್ತವೆಂದರೆ ಮನಸ್ಸು, ಬುದ್ಧಿ, ಅಹಂಕಾರ. ಹೀಗಾಗಿ, ಆತ್ಮಸಾಕ್ಷಾತ್ಕಾರಕ್ಕಾಗಿ ನಮ್ಮ ದೈಹಿಕ–ಮಾನಸಿಕವಾದ ಏಳು–ಬೀಳುಗಳನ್ನು ಸಂಯಮದಲ್ಲಿರಿಸಿಕೊಳ್ಳಬೇಕೆಂಬುದೇ ಯೋಗದರ್ಶನದ ಕಾಣ್ಕೆ ಎಂಬುದು ಸಿದ್ಧವಾಗುತ್ತದೆ.

ಭಗವದ್ಗೀತೆಯನ್ನು ಕೂಡ ಯೋಗಶಾಸ್ತ್ರ ಎಂದೇ ಆದರಿಸಲಾಗಿದೆ; ಗೀತಾಚಾರ್ಯ ಶ್ರೀಕೃಷ್ಣನು ಯೋಗಾಚಾರ್ಯನೂ ಹೌದು. ಗೀತೆಯು ಯೋಗವನ್ನು ‘ಕರ್ಮಸು ಕೌಶಲಮ್’ ಎಂದಿದೆ; ನಾವು ಮಾಡುವ ಕೆಲಸಗಳಲ್ಲಿ ಇರಬೇಕಾದ ಜಾಣ್ಮೆ ಎಂದು ಇದರ ಸರಳಾರ್ಥ. ಇಲ್ಲಿಯ ಜಾಣತನ ಎನ್ನುವುದು ಆತ್ಮಘಾತಕವೂ ಲೋಕವಂಚಕವೂ ಆದ ಬುದ್ಧಿಯ ಕಸರತ್ತು ಅಲ್ಲ; ಇದು ನಮ್ಮನ್ನು ನಾವು ಆತ್ಮಾನಂದಕ್ಕೆ ‘ಸಿದ್ಧ’ಗೊಳಿಸಿಕೊಳ್ಳುವ ಪ್ರ-ಕ್ರಿಯೆ. ಎಂದರೆ ನಾವು ಎಂಥ ಸಂದರ್ಭವನ್ನೂ ಸ್ಥಿರವಾಗಿಯೂ ಸಹಜವಾಗಿಯೂ ಶುದ್ಧವಾಗಿಯೂ ಸ್ವೀಕರಿಸಬಲ್ಲಂಥ ವ್ಯಕ್ತಿತ್ವವನ್ನು ನಮ್ಮಲ್ಲಿ ತುಂಬಿಸಿಕೊಳ್ಳುವ ಹೂರಣದ ಕೆಲಸವೇ ಹೊರತು, ಮುಂದಿರುವವರನ್ನು ಮೆಚ್ಚಿಸುವ–ತಬ್ಬಿಬ್ಬುಗೊಳಿಸುವ ತೋರಣದ ಸಿಂಗಾರವಲ್ಲ; ಇದು ಹಿಗ್ಗಿಗೆ ಉಬ್ಬುವ, ಕುಗ್ಗಿಗೆ ತಗ್ಗುವ ಚಂಚಲತೆಯೂ ಅಲ್ಲ; ಅಥವಾ ದುಃಖಕ್ಕೆ ಹೆದರಿ ಓಡಿಹೋಗುವ ಪಲಾಯನವಾದವೋ, ಸುಖಕ್ಕೆ ಹಂಬಲಿಸಿ ತೇಲಾಡುವ ಲಂಪಟತನವೋ ಅಲ್ಲ; ಪ್ರತಿಯೊಂದು ಕ್ಷಣದ ಪೂರ್ಣದರ್ಶನಕ್ಕೆ ನಮ್ಮನ್ನು ನಾವು ಅಣಿಗೊಳಿಸಿಕೊಳ್ಳುವ ಪ್ರಜ್ಞೆಯೇ ಈ ಕುಶಲತೆ. ಹೊರಗಿನ ಮತ್ತು ಒಳಗಿನ ಇಂಥ ಎಚ್ಚರವೇ ಅಲ್ಲವೆ ನಮಗೆ ಇಂದು ಬೇಕಾಗಿರುವ ಅರಿವು?

ಆದರೆ ಇಂದು ಯೋಗ ಎಂಬುದೂ ಒಂದು ಉದ್ಯಮದ ಹಾದಿಯನ್ನು ಹಿಡಿದಂತಿದೆ. ಇದರ ನಡುವೆಯೇ ಯೋಗದರ್ಶನಕ್ಕೆ ಬೇಕಾದ ದಿಟವಾದ ಸ್ಥಿರವೂ ಸುಖವೂ ಆದ ಆಸನವನ್ನು ಒದಗಿಸುವುದು ಕೂಡ ಭಾರತೀಯರ ಕರ್ತವ್ಯವೆ ಆಗಿದೆಯೆನ್ನಿ!


‘ಮಾನಸಿಕ ಆರೋಗ್ಯವೂ ವೃದ್ಧಿ’



ಯೋಗಾಭ್ಯಾಸವನ್ನು ದಿನವೂ ಮಾಡಬೇಕು. ಆಗ ಆರೋಗ್ಯ ಸಹಜವಾಗಿಯೇ ಸ್ಥಿರವಾಗಿರುತ್ತದೆ. ಕೋವಿಡ್‌ನ ಸಂದರ್ಭದಲ್ಲಂತೂ ಯೋಗ ಮತ್ತು ಪ್ರಾಣಾಯಾಮಗಳು ಅತ್ಯಂತ ಉಪಯುಕ್ತವಾಗಬಲ್ಲವು. ನಮಗೆ ಭಯ ಉಂಟಾದಾಗ ಸಹಜವಾಗಿಯೇ ಉಸಿರಾಟದ ಮೇಲೆ ಪರಿಣಾಮ ಬೀರುತ್ತದೆ; ಅಗತ್ಯ ಪ್ರಮಾಣದಲ್ಲಿ ನಮಗೆ ಆಮ್ಲಜನಕ ಸಿಗದಂತಾಗುತ್ತದೆ. ಯೋಗಾಸನ ಮತ್ತು ಪ್ರಾಣಾಯಾಮಗಳ ನಿರಂತರ ಅಭ್ಯಾಸದಿಂದ ನಮ್ಮ ರೋಗನಿರೋಧಕ ಶಕ್ತಿ ಹೆಚ್ಚುತ್ತದೆ; ನಮ್ಮ ದೈಹಿಕ, ಮಾನಸಿಕ ಆರೋಗ್ಯವೂ ವೃದ್ಧಿಯಾಗುತ್ತದೆ

ಬಿ. ರಾಘವೇಂದ್ರ ಶೆಣೈ, ‘ನಿರಾಮಯ ಯೋಗಕುಟೀರಮ್’

‘ಜೀವನದ ಅ, ಆ, ಇ, ಈ’



ರೋಗಮುಕ್ತಿಗಾಗಿ ಮಾತ್ರವೇ ಯೋಗವನ್ನು ಪತಂಜಲಿ ಮಹರ್ಷಿಗಳು ಹೇಳಿಲ್ಲ. ನಮ್ಮ ಜೀವನಕ್ಕೆ ಬೇಕಾದ ‘ಅ, ಆ, ಇ, ಈ’ಗಳನ್ನು ಯೋಗ ನಮಗೆ ಕಲಿಸಿಕೊಡುತ್ತದೆ. ‘ಅ’ ಎಂದರೆ ಅರಿವು, ‘ಆ’ ಎಂದರೆ ಆನಂದ, ‘ಇ’ ಎಂದರೆ ಇರವು, ‘ಈ’ ಎಂದರೆ ಈಶ್ವರ – ಹೀಗೆ ಜೀವನದ ಸಮಗ್ರ ಸಾಕ್ಷಾತ್ಕಾರಕ್ಕೆ ಬೇಕಾದ ಎಲ್ಲವನ್ನೂ ಯೋಗದಿಂದ ಪಡೆಯಬಹುದಾಗಿದೆ. ಆಸನ–ಪ್ರಾಣಾಯಾಮಗಳಿಗಷ್ಟೆ ಯೋಗವನ್ನು ಸೀಮಿತ ಮಾಡಬಾರದು; ಯಮ, ನಿಯಮ ಮುಂತಾದ ಎಂಟು ಅಂಗಗಳು ಸೇರಿ ಯೋಗ; ಹೀಗಾಗಿ ಯೋಗದರ್ಶನದಲ್ಲಿ ಹೇಳಿರುವ ನೈತಿಕ ಮೌಲ್ಯಗಳನ್ನೂ ಅಳವಡಿಸಿಕೊಳ್ಳಬೇಕು

ಎಸ್. ಎನ್. ಓಂಕಾರ್, ಯೋಗಗುರು

ಚೀನಾದಲ್ಲಿ ಜನಪ್ರಿಯ ‘ಯೋಗ’

ರೇಷ್ಮೆ ಮಾರ್ಗದ ಕಾಲದಿಂದಲೂ ಭಾರತ–ಚೀನಾ ನಡುವೆ ಸಾಂಸ್ಕೃತಿಕ ಸಂಬಂಧ ಇದೆ. ಚೀನಾಕ್ಕೆ ಬೌದ್ಧ ಧರ್ಮ ಪ್ರಸಾರದ ಬಳಿಕ ಅದು ಇನ್ನಷ್ಟು ಬಲಗೊಂಡಿತು. ಈಗಂತೂ ‘ಯೋಗ’ ಎಂಬುದು ಚೀನಾದಲ್ಲಿ ಮನೆ ಮಾತಾಗಿದೆ. ಒಲಿಂಪಿಕ್ಸ್‌ನಿಂದ ಹಿಡಿದು, ಕ್ರೆಡಿಟ್ ಕಾರ್ಡ್ ಜಾಹೀರಾತಿಗೂ ಯೋಗ ಬಳಕೆಯಾಗುತ್ತಿದೆ. ಚೀನಾದಲ್ಲಿರುವ ಭಾರತೀಯ ರಾಯಭಾರ ಕಚೇರಿಯಲ್ಲಿ ಭಾನುವಾರವೇ ಯೋಗ ದಿನಾಚರಣೆ ನಡೆಯಿತು. ನೂರಾರು ಯೋಗಪಟುಗಳು ಭಾಗವಹಿಸಿದ್ದರು. ಸೋಮವಾರದಂದು ಬೃಹತ್ ಯೋಗ ಕಾರ್ಯಕ್ರಮಗಳನ್ನು ಆಯೋಜಿಸಲಾಗಿದೆ.


1970ರ ದಶಕದಲ್ಲಿ ಚೀನಾಕ್ಕೆ ಯೋಗವನ್ನು ಮೊದಲು ಪರಿಚಯಿಸಲಾಯಿತು. ಅಂತರರಾಷ್ಟ್ರೀಯ ಮಟ್ಟದಲ್ಲಿ ವೈ ಲಾನಾ ಎಂದು ಗುರುತಿಸಿಕೊಂಡಿದ್ದ ಯೋಗ ಶಿಕ್ಷಕ ಜಾಂಗ್ ಹುಯಿಲಾನ್ ಅವರು ಇದಕ್ಕೆ ಕಾರಣರು. ‘ಯೋಗ’ ಎಂಬ ಹೆಸರಿನ ಅವರ ಟಿ.ವಿ. ಕಾರ್ಯಕ್ರಮ ಸರಣಿಯು 1985ರಿಂದ 2000ರವರೆಗೆ ಚೀನಾದ ಸಿಸಿಟಿವಿ ವಾಹಿನಿಯಲ್ಲಿ ಪ್ರಸಾರವಾಯಿತು. ಚೀನಾದ ಟಿ.ವಿ ಇತಿಹಾಸದಲ್ಲಿ ಅತಿ ಹೆಚ್ಚುಕಾಲ ಪ್ರಸಾರವಾದ ಕಾರ್ಯಕ್ರಮ ಸರಣಿ ಎನಿಸಿತು. ಹುಯಿಲನ್ ಅವರಿಗೆ ಭಾರತ ಸರ್ಕಾರವು ಪ್ರತಿಷ್ಠಿತ ಪದ್ಮಶ್ರೀ ಪ್ರಶಸ್ತಿ ನೀಡಿ ಗೌರವಿಸಿತು.

- ಚೀನಾದಾದ್ಯಂತ ಲಕ್ಷಾಂತರ ಯೋಗಪಟುಗಳು ಮತ್ತು 10,000ಕ್ಕೂ ಹೆಚ್ಚು ಅಧಿಕೃತ ಯೋಗ ಶಾಲೆಗಳಿದ್ದು, ಚೀನಾ ಮತ್ತೊಂದು ಯೋಗ ಮಹಾಶಕ್ತಿಯಾಗಿ ಪರಿವರ್ತನೆಗೊಳ್ಳುತ್ತಿದೆ
- ಸಮರ ಕಲೆಗಳು, ಕಿಗಾಂಗ್ ಮತ್ತು ತೈ ಚಿ ಸೇರಿದಂತೆ ವಿವಿಧ ದೈಹಿಕ ಹಾಗೂ ಮಾನಸಿಕ ಶಕ್ತಿ ನೀಡುವ ಕಲೆಗಳು ಚೀನಾದಲ್ಲಿ ಇದ್ದರೂ, ಇವೆಲ್ಲವುಗಳ ಜತೆ ಯೋಗ ತನ್ನ ಜನಪ್ರಿಯತೆ ಹೆಚ್ಚಿಸಿಕೊಳ್ಳುತ್ತಿದೆ
- ಜೂನ್ 21ನೇ ತಾರೀಖನ್ನು ಅಂತರರಾಷ್ಟ್ರೀಯ ಯೋಗ ದಿನ ಎಂದು 2015ರಲ್ಲಿ ವಿಶ್ವಸಂಸ್ಥೆ ಘೋಷಿಸಿದ ಬಳಿಕ ಯೋಗಕ್ಕೆ ಮತ್ತಷ್ಟು ಬಲ ಸಿಕ್ಕಿತು
- 2015ರಲ್ಲಿ ಯೋಗಕ್ಕೆಂದೇ ಮೀಸಲಾದ ಮೊದಲ ‘ಭಾರತ-ಚೀನಾ ಯೋಗ ಕಾಲೇಜು’ (ಐಸಿವೈಸಿ) ಶುರುವಾಯಿತು. ಚೀನಾ ಪ್ರಧಾನಿ ಲಿ ಕೆಕಿಯಾಂಗ್ ಮತ್ತು ಪ್ರಧಾನಿ ನರೇಂದ್ರ ಮೋದಿ ನಡುವೆ ಇದಕ್ಕಾಗಿ ಒಪ್ಪಂದ ಏರ್ಪಟ್ಟಿತ್ತು
- ಐದು ವರ್ಷಗಳಲ್ಲಿ ಚೀನಾದ ಮಧ್ಯಮವರ್ಗದ ಜನರು ಯೋಗಕ್ಕೆ ಹೆಚ್ಚು ಮನಸೋತಿದ್ದಾರೆ. ಶಾಂಘೈ, ಬೀಜಿಂಗ್, ಇತರೆ ಪ್ರಮುಖ ನಗರಗಳಲ್ಲಿ ‘ಯೋಗ ಸ್ಟುಡಿಯೊ’ಗಳು ಬೃಹದಾಕಾರವಾಗಿ ತಲೆ ಎತ್ತಿವೆ
- ಯೋಗ ಅಭ್ಯಾಸ ಮಾಡುವವರ ಪೈಕಿ ಮಹಿಳೆಯರು ಅಧಿಕ. 25–40 ವರ್ಷ ವಯೋಮಾನದವರು ಹೆಚ್ಚು. ಬಹುತೇಕರು ದೊಡ್ಡ ಪಟ್ಟಣಗಳಿಗೆ ಸೇರಿದವರು ಎಂದು ‘ಚೀನಾದ ಯೋಗ ಉದ್ಯಮ ಅಭಿವೃದ್ಧಿ ವರದಿ’ ತಿಳಿಸುತ್ತದೆ
- ಸ್ಥಳೀಯ ಸರ್ಕಾರಗಳು ಚೀನಾ-ಭಾರತ ಯೋಗ ಸಮ್ಮೇಳನಗಳನ್ನು ಪ್ರಾಯೋಜಿಸುತ್ತವೆ. ಜನರಿಗಾಗಿ ಯೋಗ ಕೋರ್ಸ್‌ಗಳನ್ನು ನಡೆಸಲಾಗುತ್ತಿದೆ
- ಬಡತನದಿಂದ ಕೂಡಿದ ಚೀನಾದ ಪಶ್ಚಿಮ ಪ್ರಾಂತ್ಯಗಳು ಮತ್ತು ಸ್ವಾಯತ್ತ ಪ್ರದೇಶಗಳಾದ ಟಿಬೆಟ್, ಕ್ಸಿನ್‌ಜಿಯಾಂಗ್ ಮತ್ತು ಕಿಂಗ್‌ಹೈಗಳಲ್ಲಿ ಇದರ ಪ್ರಭಾವ ಕಡಿಮೆ
- ಪ್ರಪಂಚದಾದ್ಯಂತ ‘ಯೋಗ’ ವ್ಯಾಪಾರೀಕರಣ ಆಗುತ್ತಿರುವ ಬಗ್ಗೆ ಬಹಳ ಹಿಂದಿನಿಂದಲೂ ತಜ್ಞರು ಕಳವಳ ವ್ಯಕ್ತಪಡಿಸುತ್ತಾ ಬಂದಿದ್ದಾರೆ. ಚೀನಾ ಇದಕ್ಕೆ ಹೊರತಾಗಿಲ್ಲ



ಚೀನಾದಲ್ಲಿರುವ ಭಾರತೀಯ ರಾಯಭಾರ ಕಚೇರಿಯಲ್ಲಿ ಭಾನುವಾರ ಯೋಗ ದಿನಾಚರಣೆ ನಡೆಯಿತು –ಪಿಟಿಐ ಚಿತ್ರ

ಗುಂಡಣ್ಣ



ದಿನ ಭವಿಷ್ಯ

ಸೋಮವಾರ ಜೂನ್ 21, 2021

ಶ್ರೀ ಪ್ಲವ ನಾಮ ಸಂವತ್ಸರ ಉತ್ತರಾಯಣ ಗ್ರೀಷ್ಮ ಋತು ಜ್ಯೇಷ್ಠ ಮಾಸ ಶುಕ್ಲ ಪಕ್ಷ ಮಳೆ ನಕ್ಷತ್ರ ಮೃಗಶಿರ ಏಕಾದಶಿ ಗಂ. 9-56 (ಹ. 10-01) ಸೋಮವಾರ ನಿತ್ಯ ನಕ್ಷತ್ರ ಸ್ವಾತಿ ಗಂ. 20-8 (ಹ. 2-06) ಶಿವ ನಾಮ ಯೋಗ ಗಂ. 23-48 ಭದ್ರೆ ಕರಣ ಗಂ. 9-57 ವಿಷ ಗಂ. 33-10 ಅಮೃತ ಶೇಷ ಗಂ. 3-16 ಅಮೃತ ಗಂ. 55-33 : ರಾಹುಕಾಲ: ಬೆ. ಗಂ. 7-30 ರಿಂದ 9-00 ಗುಳಿಕ ಮ. ಕಾಲ ಗಂ 1-30 ರಿಂದ 3-00 ಯಮಗಂಡ ಕಾಲ ಬೆ. ಗಂ 10-30 ರಿಂದ 12-00 ಸೂರ್ಯೋದಯ: 5-58 ಸೂರ್ಯಾಸ್ತ: 6-44 ಅದೃಷ್ಟ ಸಂಖ್ಯೆ 3, 7

ಮೇಷ: ಬೇರೆಯವರ ಸಮಸ್ಯೆಗಳಿಗೆ ನೆರವಾಗಬೇಕಾದ ಅನಿವಾರ್ಯತೆ. ಅತಿಯಾದ ಬಳಲಿಕೆಯಿಂದ ದೇಹಾಲಸ್ಯ. ಹೊಸ ವಿಚಾರ ಸಂಗ್ರಹಣೆಯಿಂದಾಗಿ ಸಂತೃಪ್ತಿ. ಕಲಾವಿದರಿಗೆ ಉತ್ತಮ ಅವಕಾಶಗಳು ಒದಗಿಬರಲಿದೆ.

ವೃಷಭ: ಆರಕ್ಷಕ ಇಲಾಖೆ, ರಕ್ಷಣಾ ಇಲಾಖೆಯಲ್ಲಿ ಕಾರ್ಯ ನಿರ್ವಹಿಸುವವರಿಗೆ ಬಿಡುವಿಲ್ಲದ ತುರುಸಿನ ದಿನ. ಬಂಧು ವರ್ಗದವರ ಶುಭ ಕಾರ್ಯಗಳಲ್ಲಿ ಭಾಗವಹಿಸುವ ಸಾಧ್ಯತೆ. ಆರ್ಥಿಕ ಕಾರ್ಯಗಳಲ್ಲಿ ಪ್ರಗತಿ.

ಮಿಥುನ: ಉದ್ಯೋಗಿಗಳಿಗೆ ಶುಭ ಫಲ. ವಿದ್ಯಾರ್ಥಿಗಳಿಗೆ ಪ್ರತಿಭಾ ಪ್ರದರ್ಶನಕ್ಕೆ ಉತ್ತಮ ವೇದಿಕೆ ದೊರಕಲಿದೆ. ಕಲಾವಿದರು, ಗಾಯಕರು, ಕುಶಲಕರ್ಮಿಗಳಿಗೆ ಕೆಲಸದ ಒತ್ತಡ ಹೆಚ್ಚಾಗುವ ಸಾಧ್ಯತೆ.

ಕರ್ಕಾಟಕ: ವ್ಯವಹಾರಿಕ ಸಂಬಂಧಗಳು ವಿಸ್ತಾರಗೊಳ್ಳುವ ಸಾಧ್ಯತೆ. ವಿವಾಹಾಕಾಂಕ್ಷಿಗಳಿಗೆ ಅನುಕೂಲಕರ ಸಂಬಂಧ ಸಿಗಲಿದೆ. ವಾಹನ, ವಸ್ತುಗಳ ಖರೀದಿಗೆ ಸಕಾಲ. ಚಿಂತನೆಗೆ ಇಂಬು ದೊರಕುವುದು.

ಸಿಂಹ: ಹೊಸ ಉದ್ಯಮದ ಬಗೆಗೆ ಚಿಂತನೆ ನಡೆಸುವಿರಿ. ಬೇಜವಾಬ್ದಾರಿತನದಿಂದಾಗಿ ಅನಾವಶ್ಯಕ ಖರ್ಚು. ಧೈರ್ಯದಿಂದಾಗಿ ಕೆಲಸ ಸಾಧನೆಯಾಗಲಿದೆ. ಆರೋಗ್ಯದ ಬಗ್ಗೆ ಕಾಳಜಿ ವಹಿಸಿ. ಮಾತಿನಿಂದ ವಿರಸ.

ಕನ್ಯಾ: ಉದ್ಯೋಗದಲ್ಲಿ ಹೆಚ್ಚಿನ ಅನುಕೂಲಕರ ವಾತಾವರಣ. ಕುಟುಂಬ ಸಮೇತ ವಿಶೇಷ ಕಾರ್ಯಕ್ರಮಗಳಲ್ಲಿ ಭಾಗಿಯಾಗುವ ಸಾಧ್ಯತೆ. ಕೆಲಸದ ಒತ್ತಡದಿಂದ ಹೊರಬಂದು ನಿರಾಳತೆ.

ತುಲಾ: ಆರೋಗ್ಯದಲ್ಲಿ ಸುಧಾರಣೆ. ಮನೆಯವರೊಂದಿಗೆ ಕೆಲಸ ಕಾರ್ಯಗಳಲ್ಲಿ ಉತ್ಸಾಹದಿಂದ ಪಾಲ್ಗೊಳ್ಳುವಿರಿ. ಯೋಜಿತ ಕಾರ್ಯಗಳಲ್ಲಿ ಜಯ. ಇಷ್ಟಾರ್ಥ ಸಿದ್ಧಿಸಿ ಮಾನಸಿಕ ನೆಮ್ಮದಿ.

ವೃಶ್ಚಿಕ: ಆಸ್ತಿ ವಿವಾದಗಳಿಂದ ಮುಕ್ತಿ ಸಾಧ್ಯತೆ. ಆರೋಗ್ಯದಲ್ಲಿ ಕೊಂಚ ಏರುಪೇರು ಸಂಭವಿಸಬಹುದು. ನಿಯೋಜಿತ ಕೆಲಸಗಳು ಪೂರ್ಣಗೊಳ್ಳುವವು. ವೃತ್ತಿಯಲ್ಲಿನ ಸಮಸ್ಯೆಗಳು ದೂರವಾಗುವವು.

ಧನು: ಪ್ರತಿಭಾನ್ವಿತರಿಗೆ ಉತ್ತಮ ಅವಕಾಶಗಳು ದೊರಕುವುದು. ವಿವಾಹ ಸಂಬಂಧ ಕುರಿತಂತೆ ಮಾತುಕತೆಯಲ್ಲಿ ಭಾಗಿಯಾಗುವ ಸಾಧ್ಯತೆ. ಸರ್ಕಾರದಿಂದ ಸಹಾಯ.

ಮಕರ: ಸಂಪನ್ಮೂಲಗಳಲ್ಲಿ ವೃದ್ಧಿ. ಉದ್ಯೋಗ ನಿಮಿತ್ತ ದೂರದ ಪ್ರಯಾಣ ಸಾಧ್ಯತೆ. ಸ್ಥಿರ ಆಸ್ತಿ ಖರೀದಿ ಸಾಧ್ಯತೆ. ಬಂಧುಗಳೊಂದಿಗೆ ದೂರದ ಪ್ರಯಾಣ ಸಾಧ್ಯತೆ. ಧಾರ್ಮಿಕ ಕಾರ್ಯಗಳಲ್ಲಿ ಆಸಕ್ತಿ ಮೂಡುವುದು.

ಕುಂಭ: ವಿದ್ಯಾರ್ಥಿಗಳಿಗೆ ವಿಶೇಷ ಆಸಕ್ತಿ ಮೂಡಿ ಪ್ರಗತಿ. ಅರಸಿ ಬಂದ ಉದ್ಯೋಗವನ್ನು ದೂರಮಾಡದಿರಿ. ಇತರರೊಂದಿಗೆ ಸೇರಿ ಮಾಡುವ ಕೆಲಸಗಳಲ್ಲಿ ಉತ್ತಮ ಆದಾಯ.

ಮೀನ: ಉದ್ಯೋಗಸ್ಥ ಅದರಲ್ಲೂ ವಿಶೇಷವಾಗಿ ರಕ್ಷಣಾ ಇಲಾಖೆ ಉದ್ಯೋಗಿಗಳಿಗೆ ವಿಪರೀತ ಕೆಲಸದ ಒತ್ತಡ. ವಿದ್ಯಾರ್ಥಿಗಳಿಗೆ ವಿದ್ಯಾಭ್ಯಾಸದಲ್ಲಿ ಪ್ರಗತಿ. ಆರೋಗ್ಯದಲ್ಲಿ ಸ್ವಲ್ಪಮಟ್ಟಿನ ವ್ಯತ್ಯಯ ಸಂಭವ.

ನಿಮ್ಮ ಜನ್ಮದಿನ 21-ಜೂನ್ ಈ ದಿನ ಅತ್ಯಂತ ಶುಭಕರ. ಆರ್ಥಿಕ ಪ್ರಗತಿಗಾಗಿ ಯೋಜನೆಯನ್ನು ಹುಟ್ಟುಹಾಕುವಿರಿ. ಸಮಾಜದ ಒಳಿತಿಗಾಗಿ ಕೆಲವು ಕಾರ್ಯಯೋಜನೆಗಳನ್ನು ಗೆಳೆಯರೊಂದಿಗೆ ಹಂಚಿಕೊಂಡು ಕಾರ್ಯರೂಪಕ್ಕೆ ತರಲು ಯತ್ನಿಸುವಿರಿ. ಹತ್ತಿ, ಬಟ್ಟೆ ಒಡವೆಗಳ ವ್ಯಾಪಾರಿಗಳಿಗೆ ಶುಭ ಫಲಗಳು ದೊರಕಲಿವೆ. ಆರೋಗ್ಯದಲ್ಲಿ ಮುತುವರ್ಜಿ ಅತ್ಯಗತ್ಯ.

ಬೆರಗಿನ ಬೆಳಕು
ಗುರುರಾಜ ಕರಜಗಿ



ಹಿರಿದಾದ ಬದುಕು

ಒಬ್ಬನುಣುವೂಟದಲಿ ಸವಿಯಿಲ್ಲ ಸೊಗವಿಲ್ಲ !
ಇಬ್ಬರಾಗುವೆನೆಂದನಂತೆ ಪರಬೊಮ್ಮಂ ||
ಹೆಬ್ಬದುಕನೊಂಟಿತನದೊಳದೇನು
ಬದುಕುವೆಯೋ? |
ತಬ್ಬಿಕೊಳೊ ವಿಶ್ವವನು – ಮಂಕುತಿಮ್ಮ || 430 ||

ಪದ-ಅರ್ಥ: ಒಬ್ಬನುಣುವೂಟದಲಿ = ಒಬ್ಬನು- + ಉಣುವ(ಉಣ್ಣುವ) + ಊಟದಲಿ, ಇಬ್ಬರಾಗುವೆನೆಂದನಂತೆ = ಇಬ್ಬರಾಗುವೆನು + ಎಂದನಂತೆ, ಹೆಬ್ಬದುಕನೊಂಟಿತನದೊಳದೇನು = ಹೆಬ್ಬದುಕನು(ಹಿರಿದಾದ ಬದುಕನ್ನು) + ಒಂಟಿತನದೊಳು- + ಅದೇನು,

ವಾಚ್ಯಾರ್ಥ: ಒಬ್ಬನೇ ಕುಳಿತು ಮಾಡುವ ಊಟದಲ್ಲಿ ರುಚಿಯಿಲ್ಲ, ಸಂತೋಷವಿಲ್ಲ. ಆದ್ದರಿಂದ ಇಬ್ಬರಾಗುತ್ತೇನೆ ಎಂದನಂತೆ ಪರಬ್ರಹ್ಮ. ಹಿರಿದಾದ ಬದುಕನ್ನು ಒಂಟಿತನದೊಳು ಏಕೆ ಬದುಕುತ್ತೀಯೋ? ವಿಶ್ವವನ್ನು ತಬ್ಬಿಕೊ.

ವಿವರಣೆ: ನಮ್ಮ ಪರಂಪರೆಯಲ್ಲಿ ಬಂದ ದರ್ಶನ ಶಾಸ್ತ್ರಗಳಂತೆ ಎಲ್ಲದಕ್ಕೂ ಪ್ರಧಾನವಾದದ್ದು, ಮೂಲವಾದದ್ದು ಬ್ರಹ್ಮಸತ್ವ. ಅದು ಒಂದೇ ಆಗಿತ್ತು. ಅದನ್ನು ಕಥೆಯ ರೂಪದಲ್ಲಿ ಕಗ್ಗ ಹೇಳುತ್ತದೆ. ಬ್ರಹ್ಮ ಒಬ್ಬನೇ ಇದ್ದ. ಎಷ್ಟು ದಿನ, ಎಷ್ಟು ವರ್ಷ ಒಬ್ಬನೇ ಇರಲಾದೀತು? ಅವನಿಗೂ ಬೇಜಾರಾಗಿರಬೇಕು. ಆಗ ಬೇಜಾರು ಕಳೆಯಲೆಂದು ಇನ್ನೊಂದನ್ನು ಸೃಷ್ಟಿ ಮಾಡಿದ. ಅದು ಮಾಯೆ. ಆ ಮಾಯೆಯಿಂದ ಪ್ರಪಂಚವನ್ನು ನಿರ್ಮಿಸಿದ. ಅಲ್ಲಿ ಸೃಷ್ಟಿಯಾದ ಎಲ್ಲ ವಸ್ತುಗಳಲ್ಲಿ, ಜೀವಿಗಳಲ್ಲಿ ತಾನೇ ನೆಲೆಸಿ, ಬಹುವಾಗಿ ಲೀಲೆಯನ್ನು ನಡೆಸಿದ.

ಅಂದರೆ ಬ್ರಹ್ಮನಿಗೂ ಒಬ್ಬನೇ ಇರುವುದು ಕಷ್ಟ ಎಂದಾಯ್ತು. ಅವನಿಗೇ ಹಾಗೆನ್ನಿಸಿರಬೇಕಾದರೆ ಮನುಷ್ಯರ ಸ್ಥಿತಿ ಹೇಗೆ? ಮನುಷ್ಯರಂತೂ ಸಮಾಜದಲ್ಲೇ ಬದುಕುವವರು. ಮಾನವರಿಗೆ ಅತ್ಯಂತ ಕ್ರೂರವಾದ ಶಿಕ್ಷೆಯೆಂದರೆ ಅವರನ್ನು ಯಾರ ಸಂಪರ್ಕಕ್ಕೂ ಬರದಂತೆ ಏಕಾಂತದಲ್ಲಿಡುವುದು. ಯಾರನ್ನೂ ಕಾಣದೆ, ಯಾರೊಂದಿಗೂ ಮಾತನಾಡದೆ ಕೆಲದಿನಗಳವರೆಗೆ ಇದ್ದುಬಿಟ್ಟರೆ ಬುದ್ಧಿ ಕೆಲಸಮಾಡುವುದಿಲ್ಲ, ಮಾನಸಿಕ ಸ್ಥಿಮಿತ ತಪ್ಪುತ್ತದೆ.


ನಮ್ಮ ಮನುಷ್ಯ ಬದುಕು ತುಂಬ ಅಪೂರ್ವವಾದದ್ದು, ಅತ್ಯಂತ ಉಚ್ಚತಮವಾದದ್ದು. ಈ ಬದುಕಿನ ಮೂಲಕವೇ ಬಹುದೊಡ್ಡ ಸಾಧನೆಗಳಾಗುವುದು. ಇದು ಹಿರಿದಾದ ಬದುಕು. ಇಂಥ ಜೀವನದಲ್ಲಿ ಏಕಾಂಗಿಯಾಗಿ ಏನನ್ನೂ ಮಾಡಲಾಗುವುದಿಲ್ಲ. ಆದರೆ ಜನಸಂಪರ್ಕದಲ್ಲಿ, ಸಹಕಾರದೊಂದಿಗೆ ಯಾವ ಅದ್ಭುತವನ್ನಾದರೂ ಮಾಡಬಹುದು. ಒಬ್ಬ ಮನುಷ್ಯ ನೂರು ಕಿಲೋ ಭಾರದ ಕಲ್ಲು ಹೊತ್ತುಕೊಂಡು ಬೆಟ್ಟವನ್ನೇರಲಾರ. ಆದರೆ ಒಂದು ಹಿರಿದಾದ ಗುರಿಯನ್ನಿಟ್ಟುಕೊಂಡ ಜನರ ತಂಡ ಮರುಭೂಮಿಯಲ್ಲಿ ಬೃಹತ್ ಪಿರಾಮಿಡ್‌ಗಳನ್ನು, ಗುಡ್ಡಗಾಡು ಪ್ರದೇಶದಲ್ಲಿ ಜಗತ್ತಿನಲ್ಲೇ ಅತ್ಯಂತ ಉದ್ದವಾದ ಗೋಡೆಯನ್ನು ಕಟ್ಟುವುದರಲ್ಲಿ ಸಫಲವಾಗುತ್ತದೆ. ಈ ಪ್ರಪಂಚದ ಜನರ ಜೊತೆಗೆ ಹೊಂದಿಕೊಳ್ಳುತ್ತ, ನಗುತ್ತ, ಸಾಂತ್ವನ ಹೇಳುತ್ತ ಮಿಳಿತವಾದರೆ ಬದುಕು ಸುಂದರ, ಸಫಲ.

ಕಗ್ಗ ಈ ಮಾತನ್ನು ಆತ್ಮೀಯವಾಗಿ ಹೇಳುತ್ತದೆ. ಇದೊಂದು ಹಿರಿದಾದ ಬದುಕು. ಭಗವಂತ ನಮಗೆ ನೀಡಿದ ಸುಂದರ ಅವಕಾಶ. ಅದನ್ನು ಒಂಟಿಯಾಗಿ ಕಳೆಯದೆ, ಇಡೀ ವಿಶ್ವವನ್ನು ಕೈ ಚಾಚಿ, ಮನತೆರೆದು ಅಪ್ಪಿಕೊಳ್ಳಬೇಕು. ಆಗ ನಾವು ವಿಶ್ವಜೀವನದ ಜೀವಾಂತರಂಗದಲ್ಲಿ ಇಳಿದು ಸಂಭ್ರಮಿಸುತ್ತೇವೆ, ಏಕಾಂತದಲ್ಲಿ ಕಳೆದು, ಕೊಳೆತು ಹೋಗುವುದಿಲ್ಲ.

ಪದಬಂಧ 4634
– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ಒಮ್ಮೆ ಹೇಳಿದುದನ್ನು ಮತ್ತೆ ಮತ್ತೆ ಹೇಳುವಿಕೆ (4)
3.ಗಟ್ಟಿಯಾಗಿ ಕೂಗಿದರೆ ಕೇಳುವಷ್ಟು ದೂರ (4)
4.ಪಕ ಪಕ ನಕ್ಕಾಗ ಬಂದಿರುವ ನೆನಪು! (3)
5.ಅಗೌರವವಿದು (4)
7.ಷಹರಿನವರು ನೀಡಿದ ಪಾನಕ (4)
9.ಈ ರೀತಿ ಮಾಯವಾಗುವಿಕೆ (4)
11.ಗರತಿ ಸೇರಿರುವ ವರ್ಗ (4)
12.ಬಲು ವಾಚಾಳಿ ಈ ವರ! (3)
14.ಮುಗುಳು ನಗೆಯಿದು (4)
15.ಎಲ್ಲವೂ ನನ್ನದೆಂಬ ಭಾವನೆ (4)

ಮೇಲಿಂದ ಕೆಳಕ್ಕೆ
1.ಕಡಿಮೆ ಬೆಲೆ (2)
2.ಪೂರ್ಣ ಅರಿವು (4)
3.ಮೊದಲಿನಿಂದ ಕೊನೆಯವರೆಗೂ ಇರುವಂಥದ್ದು (4)
6.ವರನ ತಗಾದೆಯೇ ಇದು? (3)
8.ಬಹಳವೇ ಆತ್ಮೀಯರಾದ ನೆಂಟರ ಸಮೂಹ (3)
10.ಒಂಬತ್ತು ತಿಂಗಳಿದು (4)
11.ಈ ತರ ತೋರಿದ ಬೇಧಭಾವ (4)
13.ನಶ್ವರವಾದುದು ಅಕ್ಷರದಲ್ಲಿದೆ (2)



4633ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ: 1.ಸುಪ್ತಚೇತನ 3.ಕುಲಾವಿ 5.ವ್ಯವಕಲನ 7.ಗರುಡ 8.ಒಣಹರಟೆ 10.ಬವಣೆ 11.ನವದಂಪತಿ 14.ಪನ್ನೀರು 15.ಸುಲಿಗೆಗಾರ

ಮೇಲಿಂದ ಕೆಳಕ್ಕೆ: 1.ಸುಶ್ರಾವ್ಯ 2.ಚೇಲಿಕ 4.ವಿತಂಡ 6.ಲಕ್ಷಣ 7.ಗಲಾಟೆ 8.ಒಕ್ಕಣಿ 9.ರಕ್ಕಸ 10.ಬಳಪ 12.ದಂಡಿಗೆ 13.ತಿಮಿರ

ಸುಡೊಕು 5020


			9		2	1		6
1		6					8	
	8	2		6			4	5
7								
	5		7	1	4	2		8
4					6			7
2		5		7			6	
	6					8		
8		1	6		3		2	9

ಆಡುವುದು ಹೇಗೆ? ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5019 ಸುಡೊಕು

4	3	8	2	1	9	5	6	7
1	2	9	6	5	7	3	4	8
7	6	5	8	4	3	2	9	1
3	4	2	9	6	1	8	7	5
8	7	6	3	2	5	9	1	4
5	9	1	7	8	4	6	3	2
9	1	7	5	3	2	4	8	6
6	5	3	4	7	8	1	2	9
2	8	4	1	9	6	7	5	3









ಸೋಂಕಿತರಿಗೆ ನೆರವಾಗಿದ್ದ ಶರಣ್ ಕೋವಿಡ್‌ನಿಂದ ನಿಧನ

ಇಲ್ಲದ ಅಪ್ಪನಿಗೆ ನಿತ್ಯವೂ ಕರೆ ಮಾಡುವ ಪುಟಾಣಿ

• ಚಂದ್ರಹಾಸ ಹಿರೇಮಳಲಿ



ಶಿವಮೊಗ್ಗ: ಅಮ್ಮ ಇಹಲೋಕ ತ್ಯಜಿಸಿದಾಗ ಆಕೆ ಒಂದು ವರ್ಷದ ಕೂಸು. ಎರಡೇ ವರ್ಷಗಳ ಅಂತರದಲ್ಲಿ ಕೋವಿಡ್‌ನಿಂದ ಅಪ್ಪನನ್ನೂ ಕಳೆದುಕೊಂಡಿದ್ದಾಳೆ ಪುಟಾಣಿ ಸಮ್ಯಾ. ಅಪ್ಪನ ಸಹೋದರಿ ಅಖಿಲಾ ಅವರೇ ಈಗ ಅವಳಿಗೆ ಆಸರೆ.

ಭದ್ರಾವತಿ ತಾಲ್ಲೂಕಿನ ಹೊಳೆಹೊನ್ನೂರು ಸಮೀಪದ ಹೊಸಕೊಪ್ಪದ ಎಸ್.ವಿ.ಶರಣ್ ಬೆಂಗಳೂರಿನ ಪ್ರವಾಸೋದ್ಯಮದ ಖಾಸಗಿ ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದರು. ಮೊದಲ ಲಾಕ್‌ಡೌನ್ ಸಮಯದಲ್ಲಿ ಕೆಲಸ ಬಿಟ್ಟು ಊರಿಗೆ ಮರಳಿದ್ದರು. ಸ್ವತಃ ಸಂಸ್ಕೃತಿ ಫೌಂಡೇಷನ್ ಸ್ಥಾಪಿಸಿ, ಶಿವಮೊಗ್ಗದ ವಿವಿಧ ಸೇವಾ ಸಂಸ್ಥೆಗಳ ಜತೆ ಸೇರಿಕೊಂಡು ಕೊರೊನಾ ಸಂಕಷ್ಟದಲ್ಲಿರುವ ಜನರಿಗೆ ನೆರವಾಗಿದ್ದರು. ಎರಡನೇ ಲಾಕ್‌ಡೌನ್ ಸಮಯದಲ್ಲೂ 10 ಸಾವಿರ ಜನರಿಗೆ ಮಾಸ್ಕ್, ಸ್ಯಾನಿಟೈಸರ್, ದಿನಸಿ ಸಾಮಗ್ರಿ ವಿತರಿಸಿದ್ದರು. ಕೊರೊನಾ ವಾರಿಯರ್ ಆಗಿ ಕೆಲಸ ಮಾಡುತ್ತಿದ್ದರು. ಸೋಂಕು ತಗುಲಿದ್ದ ಹಲವರ ಜೀವ ಉಳಿಸಿದ್ದ ಅವರೇ ಸೋಂಕಿಗೆ ಒಳಗಾಗಿ ಜೀವ ಕಳೆದುಕೊಂಡಿದ್ದಾರೆ. ಒಬ್ಬಳೇ ಪುತ್ರಿ ಸಮ್ಯಾ ಅನಾಥವಾಗಿದ್ದಾಳೆ.

ತಂದೆ ಬಿ.ಎಸ್.ವಿಶ್ವನಾಥ್, ತಾಯಿ ಸುಜಾತಾ ದಂಪತಿಗೆ ಇಬ್ಬರೇ ಮಕ್ಕಳು. ಶರಣ್ ಹಾಗೂ ಅವರ ಸಹೋದರಿ ಅಖಿಲಾ. ಅಖಿಲಾ ಅವರು ಗೋಪಾಲಗೌಡ ಬಡಾವಣೆಯಲ್ಲಿ ಪತಿಯ ಜತೆ ನೆಲೆಸಿದ್ದಾರೆ. ಅಣ್ಣನ ಮಗಳಿಗೆ ಅವರೇ ಆಸರೆ ನೀಡಿದ್ದಾರೆ. ಎರಡು ವರ್ಷಗಳ ಹಿಂದೆ ತಾಯಿ ಕಳೆದುಕೊಂಡಾಗಿನಿಂದ ಅತ್ತೆಯನ್ನೇ ತಾಯಿ ಎಂದುಕೊಂಡಿದ್ದ ಮಗುವಿಗೆ ಈಗ ಅವರೇ ಎಲ್ಲವೂ ಆಗಿದ್ದಾರೆ.

'ಅಮ್ಮ ಹೋದ ನಂತರ ಅಪ್ಪನೇ ಅವಳ ಸರ್ವಸ್ವವಾಗಿದ್ದರು. ಈಗ ಅಪ್ಪ ಇಲ್ಲ ಎನ್ನುವ ಸತ್ಯವೇ ಅವಳಿಗೆ ಗೊತ್ತಿಲ್ಲ. ದಿನಕ್ಕೆ ನಾಲ್ಕು ಬಾರಿ ಅಪ್ಪನ ನಂಬರ್‌ಗೆ ಕರೆ ಮಾಡುತ್ತಾಳೆ. ಯಾಕೊ ಅಪ್ಪ ಎತ್ತುತ್ತಿಲ್ಲ. ಬ್ಯುಸಿ ಇರಬೇಕು ಎಂದು ಅವಳೇ ಪ್ರತಿಕ್ರಿಯಿಸುತ್ತಾಳೆ. ನಿನ್ನಪ್ಪ ಬಾರದ ಲೋಕಕ್ಕೆ ಹೋಗಿದ್ದಾರೆ ಎಂದು ಅವಳಿಗೆ ಹೇಗೆ ಹೇಳಲಿ' ಎಂದು ಕಣ್ಣೀರು ತುಂಬಿಕೊಂಡರು ಅಖಿಲಾ.

ಅಖಿಲಾ ಅವರ ಪತಿ ಖಾಸಗಿ ಸಂಸ್ಥೆಯ ಉದ್ಯೋಗಿ. ಅವರಿಗೂ ಒಬ್ಬಳೇ ಪುತ್ರಿ. 'ಸಮ್ಯಾ ಸೇರಿ ನಮಗೆ ಈಗ ಇಬ್ಬರು ಮಕ್ಕಳು. ನಾವು ಇಬ್ಬರದೂ ಭವಿಷ್ಯ ರೂಪಿಸಲು ಶ್ರಮಿಸುತ್ತೇವೆ. ಸದಾ ಅವಳಿಗೆ ನೆರಳಾಗುತ್ತೇವೆ' ಎನ್ನುತ್ತಾರೆ ದಂಪತಿ.

'ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ಅಧಿಕಾರಿಗಳು ಮಗುವಿನ ಮಾಹಿತಿ ಪಡೆದುಕೊಂಡು ಹೋಗಿದ್ದಾರೆ. ಶರಣ್ ಖಾಸಗಿ ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದ ಕಾರಣ ಬಿಪಿಎಲ್ ಕಾರ್ಡ್ ಪಡೆದಿರಲಿಲ್ಲ. ಕೆಲಸ ಕಳೆದುಕೊಂಡ ನಂತರ ಕಾರ್ಡ್ ಪಡೆಯಲು ಪ್ರಯತ್ನಿಸಿದರೂ ದೊರೆತಿರಲಿಲ್ಲ. ದುಡಿದ ಹಣವನ್ನೂ ಕೊರೊನಾ ಸಂಕಷ್ಟದಲ್ಲಿ ಇರುವ ಜನರಿಗೆ ಖರ್ಚು ಮಾಡಿದ್ದ. ಅನಾಥ ಮಗುವಿಗೆ ನೆರವಾಗಲು ಕಾರ್ಡ್ ಮಾನದಂಡವಾಗಬೇಕೇ' ಎಂದು ಪ್ರಶ್ನಿಸಿದರು ಶರಣ್ ಸಹೋದರ ಸಂಬಂಧಿ ಅನೂಪ್.

ರಾಜ್ಯದಲ್ಲಿ ಕೋವಿಡ್ ದೃಢ ಪ್ರಮಾಣ ಶೇ 2.58ಕ್ಕೆ ಇಳಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ ಹೊಸದಾಗಿ 4,517 ಮಂದಿ ಕೋವಿಡ್ ಪೀಡಿತರಾಗಿರುವುದು ಭಾನುವಾರ ದೃಢಪಟ್ಟಿದೆ. ಸೋಂಕು ದೃಢ ಪ್ರಮಾಣವು ಶೇ 2.58ಕ್ಕೆ ಇಳಿಕೆಯಾಗಿದೆ. ಇದು 86 ದಿನಗಳಲ್ಲಿ ವರದಿಯಾದ ಕನಿಷ್ಠ ದೃಢ ಪ್ರಮಾಣ ಹಾಗೂ 79 ದಿನಗಳಲ್ಲಿ ವರದಿಯಾದ ಕನಿಷ್ಠ ಪ್ರಕರಣಗಳಾಗಿವೆ.

ಕಳೆದ ಮಾರ್ಚ್ 27ರಂದು ಶೇ 2.68 ರಷ್ಟು ಸೋಂಕು ದೃಢ ಪ್ರಮಾಣ ಹಾಗೂ ಏ.2 ರಂದು 4,991 ಕೋವಿಡ್ ಪ್ರಕರಣಗಳು ವರದಿಯಾಗಿದ್ದವು. ಬಳಿಕ ದೃಢ ಪ್ರಮಾಣ ಹಾಗೂ ಹೊಸ ಪ್ರಕರಣಗಳು ಏರುಗತಿ ಪಡೆದುಕೊಂಡಿತ್ತು.

ರಾಜ್ಯದ 27 ಜಿಲ್ಲೆಗಳಲ್ಲಿ ಹೊಸ ಪ್ರಕರಣಗಳು 500ರ ಗಡಿಯೊಳಗೆ ವರದಿಯಾಗಿವೆ. ಬೆಂಗಳೂರಿನಲ್ಲಿ 933 ಮಂದಿ ಕೋವಿಡ್ ಪೀಡಿತರಾಗಿದ್ದಾರೆ. ಮೈಸೂರಿನಲ್ಲಿ 545 ಹಾಗೂ ದಕ್ಷಿಣ ಕನ್ನಡದಲ್ಲಿ 525 ಮಂದಿ ಸೋಂಕಿತರಾಗಿದ್ದಾರೆ. ಈವರೆಗೆ ಕೋವಿಡ್ ಪೀಡಿತರಾದವರ ಒಟ್ಟು ಸಂಖ್ಯೆ 28.06 ಲಕ್ಷ ದಾಟಿದೆ.

ಕೊರೊನಾ ಸೋಂಕಿತರಲ್ಲಿ 120 ಮಂದಿ ಮೃತಪಟ್ಟಿರುವುದು ದೃಢಪಟ್ಟಿದೆ. ಮರಣ ಪ್ರಮಾಣ ದರವು ಶೇ 2.65ರಷ್ಟು ವರದಿಯಾಗಿದೆ. ರಾಜ್ಯದ 26 ಜಿಲ್ಲೆಗಳಲ್ಲಿ ಹೊಸದಾಗಿ ಮರಣ ಪ್ರಕರಣಗಳು ವರದಿಯಾಗಿವೆ. ಮೈಸೂರಿನಲ್ಲಿ 17 ಮಂದಿ ಮೃತಪಟ್ಟಿರುವುದು ದೃಢಪಟ್ಟಿದೆ. ಬೆಂಗಳೂರು ಹಾಗೂ ಬಳ್ಳಾರಿಯಲ್ಲಿ ತಲಾ 12 ಮಂದಿ, ದಕ್ಷಿಣ ಕನ್ನಡ ಹಾಗೂ ಧಾರವಾಡದಲ್ಲಿ ತಲಾ 11 ಮಂದಿ ಸಾವಿಗೀಡಾಗಿದ್ದಾರೆ. ಈವರೆಗೆ ಮೃತಪಟ್ಟವರ ಒಟ್ಟು ಸಂಖ್ಯೆ 33,883ಕ್ಕೆ ತಲುಪಿದೆ.

ಒಂದು ದಿನದ ಅವಧಿಯಲ್ಲಿ 1.74 ಲಕ್ಷ ಮಾದರಿಗಳನ್ನು ಪರೀಕ್ಷೆ ಮಾಡಲಾಗಿದೆ. ಸಕ್ರಿಯ ಪ್ರಕರಣಗಳ ಸಂಖ್ಯೆ 1.26 ಲಕ್ಷಕ್ಕೆ ಇಳಿಕೆಯಾಗಿದೆ. ಸೋಂಕಿತರಲ್ಲಿ 8,456 ಮಂದಿಗೆ ಕಾಯಿಲೆ ವಾಸಿಯಾಗಿದೆ. ಈವರೆಗೆ ಗುಣಮುಖರಾದವರ ಒಟ್ಟು ಸಂಖ್ಯೆ 26.45 ಲಕ್ಷ ದಾಟಿದೆ.

ಸುದ್ದಿ 2 ನಿಮಿಷ

ಅಂತರರಾಷ್ಟ್ರೀಯ ಪ್ರಯಾಣ ನಿರ್ಬಂಧ ಸಡಿಲಿಸಿದ ದುಬೈ

ದುಬೈ (ಪಿಟಿಐ): ಕೋವಿಡ್ ಎರಡನೇ ಅಲೆ ವ್ಯಾಪಕವಾಗಿ ಹರಡುತ್ತಿದ್ದ ಕಾರಣಕ್ಕೆ ಭಾರತ ಸೇರಿದಂತೆ ವಿವಿಧ ರಾಷ್ಟ್ರಗಳ ಪ್ರಯಾಣಿಕರ ಮೇಲೆ ವಿಧಿಸಿದ್ದ ನಿರ್ಬಂಧಗಳನ್ನು ಇದೀಗ ದುಬೈ ಸರ್ಕಾರ ಸಡಿಲಗೊಳಿಸಿದೆ.

ಯುನೈಟೆಡ್ ಅರಬ್ ಎಮಿರೇಟ್ಸ್ (ಯುಎಇ) ಅನುಮೋದಿತ ಕೋವಿಡ್ ಲಸಿಕೆಯ ಎರಡು ಡೋಸ್‌ಗಳನ್ನು ಪಡೆದವರು ಭಾರತ ಸೇರಿದಂತೆ ಕೆಲವು ದೇಶಗಳ ನಿವಾಸಿಗಳು ದುಬೈಗೆ ಪ್ರಯಾಣಿಸಬಹುದು ಎಂದು ಅಲ್ಲಿನ ಮಾಧ್ಯಮಗಳು ವರದಿ ಮಾಡಿವೆ.

ಪ್ರಧಾನಿ ಶೇಖ್ ಮನ್ಸೂರ್ ಬಿನ್ ಮೊಹಮ್ಮದ್ ಬಿನ್ ರಶೀದ್ ಅಲ್ ಮಾಕ್ತೌಮ್ ನೇತೃತ್ವದ ಸಮಿತಿಯು ಈ ನಿರ್ಧಾರ ತೆಗೆದುಕೊಂಡಿದೆ.

ಜೂನ್ 23ರಿಂದ ದಕ್ಷಿಣ ಆಫ್ರಿಕಾ, ನೈಜೀರಿಯಾ ಮತ್ತು ಭಾರತದಿಂದ ಬರುವ ಪ್ರಯಾಣಿಕರಿಗಾಗಿ ಹೊಸ ಪರಿಷ್ಕೃತ ಮಾರ್ಗಸೂಚಿಯನ್ನು ಹೊರಡಿಸಿದೆ.

ಸಿನೊಫಾರ್ಮ್, ಫೈಜರ್-ಬಯೋಟೆಕ್, ಸ್ಪುಟ್ನಿಕ್ ವಿ ಮತ್ತು ಆಕ್ಸ್‌ಫರ್ಡ್-ಅಸ್ಟ್ರಾಜೆನೆಕಾ ಲಸಿಕೆಗಳನ್ನು ಯುಎಇ ಸರ್ಕಾರ ಅನುಮೋದಿಸಿದೆ.

ಪ್ರಯಾಣಿಕರು ನಿರ್ಗಮನಕ್ಕೆ 48 ಗಂಟೆಗಳ ಮೊದಲು ತೆಗೆದುಕೊಂಡ 'ಆರ್‌ಟಿ-ಪಿಸಿಆರ್' ನೆಗೆಟಿವ್ ವರದಿಯನ್ನು ಕಡ್ಡಾಯವಾಗಿ ತೋರಿಸಬೇಕು ಎಂದು ಹೇಳಲಾಗಿದೆ.

ಭಾರತದಲ್ಲಿ ಕೋವಿಡ್ ಪ್ರಕರಣಗಳು ಹೆಚ್ಚಾದ ಹಿನ್ನೆಲೆಯಲ್ಲಿ ಏಪ್ರಿಲ್‌ನಲ್ಲಿ ಪ್ರಯಾಣಿಕರಿಗೆ ದುಬೈ ಸರ್ಕಾರ ನಿರ್ಬಂಧ ಹೇರಿತ್ತು.

ಬ್ರೆಜಿಲ್‌ನಲ್ಲಿ 5 ಲಕ್ಷ ತಲುಪಿದ ಮೃತರ ಸಂಖ್ಯೆ; ಭುಗಿಲೆದ್ದ ಪ್ರತಿಭಟನೆ



ರಿಯೋ ಡಿ ಜನೈರೊ (ಎಪಿ): ಬ್ರೆಜಿಲ್‌ನಲ್ಲಿ ಕೋವಿಡ್ ಸೋಂಕಿನಿಂದ ಸಾವಿಗೀಡಾದವರ ಸಂಖ್ಯೆ 5 ಲಕ್ಷ ತಲುಪಿದೆ. ಇದರಿಂದ ಆಕ್ರೋಶಗೊಂಡಿರುವ ಜನರು ಬೀದಿಗಿಳಿದು ಪ್ರತಿಭಟಿಸಿದ್ದಾರೆ.

ಬ್ರೆಜಿಲ್‌ನ ಹಲವೆಡೆ ಶನಿವಾರ ಪ್ರತಿಭಟನೆಗಳು ನಡೆದಿದ್ದು, ಕೋವಿಡ್ ನಿಯಂತ್ರಿಸುವಲ್ಲಿ ಅಧ್ಯಕ್ಷ ಜೈರ್ ಬೋಲ್ಸೊನಾರೊ ವಿಫಲರಾಗಿದ್ದಾರೆ ಎಂದು ಪ್ರತಿಭಟನಾಕಾರರು ದೂರಿದ್ದಾರೆ.

'ಬ್ರೆಜಿಲ್ ದೊಡ್ಡ ಹಿನ್ನಡೆ ಅನುಭವಿಸುತ್ತಿದೆ. ಲಸಿಕೆ ನೀಡಿಕೆಯಲ್ಲಿ ವಿಶ್ವದಲ್ಲೇ ಲಸಿಕೆಯಲ್ಲಿ ನಮ್ಮ ದೇಶ ಮುಂದಿತ್ತು. ನಮ್ಮಲ್ಲಿ ಮಹತ್ವದ ಸಂಸ್ಥೆಗಳೂ ಇವೆ. ಆದರೂ ನಾವು ಈ ಪರಿಸ್ಥಿತಿಯನ್ನು ಎದುರಿಸುತ್ತಿದ್ದೇವೆ' ಎಂದು ಪ್ರತಿಭಟನೆಯಲ್ಲಿ ಭಾಗಿಯಾಗಿದ್ದ 20 ವರ್ಷದ ವಿದ್ಯಾರ್ಥಿನಿ ಇಸ್‌ಬೇಲಾ ಗೌಲ್ಜೋರ್ ಹೇಳಿದರು.

ಬ್ರೆಜಿಲ್‌ನಲ್ಲಿ ಶೇಕಡ 12ರಷ್ಟು ಜನಸಂಖ್ಯೆಗೆ ಮಾತ್ರ ಲಸಿಕೆ ನೀಡಲಾಗಿದೆ. ಇಲ್ಲಿ ಪ್ರತಿನಿತ್ಯ 1 ಲಕ್ಷ ಹೊಸ ಪ್ರಕರಣಗಳು ಮತ್ತು 2 ಸಾವಿರ ಸಾವು ವರದಿಯಾಗುತ್ತಿವೆ. ಇದಕ್ಕೆ ಲಸಿಕೆ ನೀಡಿಕೆಯಲ್ಲಿ ನಿಧಾನಗತಿಯೂ ಒಂದು ಕಾರಣ ಎಂದು ಟೀಕಾಕಾರರು ಆರೋಪಿಸಿದ್ದಾರೆ.

81 ದಿನಗಳ ಬಳಿಕ ಸೋಂಕಿತರ ಸಂಖ್ಯೆ 60 ಸಾವಿರಕ್ಕೂ ಕಡಿಮೆ

ನವದೆಹಲಿ (ಪಿಟಿಐ): ದೇಶದಾದ್ಯಂತ ಕಳೆದ 24 ಗಂಟೆಗಳಲ್ಲಿ 81 ದಿನಗಳಲ್ಲೇ ಕನಿಷ್ಠ 58,419 ಹೊಸ ಕೋವಿಡ್ ಪ್ರಕರಣಗಳು ದೃಢಪಟ್ಟಿದ್ದು, 1,576 ಮಂದಿ ಸೋಂಕಿತರು ಮೃತಪಟ್ಟಿದ್ದಾರೆ ಎಂದು ಕೇಂದ್ರ ಆರೋಗ್ಯ ಸಚಿವಾಲಯ ತಿಳಿಸಿದೆ.

ಇದರೊಂದಿಗೆ ಒಟ್ಟು ಸೋಂಕಿತರ ಸಂಖ್ಯೆ 2,98,81,965 ಕ್ಕೆ ಏರಿಕೆಯಾಗಿದೆ. ಆ ಪೈಕಿ 3,86,713 ಮಂದಿ ಸಾವಿಗೀಡಾಗಿದ್ದಾರೆ.

ಇದುವರೆಗೆ 2,87,66,009 ಮಂದಿ ಗುಣಮುಖರಾಗಿದ್ದಾರೆ. ಸದ್ಯ ದೇಶದಲ್ಲಿ 7,29,243 ಸಕ್ರಿಯ ಪ್ರಕರಣಗಳಿವೆ. ಮಹಾರಾಷ್ಟ್ರದಲ್ಲಿ 1,35,708, ಕರ್ನಾಟಕದಲ್ಲಿ 1,30,894, ಕೇರಳದಲ್ಲಿ 1,07,300, ತಮಿಳುನಾಡಿನಲ್ಲಿ 78,780, ಆಂಧ್ರ ಪ್ರದೇಶದಲ್ಲಿ 65,244 ಸಕ್ರಿಯ ಪ್ರಕರಣಗಳಿವೆ.

ದೇಶದಾದ್ಯಂತ ಈವರೆಗೆ 27,66,93,572 ಡೋಸ್ ಕೋವಿಡ್ ಲಸಿಕೆಯನ್ನು ಹಾಕಲಾಗಿದೆ.

ದೆಹಲಿ: ಇಂದಿನಿಂದ ತೆರೆಯಲಿವೆ ಬಾರ್, ಉದ್ಯಾನಗಳು

ನವದೆಹಲಿ (ಪಿಟಿಐ): ಕೋವಿಡ್ ಎರಡನೇ ಅಲೆಯಿಂದಾಗಿ ರಾಷ್ಟ್ರ ರಾಜಧಾನಿ ದೆಹಲಿಯಲ್ಲಿ ಹೇರಲಾಗಿದ್ದ ನಿರ್ಬಂಧಗಳನ್ನು ಹಂತ ಹಂತವಾಗಿ ತೆರವುಗೊಳಿಸಲಾಗುತ್ತಿದ್ದು, ಸೋಮವಾರದಿಂದ ಬಾರ್ ಮತ್ತು ಉದ್ಯಾನಗಳು ತೆರೆಯಲಿವೆ.

ದೆಹಲಿ ವಿಪತ್ತು ನಿರ್ವಹಣಾ ಪ್ರಾಧಿಕಾರ (ಡಿಡಿಎಂಎ) ಭಾನುವಾರ ಈ ಕುರಿತು ಆದೇಶ ಹೊರಡಿಸಿದ್ದು, ಮಧ್ಯಾಹ್ನ 12ರಿಂದ ರಾತ್ರಿ 10 ರವರೆಗೆ ಶೇ 50ರಷ್ಟು ಆಸನ ಸಾಮರ್ಥ್ಯದೊಂದಿಗೆ ಬಾರ್‌ಗಳನ್ನು ಮತ್ತೆ ತೆರೆಯಲು ಅವಕಾಶ ನೀಡಿರುವುದಾಗಿ ತಿಳಿಸಿದೆ.

ಉದ್ಯಾನಗಳು, ಗಾಲ್ಫ್ ಕ್ಲಬ್‌ಗಳನ್ನು ತೆರೆಯಲು ಅನುಮತಿ ನೀಡಲಾಗಿದೆ. ಜತೆಗೆ ಹೊರಾಂಗಣ ಯೋಗ ಚಟುವಟಿಕೆಗಳಿಗೂ ಅವಕಾಶ ಕಲ್ಪಿಸಲಾಗಿದೆ ಎಂದು ಆದೇಶದಲ್ಲಿ ತಿಳಿಸಲಾಗಿದೆ.

ಕೇರಳ ಹೈಕೋರ್ಟ್ ವ್ಯಾಪ್ತಿಯಲ್ಲಿರುವ ಕೇಂದ್ರಾಡಳಿತ ಪ್ರದೇಶ

ಕರ್ನಾಟಕ ಹೈಕೋರ್ಟ್ ವ್ಯಾಪ್ತಿಗೆ ಲಕ್ಷದ್ವೀಪ ವರ್ಗಾವಣೆ ಪ್ರಸ್ತಾವ

ಕೊಚ್ಚಿ/ನವದೆಹಲಿ (ಪಿಟಿಐ): ಲಕ್ಷದ್ವೀಪವನ್ನು ಕೇರಳ ಹೈಕೋರ್ಟ್ ವ್ಯಾಪ್ತಿಯಿಂದ ಕರ್ನಾಟಕ ಹೈಕೋರ್ಟ್ ವ್ಯಾಪ್ತಿಗೆ ವರ್ಗಾಯಿಸಲು ಲಕ್ಷದ್ವೀಪದ ಆಡಳಿತಾಧಿಕಾರಿ ಪ್ರಫುಲ್ ಕೆ. ಪಟೇಲ್ ಅವರು ಪ್ರಸ್ತಾವ ಇರಿಸಿದ್ದಾರೆ ಎಂದು ಉನ್ನತ ಮೂಲಗಳು ಹೇಳಿವೆ.

ಆಡಳಿತಾಧಿಕಾರಿಯ ವಿವಿಧ ನಿರ್ಣಯಗಳ ವಿರುದ್ಧ ಕೇರಳ ಹೈಕೋರ್ಟ್‌ನಲ್ಲಿ 23 ಅರ್ಜಿಗಳು ಸಲ್ಲಿಕೆಯಾಗಿವೆ. ಕೋವಿಡ್ ಮಾರ್ಗಸೂಚಿಯ ಬದಲಾವಣೆ, ಮೀನುಗಾರರ ಗುಡಿಸಲು ತೆರವು, ಗೂಂಡಾ ಕಾಯ್ದೆ ಜಾರಿ ಮತ್ತಿತರ ನಿರ್ಣಯಗಳ ವಿರುದ್ಧ ಕೇರಳ ಹೈಕೋರ್ಟ್‌ನಲ್ಲಿ ಅರ್ಜಿಗಳು ಸಲ್ಲಿಕೆಯಾಗಿವೆ. ಅವುಗಳ ವಿಚಾರಣೆ ಪ್ರಗತಿಯಲ್ಲಿ ಇದೆ. ಇಂತಹ ಸಂದರ್ಭದಲ್ಲೇ ಲಕ್ಷದ್ವೀಪವನ್ನು ಕೇರಳ ಹೈಕೋರ್ಟ್ ವ್ಯಾಪ್ತಿಯಿಂದ, ಕರ್ನಾಟಕ ಹೈಕೋರ್ಟ್ ವ್ಯಾಪ್ತಿಗೆ ಬದಲಾಯಿಸುವ ಪ್ರಸ್ತಾವವನ್ನು ಆಡಳಿತಾಧಿಕಾರಿ ಇರಿಸಿದ್ದಾರೆ.

ಈ ಪ್ರಸ್ತಾವದ ಬಗ್ಗೆ ಮಾಹಿತಿ ಪಡೆಯಲು ಮಾಡಿದ ಕರೆಯನ್ನು ಲಕ್ಷದ್ವೀಪದ ಕಲೆಕ್ಟರ್ ಎಸ್.ಅಸ್ಕರ್ ಅಲಿ ಸ್ವೀಕರಿಸಿಲ್ಲ. ಇ-ಮೇಲ್‌ಗೂ ಪ್ರತಿಕ್ರಿಯೆ ನೀಡಿಲ್ಲ.

ಕೇಂದ್ರಾಡಳಿತ ಪ್ರದೇಶವನ್ನು ಒಂದು ಹೈಕೋರ್ಟ್‌ನ ವ್ಯಾಪ್ತಿಯಿಂದ ಬೇರೊಂದು ಹೈಕೋರ್ಟ್‌ನ ವ್ಯಾಪ್ತಿಗೆ ವರ್ಗಾಯಿಸುವ ಪ್ರಕ್ರಿಯೆಯನ್ನು ಸಂವಿಧಾನದ 241ನೇ ವಿಧಿಯಲ್ಲಿ ಸ್ಪಷ್ಟಪಡಿಸಲಾಗಿದೆ. 'ಸಂಸತ್ತು, ಕೇಂದ್ರಾಡಳಿತ ಪ್ರದೇಶಕ್ಕೇ ಪ್ರತ್ಯೇಕ ಹೈಕೋರ್ಟ್ ಅನ್ನು ಘೋಷಿಸಬಹುದು ಅಥವಾ ಬೇರೆ ರಾಜ್ಯದ ಹೈಕೋರ್ಟ್‌ನ ವ್ಯಾಪ್ತಿಗೆ ಒಳಪಡಿಸಬಹುದು' ಎಂದು ಈ ವಿಧಿ ಹೇಳುತ್ತದೆ. 'ಯಾವುದೇ ಕೇಂದ್ರಾಡಳಿತ ಪ್ರದೇಶವನ್ನು ಒಂದು ರಾಜ್ಯದಿಂದ ಬೇರೊಂದು ರಾಜ್ಯದ ಹೈಕೋರ್ಟ್‌ನ ವ್ಯಾಪ್ತಿಗೆ ವರ್ಗಾಯಿಸುವ ಅಧಿಕಾರ ಸಂಸತ್ತಿಗೆ ಇದೆ' ಎಂದು ಸಂವಿಧಾನದ 241ನೇ ವಿಧಿಯ 4ನೇ ಸೆಕ್ಷನ್‌ನಲ್ಲಿ ವಿವರಿಸಲಾಗಿದೆ.

ಈ ಪ್ರಸ್ತಾವಕ್ಕೆ ಲಕ್ಷದ್ವೀಪದ ನಾಯಕರು ಮತ್ತು ಕಾನೂನು ತಜ್ಞರಿಂದ ಆಕ್ಷೇಪ ವ್ಯಕ್ತವಾಗಿದೆ.

'ಕೇರಳ ಹೈಕೋರ್ಟ್‌ನ ಪೂರ್ಣ ಹೆಸರು 'ಕೇರಳ ಮತ್ತು ಲಕ್ಷದ್ವೀಪ ಹೈಕೋರ್ಟ್'. ನಮ್ಮದು ಮಲಯಾಳ ಭಾಷೆ. ಕರ್ನಾಟಕ ಹೈಕೋರ್ಟ್‌ಗೆ ವರ್ಗಾವಣೆ ಮಾಡಿದರೆ ಭಾಷೆಯ ಸಮಸ್ಯೆ ಎದುರಾಗುತ್ತದೆ' ಎಂದು ಇಲ್ಲಿನ ಲಕ್ಷದ್ವೀಪದ ಲೋಕಸಭಾ ಸದಸ್ಯ ಮೊಹಮ್ಮದ್ ಫೈಜಲ್ ಕೆ.ಕೆ. ಅವರು ಹೇಳಿದ್ದಾರೆ.

'ಕೇರಳ ಹೈಕೋರ್ಟ್ ಲಕ್ಷದ್ವೀಪದಿಂದ ಕೇವಲ 400 ಕಿ.ಮೀ.ದೂರದಲ್ಲಿದೆ. 1,000 ಕಿ.ಮೀ. ದೂರದಲ್ಲಿರುವ ಕರ್ನಾಟಕ ಹೈಕೋರ್ಟ್‌ಗೆ ಲಕ್ಷದ್ವೀಪದಿಂದ ನೇರ ಸಂಪರ್ಕವೂ ಇಲ್ಲ. ಅಂತರ ಮತ್ತು ಭಾಷೆಯ ಕಾರಣದಿಂದ ಲಕ್ಷದ್ವೀಪದ ಜನರಿಗೆ ನ್ಯಾಯವನ್ನು ನಿರಾಕರಿಸಿದಂತಾಗುತ್ತದೆ' ಎಂದು ಲಕ್ಷದ್ವೀಪದ ಹೆಸರಾಂತ ವಕೀಲ ಸಿ.ಎನ್.ನೂರುಲ್ ಹಿದ್ಯಾ ಕಳವಳ ವ್ಯಕ್ತಪಡಿಸಿದ್ದಾರೆ.

> **ಈ ಹಿಂದಿನ 36 ಆಡಳಿತಾಧಿಕಾರಿಗಳೂ ಈ ತರ ಯೋಚನೆ ಮಾಡಿರಲಿಲ್ಲ. ಈ ಪ್ರಸ್ತಾವ ಜಾರಿಗೆ ಚಾಲನೆ ನೀಡಿದರೆ ಉಗ್ರ ಹೋರಾಟ ನಡೆಸುತ್ತೇವೆ, ಸಂಸತ್ತಿನಲ್ಲೂ ಹೋರಾಡುತ್ತೇವೆ**
>
> **ಮೊಹಮ್ಮದ್ ಫೈಸಲ್ ಪಿ.ಪಿ.** ಲಕ್ಷದ್ವೀಪದ ಲೋಕಸಭಾ ಸದಸ್ಯ

> **ಕೇರಳ ಹೈಕೋರ್ಟ್‌ನಿಂದ ಕರ್ನಾಟಕ ಹೈಕೋರ್ಟ್‌ನ ವ್ಯಾಪ್ತಿಗೆ ಲಕ್ಷದ್ವೀಪವನ್ನು ವರ್ಗಾಯಿಸಿದರೆ, ಲಕ್ಷದ್ವೀಪದ ನ್ಯಾಯಾಂಗ ವ್ಯವಸ್ಥೆ ಸಂಪೂರ್ಣವಾಗಿ ಬದಲಾಗಬೇಕಾಗುತ್ತದೆ**
>
> **ಸಿ.ಎನ್.ನೂರುಲ್ ಹಿದ್ಯಾ** ಲಕ್ಷದ್ವೀಪದ ವಕೀಲ

ಶೈಲಜಾ ಟೀಚರ್‌ಗೆ ಪ್ರತಿಷ್ಠಿತ ಯೂರೋಪಿಯನ್ ಪ್ರಶಸ್ತಿ


ಕೆ. ಶೈಲಜಾ

ತಿರುವನಂತಪುರ (ಪಿಟಿಐ): ಕೇರಳ ಸರ್ಕಾರದ ಮಾಜಿ ಆರೋಗ್ಯ ಸಚಿವೆ ಕೆ. ಶೈಲಜಾ (ಶೈಲಜಾ ಟೀಚರ್) ಅವರಿಗೆ ಪ್ರತಿಷ್ಠಿತ ಸೆಂಟ್ರಲ್ ಯುರೋಪಿಯನ್ ಯೂನಿವರ್ಸಿಟಿಯ 'ಓಪನ್ ಸೊಸೈಟಿ' ಪ್ರಶಸ್ತಿ ಸಂದಿದೆ.

ಶೈಲಜಾ ಅವರು ಸಮುದಾಯ ಆರೋಗ್ಯ ಸೇವೆಗೆ ನೀಡಿರುವ ಕೊಡುಗೆಯನ್ನು ಪರಿಗಣಿಸಿ, ಇತ್ತೀಚೆಗೆ ವರ್ಚುವಲ್ ಮೂಲಕ ನಡೆದ ಯೂನಿವರ್ಸಿಟಿಯ 30 ನೇ ಪದವಿ ಪ್ರದಾನ ಸಮಾರಂಭದಲ್ಲಿ ಈ ಪ್ರಶಸ್ತಿಯನ್ನು ಪ್ರದಾನ ಮಾಡಲಾಗಿದೆ. 1994 ರಲ್ಲಿ ತತ್ವಶಾಸ್ತ್ರಜ್ಞ ಸರ್ ಕಾರ್ಲ್ ಪಾಪರ್ ಅವರಿಗೆ 'ಓಪನ್ ಸೊಸೈಟಿ'ಯ ಮೊದಲ ಪ್ರಶಸ್ತಿ ಸಂದಿತ್ತು.

ಪ್ರಶಸ್ತಿ ಪ್ರದಾನ ಮಾಡಿ ಮಾತನಾಡಿದ ವಿವಿಯ ಅಧ್ಯಕ್ಷ ಮಿಚೆಲ್ ಇಗ್ನಾಟಿಫ್ ಅವರು, 'ಶೈಲಜಾ ಟೀಚರ್ ಅವರು ಯುವತಿಯರಿಗೆ ಮಾದರಿ' ಎಂದರು.

ಚಾರ್‌ಧಾಮ್ ಯಾತ್ರೆ: ಜುಲೈ 1ರಿಂದ ಭಾಗಶಃ ಆರಂಭಕ್ಕೆ ಅನುಮತಿ

ಪ್ರಜಾವಾಣಿ ವಾರ್ತೆ

ನವದೆಹಲಿ: ಕೆಲವು ನಿರ್ಬಂಧಗಳೊಂದಿಗೆ ಜುಲೈ 1ರಿಂದ ಚಾರ್‌ಧಾಮ್ ಯಾತ್ರೆಗೆ ಅನುಮತಿ ನೀಡಿರುವುದಾಗಿ ಉತ್ತರಾಖಂಡ ರಾಜ್ಯ ಸರ್ಕಾರ ಭಾನುವಾರ ಹೇಳಿದೆ.

ದೇವಾಲಯಗಳು ಇರುವ ಜಿಲ್ಲೆಗಳ ಜನರು ಆಯಾ ದೇವಸ್ಥಾನಗಳಿಗೆ ಜುಲೈ 1ರಿಂದ ಯಾತ್ರೆ ಕೈಗೊಳ್ಳಲು ಅವಕಾಶ ನೀಡಲಾಗಿದೆ. ಜುಲೈ 11ರಿಂದ ಎಲ್ಲ ಜಿಲ್ಲೆಗಳ ಜನರು ಈ ಯಾತ್ರೆ ಕೈಗೊಳ್ಳಬಹುದು ಎಂದು ಸಚಿವ ಸುಬೋಧ್ ಉನಿಯಾಲ್ ತಿಳಿಸಿದ್ದಾರೆ.

ಪ್ರತಿ ವರ್ಷ ಮೇನಲ್ಲಿ ಚಾರ್‌ಧಾಮ್ ಯಾತ್ರೆ ಆರಂಭವಾಗುತ್ತದೆ. ಆದರೆ, ಕೋವಿಡ್-19 ಕಾರಣದಿಂದ ಈ ಬಾರಿ ಮೇನಲ್ಲಿ ಈ ಯಾತ್ರೆಯನ್ನು ರದ್ದುಮಾಡಲಾಗಿತ್ತು.

ಬದರಿನಾಥ ದೇಗುಲ ಚಮೋಲಿ ಜಿಲ್ಲೆಯಲ್ಲಿದೆ. ಕೇದಾರನಾಥ ದೇವಸ್ಥಾನ ರುದ್ರಪ್ರಯಾಗದಲ್ಲಿದ್ದರೆ ಗಂಗೋತ್ರಿ ಹಾಗೂ ಯಮುನೋತ್ರಿ ಉತ್ತರಕಾಶಿ ಜಿಲ್ಲೆಯಲ್ಲಿವೆ.

ಯಾತ್ರಿಗಳು ದೇವಾಲಯಗಳಿಗೆ ಭೇಟಿ ನೀಡುವ ಮುನ್ನ ಆರ್‌ಟಿ-ಪಿಸಿಆರ್ ಪರೀಕ್ಷೆಗೆ ಒಳಗಾಗುವುದು ಕಡ್ಡಾಯ. ರಾಜ್ಯಕ್ಕೆ ಭೇಟಿ ನೀಡುವ ಇತರ ರಾಜ್ಯಗಳ ಜನರು ಸಹ ಈ ಪರೀಕ್ಷೆ ಮಾಡಿಸಿಕೊಳ್ಳುವುದನ್ನು ಸರ್ಕಾರ ಕಡ್ಡಾಯಗೊಳಿಸಿದೆ.

ಡಬ್ಲ್ಯುಟಿಸಿ ಫೈನಲ್: ಅರ್ಧಶತಕ ಪೂರೈಸದ ಕೊಹ್ಲಿ, ರಹಾನೆ; ಭಾರತ ಸಾಧಾರಣ ಮೊತ್ತ

ಕೈಲ್ ಜೆಮಿಸನ್ ಬಿರುಗಾಳಿ



ವಿರಾಟ್ ಕೊಹ್ಲಿ ಅವರನ್ನು ಎಲ್‌ಬಿಡಬ್ಲ್ಯು ಬಲೆಗೆ ಕೆಡವಿದ ನ್ಯೂಜಿಲೆಂಡ್ ಬೌಲರ್ ಕೈಲ್ ಜೆಮಿಸನ್ –ಎಎಫ್‌ಪಿ ಚಿತ್ರ

ಮುಖ್ಯಾಂಶಗಳು

- ಒಂದು ರನ್ ಅಂತರದಲ್ಲಿ ರಹಾನೆ ಕೈತಪ್ಪಿದ ಅರ್ಧಶತಕ
- ರಿಷಭ್ ಪಂತ್ ಬ್ಯಾಟಿಂಗ್ ವೈಫಲ್ಯ
- ಡೆವೊನ್ ಕಾನ್ವೆ ಅರ್ಧಶತಕ

ಸೌತಾಂಪ್ಟನ್(ಎಪಿ): ಎತ್ತರಕಾಯದ ವೇಗಿ ಕೈಲ್ ಜೆಮಿಸನ್ ಸ್ವಿಂಗ್ ಬೌಲಿಂಗ್‌ನಿಂದಾಗಿ ಭಾರತ ತಂಡವು ವಿಶ್ವ ಟೆಸ್ಟ್ ಚಾಂಪಿಯನ್‌ಷಿಪ್‌ನ ಮೊದಲ ಇನಿಂಗ್ಸ್‌ನಲ್ಲಿ ಸಾಧಾರಣ ಮೊತ್ತಕ್ಕೆ ಕುಸಿಯಿತು.

ಐದು ವಿಕೆಟ್ ಗಳಿಸಿದ ಜೆಮಿಸನ್ ದಾಳಿಯಿಂದಾಗಿ ಭಾರತ ತಂಡವು 92.1 ಓವರ್‌ಗಳಲ್ಲಿ 217 ರನ್‌ಗಳಿಗೆ ಎಲ್ಲ ವಿಕೆಟ್‌ಗಳನ್ನು ಕಳೆದುಕೊಂಡಿತು. ಶನಿವಾರ ರೋಹಿತ್ ಶರ್ಮಾ ವಿಕೆಟ್ ಗಳಿಸಿ ಪೆಟ್ಟುಕೊಟ್ಟಿದ್ದ ಜೆಮಿಸನ್ ಮೂರನೇ ದಿನದಾಟದಲ್ಲಿ ನಾಲ್ಕು ವಿಕೆಟ್ ಕಿತ್ತರು.

ಬ್ಯಾಟಿಂಗ್ ಆರಂಭಿಸಿದ ಕಿವೀಸ್ ಚಹಾ ದಿನದಾಟದ ಅಂತ್ಯಕ್ಕೆ 49 ಓವರ್‌ಗಳಲ್ಲಿ 2 ವಿಕೆಟ್‌ಗೆ 101 ರನ್ ಗಳಿಸಿತು.

ಟಾಮ್ ಲಥಾಮ್ (30), ರವಿಚಂದ್ರನ್ ಅಶ್ವಿನ್ ಎಸೆತದಲ್ಲಿ ವಿರಾಟ್ ಕೊಹ್ಲಿಗೆ ಕ್ಯಾಚಿತ್ತರು. ಡೆವೊನ್ ಕಾನ್ವೆ ಅರ್ಧಶತಕ (54) ಗಳಿಸಿ ಇಶಾಂತ್ ಶರ್ಮಾ ಎಸೆತದಲ್ಲಿ ಔಟಾದರು. ನಾಯಕ ಕೇನ್ ವಿಲಿಯಮ್ಸನ್ ಮತ್ತು ರಾಸ್ ಟೇಲರ್ ಕ್ರೀಸ್ ಕಾಯ್ದುಕೊಂಡಿದ್ದಾರೆ.

ಪಂದ್ಯದ ಮೊದಲ ದಿನವಾದ ಶುಕ್ರವಾರದ ಆಟವು ಮಳೆಗೆ ಆಹುತಿಯಾಗಿತ್ತು. ಶನಿವಾರ ಆರಂಭವಾದ ಆಟವು ಸಂಜೆ ಹೊತ್ತಿಗೆ ಮಂದಬೆಳಕಿನಿಂದಾಗಿ ಸ್ಥಗಿತವಾಗಿತ್ತು. ಭಾರತ ತಂಡವು ಮೂರು ವಿಕೆಟ್‌ಗಳಿಗೆ 146 ರನ್ ಗಳಿಸಿತ್ತು. ವಿರಾಟ್ (44) ಮತ್ತು ಅಜಿಂಕ್ಯ ರಹಾನೆ ಕ್ರೀಸ್‌ನಲ್ಲಿದ್ದರು.

ಭಾನುವಾರ ದಿನದಾಟದ ಮೂರನೇ ಓವರ್‌ನಲ್ಲಿ ಜೆಮಿಸನ್ ಬೀಸಿದ ಎಲ್‌ಬಿಡಬ್ಲ್ಯು ಬಲೆಗೆ ವಿರಾಟ್ ಬಿದ್ದರು. ರಿಷಭ್ ಪಂತ್ (4)ಹೆಚ್ಚು ಆಡದಂತೆಯೂ ಜೆಮಿಸನ್ ನೋಡಿಕೊಂಡರು.

ಆದರೆ ಈ ಹಂತದಲ್ಲಿ ರಹಾನೆ ತಾಳ್ಮೆಯಿಂದ ಆಡಿದರು. ಅವರಿಗೆ ರವೀಂದ್ರ ಜಡೇಜ (15; 53ಎ) ಕೂಡ ಉತ್ತಮ ಜೊತೆ ನೀಡಿದರು. ಆರನೇ ವಿಕೆಟ್ ಜೊತೆಯಾಟದಲ್ಲಿ 28 ರನ್‌ಗಳನ್ನು ಸೇರಿಸಿದರು.

ನ್ಯೂಜಿಲೆಂಡ್ ವೇಗಿಗಳ ದಾಳಿಯಿಂದ ತುಸು ಬಸವಳಿದಂತೆ ಕಂಡ ರಹಾನೆ ಅರ್ಧಶತಕದ ಹೊಸ್ತಿಲಲ್ಲಿ ಎಡವಿದರು. ನೀಲ್ ವ್ಯಾಗ್ನರ್ ಎಸೆತವನ್ನು ಆಡುವ ಭರದಲ್ಲಿ ಟಾಮ್ ಲಥಾಮ್‌ಗೆ ಕ್ಯಾಚಿತ್ತರು. ಕೇವಲ ಒಂದು ರನ್‌ನಿಂದ ಅರ್ಧಶತಕ ತಪ್ಪಿಸಿಕೊಂಡರು. ಭರವಸೆ ಮೂಡಿಸಿದ್ದ ಜೊತೆಯಾಟವೂ ಮುರಿಯಿತು.

ಜಡೇಜ ಜೊತೆಗೂಡಿದ ಅಶ್ವಿನ್ (22; 27 ಎಸೆತ) ಚೇತೋಹಾರಿ ಆಟವಾಡಿದರು. ಇದರಿಂದಾಗಿ ತಂಡದ ಮೊತ್ತವು ಇನ್ನೂರರ ಗಡಿ ದಾಟಿತು.

ಟಿಮ್ ಸೌಥಿ ಎಸೆತದಲ್ಲಿ ಅಶ್ವಿನ್ ಔಟಾದರೆ, ಟ್ರೆಂಟ್ ಬೌಲ್ಟ್ ಎಸೆತಕ್ಕೆ ಜಡೇಜ ಪೆವಿಲಿಯನ್ ದಾರಿ ಹಿಡಿದರು. ಇಶಾಂತ್ ಮತ್ತು ಬೂಮ್ರಾ ವಿಕೆಟ್‌ಗಳನ್ನು ಬುಟ್ಟಿಗೆ ಹಾಕಿಕೊಂಡ ಜೆಮಿಸನ್ ಐದು ವಿಕೆಟ್ ಗೊಂಚಲಿನ ಸಾಧನೆ ಮಾಡಿದರು.

ಭಾರತ–ನ್ಯೂಜಿಲೆಂಡ್ ಸ್ಕೋರ್

ಭಾರತ ಮೊದಲ ಇನಿಂಗ್ಸ್ 92.1 ಓವರ್‌ಗಳಲ್ಲಿ 217 (ಶನಿವಾರ 64.4 ಓವರ್‌ಗಳಲ್ಲಿ 3ಕ್ಕೆ 146)

ಕೊಹ್ಲಿ ಎಲ್‌ಬಿಡಬ್ಲ್ಯು ಬಿ ಜೆಮಿಸನ್ 44 (132 ಎ, 4x1), ರಹಾನೆ ಸಿ ಲಥಾಮ್ ಬಿ ವ್ಯಾಗ್ನರ್ 49 (117 ಎ, 4x5), ಪಂತ್ ಸಿ ಲಥಾಮ್ ಬಿ ಜೆಮಿಸನ್ 4 (22 ಎ, 4x1), ಜಡೇಜ ಸಿ ವಾಟ್ಲಿಂಗ್ ಬಿ ಬೌಲ್ಟ್ 15 (53 ಎ, 4x2), ಅಶ್ವಿನ್ ಸಿ ಲಥಾಮ್ ಬಿ ಸೌಥಿ 22 (27 ಎ, 4x3), ಇಶಾಂತ್ ಸಿ ಟೇಲರ್ ಬಿ ಜೆಮಿಸನ್ 4 (16 ಎ), ಜಸ್‌ಪ್ರೀತ್ ಎಲ್‌ಬಿಡಬ್ಲ್ಯು ಜೆಮಿಸನ್ 0 (1 ಎ), ಶಮಿ ಔಟಾಗದೆ 4 (1 ಎ, 4x1))

ಇತರೆ: (ಲೆಗ್‌ಬೈ 3, ನೋಬಾಲ್ 2) 5

ವಿಕೆಟ್ ಪತನ: 4-149 (ವಿರಾಟ್ ಕೊಹ್ಲಿ, 67.4), 5-156 (ರಿಷಭ್ ಪಂತ್, 73.4), 6-182 (ಅಜಿಂಕ್ಯ ರಹಾನೆ, 78.4), 7-205 (ಆರ್. ಅಶ್ವಿನ್, 85.5), 8-213 (ಇಶಾಂತ್ ಶರ್ಮಾ, 91.4), 9-213 (ಜಸ್‌ಪ್ರೀತ್ ಬೂಮ್ರಾ, 91.5), 10-217 (ರವೀಂದ್ರ ಜಡೇಜ, 92.1).

ಬೌಲಿಂಗ್: ಟಿಮ್ ಸೌಥಿ 22-6-64-1, ಟ್ರೆಂಟ್ ಬೌಲ್ಟ್ 21.1-4-47-2, ಕೈಲ್ ಜೆಮಿಸನ್ 22-12-31-5, ಕಾಲಿನ್ ಡಿ ಗ್ರ್ಯಾಂಡ್ ಹೋಮ್ 12-6-32-0, ನೀಲ್ ವ್ಯಾಗ್ನರ್ 15-5-40-2

ನ್ಯೂಜಿಲೆಂಡ್ ಮೊದಲ ಇನಿಂಗ್ಸ್ 49 ಓವರ್‌ಗಳಲ್ಲಿ 2 ವಿಕೆಟ್‌ಗೆ 101

ಲಥಾಮ್ ಸಿ ಕೊಹ್ಲಿ ಬಿ ಅಶ್ವಿನ್ 30 (104 ಎ, 4x3), ಕಾನ್ವೆ ಸಿ ಶಮಿ ಬಿ ಇಶಾಂತ್ 54 (153ಎ, 4x6)

ವಿಲಿಯಮ್ಸನ್ ಬ್ಯಾಟಿಂಗ್ 12 (37ಎ, 4X1)

ಟೇಲರ್ ಬ್ಯಾಟಿಂಗ್ 00 (2ಎ)

ಇತರೆ: (ಲೆಗ್ ಬೈ 3, ನೋಬಾಲ್ 2) 5

ವಿಕೆಟ್ ಪತನ: 1-70(ಟಾಮ್ ಲಥಾಮ್, 34.2), 2-101 ಡೆವೊನ್ ಕಾನ್ವೆ, 48.4)

ಬೌಲಿಂಗ್: ಇಶಾಂತ್ ಶರ್ಮಾ 12-4-19-1, ಬೂಮ್ರಾ 11-3-34-0, ಮೊಹಮ್ಮದ್ ಶಮಿ 11-4-19-0, ಅಶ್ವಿನ್ 12-5-20-1, ರವಿಂದ್ರ ಜಡೇಜ 3-1-6-0

ಕ್ರಿಕೆಟ್: ವಿಂಡೀಸ್‌ಗೆ ಇನಿಂಗ್ಸ್ ಹಿನ್ನಡೆ

ಸೇಂಟ್ ಲೂಸಿಯಾ: ಕಗಿಸೊ ರಬಾಡ ಮತ್ತು ಲುಂಗಿ ಗಿಡಿ ವೇಗದ ದಾಳಿಯ ಮುಂದೆ ವೆಸ್ಟ್ ಇಂಡೀಸ್ ತಂಡವು ಇಲ್ಲಿ ನಡೆಯುತ್ತಿರುವ ಟೆಸ್ಟ್‌ನ ಮೊದಲ ಇನಿಂಗ್ಸ್‌ನಲ್ಲಿ 149 ರನ್ ಹಿನ್ನಡೆ ಅನುಭವಿಸಿತು.

ಸಂಕ್ಷಿಪ್ತ ಸ್ಕೋರ್: ಮೊದಲ ಇನಿಂಗ್ಸ್: ದಕ್ಷಿಣ ಆಫ್ರಿಕಾ: 112.4 ಓವರ್‌ಗಳಲ್ಲಿ 298. ವೆಸ್ಟ್ ಇಂಡೀಸ್: 54 ಓವರ್‌ಗಳಲ್ಲಿ 149 (ಶಾಯ್ ಹೋಪ್ 43, ಜೆಮೈನ್ ಬ್ಲ್ಯಾಕ್‌ವುಡ್ 49, ಕಗಿಸೊ ರಬಾಡ 24ಕ್ಕೆ2, ಲುಂಗಿ ಗಿಡಿ 27ಕ್ಕೆ2, ವಿಯಾನ್ ಮಲ್ದರ್ 1 ರನ್‌ಗೆ 3) ವಿವರ ಅಪೂರ್ಣ.

ಒಲಿಂಪಿಕ್ಸ್: ಸಕಲ ಸೌಲಭ್ಯದ ಭರವಸೆ

ನವದೆಹಲಿ (ಪಿಟಿಐ): ಟೋಕಿಯೊ ಒಲಿಂಪಿಕ್ಸ್‌ನಲ್ಲಿ ಪಾಲ್ಗೊಳ್ಳುವ ಭಾರತದ ಕ್ರೀಡಾಪಟುಗಳಿಗೆ ಕ್ರೀಡಾಗ್ರಾಮದಲ್ಲಿ ತರಬೇತಿಗೆ ಸಕಲ ಸೌಲಭ್ಯಗಳನ್ನು ಒದಗಿಸಲು ಆಯೋಜಕರು ಪ್ರಯತ್ನಪಡುತ್ತಿದ್ದಾರೆ ಎಂದು ಭಾರತ ಒಲಿಂಪಿಕ್ ಸಂಸ್ಥೆಗೆ (ಐಒಎ) ಕಳುಹಿಸಿರುವ ಪತ್ರದಲ್ಲಿ ತಿಳಿಸಲಾಗಿದೆ.

ಟೋಕಿಯೊಗೆ ತೆರಳುವ ಮುನ್ನ ಒಂದು ವಾರ ಪ್ರತಿದಿನ ಕೋವಿಡ್ ಪರೀಕ್ಷೆ ಮಾಡಿಸಿಕೊಳ್ಳಬೇಕೆಂದೂ ಟೋಕಿಯೊಗೆ ತಲುಪಿದ ನಂತರ ಮೂರು ದಿನ ಬೇರೆ ದೇಶದ ಯಾರೊಂದಿಗೂ ಮಾತನಾಡಬಾರದು ಎಂದು ಭಾರತದ ಪ್ರತಿನಿಧಿಗಳಿಗೆ ಜಪಾನ್ ಸರ್ಕಾರ ಸೂಚಿಸಿತ್ತು. ಇದಕ್ಕೆ ಐಒಎ ಅಸಮಾಧಾನ ವ್ಯಕ್ತಪಡಿಸಿತ್ತು.

ಭಾರತ ಒಳಗೊಂಡಂತೆ ಇತ್ತೀಚೆಗೆ ಕೋವಿಡ್–19ರ ವಿವಿಧ ರೂಪಾಂತರಿತ ವೈರಸ್‌ಗಳು ಕಂಡು ಬಂದ 11 ದೇಶಗಳಿಂದ ತೆರಳುವ ಕ್ರೀಡಾಪಟುಗಳು ಮತ್ತು ಅಧಿಕಾರಿಗಳಿಗೆ ಸಂಬಂಧಿಸಿ ಕಠಿಣ ನಿಯಮಾವಳಿಗಳನ್ನು ಜಪಾನ್ ಸರ್ಕಾರ ಸಿದ್ಧಪಡಿಸಿದೆ. ಈ ಕ್ರಮಗಳನ್ನು ಕೈಬಿಡಬೇಕು ಎಂದು ಟೋಕಿಯೊ ಒಲಿಂಪಿಕ್ಸ್ ಆಯೋಜನಾ ಸಮಿತಿಯನ್ನು (ಟೊಕೊಗ್) ಕೋರಿತ್ತು.

ಒಲಿಂಪಿಕ್ಸ್: ಬಿಸಿಸಿಐನಿಂದ ₹ 10 ಕೋಟಿ ದೇಣಿಗೆ

ನವದೆಹಲಿ (ಪಿಟಿಐ): ಟೋಕಿಯೊ ಒಲಿಂಪಿಕ್ಸ್‌ಗೆ ತೆರಳುವ ಭಾರತ ತಂಡಕ್ಕೆ ₹ 10 ಕೋಟಿ ದೇಣಿಗೆ ನೀಡುವುದಾಗಿ ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿ (ಬಿಸಿಸಿಐ) ಭಾನುವಾರ ಪ್ರಕಟಿಸಿದೆ. ಭಾರತ ಒಲಿಂಪಿಕ್ ಸಂಸ್ಥೆ (ಐಒಎ) ಮತ್ತು ಕ್ರೀಡಾ ಸಚಿವಾಲಯ ಈ ಕುರಿತು ಮಂಡಳಿಗೆ ಮನವಿ ಸಲ್ಲಿಸಿದ್ದವು.

ಬಿಸಿಸಿಐನ ಅಪೆಕ್ಸ್ ಕೌನ್ಸಿಲ್‌ನ ತುರ್ತು ಸಭೆಯಲ್ಲಿ ಈ ನಿರ್ಧಾರ ತೆಗೆದುಕೊಳ್ಳಲಾಗಿದೆ. ಸಭೆಯಲ್ಲಿ ಮಂಡಳಿಯ ಅಧ್ಯಕ್ಷ ಸೌರವ್ ಗಂಗೂಲಿ ಮತ್ತು ಕಾರ್ಯದರ್ಶಿ ಜಯ್ ಶಾ ಹಾಜರಿದ್ದರು.

ಈ ಬಾರಿಯ ಒಲಿಂಪಿಕ್ಸ್ ಜುಲೈ 23ರಿಂದ ನಡೆಯಲಿದೆ.

ಚಿನ್ನ ಗೆದ್ದ ಶ್ರೀಹರಿ, ಸಾಜನ್

ಬೆಲ್‌ಗ್ರೇಡ್ ಟ್ರೋಫಿ ಈಜು: ಒಲಿಂಪಿಕ್ಸ್ ಅರ್ಹತೆ ವಿಫಲ



ಶ್ರೀಹರಿ ನಟರಾಜ್

ಬೆಲ್‌ಗ್ರೇಡ್, ಸರ್ಬಿಯ (ಪಿಟಿಐ): ಈಜುಕೊಳದಲ್ಲಿ ಸಂಚಲನ ಮೂಡಿಸಿದ ಭಾರತದ ಶ್ರೀಹರಿ ನಟರಾಜ್ ಹಾಗೂ ಸಾಜನ್ ಪ್ರಕಾಶ್ ಅವರು ಬೆಲ್‌ಗ್ರೇಡ್ ಟ್ರೋಫಿ ಸ್ಪರ್ಧೆಗಳಲ್ಲಿ ಚಿನ್ನದ ಪದಕ ಕೊರಳಿಗೇರಿಸಿಕೊಂಡರು. ಆದರೆ ಒಲಿಂಪಿಕ್ಸ್ ಟಿಕೆಟ್ ಗಿಟ್ಟಿಸಲು ಬೇಕಾದ 'ಎ' ಅರ್ಹತೆ ಗಳಿಸಲು ವಿಫಲರಾದರು.

ಫಿನಾ ಮಾನ್ಯತೆ ಪಡೆದ ಈ ಒಲಿಂಪಿಕ್ಸ್ ಅರ್ಹತೆ ಸ್ಪರ್ಧೆಯಲ್ಲಿ ಕರ್ನಾಟಕದ ಶ್ರೀಹರಿ, ಶನಿವಾರ 100 ಮೀಟರ್ ಬ್ಯಾಕ್‌ಸ್ಟ್ರೋಕ್ ವಿಭಾಗದಲ್ಲಿ 54.45 ಸೆಕೆಂಡುಗಳಲ್ಲಿ ಗುರಿ ತಲುಪಿ ಅಗ್ರಸ್ಥಾನ ಗಳಿಸಿದರು.

ಕೇರಳದ ಪ್ರಕಾಶ್ 200 ಮೀ. ಬಟರ್‌ಫ್ಲೈ ವಿಭಾಗದಲ್ಲಿ ಚಿನ್ನದ ಪದಕ ತಮ್ಮದಾಗಿಸಿಕೊಂಡರು. 1 ನಿಮಿಷ 56.96 ಸೆಕೆಂಡುಗಳಲ್ಲಿ ನಿಗದಿತ ಗುರಿ ಕ್ರಮಿಸಿದ ಅವರು ತಮ್ಮದೇ ಹೆಸರಿನಲ್ಲಿದ್ದ ರಾಷ್ಟ್ರೀಯ ದಾಖಲೆಯನ್ನು (1 ನಿ. 57.73 ಸೆ.) ಉತ್ತಮಪಡಿಸಿಕೊಂಡರು. 2018ರಲ್ಲಿ ಅವರು ಈ ದಾಖಲೆ ಸ್ಥಾಪಿಸಿದ್ದರು. ಕೇವಲ 0.48 ಸೆಕೆಂಡುಗಳ ಅಂತರದಲ್ಲಿ ಟೋಕಿಯೊ ಕೂಟಕ್ಕೆ ಅರ್ಹತೆ ತಪ್ಪಿಸಿಕೊಂಡರು.

ಈ ಇಬ್ಬರೂ ಈಜುಪಟುಗಳು ಈಗಾಗಲೇ ಒಲಿಂಪಿಕ್ಸ್ 'ಬಿ' ಅರ್ಹತೆ ಗಳಿಸಿದ್ದಾರೆ.


ಒಲಿಂಪಿಕ್ಸ್ 'ಎ' ಅರ್ಹತೆಗೆ, ಪುರುಷರ 200 ಮೀ. ಬಟರ್‌ಫ್ಲೈ ವಿಭಾಗದಲ್ಲಿ 1 ನಿಮಿಷ, 56.48 ಸೆಕೆಂಡು ಮಾನದಂಡ ನಿಗದಿಪಡಿಸಿದ್ದರೆ, 100 ಮೀ, ಬ್ಯಾಕ್‌ಸ್ಟ್ರೋಕ್ ವಿಭಾಗದಲ್ಲಿ 53.85 ಸೆಕೆಂಡು ನಿಗದಿ ಮಾಡಲಾಗಿದೆ.

ಭಾರತದ ಯಾವುದೇ ಈಜು ಪಟುಗಳು ಇದುವರೆಗೆ 'ಎ' ಅರ್ಹತೆ ಗಳಿಸಿಲ್ಲ.

ಈ ಟೂರ್ನಿಯಲ್ಲಿ ಶನಿವಾರ ಶಾನ್ ಗಂಗೂಲಿ ಕೂಡ 400 ಮೀ. ಮೆಡ್ಲೆ ವಿಭಾಗದಲ್ಲಿ ಚಿನ್ನದ ಪದಕ ಗೆದ್ದಿದ್ದರು.

ಮಹಿಳೆಯರ 50 ಮೀ. ಬ್ಯಾಕ್‌ಸ್ಟ್ರೋಕ್ ವಿಭಾಗದಲ್ಲಿ ಮಾನಾ ಪಟೇಲ್ (29.79 ಸೆ.) ಬೆಳ್ಳಿ ಗೆದ್ದರೆ, ಪುರುಷರ 200 ಮೀ. ಬಟರ್‌ಫ್ಲೈನಲ್ಲಿ ತನಿಶ್ ಮ್ಯಾಥ್ಯು (2 ನಿ. 13.55 ಸೆಕೆಂಡು) ಕಂಚು ತಮ್ಮದಾಗಿಸಿಕೊಂಡಿದ್ದರು.

ಬಿಎಫ್‌ಸಿಯಲ್ಲೇ ಉಳಿದ ಚೆಟ್ರಿ




ಸುನಿಲ್ ಚೆಟ್ರಿ

ಬೆಂಗಳೂರು: ಎಂಟು ವರ್ಷಗಳಿಂದ ಬೆಂಗಳೂರು ಫುಟ್‌ಬಾಲ್ ಕ್ಲಬ್ (ಬಿಎಫ್‌ಸಿ) ತಂಡದಲ್ಲಿ ಆಡುತ್ತಿರುವ ಸ್ಟ್ರೈಕರ್ ಸುನಿಲ್ ಚೆಟ್ರಿ ಇನ್ನೂ ಎರಡು ವರ್ಷ ತಂಡದೊಂದಿಗೆ ಇರಲು ನಿರ್ಧರಿಸಿದ್ದಾರೆ. ಕ್ಲಬ್ ಜೊತೆಗಿನ ಒಪ್ಪಂದವನ್ನು ಚೆಟ್ರಿ ಮುಂದುವರಿಸಿದ್ದಾರೆ ಎಂದು ಬಿಎಫ್‌ಸಿ ಭಾನುವಾರ ತಿಳಿಸಿದೆ.

2013ರಲ್ಲಿ ಕ್ಲಬ್ ಆರಂಭವಾದಾಗಿನಿಂದ ಬಿಎಫ್‌ಸಿ ಜೊತೆ ಒಪ್ಪಂದ ಮಾಡಿಕೊಂಡಿದ್ದ ಸುನಿಲ್ ಚೆಟ್ರಿ ಇಂಡಿಯನ್ ಸೂಪರ್ ಲೀಗ್ (ಐಎಸ್‌ಎಲ್) ಸೇರಿದಂತೆ ವಿವಿಧ ಟೂರ್ನಿಗಳಲ್ಲಿ ನಾಯಕನಾಗಿ ತಂಡವನ್ನು ಮುನ್ನಡೆಸಿದ್ದಾರೆ. ತಂಡಕ್ಕಾಗಿ 203 ಪಂದ್ಯಗಳನ್ನು ಆಡಿದ್ದು 101 ಗೋಲು ಗಳಿಸಿದ್ದಾರೆ. ಅಖಿಲ ಭಾರತ ಫುಟ್‌ಬಾಲ್ ಫೆಡರೇಷನ್ (ಎಐಎಫ್‌ಎಫ್) ನೀಡುವ ವರ್ಷದ ಆಟಗಾರ ಪ್ರಶಸ್ತಿಗೆ ಆರು ಬಾರಿ ಆಯ್ಕೆಯಾಗಿರುವ ಚೆಟ್ರಿ ಅವರು ಫೆಡರೇಷನ್ ಕಪ್ (2015, 2017), ಐಎಸ್‌ಎಲ್ (2018) ಮತ್ತು ಸೂಪರ್ ಕಪ್ (2018) ಸೇರಿದಂತೆ ಐದು ಪ್ರಮುಖ ಟ್ರೋಫಿಗಳನ್ನು ಗೆಲ್ಲಿಸಿಕೊಟ್ಟಿದ್ದಾರೆ.

'ಕ್ಲಬ್‌ನ ಆರಂಭದಿಂದ ಚೆಟ್ರಿ ಅವಿಭಾಜ್ಯ ಅಂಗವಾಗಿದ್ದಾರೆ. ಆಟಗಾರನಾಗಿ ತಂಡಕ್ಕೆ ಅವರು ಎಷ್ಟು ಮುಖ್ಯ ಎಂಬುದು ನಮಗೆಲ್ಲರಿಗೂ ಗೊತ್ತಿದೆ' ಎಂದು ಕ್ಲಬ್‌ನ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಮಂದಾರ್ ತಮ್ಹಾನೆ ಹೇಳಿದ್ದಾರೆ.

ಯೂರೊ ಕಪ್ ಫುಟ್‌ಬಾಲ್: ಸ್ವಿಟ್ಜರ್ಲೆಂಡ್ ಜಯಭೇರಿ



ಗೋಲು ಗಳಿಸಿ ಸಂಭ್ರಮಿಸಿದ ಕ್ಷೆರ್ಡಾನ್ ಶಾಕಿರಿ– ಎಎಫ್‌ಪಿ ಚಿತ್ರ

ಬಾಕು (ಎಎಫ್‌ಪಿ/ಎಪಿ): ಕ್ಷೆರ್ಡಾನ್ ಶಾಕಿರಿ ಗಳಿಸಿದ ಎರಡು ಗೋಲುಗಳ ನೆರವಿನಿಂದ ಸ್ವಿಟ್ಜರ್ಲೆಂಡ್ ತಂಡವು 3–1ರಿಂದ ಟರ್ಕಿ ತಂಡವನ್ನು ಮಣಿಸಿತು.

ಯೂರೊ ಕಪ್ ಫುಟ್‌ಬಾಲ್ ಟೂರ್ನಿಯ 'ಎ' ಗುಂಪಿನ ಪಂದ್ಯದಲ್ಲಿ ಭಾನುವಾರ ಶಾಕಿರಿ 26 ಹಾಗೂ 68ನೇ ನಿಮಿಷದಲ್ಲಿ ಗೋಲು ಹೊಡೆದರು. ಹ್ಯಾರಿಸ್ ಸ್ಫೆಫೊವಿಚ್ (6ನೇ ನಿ.) ಮತ್ತೊಂದು ಗೋಲು ದಾಖಲಿಸಿದರು. ಟರ್ಕಿ ಪರ ಇರ್ಫಾನ್ ಖವೆಚಿ (62ನೇ ನಿ.) ಯಶಸ್ವಿಯಾದರು.

'ಎ' ಗುಂಪಿನ ಮತ್ತೊಂದು ಪಂದ್ಯದಲ್ಲಿ ಇಟಲಿ 1–0ಯಿಂದ ವೇಲ್ಸ್ ತಂಡವನ್ನು ಸೋಲಿಸಿತು.

ಸ್ಪೇನ್‌ನ ಸೆವಿಲ್ಲೆಯಲ್ಲಿ ಶನಿವಾರ ನಡೆದಿದ್ದ ಪಂದ್ಯದಲ್ಲಿ ಪೋಲೆಂಡ್ ತಂಡವು ಸ್ಪೇನ್ ಎದುರು 1–1ರಿಂದ ಸಮಬಲ ಸಾಧಿಸಿತ್ತು.

ಎಥೆನಾಲ್ ಎಂಜಿನ್: ನಿರ್ಧಾರ ಶೀಘ್ರ

ನವದೆಹಲಿ (ಪಿಟಿಐ): ಎಥೆನಾಲ್ ಮತ್ತು ಪೆಟ್ರೋಲ್ ಬಳಸಲು ಸಾಧ್ಯವಾಗುವ ಎಂಜಿನ್‌ಗಳನ್ನು ವಾಹನಗಳಲ್ಲಿ ಅಳವಡಿಸುವ ಕುರಿತು ಎಂಟರಿಂದ 10 ದಿನಗಳಲ್ಲಿ ಸರ್ಕಾರವು ನಿರ್ಧಾರ ತೆಗೆದುಕೊಳ್ಳಲಿದೆ ಎಂದು ಕೇಂದ್ರ ಸಚಿವ ನಿತಿನ್ ಗಡ್ಕರಿ ತಿಳಿಸಿದ್ದಾರೆ.

ಕಾರ್ಯಕ್ರಮವೊಂದರಲ್ಲಿ ಮಾತನಾಡಿದ ಅವರು, 'ಪರ್ಯಾಯ ಇಂಧನವಾದ ಎಥೆನಾಲ್ ಬೆಲೆ ಪ್ರತಿ ಲೀಟರಿಗೆ ₹ 60ರಿಂದ ₹ 62ರಷ್ಟಿದೆ. ಪೆಟ್ರೋಲ್ ದರವು ಲೀಟರಿಗೆ ದೇಶದ ಹಲವು ಭಾಗಗಳಲ್ಲಿ ₹ 100ಕ್ಕಿಂತ ಹೆಚ್ಚಿದೆ. ಎಥೆನಾಲ್ ಬಳಕೆಯಿಂದ ಭಾರತೀಯರಿಗೆ ಪ್ರತಿ ಲೀಟರಿಗೆ ₹ 30ರಿಂದ ₹ 35ರವರೆಗೆ ಉಳಿತಾಯವಾಗಲಿದೆ' ಎಂದರು.

ಎಥೆನಾಲ್ ಬಳಕೆಯಿಂದ ರೈತರಿಗೆ ಅನುಕೂಲ ಆಗುವ ಜತೆಗೆ ದೇಶದ ಆರ್ಥಿಕ ಬೆಳವಣಿಗೆಗೂ ಉತ್ತೇಜನ ಸಿಗಲಿದೆ ಎಂದು ಅವರು ಅಭಿಪ್ರಾಯಪಟ್ಟಿದ್ದಾರೆ.

'ಪೆಟ್ರೋಲ್ ಮಾತ್ರ ಬಳಸುವ ಎಂಜಿನ್ ಇರಬಾರದು. ಎಥೆನಾಲ್ ಅಥವಾ ಪೆಟ್ರೋಲ್ ಇವೆರಡರಲ್ಲಿ ಯಾವುದನ್ನು ಬೇಕಿದ್ದರೂ ಬಳಸಲು ಆಗುವಂತಹ ಎಂಜಿನ್ ಇರಬೇಕು ಎಂದು ಸಾರಿಗೆ ಸಚಿವನಾಗಿ ನಾನು ಉದ್ಯಮಕ್ಕೆ ಆದೇಶಿಸಲಿದ್ದೇನೆ. ಇಂತಹ ಆಯ್ಕೆ ಇದ್ದರೆ ಶೇಕಡ 100ರಷ್ಟು ಕಚ್ಚಾ ತೈಲ ಅಥವಾ ಶೇ 100ರಷ್ಟು ಎಥೆನಾಲ್ ಬಳಕೆಗೆ ಜನರಿಗೆ ಅವಕಾಶ ಸಿಗಲಿದೆ' ಎಂದು ಹೇಳಿದ್ದಾರೆ.

ಪೆಟ್ರೋಲ್‌ಗಿಂತಲೂ ಎಥೆನಾಲ್ ಉತ್ತಮ ಇಂಧನ. ಕಡಿಮೆ ವೆಚ್ಚದ್ದು ಮತ್ತು ಮಾಲಿನ್ಯ ಮುಕ್ತವೂ ಆಗಿದೆ ಎಂದಿದ್ದಾರೆ.

ವಿಮೆ ಪ್ರೀಮಿಯಂ ಹೊರೆ ಇಳಿಸುವುದು ಹೇಗೆ?



ಬಂಡವಾಳ ಮಾರುಕಟ್ಟೆ

ಅವಿನಾಶ್ ಕೆ.ಟಿ.

ಕೋವಿಡ್ ಸಾಂಕ್ರಾಮಿಕವು ಎಲ್ಲೆಡೆ ತನ್ನ ಕುರೂಪವನ್ನು ಪ್ರದರ್ಶಿಸಿದ ನಂತರದಲ್ಲಿ ಅವಧಿ ವಿಮೆ (ಟರ್ಮ್ ಲೈಫ್ ಇನ್ಶೂರೆನ್ಸ್) ಮತ್ತು ಆರೋಗ್ಯ ವಿಮೆ (ಹೆಲ್ತ್ ಇನ್ಶೂರೆನ್ಸ್) ಮಹತ್ವ ಬಹುತೇಕರಿಗೆ ಅರ್ಥವಾಗುತ್ತಿದೆ. ಕೆಟ್ಟ ಕಾಲದಲ್ಲಿ ವಿಮೆ ಸಹ ಕುಟುಂಬದ ಭವಿಷ್ಯದ ದೃಷ್ಟಿಯಿಂದ ಒಂದು ಒಳ್ಳೆಯ ಹೂಡಿಕೆಯೇ ಎಂಬುದನ್ನು ಪರಿಶೀಲಿಸುವ ಸಂದರ್ಭ ಈಗ ಸೃಷ್ಟಿಯಾಗಿದೆ. ಈ ಹೊತ್ತಿನಲ್ಲಿ ಈ ವಿಮಾ ಯೋಜನೆಗಳ ಪ್ರೀಮಿಯಂ ಮೊತ್ತವನ್ನು ತಗ್ಗಿಸಿಕೊಳ್ಳಲು ನೆರವಾಗುವ ಕೆಲವು ಸಲಹೆಗಳು ಇಲ್ಲಿವೆ.

ಆದಷ್ಟು ಬೇಗ ಅವಧಿ ವಿಮೆ ಖರೀದಿಸಿ: ಅವಧಿ ವಿಮೆ ಖರೀದಿಸುವಾಗ ವ್ಯಕ್ತಿಯ ವಯಸ್ಸು ಬಹಳ ಮುಖ್ಯವಾಗುತ್ತದೆ. ವ್ಯಕ್ತಿಯ ವಯಸ್ಸು ಕಡಿಮೆ ಇದ್ದಷ್ಟೂ ಪ್ರೀಮಿಯಂ ಕಡಿಮೆಯಾಗುತ್ತದೆ. ವ್ಯಕ್ತಿಯ ವಯಸ್ಸು ಹೆಚ್ಚಾದಂತೆ ಪ್ರೀಮಿಯಂ ಮೊತ್ತವೂ ಹೆಚ್ಚಾಗುತ್ತದೆ. ಹಾಗಾಗಿ ಸಾಧ್ಯವಾದಷ್ಟು ಬೇಗ, ಅಂದರೆ ಕೆಲಸಕ್ಕೆ ಸೇರಿದ ತಕ್ಷಣ ಅವಧಿ ವಿಮೆ ಖರೀದಿಸುವುದು ಒಳ್ಳೆಯದು. ವಯಸ್ಸಾದಂತೆಲ್ಲ ಆರೋಗ್ಯ ಸಮಸ್ಯೆಗಳು ಜಾಸ್ತಿ ಎನ್ನುವ ಅಂಶವನ್ನು ವಿಮಾ ಕಂಪನಿಗಳು ಗಣನೆಗೆ ತೆಗೆದುಕೊಳ್ಳುತ್ತವೆ. ಹಾಗಾಗಿ ವಯಸ್ಸಾದಂತೆ ಪ್ರೀಮಿಯಂ ಕೂಡ ತುಟ್ಟಿಯಾಗುತ್ತದೆ.

ಉದಾಹರಣೆಗೆ, ₹ 1 ಕೋಟಿ ಕವರೇಜ್ ಇರುವ ಅವಧಿ ವಿಮೆಯನ್ನು ನಿಮ್ಮ 25ನೇ ವಯಸ್ಸಿನಲ್ಲಿ ಖರೀದಿಸಿದರೆ ₹ 7 ಸಾವಿರದಿಂದ ₹ 9 ಸಾವಿರದವರೆಗೆ ವಾರ್ಷಿಕ ಪ್ರೀಮಿಯಂ ಇರುತ್ತದೆ. ನೀವು 40 ವರ್ಷ ವಯಸ್ಸಾದ ಬಳಿಕ ಅವಧಿ ವಿಮೆ ಖರೀದಿಸಿದರೆ ವಾರ್ಷಿಕ ಪ್ರೀಮಿಯಂ ₹ 19 ಸಾವಿರದಿಂದ ₹ 25 ಸಾವಿರ ಆಗುತ್ತದೆ.

ಧೂಮಪಾನ, ಮದ್ಯಪಾನ ಮಾಡಬೇಡಿ: ಧೂಮಪಾನ, ಮದ್ಯಪಾನ ಮಾಡಿದರೆ ಅವಧಿ ವಿಮೆಯ ಪ್ರೀಮಿಯಂ ಮೊತ್ತ ಹೆಚ್ಚಳವಾಗುತ್ತದೆ. ಬೀಡಿ, ಸಿಗರೇಟು, ಸಿಗಾರ್, ಗುಟ್ಕಾ, ನಿಕೋಟಿನ್ ಚ್ಯೂಯಿಂಗ್ ಗಮ್ ಅಭ್ಯಾಸ ಇರುವವರಿಗೆ ಮತ್ತು ಮದ್ಯಪಾನ ಮಾಡುವವರಿಗೆ ವಿಮಾ ಕಂಪನಿಗಳು ಪ್ರೀಮಿಯಂ ಮೊತ್ತವನ್ನು ಹೆಚ್ಚಿಗೆ ನಿಗದಿ ಮಾಡುತ್ತವೆ. ಧೂಮಪಾನ ಮತ್ತು ಮದ್ಯಪಾನ ಮಾಡುವವರಿಗೆ ಜೀವನಶೈಲಿಗೆ ಸಂಬಂಧಿಸಿದ ಕಾಯಿಲೆಗಳು ಹೆಚ್ಚು ಕಾಣಿಸಿಕೊಳ್ಳುವ ಸಾಧ್ಯತೆ ಇರುತ್ತದೆ. ಹಾಗಾಗಿ, ವಿಮಾ ಕಂಪನಿಗಳು ಇಂಥವರಿಗೆ ಶೇ 20ರಿಂದ ಶೇ 50ರವರೆಗೂ ಹೆಚ್ಚುವರಿ ಪ್ರೀಮಿಯಂ ನಿಗದಿಪಡಿಸುವ ಸಾಧ್ಯತೆ ಇರುತ್ತದೆ.

ಆರೋಗ್ಯ ಕಾಪಾಡಿಕೊಳ್ಳಿ, ಕಡಿಮೆ ಪ್ರೀಮಿಯಂ ಕಟ್ಟಿ: ಇತ್ತೀಚೆಗೆ 31 ವರ್ಷ ವಯಸ್ಸಿನ ನನ್ನ ಸ್ನೇಹಿತರೊಬ್ಬರು ಅವಧಿ ವಿಮೆಗಾಗಿ ಖಾಸಗಿ ಕಂಪನಿಯೊಂದಕ್ಕೆ ಅರ್ಜಿ ಸಲ್ಲಿಸಿದ್ದರು. ಸಕ್ಕರೆ ಕಾಯಿಲೆ ಇರುವ ಕಾರಣ ಅವರಿಗೆ ವಿಮೆ ನಿರಾಕರಿಸಲಾಗಿದೆ. ಹೌದು, ಕೋವಿಡ್ ನಂತರದಲ್ಲಿ ವ್ಯಕ್ತಿಯ ಆರೋಗ್ಯ ಸ್ಥಿತಿಯ ಬಗ್ಗೆ ವಿಮಾ ಕಂಪನಿಗಳು ಹೆಚ್ಚು ಜಾಗರೂಕತೆಯಿಂದ ನಡೆದುಕೊಳ್ಳುತ್ತಿವೆ. ರಕ್ತದ ಒತ್ತಡ, ಸಕ್ಕರೆ ಕಾಯಿಲೆಯಂತಹ ಸಮಸ್ಯೆಗಳು ಇಲ್ಲದಿದ್ದರೆ ವಿಮಾ ಕಂಪನಿಗಳು ಪ್ರೀಮಿಯಂ ಮೊತ್ತ ತಗ್ಗಿಸುತ್ತವೆ. ಆರೋಗ್ಯ ಸಮಸ್ಯೆಗಳಿದ್ದರೆ ಪ್ರೀಮಿಯಂ ದರದಲ್ಲಿ ಶೇ 40ರಿಂದ ಶೇ 60ರವರೆಗೂ ಹೆಚ್ಚಳವಾಗುವ ಸಾಧ್ಯತೆ ಇರುತ್ತದೆ. ಗಂಭೀರ ಆರೋಗ್ಯ ಸಮಸ್ಯೆಗಳಿದ್ದರೆ ವಿಮೆ ಸಿಗದಿರುವ ಸಾಧ್ಯತೆಯೂ ಇದೆ.

ಆರೋಗ್ಯ ವಿಮೆ ಕಡೆಗಣಿಸಬೇಡಿ: 'ನನಗೇನಾಗುತ್ತೆ? ಗಟ್ಟಿಯಾಗಿದ್ದೇನೆ' ಎಂದು ಭಂಡ ಧೈರ್ಯ ತೋರಿಸುವ ಬದಲು ನಿಮ್ಮ ಮತ್ತು ಕುಟುಂಬದ ಸುರಕ್ಷತೆಗಾಗಿ ಒಂದು ಆರೋಗ್ಯ ವಿಮೆ ಮಾಡಿಸಿಕೊಳ್ಳಿ. ನಿಮಗೆ, ನಿಮ್ಮನ್ನು ನಂಬಿದವರಿಗೆ, ಮಕ್ಕಳಿಗೆ ಆದಷ್ಟು ಬೇಗ ಒಂದು ಫ್ಯಾಮಿಲಿ ಫ್ಲೋಟರ್ ಆರೋಗ್ಯ ವಿಮೆ ಖರೀದಿಸಿ. ವಯಸ್ಸಾದ ತಂದೆ–ತಾಯಿಗೆ ಪ್ರತ್ಯೇಕ ವಿಮೆ ಮಾಡಿಸಿಕೊಳ್ಳಿ. ವಯಸ್ಸು ಚಿಕ್ಕದಿರುವಾಗ ಆರೋಗ್ಯ ವಿಮೆ ಪಡೆದರೆ ಪ್ರೀಮಿಯಂ ಮೊತ್ತ ಕಡಿಮೆ ಇರುತ್ತದೆ.

ಸರಿಹೊಂದುವ ಪ್ರೀಮಿಯಂ ಆಯ್ಕೆ ಮಾಡಿಕೊಳ್ಳಿ: ಅವಧಿ ವಿಮೆ ಪಡೆಯುವಾಗ ವಾರ್ಷಿಕ, ಅರೆ ವಾರ್ಷಿಕ ಮತ್ತು ತಿಂಗಳ ಪ್ರೀಮಿಯಂ ಕಟ್ಟಲು ಅವಕಾಶವಿರುತ್ತದೆ. ನಿಮಗೆ ಯಾವುದು ಸರಿಹೊಂದುತ್ತದೆಯೋ ಅದನ್ನು ಆಯ್ಕೆ ಮಾಡಿಕೊಳ್ಳಿ. ಕೆಲವು ಕಂಪನಿಗಳು ಒಂದೇ ಬಾರಿಗೆ ಪ್ರೀಮಿಯಂ ಪಾವತಿಸಲು ಹೇಳುತ್ತವೆ. ಮುಂದಿನ ಹತ್ತಿಪ್ಪತ್ತು ವರ್ಷಗಳ ಪ್ರೀಮಿಯಂ ಅನ್ನು ಒಂದೇ ಸಲಕ್ಕೆ ಕಟ್ಟುವ ಅವಕಾಶ ಮಾಡಿಕೊಡುತ್ತವೆ. ಅದರೆ ಇದರಿಂದ ಗ್ರಾಹಕರಿಗೆ ಅನುಕೂಲವಾಗುವುದಿಲ್ಲ.

(ಲೇಖಕ ಇಂಡಿಯನ್ ಮನಿ ಡಾಟ್ ಕಾಂನ ಹಣಕಾಸು ಸಲಹಾ ವಿಭಾಗದ ಮುಖ್ಯಸ್ಥ)

ನಾಲ್ಕು ವಾರಗಳ ಗಳಿಕೆಯ ಓಟಕ್ಕೆ ಬ್ರೇಕ್



ಸತತ ನಾಲ್ಕು ವಾರಗಳ ಗಳಿಕೆಯ ಓಟವನ್ನು ಷೇರುಪೇಟೆ ಸೂಚ್ಯಂಕಗಳು ನಿಲ್ಲಿಸಿವೆ. ಮಾರುಕಟ್ಟೆಯು ಅನಿಶ್ಚಿತತೆಯ ಹಾದಿ ತುಳಿದಿದೆ. ಜೂನ್ 18ಕ್ಕೆ ಕೊನೆಯಾದ ವಾರದಲ್ಲಿ 52,344 ಅಂಶಗಳಲ್ಲಿ ವಹಿವಾಟು ಪೂರ್ಣಗೊಳಿಸಿರುವ ಸೆನ್ಸೆಕ್ಸ್ ಶೇ 0.24ರಷ್ಟು ಕುಸಿದಿದೆ. 15,344 ಅಂಶಗಳಲ್ಲಿ ವಹಿವಾಟು ಮುಗಿಸಿರುವ ನಿಫ್ಟಿ ವಾರದ ಅವಧಿಯಲ್ಲಿ ಶೇ 0.73ರಷ್ಟು ತಗ್ಗಿದೆ. ಬಿಎಸ್‌ಇ ಮಿಡ್ ಕ್ಯಾಪ್ ಶೇ 3ರಷ್ಟು ಇಳಿಕೆಯಾಗಿದ್ದರೆ ಸ್ಮಾಲ್ ಕ್ಯಾಪ್ ಸೂಚ್ಯಂಕ ಶೇ 1.8ರಷ್ಟು ಕುಸಿದಿದೆ. ಜಾಗತಿಕ ಮಾರುಕಟ್ಟೆಗಳಲ್ಲಿ ಕಂಡುಬಂದ ನಕಾರಾತ್ಮಕತೆಯು ಸೂಚ್ಯಂಕಗಳಿಗೆ ಹೊಡೆತ ಕೊಟ್ಟಿದೆ.

ಆದರೆ ಉತ್ತಮ ಮುಂಗಾರು ಮತ್ತು ಕೋವಿಡ್ ಲಸಿಕೆ ಕಾರ್ಯದಲ್ಲಿನ ವೇಗ ಹೆಚ್ಚಿರುವುದು ಮಾರುಕಟ್ಟೆಯನ್ನು ಒಂದು ಹಂತಕ್ಕೆ ಕುಸಿಯದಂತೆ ನಿಲ್ಲಿಸುವಲ್ಲಿ ಸಹಾಯ ಮಾಡಿವೆ. ವಿಶೇಷವೆಂದರೆ ಈ ಎಲ್ಲ ಏರಿಳಿತಗಳ ಮಧ್ಯೆಯೂ ಜೂನ್ 15ರಂದು ಸೆನ್ಸೆಕ್ಸ್ ಮತ್ತು ನಿಫ್ಟಿ ಕ್ರಮವಾಗಿ 52,869 ಮತ್ತು 15,901 ಅಂಶಗಳನ್ನು ಮುಟ್ಟಿ ಸಾರ್ವಕಾಲಿಕ ದಾಖಲೆ ಬರೆದಿವೆ.

ವಲಯವಾರು ಪ್ರಗತಿಯಲ್ಲಿ ನಿಫ್ಟಿ ಲೋಹ ವಲಯ ಶೇ 6.6ರಷ್ಟು ಕುಸಿತ ಕಂಡಿದೆ. ರಿಯಲ್ ಎಸ್ಟೇಟ್ ವಲಯ ಶೇ 4ರಷ್ಟು ತಗ್ಗಿದೆ, ಸರ್ಕಾರಿ ಸ್ವಾಮ್ಯದ ಬ್ಯಾಂಕ್ ಶೇ 3.8ರಷ್ಟು ಇಳಿಕೆಯಾಗಿದೆ. ವಿದೇಶಿ ಸಾಂಸ್ಥಿಕ ಹೂಡಿಕೆದಾರರು ಕಳೆದ ವಾರ ₹ 1,060.73 ಕೋಟಿ ಮೌಲ್ಯದ ಷೇರುಗಳನ್ನು ಖರೀದಿಸಿದ್ದಾರೆ. ದೇಶಿ ಸಾಂಸ್ಥಿಕ ಹೂಡಿಕೆದಾರರು ₹ 487.79 ಕೋಟಿ ಮೌಲ್ಯದ ಷೇರುಗಳನ್ನು ಮಾರಾಟ ಮಾಡಿದ್ದಾರೆ.

ಏರಿಕೆ–ಇಳಿಕೆ: ನಿಫ್ಟಿಯಲ್ಲಿ ಹಿಂದುಸ್ಥಾನ್ ಯುನಿಲಿವರ್ ಶೇ 4ರಷ್ಟು, ಎಚ್‌ಡಿಎಫ್‌ಸಿ ಲೈಫ್ ಶೇ 4ರಷ್ಟು, ಇನ್ಫೊಸಿಸ್ ಶೇ 3.5ರಷ್ಟು, ಟಾಟಾ ಕನ್ಸ್ಯೂಮರ್ ಶೇ 3.5ರಷ್ಟು, ಏಷ್ಯನ್ ಪೇಂಟ್ಸ್ ಶೇ 3ರಷ್ಟು ಜಿಗಿದಿವೆ. ಅದಾನಿ ಪೋರ್ಟ್ಸ್ ಶೇ 17ರಷ್ಟು, ಕೋಲ್ ಇಂಡಿಯಾ ಶೇ 10ರಷ್ಟು, ಜೆಎಸ್‌ಡಬ್ಲ್ಯು ಸ್ಟೀಲ್ ಶೇ 8ರಷ್ಟು, ಪವರ್ ಗ್ರಿಡ್ ಶೇ 6ರಷ್ಟು ಮತ್ತು ಹಿಂಡಾಲ್ಕೊ ಶೇ 5ರಷ್ಟು ಕುಸಿದಿವೆ.

ಮುನ್ನೋಟ: ಈ ವಾರ ಗೋಕುಲ್, ಡೆಲ್ಟಾ, ಎಚ್‌ಬಿಎಲ್ ಪವರ್, ಎಚ್‌ಬಿ ಸ್ಟಾಕ್, ಆಯಿಲ್ ಇಂಡಿಯಾ ಲಿಮಿಟೆಡ್, ಲ್ಯಾಕೋಸ್ಟಿ, ರಿಕೊ ಆಟೊ, ಬಿಇಎಲ್, ಡೋನಿಯರ್, ಎನ್‌ಎಂಡಿಸಿ, ಶೋಭಾ, ವಾಸ್ವಾನಿ, ಅಪೋಲೊ ಹಾಸ್ಪಿಟಲ್ಸ್, ಅಶೋಕ್ ಲೇಲ್ಯಾಂಡ್ ಸೇರಿ ಪ್ರಮುಖ ಕಂಪನಿಗಳು ತ್ರೈಮಾಸಿಕ ಫಲಿತಾಂಶ ಪ್ರಕಟಿಸಲಿವೆ. ಜೂನ್ 23ರಿಂದ 25ರವರೆಗೆ ಇಂಡಿಯಾ ಪೆಸ್ಟಿಸೈಡ್ಸ್‌ನ ಐಪಿಒ ಇದೆ. ಸದ್ಯದ ಪರಿಸ್ಥಿತಿಯಲ್ಲಿ ಷೇರು ಪೇಟೆಯಲ್ಲಿ ಅನಿಶ್ಚಿತತೆ ಮುಂದುವರಿಯಲಿದೆ. ಉತ್ತಮ ಆರ್ಥಿಕ ಸ್ಥಿತಿ ಮತ್ತು ಭವಿಷ್ಯದ ಬಗ್ಗೆ ಸ್ಪಷ್ಟ ನೋಟ ಹೊಂದಿರುವ ಕಂಪನಿಗಳಲ್ಲಿ ಹೂಡಿಕೆ ಮಾಡುವುದನ್ನು ಮಾತ್ರ ಸದ್ಯ ಪರಿಗಣಿಸಬಹುದು.

ಪೆಟ್ರೋಲ್, ಡೀಸೆಲ್ ದರ ಹೆಚ್ಚಳ

ನವದೆಹಲಿ (ಪಿಟಿಐ): ಸರ್ಕಾರಿ ಸ್ವಾಮ್ಯದ ತೈಲ ಮಾರಾಟ ಕಂಪನಿಗಳು ದೇಶದಾದ್ಯಂತ ಭಾನುವಾರ ಪೆಟ್ರೋಲ್, ಡೀಸೆಲ್ ದರ ಹೆಚ್ಚಿಸಿವೆ. ಇದರಿಂದ ದೆಹಲಿಯಲ್ಲಿ ಪೆಟ್ರೋಲ್ ಲೀಟರಿಗೆ ₹ 97.22ಕ್ಕೆ ತಲುಪಿದೆ. ಡೀಸೆಲ್ ₹ 87.97ರಷ್ಟಾಗಿದೆ.

ತೈಲ ಕಂಪನಿಗಳು ಭಾನುವಾರ ಪೆಟ್ರೋಲ್ ದರವನ್ನು ಲೀಟರಿಗೆ 29 ಪೈಸೆ, ಡೀಸೆಲ್ ದರವನ್ನು 28 ಪೈಸೆ ಹೆಚ್ಚಳ ಮಾಡಿವೆ. ಈ ದರ ಏರಿಕೆಯನ್ನೂ ಒಳಗೊಂಡು ಏಳು ವಾರಗಳಲ್ಲಿ ಒಟ್ಟಾರೆ 27 ಬಾರಿ ದರ ಹೆಚ್ಚಳ ಮಾಡಿದಂತಾಗಿದೆ. ಕರ್ನಾಟಕ, ರಾಜಸ್ಥಾನ, ಮಧ್ಯಪ್ರದೇಶ, ಮಹಾರಾಷ್ಟ್ರ, ಆಂಧ್ರಪ್ರದೇಶ, ತೆಲಂಗಾಣ, ಜಮ್ಮು–ಕಾಶ್ಮೀರ ಮತ್ತು ಲಡಾಖ್‌ನಲ್ಲಿ ಪೆಟ್ರೋಲ್ ಬೆಲೆಯು ಲೀಟರ್‌ಗೆ ಈಗಾಗಲೇ ₹ 100ರ ಗಡಿ ದಾಟಿ ಮಾರಾಟವಾಗುತ್ತಿದೆ.

ಮುಂಬೈನಲ್ಲಿ ಪೆಟ್ರೋಲ್ ದರ ₹ 103.36 ಮತ್ತು ಡೀಸೆಲ್ ದರ ₹ 95.44ರಷ್ಟಿದೆ. ಬೆಂಗಳೂರಿನಲ್ಲಿ ಪೆಟ್ರೋಲ್ ದರ ₹ 100.47 ಮತ್ತು ಡೀಸೆಲ್ ದರ ₹ 93.26ರಷ್ಟಾಗಿದೆ.

ಕೋವಿಡ್: ಆತ್ಮನಿರ್ಭರ ಭಾರತ ರೋಜ್‌ಗಾರ್ ಯೋಜನೆ ವಿಸ್ತರಣೆ?

ನವದೆಹಲಿ (ಪಿಟಿಐ): ಹೊಸ ನೇಮಕಾತಿಗಳಿಗೆ ಉತ್ತೇಜನ ನೀಡಲು ಆರಂಭಿಸಿದ ಆತ್ಮನಿರ್ಭರ ಭಾರತ ರೋಜ್‌ಗಾರ್ ಯೋಜನೆಯನ್ನು (ಎಬಿಆರ್‌ವೈ), ಕೋವಿಡ್ ಸಾಂಕ್ರಾಮಿಕದ ಕಾರಣದಿಂದಾಗಿ ಮುಂದಿನ ವರ್ಷದ ಮಾರ್ಚ್‌ವರೆಗೂ ವಿಸ್ತರಿಸುವ ಕುರಿತು ಕಾರ್ಮಿಕ ಮತ್ತು ಉದ್ಯೋಗ ಸಚಿವಾಲಯ ಚಿಂತನೆ ನಡೆಸುತ್ತಿದೆ ಎಂದು ಮೂಲಗಳು ತಿಳಿಸಿವೆ.

ಈ ಯೋಜನೆಯು ಜೂನ್ 30ಕ್ಕೆ ಅಂತ್ಯವಾಗಬೇಕಿದೆ. ಈ ಯೋಜನೆಯ ಅಡಿ, ₹ 15 ಸಾವಿರಕ್ಕಿಂತ ಕಡಿಮೆ ವೇತನ ಪಡೆಯುವ, ಹೊಸದಾಗಿ ನೇಮಕಗೊಂಡ ಕಾರ್ಮಿಕರ ಪಿ.ಎಫ್. ಖಾತೆಗಳಿಗೆ ಎರಡು ವರ್ಷಗಳ ಅವಧಿಗೆ ಕಾರ್ಮಿಕರ ಪಾಲಿನ ಶೇಕಡ 12ರಷ್ಟು ಮತ್ತು ಉದ್ಯೋಗದಾತರ ಪಾಲಿನ ಶೇ 12ರಷ್ಟನ್ನು (ಒಟ್ಟು ಶೇ 24ರಷ್ಟು) ಕೇಂದ್ರ ಸರ್ಕಾರವೇ ಪಾವತಿಸುತ್ತದೆ.

ಯೋಜನೆಯ ಅವಧಿಯನ್ನು ಮಾರ್ಚ್ 2022ರವರೆಗೆ ವಿಸ್ತರಿಸುವುದಕ್ಕೆ ಸಂಬಂಧಿಸಿದಂತೆ ಸಚಿವ ಸಂಪುಟದ ಟಿಪ್ಪಣಿಯೊಂದನ್ನು ಸಿದ್ಧಪಡಿಸುವ ಪ್ರಕ್ರಿಯೆಯನ್ನು ಕಾರ್ಮಿಕ ಮತ್ತು ಉದ್ಯೋಗ ಸಚಿವಾಲಯವು ಕೈಗೊಂಡಿದೆ ಎಂದು ಮೂಲಗಳು ಹೇಳಿವೆ.

ಇದುವರೆಗೆ ಹೊಸದಾಗಿ ನೇಮಕ ಆಗಿರುವ 21 ಲಕ್ಷ ಕಾರ್ಮಿಕರಿಗೆ ಈ ಯೋಜನೆಯ ಅಡಿ ಪ್ರಯೋಜನ ಲಭಿಸಿದೆ. ಇದು ಸರ್ಕಾರದ, 58.5 ಲಕ್ಷ ಕಾರ್ಮಿಕರಿಗೆ ಪ್ರಯೋಜನ ಒದಗಿಸುವ ಗುರಿಗಿಂತಲೂ ಕಡಿಮೆ ಎಂದು ಮೂಲಗಳು ತಿಳಿಸಿವೆ. ಹೀಗಾಗಿ ಮುಂದಿನ ವರ್ಷದ ಮಾರ್ಚ್‌ವರೆಗೂ ಯೋಜನೆಯನ್ನು ವಿಸ್ತರಿಸಲು ಸಚಿವಾಲಯ ಒತ್ತು ನೀಡಲಿದೆ ಎಂದು ಮೂಲಗಳು ಹೇಳಿವೆ.

2020ರಿಂದ 2023ರ ಅವಧಿಗೆ ಯೋಜನೆಯ ಅನುಷ್ಠಾನಕ್ಕಾಗಿ ಕೇಂದ್ರ ಸರ್ಕಾರವು ₹ 22,810 ಕೋಟಿ ಮೀಸಲಿಟ್ಟಿದೆ.

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆಗೆ	₹515
12 ಮೊಟ್ಟೆಗೆ	₹70
ಮೈಸೂರು	
100 ಮೊಟ್ಟೆಗೆ	₹515

ರಾಮನಗರ ರೇಷ್ಮೆ ಗೂಡು ಧಾರಣೆ

ಮಿಶ್ರತಳಿ (ಸಿ.ಬಿ)	₹220-391
ದ್ವಿತಳಿ (ಬಿ.ವಿ)	₹370-502

ಬ್ಯಾಡಗಿ: ಇಂದಿನಿಂದ ಇ–ಟೆಂಡರ್ ವಹಿವಾಟು

ಪ್ರಜಾವಾಣಿ ವಾರ್ತೆ

ಬ್ಯಾಡಗಿ: ಮೆಣಸಿನಕಾಯಿ ಮಾರುಕಟ್ಟೆ ಸೋಮವಾರದಿಂದ ಇ–ಟೆಂಡರ್ ಮೂಲಕ ವಹಿವಾಟು ಆರಂಭಿಸಲಿದೆ. ಸರ್ಕಾರದ ಮಾರ್ಗಸೂಚಿಯಂತೆ ಎಪಿಎಂಸಿ ಪ್ರಾಂಗಣದಲ್ಲಿ ಬೆಳಿಗ್ಗೆ 6 ಗಂಟೆಯಿಂದ ಸಂಜೆ 5ರವರೆಗೆ, ಹಾಗೂ ಶನಿವಾರ ಬೆಳಿಗ್ಗೆ 6 ಗಂಟೆಯಿಂದ ಮಧ್ಯಾಹ್ನ 2ರವರೆಗೆ ವಹಿವಾಟು ನಡೆಸಬಹುದು.

ಕೃಷಿ ಉತ್ಪನ್ನಗಳ ವಹಿವಾಟು ಹಾಗೂ ಸಂಬಂಧಿತ ಚಟುವಟಿಕೆಗಳಿಗೆ ಅವಕಾಶ ಕಲ್ಪಿಸಲಾಗಿದೆ ಎಂದು ಎಪಿಎಂಸಿ ಕಾರ್ಯದರ್ಶಿ ಎಸ್.ಬಿ. ನ್ಯಾಮಗೌಡ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

'ರಿಲಯನ್ಸ್ ಹೋಮ್, ಕಮರ್ಷಿಯಲ್‌ಗೆ ಕೊಟ್ಟ ಸಾಲ ಎನ್‌ಪಿಎ'

ನವದೆಹಲಿ (ಪಿಟಿಐ): ರಿಲಯನ್ಸ್ ಹೋಮ್ ಫೈನಾನ್ಸ್ ಮತ್ತು ರಿಲಯನ್ಸ್ ಕಮರ್ಷಿಯಲ್ ಫೈನಾನ್ಸ್ ಕಂಪನಿಗಳು ಒಟ್ಟಾರೆ ₹ 160 ಕೋಟಿ ಮೊತ್ತದ ಸಾಲ ಬಾಕಿ ಉಳಿಸಿಕೊಂಡಿದ್ದು, ಈ ಸಾಲ ಖಾತೆಗಳನ್ನು 'ವಂಚನೆ' ಎಂದು ಕರ್ನಾಟಕ ಬ್ಯಾಂಕ್ ಘೋಷಿಸಿದೆ.

'ಷೇರುಪೇಟೆಯಲ್ಲಿ ನೋಂದಾಯಿತವಾಗಿರುವ ಎರಡೂ ಕಂಪನಿಗಳಿಗೆ ನೀಡಿರುವ ಸಾಲ ಸೌಲಭ್ಯಗಳಲ್ಲಿನ ವಂಚನೆಯ ಬಗ್ಗೆ ಆರ್‌ಬಿಐಗೆ ಮಾಹಿತಿ ನೀಡಲಾಗಿದೆ. ರಿಲಯನ್ಸ್ ಹೋಮ್ ಫೈನಾನ್ಸ್ ₹ 21.94 ಕೋಟಿ ಹಾಗೂ ರಿಲಯನ್ಸ್ ಕಮರ್ಷಿಯಲ್ ಫೈನಾನ್ಸ್ ₹ 138.41 ಕೋಟಿ ಮೊತ್ತದ ಸಾಲ ಬಾಕಿ ಉಳಿಸಿಕೊಂಡಿದೆ' ಎಂದು ಕರ್ನಾಟಕ ಬ್ಯಾಂಕ್ ಷೇರುಪೇಟೆಗೆ ಮಾಹಿತಿ ನೀಡಿದೆ.

ರಿಲಯನ್ಸ್ ಹೋಮ್ ಫೈನಾನ್ಸ್ ಜತೆ 2015ರಿಂದ ಹಾಗೂ ರಿಲಯನ್ಸ್ ಕಮರ್ಷಿಯಲ್ ಫೈನಾನ್ಸ್ ಜೊತೆ 2014ರಿಂದ ವ್ಯವಹಾರ ಹೊಂದಿರುವುದಾಗಿ ಬ್ಯಾಂಕ್ ತಿಳಿಸಿದೆ. 24ಕ್ಕೂ ಹೆಚ್ಚಿನ ಬ್ಯಾಂಕ್‌ಗಳು ಒಟ್ಟಾಗಿ ರಿಲಯನ್ಸ್ ಹೋಮ್ ಫೈನಾನ್ಸ್‌ಗೆ ಸಾಲ ನೀಡಿವೆ. ಇದರಲ್ಲಿ ಕರ್ನಾಟಕ ಬ್ಯಾಂಕ್‌ನ ಪಾಲು ಶೇಕಡ 0.39ರಷ್ಟು. ರಿಲಯನ್ಸ್ ಕಮರ್ಷಿಯಲ್ ಫೈನಾನ್ಸ್‌ಗೆ 22 ಬ್ಯಾಂಕ್‌ಗಳು ಒಟ್ಟಾಗಿ ಸಾಲ ನೀಡಿದ್ದು ಅದರಲ್ಲಿ ಕರ್ನಾಟಕ ಬ್ಯಾಂಕ್ ಪಾಲು ಶೇ 1.98ರಷ್ಟಿದೆ ಎಂದು ಅದು ಮಾಹಿತಿ ನೀಡಿದೆ. ಎರಡೂ ಖಾತೆಗಳನ್ನು ಎನ್‌ಪಿಎ (ವಸೂಲಾಗದ ಸಾಲ) ಎಂದು ವರ್ಗೀಕರಿಸಲಾಗಿದೆ ಎಂದು ಬ್ಯಾಂಕ್ ತಿಳಿಸಿದೆ.